ಮಂಗಳವಾರ, ಫೆಬ್ರುವರಿ 17, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 48 | ಪುಟ 14
prajavani.net prajavani • www.prajavani.net

ಪಡಿಕ್ಕಲ್ ದ್ವಿಶತಕ
ಕರ್ನಾಟಕ ತಂಡದ ನಾಯಕ ದೇವದತ್ತ ಪಡಿಕ್ಕಲ್ (232; 330ಎ) ಅವರು ಲಖನೌದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಸೆಮಿಫೈನಲ್‌ನಲ್ಲಿ ಉತ್ತರಾಖಂಡ ವಿರುದ್ಧ ದ್ವಿಶತಕ ಬಾರಿಸಿದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 83,277 | ನಿಫ್ಟಿ 25,682 | ಚಿನ್ನ (Std. 10g) ₹1.61 ಲಕ್ಷ (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,52,300 (ಬೆಂಗಳೂರು)

ಶಾಸಕ ಸುಬ್ಬಾರೆಡ್ಡಿ ಅನರ್ಹ

ಬಾಗೇಪಲ್ಲಿ ಕ್ಷೇತ್ರ • ಆಯ್ಕೆ ಅಸಿಂಧುಗೊಳಿಸಿದ ಹೈಕೋರ್ಟ್ ಏಕಸದಸ್ಯ ಪೀಠ • ಆದೇಶಕ್ಕೆ ಇಲ್ಲ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ (ಭಾಗ್ಯನಗರ) ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಎಸ್.ಎನ್. ಸುಬ್ಬಾರೆಡ್ಡಿ ಆಯ್ಕೆಯನ್ನು ಹೈಕೋರ್ಟ್ ಅಸಿಂಧುಗೊಳಿಸಿದೆ.

'ಸುಬ್ಬಾರೆಡ್ಡಿ ಆಯ್ಕೆಯನ್ನು ಅಸಿಂಧುಗೊಳಿಸಬೇಕು ಮತ್ತು ನನ್ನನ್ನೇ ವಿಜೇತ ಅಭ್ಯರ್ಥಿ ಎಂದು ಘೋಷಿಸಬೇಕು' ಎಂದು ಕೋರಿ ಬಿಜೆಪಿಯ ಪರಾಜಿತ ಅಭ್ಯರ್ಥಿ ಸಿ.ಮುನಿರಾಜು ಚುನಾವಣಾ ತಕರಾರು ಅರ್ಜಿ ಸಲ್ಲಿಸಿದ್ದರು. ಅದನ್ನು ಭಾಗಶಃ ಪುರಸ್ಕರಿಸಿರುವ

ಎಸ್‌ಎನ್ ಸುಬ್ಬಾರೆಡ್ಡಿ

ನ್ಯಾಯಮೂರ್ತಿ ಎಂ.ಜಿ.ಎಸ್ ಕಮಲ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಈ ಮಹತ್ವದ ಆದೇಶ ನೀಡಿದೆ.

ಆದೇಶವನ್ನು ಚುನಾವಣಾ ಆಯೋಗ ಮತ್ತು ವಿಧಾನಸಭೆ ಕಾರ್ಯದರ್ಶಿಗೆ ಕೂಡಲೇ ರವಾನಿಸುವಂತೆ ಹೈಕೋರ್ಟ್ ರಿಜಿಸ್ಟ್ರಾರ್ ಅವರಿಗೆ ನ್ಯಾಯಪೀಠ ನಿರ್ದೇಶಿಸಿದೆ. ವಿಸ್ತೃತ ಆದೇಶ ಇನ್ನೂ ಬಿಡುಗಡೆಯಾಗಿಲ್ಲ.

▶6

ಮುಂದೇನು?

ಸುಪ್ರೀಂ ಕೋರ್ಟ್
ಆದೇಶಕ್ಕೆ ತಡೆ ನೀಡಲು ಕೋರ್ಟ್ ನಿರಾಕರಿಸಿರುವ ಕಾರಣ ತಕ್ಷಣದಿಂದಲೇ ಅವರ ಶಾಸಕತ್ವ ರದ್ದಾಗಿದೆ. ಸುಬ್ಬಾರೆಡ್ಡಿ, ಸುಪ್ರೀಂ ಕೋರ್ಟ್ ಮೊರೆ ಹೋಗಿ ತಡೆಯಾಜ್ಞೆ ತರುವ ಅವಕಾಶ ಇದೆ.

ವಿಧಾನಸಭೆ
ಶಾಸಕರನ್ನು ಅಸಿಂಧುಗೊಳಿಸಿರುವ ಸಂಬಂಧ ವಿಧಾನಸಭೆ ಸಚಿವಾಲಯಕ್ಕೆ ದೃಢೀಕೃತ ಆದೇಶ ಬಂದ ಬಳಿಕ ಅವರ ಹೆಸರನ್ನು ಪಟ್ಟಿಯಿಂದ ತೆಗೆಯುವ ಪ್ರಕ್ರಿಯೆ ನಡೆಯಲಿದೆ. ಒಂದು ವೇಳೆ, ಶಾಸಕರು ಸುಪ್ರೀಂ ಕೋರ್ಟ್‌ಗೆ ಹೋಗಿ ತಡೆಯಾಜ್ಞೆ ತಂದರೆ ಅವರ ಹೆಸರನ್ನು ಸೇರಿಸಲು ಅವಕಾಶ ಇರುತ್ತದೆ.

ಕಾನೂನು ಸಂಘರ್ಷದಲ್ಲಿ ಯಾರ‍್ಯಾರು?

ಕೆ.ವೈ.ನಂಜೇಗೌಡ (ಕಾಂಗ್ರೆಸ್) ಮಾಲೂರು: ವಿಧಾನಸಭೆಗೆ 2023ರಲ್ಲಿ ನಡೆದ ಚುನಾವಣೆಯಲ್ಲಿ ಗೆದ್ದಿರುವ ಇವರ ಆಯ್ಕೆಯನ್ನು ಹೈಕೋರ್ಟ್ 2025ರ ಸೆಪ್ಟೆಂಬರ್‌ನಲ್ಲಿ ರದ್ದುಪಡಿಸಿತ್ತು. 'ಮತ ಎಣಿಕೆ ಪ್ರಕ್ರಿಯೆ ಕಾನೂನುಬದ್ಧವಾಗಿ ನಡೆದಿಲ್ಲ. ಅಕ್ರಮ ಎಸಗಲಾಗಿದೆ' ಎಂದು ಆರೋಪಿಸಿ ಪರಾಜಿತ ಅಭ್ಯರ್ಥಿ ಬಿಜೆಪಿಯ ಕೆ.ಎಸ್.ಮಂಜುನಾಥ್ ಗೌಡ ಚುನಾವಣಾ ತಕರಾರು ಅರ್ಜಿ ಸಲ್ಲಿಸಿದ್ದರು.

ಸಿ.ಕೆ.ರಾಮಮೂರ್ತಿ (ಬಿಜೆಪಿ) ಜಯನಗರ: 2023ರ ಚುನಾವಣೆಯ 827 ಅಂಚೆ ಮತಗಳನ್ನು (ಪೋಸ್ಟಲ್ ಬ್ಯಾಲೆಟ್) ಮರು ಎಣಿಕೆ ಮಾಡುವಂತೆ ಕೋರಿ ಕಾಂಗ್ರೆಸ್‌ನ ಪರಾಜಿತ ಅಭ್ಯರ್ಥಿ ಸೌಮ್ಯಾ ರೆಡ್ಡಿ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿ. ವಿಚಾರಣೆ ಆರಂಭವಾಗಿದೆ.

ಸತೀಶ್ ಸೈಲ್ (ಕಾಂಗ್ರೆಸ್) ಕಾರವಾರ: ಸಾವಿರಾರು ಮೆಟ್ರಿಕ್ ಟನ್ ಕಬ್ಬಿಣದ ಅದಿರನ್ನು ಕಳ್ಳತನ ಮಾಡಿ, ವಿದೇಶಗಳಿಗೆ ಅಕ್ರಮವಾಗಿ ಸಾಗಣೆ ಮಾಡುವ ಮೂಲಕ ರಾಜ್ಯದ ಖಜಾನೆಗೆ ₹200 ಕೋಟಿಗೂ ಹೆಚ್ಚಿನ ಮೊತ್ತದ ನಷ್ಟ ಉಂಟು ಮಾಡಿದ ಆರು ಕ್ರಿಮಿನಲ್ ಪ್ರಕರಣಗಳಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಏಳು ವರ್ಷ ಕಠಿಣ ಜೈಲು ಶಿಕ್ಷೆ ಮತ್ತು ಇದೇ ಪ್ರಕರಣದಲ್ಲಿನ ಎಲ್ಲ ಏಳು ಅಪರಾಧಿಗಳಿಗೆ ಒಟ್ಟು ₹44 ಕೋಟಿಗೂ ಹೆಚ್ಚು ದಂಡ ವಿಧಿಸಿತ್ತು. ವೈದ್ಯಕೀಯ ಜಾಮೀನಿನ ಮೇಲಿದ್ದಾರೆ.

ಕೆ.ಸಿ.ವೀರೇಂದ್ರ (ಕಾಂಗ್ರೆಸ್) ಚಿತ್ರದುರ್ಗ: ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಜಾರಿ ನಿರ್ದೇಶನಾಲಯ ದಾಖಲಿಸಿರುವ ಪ್ರಕರಣದಲ್ಲಿ ಆರೋಪಿಯಾಗಿದ್ದು, ಸದ್ಯ ಜಾಮೀನಿನ ಮೇಲಿದ್ದಾರೆ.

ವಿನಯ ಕುಲಕರ್ಣಿ (ಕಾಂಗ್ರೆಸ್) ಧಾರವಾಡ : ಜಿಲ್ಲಾಪಂಚಾಯಿತಿ ಸದಸ್ಯರಾಗಿದ್ದ ಯೋಗೇಶ್‌ಗೌಡ ಗೌಡರ್ ಕೊಲೆ ಪ್ರಕರಣದ ಆರೋಪಿ. ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಜಿ. ಜನಾರ್ದನ ರೆಡ್ಡಿ (ಬಿಜೆಪಿ ಸಹ ಸದಸ್ಯ) ಗಂಗಾವತಿ: ಅಕ್ರಮ ಗಣಿಗಾರಿಕೆಯ ಹಲವು ಪ್ರಕರಣಗಳಲ್ಲಿ ಆಪಾದಿತರಾಗಿದ್ದು, ಸದ್ಯ ಜಾಮೀನಿನ ಹೊರಗಿದ್ದಾರೆ.

ಬೈರತಿ ಬಸವರಾಜ (ಬಿಜೆಪಿ) ಕೆ.ಆರ್. ಪುರ: ರೌಡಿ ಬಿಕ್ಲು ಶಿವು ಕೊಲೆ ಪ್ರಕರಣದಲ್ಲಿ ಐದನೇ ಆರೋಪಿ ಆಗಿರುವ ಅವರನ್ನು ಸಿಐಡಿ ಪೊಲೀಸರು ತಮ್ಮ ಕಸ್ಟಡಿಗೆ ಪಡೆದುಕೊಂಡು ವಿಚಾರಣೆ ನಡೆಸುತ್ತಿದ್ದಾರೆ.

ಸಾಮೂಹಿಕ ಅತ್ಯಾಚಾರ ಮೂವರಿಗೆ ಮರಣದಂಡನೆ

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ಇಸ್ರೇಲ್‌ನ ಮಹಿಳೆ, ಸ್ಥಳೀಯ ಹೋಂ ಸ್ಟೇ ಒಡತಿಯ ಮೇಲೆ ಸಾಮೂಹಿಕವಾಗಿ ಅತ್ಯಾಚಾರ ಮತ್ತು ಒಬ್ಬ ಪ್ರವಾಸಿಗನ ಕೊಲೆ ಮಾಡಿದ್ದ ಪ್ರಕರಣದಲ್ಲಿ ಮೂವರು ಅಪರಾಧಿಗಳಿಗೆ ಇಲ್ಲಿನ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್ ಮರಣದಂಡನೆ ವಿಧಿಸಿ ಸೋಮವಾರ ಆದೇಶಿಸಿದೆ.

ಗಂಗಾವತಿಯ ಸಾಯಿ ನಗರದ ಮಲ್ಲೇಶ್ (ಹಂದಿಮಲ್ಲ), ಸಾಯಿಕುಮಾರ್, ಶರಣಬಸವರಾಜ ಶಿಕ್ಷೆಗೆ ಒಳಗಾದವರು. ವಿಚಾರಣೆ ನಡೆಸಿದ್ದ ನ್ಯಾಯಾಧೀಶರಾದ ಸದಾನಂದ ನಾಗಪ್ಪ ನಾಯಕ್ ಅವರು ಫೆ. 6ರಂದು ಮೂವರು ದೋಷಿಗಳು ಎಂದು ಆದೇಶಿಸಿದ್ದರು. ಶಿಕ್ಷೆಯ ಪ್ರಮಾಣವನ್ನು ಸೋಮವಾರ ಪ್ರಕಟಿಸಿದರು.

ಶರಣಬಸವರಾಜ

ಸಾಯಿಕುಮಾರ್

ಮಲ್ಲೇಶ್

ಆಗಿದ್ದೇನು?: ತಾಲ್ಲೂಕಿನ ಸಾಣಾಪುರದಲ್ಲಿ 2025ರ ಮಾರ್ಚ್‌ನಲ್ಲಿ ಕೃತ್ಯ ನಡೆದಿತ್ತು. ಅಂದು, ಇಬ್ಬರು ಮಹಿಳೆಯರಿದ್ದ ಐವರು ಪ್ರವಾಸಿಗರ ತಂಡವು ಸಾಣಾಪುರ ಕೆರೆಯ ಬಳಿ ತುಂಗಭದ್ರಾ ಎಡದಂಡೆ ಕಾಲುವೆಯ ಪಕ್ಕ ಮಧ್ಯರಾತ್ರಿ ರಸ್ತೆಯಲ್ಲಿ ಸಂಗೀತವನ್ನು ಆಲಿಸುತ್ತ ಹೋಗುತ್ತಿದ್ದರು.

ಆಗ ಬೈಕ್‌ನಲ್ಲಿ ಬಂದಿದ್ದ ಮೂವರು ಯುವಕರು ಹಣ ನೀಡುವಂತೆ ಪೀಡಿಸಿದ್ದರು. ವಿಪರೀತ ಮದ್ಯ ಸೇವಿಸಿದ್ದ ಅವರು ಹಣ ನೀಡದ ಕಾರಣಕ್ಕೆ ಇಸ್ರೇಲ್‌ನ ಮಹಿಳೆ ಮತ್ತು ಸ್ಥಳೀಯ ಹೋಂ ಸ್ಟೇ ಒಡತಿಯ ಮೇಲೆ ಸಾಮೂಹಿಕವಾಗಿ ಅತ್ಯಾಚಾರ ಮಾಡಿದ್ದರು.

ಅಲ್ಲದೆ, ಆ ಸಂದರ್ಭದಲ್ಲಿ ಮಹಿಳೆಯರ ರಕ್ಷಣೆಗೆ ಬಂದಿದ್ದ ಅಮೆರಿಕದ ಪ್ರವಾಸಿಗ ಡೇನಿಯಲ್, ಒಡಿಶಾದ ಬಿಬಾಶ್ ಅವರನ್ನು ಮೂವರು ಕಾಲುವೆಗೆ ತಳ್ಳಿದ್ದು, ಬಿಬಾಶ್ ಮೃತಪಟ್ಟಿದ್ದರು. ತಂಡದಲ್ಲಿ ಮಹಾರಾಷ್ಟ್ರದ ಪ್ರವಾಸಿಗ ಕೂಡ ಇದ್ದರು. ಪ್ರಕರಣದ ತನಿಖೆ ನಡೆಸಿದ್ದ ಪೊಲೀಸರು ದೋಷಾರೋಪ ಪಟ್ಟಿ ಸಲ್ಲಿಸಿದ್ದರು. 'ಪ್ರವಾಸಿಗರ ಮೇಲೆ ಅತ್ಯಾಚಾರ ಎಸಗುವ ಉದ್ದೇಶದಿಂದಲೇ ಕೃತ್ಯ ಎಸಗಲಾಗಿತ್ತು. ಅಪರಾಧಿಗಳಿಗೆ ನ್ಯಾಯಾಲಯ ಮರಣ ದಂಡನೆ ವಿಧಿಸಿ ಆದೇಶಿಸಿದೆ' ಎಂದು ಪಬ್ಲಿಕ್ ಪ್ರಾಸಿಕ್ಯೂಟರ್ ನಾಗಲಕ್ಷ್ಮೀ ಮಾಧ್ಯಮಗಳಿಗೆ ಮಾಹಿತಿ ನೀಡಿದರು.

'ದೈಹಿಕ ಸಂಬಂಧ ಬೆಳೆಸುವ ಮುನ್ನ ಎಚ್ಚರಿಕೆ ಅಗತ್ಯ'

ನವದೆಹಲಿ (ಪಿಟಿಐ): ವಿವಾಹಕ್ಕೂ ಮುನ್ನ ಹುಡುಗ ಮತ್ತು ಹುಡುಗಿ ಅಪರಿಚಿತರಾಗಿರುತ್ತಾರೆ. ಈ ವೇಳೆ ದೈಹಿಕ ಸಂಬಂಧ ಬೆಳೆಸುವಾಗ ಎಚ್ಚರಿಕೆಯಿಂದಿರಬೇಕು ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ ಮತ್ತು ಉಜ್ಜಲ್ ಭುಯಾನ್ ಅವರನ್ನು ಒಳಗೊಂಡ ನ್ಯಾಯಪೀಠವು, ಮದುವೆಯಾಗುವುದಾಗಿ ನಂಬಿಸಿ ಅತ್ಯಾಚಾರ ಎಸಗಿದ್ದಾರೆ ಎಂದು ಆರೋಪಿಸಿರುವ ಪ್ರಕರಣದಲ್ಲಿ ಜಾಮೀನು ಕೋರಿದ್ದ ಅರ್ಜಿಯನ್ನು ವಿಚಾರಣೆ ನಡೆಸಿತು.

ಮಹಿಳೆ ಪರ ವಕೀಲರು, 'ಅವರಿಬ್ಬರು (ಆರೋಪಿ ಮತ್ತು ಮಹಿಳೆ) ವೈವಾಹಿಕ ವೆಬ್‌ಸೈಟ್ ಮೂಲಕ 2022ರಲ್ಲಿ ಪರಿಚಿತರಾಗಿದ್ದರು. ನಂತರ ಮದುವೆ ಆಗುವುದಾಗಿ ನಂಬಿಸಿ ದೆಹಲಿ ಮತ್ತು ದುಬೈನಲ್ಲಿ ಹಲವು ಬಾರಿ ದೈಹಿಕ ಸಂಬಂಧ ಬೆಳೆಸಲಾಗಿದೆ' ಎಂದು ಹೇಳಿದರು.

▶7

ಚಿನಕುರುಳಿ ಪ್ರಕಾಶ್ ಶೆಟ್ಟಿ

10ನೇ ತರಗತಿ ಮೊದಲ ಪರೀಕ್ಷೆ ಕಡ್ಡಾಯ

ನವದೆಹಲಿ (ಪಿಟಿಐ): 'ಮೊದಲನೇ ಪರೀಕ್ಷೆಯನ್ನು ವಿದ್ಯಾರ್ಥಿಗಳು ಕಡ್ಡಾಯವಾಗಿ ಬರಿಯಲೇಬೇಕು. ಇಲ್ಲವಾದಲ್ಲಿ ಎರಡನೇ ಪರೀಕ್ಷೆಗೆ ಅವಕಾಶವಿಲ್ಲ' ಎಂದು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯು (ಸಿಬಿಎಸ್‌ಇ) ಸೋಮವಾರ ಸ್ಪಷ್ಟನೆ ನೀಡಿದೆ.

ಮೊದಲನೇ ಪರೀಕ್ಷೆ ಬರೆಯದ ವಿದ್ಯಾರ್ಥಿಗಳಿಗೆ ಎರಡನೇ ಪರೀಕ್ಷೆ ಬರೆಯಲು ಅವಕಾಶ ನೀಡಬಹುದೇ ಎನ್ನುವ ಬಗ್ಗೆ ಸ್ಪಷ್ಟನೆ ಕೋರಿ ಸಿಬಿಎಸ್‌ಇಗೆ ಮನವಿಗಳನ್ನು ಸಲ್ಲಿಸಲಾಗಿತ್ತು. 10ನೇ ತರಗತಿಗೆ ನಡೆಯಲಿರುವ ಎರಡು ಪಬ್ಲಿಕ್ ಪರೀಕ್ಷೆಗಳಿಗೆ ಸಂಬಂಧಿಸಿ ಇರುವ ನಿಯಮಗಳ ಕುರಿತು ಉದ್ಭವಿಸಿರುವ ಕೆಲವು ಗೊಂದಲಗಳಿಗೆ ಸಿಬಿಎಸ್‌ಇ ಈ ಸ್ಪಷ್ಟನೆ ನೀಡಿದೆ.

▶3B

'ಸುಳ್ಳು ಸುದ್ದಿ: ಇರಲಿ ಎಚ್ಚರ'

ಪರೀಕ್ಷೆಗಳು ನಡೆಯುವ ವೇಳೆ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಎಂಬಂಥ ಸುಳ್ಳು ಸುದ್ದಿಗಳನ್ನು ಹಬ್ಬಿಸಲಾಗುತ್ತವೆ. ಇಂಥ ಸುದ್ದಿಗಳಿಗೆ ಕಿವಿಗೊಡಬಾರದು. ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹಬ್ಬಿಸಿ ವಿದ್ಯಾರ್ಥಿಗಳನ್ನು ಹಾಗೂ ಪೋಷಕರನ್ನು ಹಾದಿ ತಪ್ಪಿಸುವ ಘಟನೆಗಳು ಈ ಹಿಂದೆ ನಡೆದಿವೆ. ಶಾಲೆಗಳು ಕೂಡ ಇಂಥ ಸುದ್ದಿಗಳನ್ನು ನಂಬಬಾರದು ಮತ್ತು ಇಂಥ ಸುದ್ದಿಗಳ ಬಗ್ಗ ಎಚ್ಚರದಿಂದ ಇರಬೇಕು

ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ)

ಸಿಬಿಎಸ್‌ಇ

- ವಿಜ್ಞಾನ, ಗಣಿತ, ಸಮಾಜ ವಿಜ್ಞಾನ ಮತ್ತು ಭಾಷಾ ವಿಷಯಗಳಲ್ಲಿ ಯಾವುದಾದರೂ ಮೂರು ವಿಷಯಗಳಲ್ಲಿ ಮಾತ್ರವೇ ಅಂಕಗಳನ್ನು ಉತ್ತಮ ಪಡಿಸಿಕೊಳ್ಳಲು ಎರಡನೇ ಪರೀಕ್ಷೆ ಬರೆಯಬಹುದು
- ಒಂದು ವೇಳೆ ಮೊದಲನೇ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಅನುತ್ತೀರ್ಣರಾದರೆ, ಎರಡನೇ ಪರೀಕ್ಷೆ ವೇಳೆ 'ಅನುತ್ತೀರ್ಣ' ವಿಭಾಗದಲ್ಲಿ ಮತ್ತೊಮ್ಮೆ ಪರೀಕ್ಷೆ ಬರೆಯಲು ಅವಕಾಶ

ಘಟಿಯಾನಾ ಪ್ರಭೇದಕ್ಕೆ ಸೇರಿದ, ಸಿಹಿ ನೀರಿನಲ್ಲಿ ವಾಸವಿರುವ ಜೀವಿ

ಪಶ್ಚಿಮ ಘಟ್ಟದಲ್ಲಿ ಹೊಸ ಪ್ರಭೇದದ ಏಡಿ ಪತ್ತೆ

ಪ್ರಜಾವಾಣಿ ವಾರ್ತೆ

ಕಾರವಾರ: ಪಶ್ಚಿಮ ಘಟ್ಟದ ನಿರ್ದಿಷ್ಟ ಭಾಗದಲ್ಲಿ ಕಂಡುಬರುವ ಹೊಸ ಪ್ರಭೇದದ ಸಿಹಿ ನೀರಿನ ಏಡಿಯನ್ನು ಅರಣ್ಯ ಗಸ್ತು ಪಾಲಕರಿಬ್ಬರು ತಾಲ್ಲೂಕಿನ ದೇವಳಮಕ್ಕಿ ಅರಣ್ಯದಲ್ಲಿ ಗುರುತಿಸಿದ್ದಾರೆ.

ಹೊಸ ಪ್ರಭೇದದ ಏಡಿಗೆ 'ಘಟಿಯಾನಾ ಧೃತಿಯರಮ್' ಎಂದು ಹೆಸರಿಡಲಾಗಿದೆ. ಇದು, ಭಾರತದಲ್ಲಿ ಕಂಡುಬಂದಿರುವ 77ನೇ ಪ್ರಭೇದ ಹಾಗೂ ಪಶ್ಚಿಮಘಟ್ಟದಲ್ಲಿ ಕಾಣಸಿಗುವ ಘಟಿಯಾನಾ ಪ್ರಭೇದದ 14ನೇ ಹೊಸ ಏಡಿ ಎಂಬುದನ್ನು ಭಾರತೀಯ ಪ್ರಾಣಿಶಾಸ್ತ್ರ ಸಮೀಕ್ಷೆ ಸಂಸ್ಥೆಯು (ಝಡ್‌ಎಸ್‌ಐ) ದೃಢಪಡಿಸಿದೆ.

ಅರಣ್ಯ ಗಸ್ತು ಪಾಲಕರಾದ ಗೋಪಾಲ ನಾಯ್ಕ ಮತ್ತು ಸುನಿಲ ಗೌಡ ಅವರು ಈ ಏಡಿಯನ್ನು ಗುರುತಿಸಿದ್ದಾರೆ. ಇದು ಹೊಸ ಪ್ರಭೇದದ್ದು ಎಂಬುದರ ಖಾತರಿಗೆ ಮೂರು ವರ್ಷಗಳಿಂದ ಅವರು ಅಧ್ಯಯನ ನಡೆಸಿದ್ದರು.

ಪಶ್ಚಿಮ ಘಟ್ಟದಲ್ಲಿ ಪತ್ತೆಯಾಗಿರುವ ಘಟಿಯಾನಾ ಧೃತಿಯರಮ್ ಏಡಿ

- ಪಶ್ಚಿಮ ಘಟ್ಟದಲ್ಲಿ ಕಾಣ ಸಿಗುವ ಘಟಿಯಾನಾ ಪ್ರಭೇದದ 14ನೇ ಹೊಸ ಏಡಿ
- ಮರದ ಪೊಟರೆ, ಜಂಬುಮಣ್ಣಿನ ನೀರು ತುಂಬಿದ ರಂಧ್ರಗಳಲ್ಲಿ ವಾಸ
- ಇಬ್ಬರು ಅರಣ್ಯ ಗಸ್ತು ಪಾಲಕರಿಂದ ಮೂರು ವರ್ಷಗಳಿಂದ ಅಧ್ಯಯನ

'ಘಟಿಯಾನ ಧೃತಿಯರಮ್ ನಿತ್ಯಹರಿದ್ವರ್ಣ ಕಾಡುಗಳಲ್ಲಿ ಮರದ ಪೊಟರೆ ಮತ್ತು ಜಂಬುಮಣ್ಣಿನ (ಲ್ಯಾಟರೈಟ್) ಬಂಡೆಗಳ ನೀರು ತುಂಬಿದ ರಂಧ್ರಗಳಲ್ಲಿ ವಾಸಿಸುತ್ತವೆ. ಶಿರ್ವೆ, ದೇವಳಮಕ್ಕಿಯ ಸುತ್ತಮುತ್ತಲಿನ 24 ಕಿ.ಮೀ ಅರಣ್ಯ ಪ್ರದೇಶದಲ್ಲಿ ಮಾತ್ರ ಇವು ವಾಸವಾಗಿವೆ. ದಟ್ಟ ಅರಣ್ಯ, ಹುಲ್ಲುಗಾವಲು ಭೂಮಿಯಲ್ಲಿ ಮಾತ್ರ ಇವು ಕಾಣಸಿಗುತ್ತವೆ' ಎಂದು ಗೋಪಾಲ ನಾಯ್ಕ ವಿವರಿಸಿದ್ದಾರೆ.

'ಈ ಏಡಿಗಳು ಮರಿಗಳ ಹಂತದಲ್ಲಿ ತಲೆಮೇಲೆ ಕಪ್ಪು ಮತ್ತು ಕಾಲುಗಳು ಸಹ ಕಪ್ಪು ಬಣ್ಣದ್ದಾಗಿರುತ್ತವೆ. ಇದರ ಮೇಲಿನ ಭಾಗವು ಹಾಲಿನ ಕೆನೆ ಬಣ್ಣ ಮತ್ತು ಕಪ್ಪು ಬಣ್ಣದಿಂದ, ಕೆಳಭಾಗದಲ್ಲಿ ನೇರಳೆ ಬಣ್ಣದಿಂದ ಕೂಡಿದೆ. ಪ್ರೌಢಾವಸ್ಥೆ ಹಂತದಲ್ಲಿ ಕಾಲುಗಳು ಸಂಪೂರ್ಣ ಕಿತ್ತಳೆ ಬಣ್ಣ ಹೊಂದಿರುತ್ತವೆ' ಎಂದು ಸಂಶೋಧನೆಗೆ ಮಾರ್ಗದರ್ಶನ ನೀಡಿದ ಗದಗದ ಜೀವ ವೈವಿಧ್ಯ ಸಂಶೋಧಕ ಮಂಜುನಾಥ ನಾಯಕ ಹೇಳಿದರು.

'ಈ ಏಡಿಗಳು ಬಹು ಆಳದವರೆಗೆ ರಂಧ್ರ ಕೊರೆಯುವುದರಿಂದ ಅಂತರ್ಜಲ ವೃದ್ಧಿಗೆ ಸಹಕಾರಿಯಾಗಿವೆ. ಅಲ್ಲದೆ, ಅವು ವಿಸರ್ಜಿಸುವ ಮಲದಿಂದ ಸಸ್ಯ ಸಂಪತ್ತು ಬೆಳೆಯಲು ಪೋಷಕಾಂಶ ಸಿಗುತ್ತಿವೆ. ಹೀಗಾಗಿ ಘಟಿಯಾನಾ ಧೃತಿಯರಮ್ ಕಾಣ ಸಿಗುವ ಪ್ರದೇಶ ಸಮೃದ್ಧ ಅರಣ್ಯ ಎಂಬುದಾಗಿ ಪರಿಗಣಿಸಬಹುದು' ಎಂದು ಹೇಳಿದರು. 'ಅರಣ್ಯ ಇಲಾಖೆಯ ಮುಂಚೂಣಿ ಸಿಬ್ಬಂದಿ ವೈಜ್ಞಾನಿಕ ದೃಷ್ಟಿಕೋನದಿಂದ ಕಾರ್ಯನಿರ್ವಹಿಸಿ ಹೊಸ ಪ್ರಭೇದದ ಏಡಿ ಗುರುತಿಸಿದ್ದಾರೆ' ಎಂದು ಕಾರವಾರ ಡಿಸಿಎಫ್ ಸಿ.ರವಿಶಂಕರ ಅಭಿಪ್ರಾಯಪಟ್ಟರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ಆಕಾಶ ಇರಲಿದೆ.

ಮಂಜುನಾಥ ರೆಡ್ಡಿ ಚಿಮುಲ್ ಮೊದಲ ಅಧ್ಯಕ್ಷ

ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರ ಜಿಲ್ಲಾ ಹಾಲು ಒಕ್ಕೂಟ (ಚಿಮುಲ್) ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ನಿರ್ದೇಶಕ ಮಂಜುನಾಥ ರೆಡ್ಡಿ ಅವಿರೋಧ ಆಯ್ಕೆಯಾದರು.

ಸೋಮವಾರ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಿತು. ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಬಾಗೇಪಲ್ಲಿ ಕ್ಷೇತ್ರದ ನಿರ್ದೇಶಕ ಮಂಜುನಾಥ ರೆಡ್ಡಿ ಮತ್ತು ಎನ್‌ಡಿಎ ಬೆಂಬಲಿತ ಅಭ್ಯರ್ಥಿಯಾಗಿ ಪೆರೇಸಂದ್ರ ಕ್ಷೇತ್ರದ ಕೆ.ವಿ.ನಾಗರಾಜ್ ನಾಮಪತ್ರ ಸಲ್ಲಿಸಿದ್ದರು.

ಕೆ.ವಿ.ನಾಗರಾಜ್ ನಾಮಪತ್ರ ವಾಪಸ್ ಪಡೆದರು. ಅಧ್ಯಕ್ಷರಾಗಿ ಆಯ್ಕೆಯಾದ ಮಂಜುನಾಥ ರೆಡ್ಡಿ, ಎನ್‌ಡಿಎ ಬೆಂಬಲಿತ ನಿರ್ದೇಶಕರ ಸಹಕಾರ ಸಹ ಕೋರಿದರು. ಇದಕ್ಕೂ ಮುನ್ನ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ನೇತೃತ್ವ ದಲ್ಲಿ ಬಾಗೇಪಲ್ಲಿ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ, ಗೌರಿಬಿದನೂರು ಶಾಸಕ ಕೆ.ಎಚ್. ಪುಟ್ಟಸ್ವಾಮಿಗೌಡ, ಮಾಜಿ ಸಚಿವ ಎನ್.ಎಚ್.ಶಿವಶಂಕರ ರೆಡ್ಡಿ, ಕಾಂಗ್ರೆಸ್ ಬೆಂಬಲಿತ ನಿರ್ದೇಶಕರು ಹಾಗೂ ಮುಖಂಡರ ಸಭೆ ನಡೆಸಿದರು.

ಚಿಮುಲ್‌ನಲ್ಲಿ ಕಾಂಗ್ರೆಸ್ ಬೆಂಬಲಿತ ಆರು, ಗೌರಿಬಿದನೂರು ಪಕ್ಷೇತರ ಶಾಸಕ ಕೆ.ಎಚ್.ಪುಟ್ಟ ಸ್ವಾಮಿಗೌಡ ಬೆಂಬಲಿತ ಇಬ್ಬರು ಮತ್ತು ಎನ್‌ಡಿಎ ಬೆಂಬಲಿತ ಐದು ನಿರ್ದೇಶಕರು ಚುನಾವಣೆ ಮೂಲಕ ಆಯ್ಕೆಯಾಗಿದ್ದಾರೆ. ಸರ್ಕಾರದ ನಾಮನಿರ್ದೇಶನ ಸ್ಥಾನಕ್ಕೆ ಕಾಂಗ್ರೆಸ್‌ನ ಕೆ.ಆರ್.ರಾಜಣ್ಣ ನೇಮಕ ಆಗಿದೆ.

‘ಇಂದಿರಾ ಕ್ಯಾಂಟೀನ್‌ಗೆ ಗ್ರಾಹಕರೇ ಬರುತ್ತಿಲ್ಲ’

ಹೊಸ ಮೆನುವಿನೊಂದಿಗೆ ಆಹಾರದ ಗುಣಮಟ್ಟ ಹೆಚ್ಚಳ

• ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿರುವ ಇಂದಿರಾ ಕ್ಯಾಂಟೀನ್‌ಗೆ ಗ್ರಾಹಕರು ಬರುತ್ತಿಲ್ಲ. ಇದಕ್ಕೆ ಕಾರಣ ಗೊತ್ತಾಗುತ್ತಿಲ್ಲ ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಹೇಳಿದರು.

‘ರಸ್ತೆ ಬದಿಯಲ್ಲಿರುವ ಹೋಟೆಲ್ ಅಥವಾ ಬೀದಿಬದಿ ವ್ಯಾಪಾರಿಗಳ ಬಳಿಗೆ ತೆರಳಿ ಊಟ ಮಾಡುತ್ತಾರೆ. ಆದರೆ, ಇಂದಿರಾ ಕ್ಯಾಂಟೀನ್‌ಗೆ ಬರುತ್ತಿಲ್ಲ. ಈ ಬಗ್ಗೆ ಎಲ್ಲ ಪಾಲಿಕೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮುಂದಿನ ಯೋಜನೆಯನ್ನು ಸಿದ್ಧಪಡಿಸಲಾಗುವುದು’ ಎಂದು ಸುದ್ದಿಗಾರರಿಗೆ ಸೋಮವಾರ ತಿಳಿಸಿದರು.

‘ಇಂದಿರಾ ಕ್ಯಾಂಟೀನ್‌ನಲ್ಲಿ ಸ್ವಚ್ಛತೆ ಇರುವುದಿಲ್ಲ ಎಂಬ ದೂರಿದೆ. ಅದರ ಜೊತೆಗೆ ಆಹಾರದ ಗುಣಮಟ್ಟ ಸರಿ ಇಲ್ಲ ಎಂಬ ಮಾತೂ ಇದೆ. ಹೊಸ ಮೆನುವಿನೊಂದಿಗೆ ಆಹಾರದ ಗುಣಮಟ್ಟ ಹೆಚ್ಚಿಸುವ ಜೊತೆಗೆ ಗ್ರಾಹಕರನ್ನು

ಸೆಳೆಯಲು ಏನು ಮಾಡಬೇಕು ಎಂಬ ಬಗ್ಗೆ ಆಲೋಚಿಸಬೇಕಿದೆ’ ಎಂದರು.

‘ಇಂದಿರಾ ಕ್ಯಾಂಟೀನ್ ಅತ್ಯುತ್ತಮ ಯೋಜನೆಯಾಗಿದ್ದು, ದುಡಿಯುವ ವರ್ಗಕ್ಕೆ ಅತ್ಯಂತ ಕಡಿಮೆ ದರದಲ್ಲಿ ಊಟ ನೀಡಲಾಗುತ್ತಿದೆ. ಇಷ್ಟು ಕಡಿಮೆ ದರದಲ್ಲಿ ಯಾರೂ ನೀಡುವುದಿಲ್ಲ. ಆದರೆ ಜನರೇ ಬರುತ್ತಿಲ್ಲ. ಹೊಸದಾಗಿ ಇಂದಿರಾ ಕ್ಯಾಂಟೀನ್ ತೆರೆಯಲು ಸ್ಥಳಗಳನ್ನು ಪರಿಶೀಲಿಸಲಾಗುತ್ತದೆ. ಅದಕ್ಕೂ ಮುನ್ನ ಇರುವ ಕ್ಯಾಂಟೀನ್‌ಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಹೇಳಿದರು.

ಮುಖ್ಯಮಂತ್ರಿಯವರ ವಿಶೇಷ ನಿಧಿಯಿಂದ ನಗರದ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಸುಮಾರು ₹1,200 ಕೋಟಿ ವೆಚ್ಚದಲ್ಲಿ ಗುಣಮಟ್ಟದ ಕಾಮಗಾರಿ ನಡೆಯುತ್ತಿದ್ದು, ಎರಡು ತಿಂಗಳಲ್ಲಿ ರಸ್ತೆಗಳ ಚಿತ್ರಣ ಬದಲಾಗಲಿದೆ ಎಂದರು.

ಪ್ರತಿ ವಿಧಾನಸಭೆ ಕ್ಷೇತ್ರಕ್ಕೆ ಒಂದು ಟ್ರಾನ್ಸ್‌ಫರ್ ಸ್ಟೇಷನ್ ಅನ್ನು ಸ್ಥಾಪಿಸಲಾಗುತ್ತಿದೆ. ಇದರ ಟೆಂಡರ್ ಪ್ರಕ್ರಿಯೆ ಅಂತಿಮಗೊಂಡಿದ್ದು, ಸದ್ಯದಲ್ಲಿಯೇ ಸ್ಥಾಪನೆ ಕಾರ್ಯ ಆರಂಭವಾಗುತ್ತದೆ. ಇದರಿಂದ ರಸ್ತೆ ಬದಿ ತ್ಯಾಜ್ಯ ವಿಂಗಡಣೆ ತಪ್ಪಲಿದೆ. ಆಟೊದಿಂದ ನೇರವಾಗಿ ಕಸ ಟ್ರಾನ್ಸ್‌ಫರ್ ಸ್ಟೇಷನ್‌ಗೆ ವಿಲೇವಾರಿಯಾಗಲಿದೆ ಎಂದು ಹೇಳಿದರು.

‘ಮನೆ ಮುಂದೆ ವಾಹನಕ್ಕೆ ಶುಲ್ಕ ಪ್ರಸ್ತಾವ ಇಲ್ಲ’

‘ಮನೆ ಮುಂದೆ ನಿಲ್ಲಿಸುವ ವಾಹನಕ್ಕೆ ಶುಲ್ಕ ವಿಧಿಸಲಾಗುತ್ತದೆ ಎಂಬ ವಿಷಯ ಪ್ರತಿ ಬಜೆಟ್ ಸಂದರ್ಭದಲ್ಲೂ ಮುನ್ನೆಲೆಗೆ ಬರುತ್ತದೆ. ಜನಪ್ರತಿನಿಧಿಗಳ ಕೌನ್ಸಿಲ್‌ನಲ್ಲೂ ಇದು ಪ್ರಸ್ತಾವವಾಗಿತ್ತು. ಮನೆ ಮುಂದೆ ನಿಲ್ಲಿಸುವ ವಾಹನಕ್ಕೆ ಶುಲ್ಕ ವಿಧಿಸಿದರೆ ಜಗಳವಾಗುತ್ತದೆ ಅಷ್ಟೆ. ಇಂತಹ ಪ್ರಸ್ತಾವ ಇಲ್ಲ’ ಎಂದು ಮಹೇಶ್ವರ್ ರಾವ್ ಹೇಳಿದರು.

‘ಮನೆ ಮುಂದೆ ವಾಹನಗಳನ್ನು ನಿಲ್ಲಿಸಲು ಅವಕಾಶ ಇಲ್ಲ ಎಂದರೆ ಅವರಿಗೆ, ಸುತ್ತಮುತ್ತ ಪಾರ್ಕಿಂಗ್ ವ್ಯವಸ್ಥೆ ಮಾಡಿಕೊಡಬೇಕಾಗುತ್ತದೆ. ಯಾವ ವ್ಯವಸ್ಥೆಯನ್ನೂ ಮಾಡದೆ ಶುಲ್ಕ ವಿಧಿಸಿದರೆ ಸಮಸ್ಯೆಯಾಗುತ್ತದೆ. ನಗರದ ವಸತಿ ಪ್ರದೇಶದಲ್ಲಿ ಖಾಸಗಿ ಸ್ಥಳಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲು ಯೋಜಿಸಲಾಗುತ್ತದೆ. ಸೌಲಭ್ಯಗಳನ್ನು ಮೊದಲು ಕಲ್ಪಿಸಿ, ನಂತರ ಶುಲ್ಕದ ಬಗ್ಗೆ ಆಲೋಚಿಸಬೇಕಾಗುತ್ತದೆ’ ಎಂದರು.

ಯಾಂತ್ರೀಕೃತ ಪಾರ್ಕಿಂಗ್

ನಮ್ಮ ಮೆಟ್ರೊ ನಿಲ್ದಾಣಗಳಲ್ಲಿ ಯಾಂತ್ರೀಕೃತ ಪಾರ್ಕಿಂಗ್ ಸೌಲಭ್ಯ ಕಲ್ಪಿಸಲು ಚಿಂತಿಸಲಾಗುತ್ತಿದೆ ಎಂದು ಮಹೇಶ್ವರ್ ರಾವ್ ಅವರು ಹೇಳಿದರು.

‘ವಾಹನಗಳ ನಿಲುಗಡೆಗೆ ಎಲ್ಲೆಡೆ ಉತ್ತಮ ಸೌಕರ್ಯ ಕಲ್ಪಿಸಲು ಸಾಮಾನ್ಯ ಪಾರ್ಕಿಂಗ್ ಸೌಲಭ್ಯ ಬದಲು, ಯಾಂತ್ರೀಕೃತ ವ್ಯವಸ್ಥೆ ಕಲ್ಪಿಸಲು ಬಿಎಂಆರ್‌ಸಿಎಲ್‌ನೊಂದಿಗೆ ಮಾತುಕತೆ ನಡೆಸಲಾಗಿದೆ. ಯೋಜನೆ ಬಗ್ಗೆ ವಿವರವಾದ ವರದಿ ನೀಡುವಂತೆ ಅವರನ್ನು ಕೇಳಲಾಗಿದೆ. ಮುಂದಿನ ದಿನಗಳಲ್ಲಿ ಇದನ್ನು ಅನುಷ್ಠಾನಗೊಳಿಸಲಾಗುತ್ತದೆ’ ಎಂದರು. ಐದು ನಗರ ಪಾಲಿಕೆಗಳಲ್ಲಿ ಕನಿಷ್ಠ 15 ರಸ್ತೆಗಳಲ್ಲಿ ‘ಪೇ ಆ್ಯಂಡ್ ಪಾರ್ಕ್’ ವ್ಯವಸ್ಥೆ ಜಾರಿಗೊಳಿಸಲು ಸೂಚಿಸಲಾಗಿದೆ. ಎಲ್ಲೆಡೆ ಟೆಂಡರ್ ಕರೆಯಲಾಗಿದ್ದು, ಹಂತಹಂತವಾಗಿ ಅನುಷ್ಠಾನಗೊಳಿಸಲಾಗುತ್ತದೆ ಎಂದರು.

ಆಸ್ತಿ ಹರಾಜಿಗೆ ಸಿದ್ಧ

ಜಿಬಿಎ ವ್ಯಾಪ್ತಿಯಲ್ಲಿ ಏಳು ಸಾವಿರಕ್ಕೂ ಹೆಚ್ಚು ಆಸ್ತಿಗಳಿಂದ ₹437 ಕೋಟಿ ತೆರಿಗೆ ಹಲವು ವರ್ಷಗಳಿಂದ ಬಾಕಿ ಇದ್ದು, ಅದನ್ನು ವಸೂಲಿ ಮಾಡಲು ಸ್ವತ್ತುಗಳ ಹರಾಜು ಪ್ರಕ್ರಿಯೆ ಆರಂಭಿಸಲು ನಗರ ಪಾಲಿಕೆಗಳ ಜಂಟಿ ಆಯುಕ್ತರಿಗೆ ಸೂಚಿಸಲಾಗಿದೆ.

ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಜಯನಗರ ವಲಯ ವ್ಯಾಪ್ತಿಯ ಒಟ್ಟು 98 ಸ್ವತ್ತುಗಳನ್ನು ಕಾಯ್ದೆ ಹಾಗೂ ನಿಯಮಗಳನ್ವಯ, ಜಯನಗರ 2ನೇ ಬ್ಲಾಕ್‌ನಲ್ಲಿರುವ ಸಭಾಂಗಣದಲ್ಲಿ ಹರಾಜು ಹಾಕುವ ಪ್ರಕ್ರಿಯೆ ಫೆ.21ರಿಂದ ನಡೆಯಲಿದೆ. ಈ ಆಸ್ತಿಗಳಿಂದ ₹1,55,86,841 ತೆರಿಗೆ ಬಾಕಿ ಇದೆ. ಈ ಎಲ್ಲ ವಿವರಗಳನ್ನು ಈಗಾಗಲೇ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ ಎಂದು ದಕ್ಷಿಣ ನಗರ ಪಾಲಿಕೆಯ ಕಂದಾಯ ವಿಭಾಗದ ಹೆಚ್ಚುವರಿ ಆಯುಕ್ತರು ತಿಳಿಸಿದ್ದಾರೆ.

ಸಂಭ್ರಮದ ‘ನಂದಿ’ ಜೋಡಿ ರಥೋತ್ಸವ

ಚಿಕ್ಕಬಳ್ಳಾಪುರ: ತಾಲ್ಲೂಕಿನ ನಂದಿ ಗ್ರಾಮದ ಭೋಗ ನಂದೀಶ್ವರ ದೇಗುಲದ ಆವರಣದಲ್ಲಿ ಸೋಮವಾರ ಭೋಗ ನಂದೀಶ್ವರ ಮತ್ತು ಯೋಗ ನಂದೀಶ್ವರ ಜೋಡಿ ರಥೋತ್ಸವದ ಶ್ರದ್ಧೆ, ಭಕ್ತಿ ಮತ್ತು ಅದ್ದೂರಿಯಿಂದ ನೆರವೇರಿತು. ಸಹಸ್ರಾರು ಭಕ್ತರ ಉಪಸ್ಥಿತಿ ಮತ್ತು ಜಯಘೋಷಗಳಲ್ಲಿ ರಥೋತ್ಸವ ಜರುಗಿತು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ರಥೋತ್ಸವಕ್ಕೆ ಚಾಲನೆ ನೀಡಿದರು. ಜಿಲ್ಲಾಧಿಕಾರಿ ಜಿ.ಪ್ರಭು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕುಶಾಲ್ ಚೌಕ್ಸೆ ಹಾಗೂ ಅಧಿಕಾರಿಗಳು ಹಾಜರಿದ್ದರು. ರಥಗಳಲ್ಲಿ ಯೋಗ ನಂದೀಶ್ವರ, ಭೋಗನಂದೀಶ್ವರಸ್ವಾಮಿ, ಗಿರಿಜಾಂಬ, ಅಂಬಿಕಾ ಮತ್ತು ಗಣಪತಿಯ ಉತ್ಸವ ಮೂರ್ತಿ ಪ್ರತಿಷ್ಠಾಪಿಸಲಾಗಿತ್ತು.

ದೇವಾಲಯದ ಆವರಣದಿಂದ ರಥವು ಮುಂದಡಿ ಇಡುತ್ತಿದ್ದಂತೆ ಜಯಘೋಷಗಳು ಮೊಳಗಿದವು.

ಕೇಸರಿ ಧ್ವಜ, ಹೂವುಗಳಿಂದ ಶೃಂಗಾರಗೊಂಡ ರಥಗಳನ್ನು ಭಕ್ತರು ದೇವಸ್ಥಾನದ ಸುತ್ತ ಎಳೆದರು. ಈ ವೇಳೆ ಭಕ್ತರು ರಥಗಳಿಗೆ ಬಾಳೆ ಹಣ್ಣು, ದವನ ಎಸೆದರು.

ಶಿವನಾಮ ಸ್ಮರಣೆ, ವಿಜೃಂಭಣೆಯ ಬ್ರಹ್ಮ ರಥೋತ್ಸವ

ಮಲ್ಲೇಶ್ವರದ ಶ್ರೀಕಾಡುಮಲ್ಲೇಶ್ವರ ಸ್ವಾಮಿ ದೇವಾಲಯದ ಬ್ರಹ್ಮ ರಥೋತ್ಸವವು ಭಕ್ತರ ಸಮ್ಮುಖದಲ್ಲಿ ಸೋಮವಾರ ವಿಜೃಂಭಣೆಯಿಂದ ನೆರವೇರಿತು – ಪ್ರಜಾವಾಣಿ ಚಿತ್ರ

ರುದ್ರೇಶ್ವರ ಸ್ವಾಮಿ ರಥೋತ್ಸವ

ನೆಲಮಂಗಲ: ಪಟ್ಟಣದ ಪೇಟೆಬೀದಿ ರುದ್ರೇಶ್ವರ ಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ವೀರಗಾಸೆ, ನಂದಿಕೋಲು, ಡೊಳ್ಳು ಕುಣಿತ ರಥೋತ್ಸವಕ್ಕೆ ಮೆರುಗು ತಂದವು. ಭಕ್ತರು ಪಾನಕ, ಮಜ್ಜಿಗೆ, ಕೋಸಂಬರಿಗಳನ್ನು ನೆರೆದಿದ್ದವರಿಗೆ ವಿತರಿಸಿದರು.

ಶಿವರಾತ್ರಿಯಿಂದ ರಥೋತ್ಸವದ ವಿವಿಧ ದೈವಿಕ ಕಾರ್ಯಕ್ರಮಗಳು ನಡೆದಿದ್ದು, ಬುಧವಾರ ಕೊನೆಗೊಳ್ಳಲಿವೆ. ಸೋಮವಾರ ಮಧ್ಯಾಹ್ನ ವೃಷಭ ಲಗ್ನದಲ್ಲಿ ತೇರನ್ನು ಎಳೆಯುತ್ತಿದ್ದಂತೆ ಭಕ್ತರ ಜೈಕಾರ ಮುಗಿಲು ಮುಟ್ಟಿತು. ಎಲ್ಲರಿಗೂ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ರುದ್ರೇಶ್ವರ ದೇವಾಲಯ ಸಮಿತಿ, ರುದ್ರೇಶ್ವರ ತರುಣ ಸಂಘ, ವೀರಶೈವ ಸಮಾಜ ಹಾಗೂ ವಿವಿಧ ಸಂಘಟನೆಗಳು ಉಸ್ತುವಾರಿ ವಹಿಸಿದ್ದರು.

ಪೇಟೆಬೀದಿ ರುದ್ರೇಶ್ವರ ಸ್ವಾಮಿ ತೇರು

ದೇವರ ಆರಾಧನೆಯಿಂದ ನೆಮ್ಮದಿ

ಪ್ರಜಾವಾಣಿ ವಾರ್ತೆ

ರಾಜ ರಾಜೇಶ್ವರಿ ನಗರ: ಸರ್ವರು ಒಗ್ಗೂಡಿ ಭಕ್ತಿಯಿಂದ, ಶಿವರಾತ್ರಿ ಉತ್ಸವ ಆಚರಣೆ ಮಾಡಿದರೆ, ಸಂಸ್ಕೃತಿ, ಧಾರ್ಮಿಕ ಪರಂಪರೆ ಉಳಿಸಲು ಸಹಕಾರಿಯಾಗಿ ಎಂದು ಸಂಸದ ಡಾ. ಸಿ.ಎನ್.ಮಂಜುನಾಥ್ ಹೇಳಿದರು.

ಮಲ್ಲತ್ತಹಳ್ಳಿ ಕೆರೆ ಅಂಗಳದಲ್ಲಿ ಹಮ್ಮಿಕೊಂಡಿದ್ದ ಶಿವರಾತ್ರಿ ಸಂಭ್ರಮದಲ್ಲಿ ಅವರು ಮಾತನಾಡಿದರು.

ಶಾಸಕ ಸಿ.ಎನ್. ಅಶ್ವತ್ಥ ನಾರಾಯಣ ಮಾತನಾಡಿ, ‘ಎಲ್ಲರೂ ಪ್ರೀತಿ, ವಿಶ್ವಾಸ, ನಂಬಿಕೆಯಿಂದ, ಸಹೋದರ ಸಹೋದರಿಯಂತೆ ದೇವರ ಆರಾಧನೆ ಮಾಡುವ ಮೂಲಕ ನೆಮ್ಮದಿ, ಆರೋಗ್ಯಯುತ ಜೀವನ ಸಾಗಿಸೋಣ’ ಎಂದರು.

ಶಾಸಕ ಮುನಿರತ್ನ ಮಾತನಾಡಿ, ‘ಎಲ್ಲಿ ಧರ್ಮವಿರುತ್ತದೆಯೋ ಅಲ್ಲಿ ಶಾಂತಿ ಕಾಣಬಹುದು. ಸರ್ವಜನರು ಒಗ್ಗೂಡಿ ಶಿವಸ್ಮರಣೆ ಮಾಡಿದರೆ ನೆಮ್ಮದಿ ಸಿಗುತ್ತದೆ’ ಎಂದು ಅಭಿಪ್ರಾಯಪಟ್ಟರು.

ಬಿಜೆಪಿ ಮುಖಂಡರಾದ ಮಲ್ಲತ್ತಹಳ್ಳಿ ಎಂ.ಮಂಜುನಾಥ, ಶಿವಶಂಕರ್, ರವಿಗೌಡ, ಜಯರಾಮಯ್ಯ, ಯೋಗೇಶ್, ಜಿ.ಶ್ರೀನಿವಾಸ್ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಡಾ. ಸಿ.ಎನ್. ಮಂಜುನಾಥ ಅವರನ್ನು ಸನ್ಮಾನಿಸಲಾಯಿತು

ಕಲಾವಿದರು ಶಿವನ ಕುರಿತ ನೃತ್ಯರೂಪಕ ಪ್ರಸ್ತುತಪಡಿಸಿದರು

ವಿದ್ಯಾರಣ್ಯಪುರ: ಮಹಾ ಶಿವೋತ್ಸವ

ಪ್ರಜಾವಾಣಿ ವಾರ್ತೆ

ಯಲಹಂಕ: ಕಂದಾಯ ಸಚಿವ ಕೃಷ್ಣಬೈರೇಗೌಡ ಅವರ ನೇತೃತ್ವದಲ್ಲಿ ಬ್ಯಾಟರಾಯನಪುರ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಕೆಬಿಜಿ ಸ್ವಯಂಸೇವಕರ ಸಂಘದ ಆಶ್ರಯದಲ್ಲಿ ವಿದ್ಯಾರಣ್ಯಪುರದ ಎನ್‌ಟಿಐ ಮೈದಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ‘ಮಹಾಶಿವೋತ್ಸವ’ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಶಿವಪೂಜೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಸ್ಥಳೀಯ ಕಲಾವಿದರಿಗಾಗಿ ಶಾಸ್ತ್ರೀಯ ನೃತ್ಯ ಸ್ಪರ್ಧೆ ಏರ್ಪಡಿಸಲಾಗಿತ್ತು. ದೃಷ್ಟಿ ಆರ್ಟ್ಸ್ ಸೆಂಟರ್ ವತಿಯಿಂದ ‘ಸತ್ಯಂ ಶಿವಂ ಸುಂದರಂ’ ಎಂಬ ನೃತ್ಯರೂಪಕ ನಾಟಕ ಪ್ರದರ್ಶನವು ಜನರ ಗಮನ ಸೆಳೆಯಿತು.

ಕೃಷ್ಣಬೈರೇಗೌಡ ಮಾತನಾಡಿ, ಕ್ಷೇತ್ರದಲ್ಲಿ ಎಲ್ಲ ಹಬ್ಬಗಳನ್ನು ವಿಶೇಷವಾಗಿ ಆಚರಿಸುವುದರ ಜೊತೆಗೆ ಶಿಕ್ಷಣದಲ್ಲಿ ಸಾಧನೆಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲು ಪ್ರತಿಭಾ ಪುರಸ್ಕಾರ, ಕ್ರೀಡಾಕೂಟ ಸೇರಿದಂತೆ ವರ್ಷಪೂರ್ತಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದರು.

ಸಾಮಾಜಿಕ ಕಾರ್ಯಕರ್ತೆ ಮೀನಾಕ್ಷಿ ಕೃಷ್ಣಬೈರೇಗೌಡ, ಪಾಲಿಕೆ ಮಾಜಿ ಸದಸ್ಯ ವಿ.ವಿ.ಪಾರ್ತಿಬರಾಜನ್, ಕಾಂಗ್ರೆಸ್ ಮುಖಂಡರಾದ ಎನ್.ಎನ್.ಶ್ರೀನಿವಾಸಯ್ಯ, ಎಂ.ಜಯಗೋಪಾಲಗೌಡ, ಟಿ.ಜಿ.ಚಂದ್ರು, ವಿ.ಹರಿ, ಆರ್.ಎಂ.ಶ್ರೀನಿವಾಸ್, ಬಿ.ಎಸ್.ಗೋಪಾಲಕೃಷ್ಣ, ಲಕ್ಷ್ಮೀಹರಿ ಉಪಸ್ಥಿತರಿದ್ದರು.

‘ಗಿರಿಜಾ ಕಲ್ಯಾಣೋತ್ಸವ

ಪ್ರಜಾವಾಣಿ ವಾರ್ತೆ

ಯಲಹಂಕ: ಹಳೇನಗರದ ನಗರ್ತರ ಪೇಟೆ ಬ್ರಾಹ್ಮಣರ ಬೀದಿಯಲ್ಲಿರುವ ಪುರಾತನ ನಗರೇಶ್ವರಸ್ವಾಮಿ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ‘ಗಿರಿಜಾ ಕಲ್ಯಾಣೋತ್ಸವ ನೆರವೇರಿತು.

ಬೆಳಗ್ಗೆಯಿಂದಲೇ ಸ್ವಾಮಿಗೆ ಪಂಚಾಮೃತ ಅಭಿಷೇಕ, ರುದ್ರಾಭಿಷೇಕ ಸೇರಿ ವಿವಿಧ ಪೂಜಾಕೈಂಕರ್ಯಗಳನ್ನು ನೆರವೇರಿಸಲಾಯಿತು.

ಬೆಳಿಗ್ಗೆ 10ಕ್ಕೆ ಪ್ರಾರಂಭವಾದ ಕಲ್ಯಾಣೋತ್ಸವ, ಮಧ್ಯಾಹ್ನ 3ಕ್ಕೆ ಮುಕ್ತಾಯವಾಯಿತು. ಸಂಜೆ ಶಿವ-ಪಾರ್ವತಿ ದೇವರ ಮೂರ್ತಿಗಳನ್ನು ರಾಜ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ಸಾವಿರಾರು ಭಕ್ತಾದಿಗಳು ದೇವರ ದರ್ಶನ ಪಡೆದರು. ಸೋಮವಾರ ಬೆಳಿಗ್ಗೆ 9ರಿಂದ ಸಂಜೆಯವರೆಗೂ ಪ್ರಸಾದ ವಿತರಿಸಲಾಯಿತು.

ನಗರೇಶ್ವರ ಸ್ವಾಮಿ ದೇವಸ್ಥಾನ ಭಕ್ತ ಮಂಡಳಿಯ ಪುರುಷೋತ್ತಮ್ ಸ್ವಾಮಿ, ಗೋಪಾಲ್, ಸತ್ಯನಾರಾಯಣ ಸಂಗಮೇಶ್ವರ್, ಮಂಜುನಾಥ್, ಭಾಸ್ಕರ್, ವಿಜಯಕುಮಾರ್, ಭಾರ್ಗವ್, ಅಪ್ಪಿ, ಕಾರಂತರು, ಮನೋಹರ್, ಶಮಂತ್ ಉಪಸ್ಥಿತರಿದ್ದರು.

ನಗರೇಶ್ವರಸ್ವಾಮಿ ದೇವಸ್ಥಾನದಲ್ಲಿ ‘ಗಿರಿಜಾ ಕಲ್ಯಾಣೋತ್ಸವ ನೆರವೇರಿತು

ಬೊಮ್ಮಾವಾರ ಕಲ್ಯಾಣಿಯಲ್ಲಿ ದೀಪೋತ್ಸವ

ದೇವನಹಳ್ಳಿ: ತಾಲ್ಲೂಕಿನ ಬೊಮ್ಮಾವಾರ ಗ್ರಾಮದ ಮೀನಾಕ್ಷಿ ಸುಂದರೇಶ್ವರ ದೇವಸ್ಥಾನದ ಪುನಶ್ಚೇತನಗೊಂಡ ಕಲ್ಯಾಣಿಯಲ್ಲಿ ಶಿವರಾತ್ರಿಯ ಅಂಗವಾಗಿ ಭಾನುವಾರ ಗಂಗಾ ಪೂಜೆ ಆಯೋಜಿಸಲಾಗಿತ್ತು.

ಕಲ್ಯಾಣಿ ಸುತ್ತ ಸಾವಿರಾರು ಹಣತೆಗಳನ್ನು ಬೆಳಗಿಸಿ ದೀಪೋತ್ಸವ ನಡೆಸಲಾಯಿತು. 200ಕ್ಕೂ ಹೆಚ್ಚು ಮಹಿಳೆಯರು ಗಂಗಾ ಕಲಶಗಳೊಂದಿಗೆ ಶೋಭಾಯಾತ್ರೆ ನಡೆಸಿದರು. ಪರಿಸರ ಸಂರಕ್ಷಣ ತಂಡದ ಸದಸ್ಯರು ಸ್ಥಳೀಯರ ಸಹಕಾರ ದೊಂದಿಗೆ 12 ವಾರ ದೇವಸ್ಥಾನದ ಕಲ್ಯಾಣಿ ಸ್ವಚ್ಛತೆ ಹಾಗೂ ಪುನಶ್ಚೇತನ ಕಾರ್ಯ ಕೈಗೊಂಡಿತ್ತು.

ನಗರಸಭಾ ಕಾರ್ಯಾಲಯ, ಚಿಂತಾಮಣಿ
ಚಿಕ್ಕಬಳ್ಳಾಪುರ ಜಿಲ್ಲೆ

ಕಛೇರಿ ವಿಳಾಸ: ಬೆಂಗಳೂರು ರಸ್ತೆ, ವಾರ್ಡ್ 10, ಎನ್ ಆರ್ ಬಡಾವಣೆ ಚಿಂತಾಮಣಿ–563 125, ದೂರವಾಣಿ: 08154–252056/ ಸಹಾಯವಾಣಿ: 08154–252117, ಇ–ಮೇಲ್:itstaff_ulb_chintamanicity@yahoo.in, cmc.chintamani@gmail.com, ವೆಬ್‌ಸೈಟ್:www.chintamanicity.gov.in

ಸಂಖ್ಯೆ: ನಸಚಿ/ತಾಶಾ/ಸಿ.ಆರ್/224/2025–26 ದಿನಾಂಕ: 05.02.2026

ಟೆಂಡರ್ ಪ್ರಕಟಣೆ

ಚಿಂತಾಮಣಿ ನಗರಸಭೆ ವ್ಯಾಪ್ತಿಯಲ್ಲಿ ನಗರಸಭೆ ನಿಧಿಯಲ್ಲಿ ಸಿ.ಎಂ.ಐ.ಡಿ.ಪಿ ಯೋಜನೆಯಡಿ ರಸ್ತೆ ಮತ್ತು ಚರಂಡಿ ಹಾಗೂ ಫುಟ್‌ಪಾತ್ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಡಿ.ಪಿ.ಆರ್ ತಯಾರಿಸಲು ಟೆಂಡರ್ ಆಹ್ವಾನಿಸಲಾಗಿರುತ್ತದೆ. ಇಷ್ಟವುಳ್ಳ ತಾಂತ್ರಿಕ ಸಮಾಲೋಚಕರು **ದಿನಾಂಕ: 19.02.2026 ಸಂಜೆ ನಾಲ್ಕು ಗಂಟೆ ಒಳಗಾಗಿ ಮೊಹರಾದ ಟೆಂಡರ್‌ಗಳನ್ನು ಸಲ್ಲಿಸಬೇಕಾಗಿರುತ್ತದೆ.** ಹೆಚ್ಚಿನ ವಿವರಗಳಿಗಾಗಿ ತಾಂತ್ರಿಕ ಶಾಖೆಯಲ್ಲಿ ಪಡೆದುಕೊಳ್ಳಬಹುದಾಗಿರುತ್ತದೆ.

ಪ್ಯಾಕೇಜು ಸಂಖ್ಯೆ	ಅಂದಾಜು ಮೊತ್ತ	ಇ.ಎಂ.ಡಿ ಮೊತ್ತ	ಒಟ್ಟು ಕಾಮಗಾರಿಗಳು
1	713.50 ಲಕ್ಷಗಳು	11,500	01
2	876.00 ಲಕ್ಷಗಳು	11,500	11

ಸಹಿ/– ಪೌರಾಯುಕ್ತರು, ನಗರಸಭೆ, ಚಿಂತಾಮಣಿ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:415/ಕೆಎಸ್‌ಎಂಸಿಎ/2025–26

ನಗರದಲ್ಲಿ ಇಂದು

ಪಿ. ರಾಮಯ್ಯ ಅವರಿಗೆ ಶ್ರದ್ಧಾಂಜಲಿ, ‘ನಾನು ಹಿಂದೂ ರಾಮಯ್ಯ’ ಪುಸ್ತಕ ಎರಡನೇ ಮುದ್ರಣದ ಬಿಡುಗಡೆ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಭಾಗವಹಿಸುವವರು: ಕೆ.ವಿ.ಪ್ರಭಾಕರ್, ಆಯೇಷಾ ಖಾನುಂ, ಶಿವಾನಂದ ತಗಡೂರು, ಆರ್.ಶ್ರೀಧರ್, ಆರ್.ಟಿ. ವಿಠ್ಠಲಮೂರ್ತಿ, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಕರ್ನಾಟಕ ಮಾಧ್ಯಮ ಅಕಾಡೆಮಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಬೆಂಗಳೂರು ಪ್ರೆಸ್‌ಕ್ಲಬ್, ಬೆಂಗಳೂರು ವರದಿಗಾರರ ಕೂಟ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಮಧ್ಯಾಹ್ನ 3.30

‘ಒಳಚರಂಡಿ ಪುರಾಣ’ ನಾಟಕ ಪ್ರದರ್ಶನ: ನಿರ್ದೇಶನ: ಅರ್ಚನಾ ಶ್ಯಾಮ್, ಆಯೋಜನೆ: ಅಂತರಂಗ ತಂಡ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

30 ದಿನಗಳಲ್ಲಿ ವರದಿ ಸಲ್ಲಿಸುವಂತೆ ಸೂಚನೆ

ಕಾರ್ಯಪಾಲನಾ ವರದಿ ನಾಪತ್ತೆ: ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೃತ್ತ ಉಪ ಅರಣ್ಯ ಸಂರಕ್ಷಣಾಧಿಕಾರಿ ಅವರ 2012-13ನೇ ಸಾಲಿನ ಕಾರ್ಯಪಾಲನಾ ವರದಿ ನಾಪತ್ತೆ ಪ್ರಕರಣದ ವಿಚಾರಣೆಗೆ ಪ್ರವಾಸೋದ್ಯಮ ಇಲಾಖೆ ಜಂಟಿ ಕಾರ್ಯದರ್ಶಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ.

ಅರಣ್ಯ, ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕರು, ಅರಣ್ಯ ಇಲಾಖೆ ಜಂಟಿ ಕಾರ್ಯದರ್ಶಿ, ಕಾನೂನು ಇಲಾಖೆ ಉಪ ಕಾರ್ಯದರ್ಶಿ, ಡಿಪಿಎಆರ್‌ನ ಉಪ ಕಾರ್ಯದರ್ಶಿ ಸದಸ್ಯರಾಗಿದ್ದು, ಪ್ರವಾಸೋದ್ಯಮ ಇಲಾಖೆಯ ಶಾಖಾಧಿಕಾರಿ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲಿದ್ದಾರೆ. 30 ದಿನಗಳಲ್ಲಿ ವರದಿ ನೀಡಲು ಸಮಿತಿಗೆ ಸೂಚಿಸಲಾಗಿದೆ.

ನಿವೃತ್ತ ಉಪ ಅರಣ್ಯ ಸಂರಕ್ಷಣಾಧಿಕಾರಿ ಕೆ.ಎಂ.ಬಾಲಸುಬ್ರಹ್ಮಣ್ಯ ಪ್ರಸಾದ್ ಅವರು ಜಂಗಲ್ ಲಾಡ್ಜ್ ಮತ್ತು ರೆಸಾರ್ಟ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯ ಕಾರ್ಯಪಾಲನಾ ವರದಿ ನೀಡುವಂತೆ ಪ್ರವಾಸೋದ್ಯಮ ಸಚಿವಾಲಯಕ್ಕೆ ಮಾಹಿತಿ ಹಕ್ಕು ಅಧಿನಿಯಮದಡಿ ಅರ್ಜಿ ಸಲ್ಲಿಸಿದ್ದರು. ಆದರೆ, ಕಾರ್ಯಪಾಲನಾ ವರದಿ ಲಭ್ಯವಿಲ್ಲ ಎಂದು ಪ್ರವಾಸೋದ್ಯಮ ಸಚಿವಾಲಯದ ಸಾರ್ವಜನಿಕ ಮಾಹಿತಿ ಅಧಿಕಾರಿ ಉತ್ತರ ನೀಡಿದ್ದರು. ಬಾಲಸುಬ್ರಹ್ಮಣ್ಯ ಪ್ರಸಾದ್ ಅವರು ಕರ್ನಾಟಕ ಮಾಹಿತಿ ಆಯೋಗಕ್ಕೆ ಮೇಲ್ಮನವಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ಕರ್ನಾಟಕ ಮಾಹಿತಿ ಆಯೋಗದ ಆಯುಕ್ತ ರುದ್ರಣ್ಣ ಹರ್ತಿಕೋಟೆ, ಜಂಗಲ್ ಲಾಡ್ಜ್ ಮತ್ತು ರೆಸಾರ್ಟ್ ಹಾಗೂ ಅರಣ್ಯ ಇಲಾಖೆಯಲ್ಲಿ ಪರಿಶೀಲನೆ ಮಾಡುವಂತೆ ಸೂಚಿಸಿದ್ದರು. ಆದರೆ, ಅಲ್ಲಿಯೂ ಕಾರ್ಯಪಾಲನಾ ವರದಿ ಲಭ್ಯವಿಲ್ಲ ಎಂದು ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳು ಉತ್ತರ ನೀಡಿದ್ದರು. ಪ್ರಕರಣಕ್ಕೆ ಸಂಬಂಧ ಪ್ರವಾಸೋದ್ಯಮ ಇಲಾಖೆಯ ಅಧೀನ ಕಾರ್ಯದರ್ಶಿ ಮೊಹಮ್ಮದ್ ಇಬ್ರಾಹಿಂ ಅವರಿಗೆ ₹25 ಸಾವಿರ ದಂಡ ವಿಧಿಸಲಾಗಿತ್ತು. ಅರ್ಜಿದಾರರಿಗೆ ₹3 ಸಾವಿರ ಪರಿಹಾರ ನೀಡಲು ಆಯೋಗ ಆದೇಶ ನೀಡಿತ್ತು.

ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹಾಗೂ ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಕೆ.ವಿ. ತ್ರಿಲೋಕ ಚಂದ್ರ ಅವರಿಗೆ ಈ ಬಗ್ಗೆ ವಿಚಾರಣೆ ನಡೆಸಿ, ಅನುಪಾಲನಾ ವರದಿ ಸಲ್ಲಿಸಲು ಉನ್ನತ ಅಧಿಕಾರಿಗಳ ನೇತೃತ್ವದ ಸಮಿತಿ ರಚನೆ ಮಾಡುವಂತೆ ನಿರ್ದೇಶನ ನೀಡಲಾಗಿತ್ತು.

ಮುಖ್ಯಾಂಶಗಳು

- ಮಾಹಿತಿ ಹಕ್ಕು ಅಧಿನಿಯಮದಡಿ ಸಲ್ಲಿಕೆಯಾಗಿದ್ದ ಅರ್ಜಿ
- ಕೆ.ಎಂ.ಬಾಲಸುಬ್ರಹ್ಮಣ್ಯ ಪ್ರಸಾದ್ ಮಾಹಿತಿ ಕೋರಿದ್ದರು
- ಪರಿಶೀಲನೆಗೆ ಸೂಚಿಸಿದ್ದ ಕರ್ನಾಟಕ ಮಾಹಿತಿ ಆಯೋಗ

ತಹಶೀಲ್ದಾರ್‌ಗೆ ನೋಟಿಸ್

ಹೊಸಕೋಟೆ ತಹಶೀಲ್ದಾರ್ ಸೋಮಶೇಖರ್ ಅವರಿಗೆ ರಾಜ್ಯ ಸರ್ಕಾರ ನೋಟಿಸ್ ನೀಡಿದೆ.

ಹೊಸಕೋಟೆಯ ಮುನಿಕೃಷ್ಣಪ್ಪ ಅವರು ತಮ್ಮ ಜಮೀನಿನ ವಿಷಯದ ಮಾಹಿತಿ ಕೋರಿ ಅರ್ಜಿಗಳನ್ನು ಸಲ್ಲಿಸಿದ್ದರು. ಆದರೆ, ಹೊಸಕೋಟೆ ತಾಲ್ಲೂಕು ಕಚೇರಿಯಲ್ಲಿ ಮಾಹಿತಿ ನೀಡಿರಲಿಲ್ಲ. ಮೇಲ್ಮನವಿಯ ವಿಚಾರಣೆ ನಡೆಸಿದ ಆಯೋಗ, ₹ 80 ಸಾವಿರ ದಂಡ ವಿಧಿಸಿತ್ತು.

ದಂಡ ವಿಧಿಸಿದ ನಂತರವೂ ಮಾಹಿತಿ ನೀಡಿದ ಕಾರಣ ಕಾನೂನು ಕ್ರಮ ಕೈಗೊಳ್ಳುವಂತೆ ಆಯೋಗದ ಸೂಚನೆಯಂತೆ ವಿವರಣೆ ಕೇಳಿ ಸರ್ಕಾರ ತಹಶೀಲ್ದಾರ್‌ಗೆ ನೋಟಿಸ್ ನೀಡಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

PUBLIC NOTICE

Notice is hereby given to the general public that my client **Mr.B. S. UDAY SHETTY, S/o Shrikantha Shetty,** R/at No. 79/A, 2nd Cross, Kelagote Industrial area, Chitradurga Rural, Station Road, Chitradurga-577502 intends to purchase the Schedule Property from **M/S UNIVERSAL EDUCATIONAL TRUST**, Rep: by VIVEK NARAYAN RAJU, having its office at 132/2, ROYAL PUBLIC SCHOOL, S K Venkataswamy Raju Layout, JP Nagar, Bangalore-560078.

Any person/s, family members, individuals or groups, Trust/Trustees, Government/Non-Government/Semi-Government authorities, Financial Institutions, Banks, Co-operative Societies or local bodies such as Village Panchayath, BDA, BBMP, etc., who have or claim to have any right, title, interest, lien, charge, mortgage, lease, easement, agreement, litigation, injunction or any other claim whatsoever in respect of the Schedule Property, or who are in any manner affected by the proposed sale transaction, are hereby called upon to submit their objections/claims, if any, in writing to the undersigned within **SEVEN (7) DAYS** from the date of publication of this notice, along with relevant documentary proof. If no such objections or claims are received within the stipulated period, it shall be presumed that there are no claims or objections in respect of the Schedule Property and my client shall proceed to complete the purchase of the said property from the above vendor. Any claim made thereafter shall not be entertained and shall not be binding on my client.

SCHEDULE PROPERTY

All that piece and parcel of the Property bearing **New No. 132/2, Old Site Nos.132/2A, 132/2B, 132/2C and 132/2D, Old PID No. 33/14/2/132/2, Property No.29/29/29/14/2/132/2B/132/2A/132/2D/132/2C, New EP1D No. 3643711818, situated at Sarakkikere Village, Uttarahalli Hobli, Bangalore South Taluk, Bangalore-560078,** measuring East to West 190 feet (57.9 Meters) and North to South 80 feet (24.4 Meters), totally measuring 15200 Square feet (1412.1 Square meters), together with a building built thereon measuring 31638 Square feet and bounded on the:

East by : Road,
West by : Road,
North by : Private Property,
South by : Private Property.

Mr. K.N. SUDHEER, Advocate, Office at: No.301/49, First Floor, Kanakapura Main Road, Near Canara Bank, Jayanagar 7th Block, Bengaluru-560078
Mobile: 9900260252
Email: advocatesudhi@gmail.com

PERSONAL

Change of Name

CHANGE OF NAME
I, **Lakshmi Prasad Rao,** residing at No. TF-001, 3rd Floor, Sri Sai Cherish Apartments, 3rd Main, 3rd Cross, Srinivasa Nagar, Bengaluru-560085, have changed my name to **LAKSHMI PRASAD** vide affidavit dated 10-02-2026 before notary S.V. Nagendra, Mysore. Henceforth I shall be called **LAKSHMI PRASAD** only

I JAGANNATHA K.S #383, near Mutturayaswamy Temple, Bommasandra, Bengaluru-99, Have changed my name to JAGANNATH K.S vide affidavit dated-16/02/2026.

I NAGARAJ TARA JYOTHI #383, near Mutturayaswamy Temple, Bommasandra, Bengaluru-99, Have changed my name to TARA JYOTHI vide affidavit dated-16/02/2026.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಮೂರು ಪ್ಯಾಕೇಜ್‌ಗಳಲ್ಲಿ ಟೆಂಡರ್‌ಗೆ ಸಿದ್ಧತೆ

ಬೆಂಗಳೂರು ಬ್ಯುಸಿನೆಸ್ ಕಾರಿಡಾರ್
• ಮಾರ್ಚ್ 30ಗಳಲ್ಲಿ ಪ್ರಕ್ರಿಯೆ ಆರಂಭ

• ಕೆ.ಎಸ್.ಸುನಿಲ್

ಬೆಂಗಳೂರು: ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಬಿಬಿಸಿ–ಪಿಆರ್‌ಆರ್–1) ಯೋಜನೆಗೆ ಸಂಬಂಧಿಸಿದ ಸಿವಿಲ್ ಕಾಮಗಾರಿಗಳಿಗೆ ಮೂರು ಪ್ಯಾಕೇಜ್‌ಗಳಲ್ಲಿ ಟೆಂಡರ್ ಕರೆಯಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಸಿದ್ಧತೆ ನಡೆಸಿದೆ.

ಭೂಸ್ವಾಧೀನ ಪ್ರಕ್ರಿಯೆ ಸುಗಮಗೊಳಿಸಲು ಹಾಗೂ ಕಾಮಗಾರಿ ವೇಗಗೊಳಿಸಲು ಈ ಯೋಜನೆಯನ್ನು ಮೂರು ಪ್ಯಾಕೇಜ್‌ಗಳಾಗಿ ವಿಂಗಡಿಸಲಾಗಿದೆ. ಈ ಪೈಕಿ ತುಮಕೂರು ರಸ್ತೆ– ಬಳ್ಳಾರಿ ರಸ್ತೆವರೆಗಿನ ಸಿವಿಲ್ ಕಾಮಗಾರಿಗಳ ಟೆಂಡರ್ ಅನ್ನು ಮಾರ್ಚ್ ಅಂತ್ಯದೊಳಗೆ ಆಹ್ವಾನಿಸಲಾಗುತ್ತದೆ.

ಮೊದಲ ಪ್ಯಾಕೇಜ್ ಮಾದಾವರ (ನೆಲಮಂಗಲ)– ವಿಮಾನ ನಿಲ್ದಾಣ ರಸ್ತೆ (23 ಕಿ.ಮೀ), ಅಂದಾಜು ವೆಚ್ಚ ₹2,850 ಕೋಟಿ. ಎರಡನೇ ಪ್ಯಾಕೇಜ್ ವಿಮಾನ ನಿಲ್ದಾಣ–ಹಳೇ ಮದ್ರಾಸ್ ರಸ್ತೆ, ಅಂದಾಜು ವೆಚ್ಚ ₹1,569 ಕೋಟಿ. ಏಪ್ರಿಲ್ ತಿಂಗಳಲ್ಲಿ ಟೆಂಡರ್ ಕರೆಯಲಾಗುತ್ತದೆ. ಮೂರನೇ ಪ್ಯಾಕೇಜ್ ಹಳೆ ಮದ್ರಾಸ್ ರಸ್ತೆ–ಹೊಸೂರು ರಸ್ತೆ (ಎಲೆಕ್ಟ್ರಾನಿಕ್ ಸಿಟಿ ಸಮೀಪ) (27.75 ಕಿ.ಮೀ); ಅಂದಾಜು ವೆಚ್ಚ ₹3,413 ಕೋಟಿ.

ಸರ್ಕಾರದ ಖಾತರಿಯೊಂದಿಗೆ ಬಿಬಿಸಿ ನಿರ್ಮಾಣಕ್ಕೆ ಹುಡ್ಕೊ ಮೂಲಕ ₹27 ಸಾವಿರ ಕೋಟಿ ಸಾಲ ಪಡೆಯಲಾಗಿದೆ. ಇದರಲ್ಲಿ ಸಿವಿಲ್ ಕಾಮಗಾರಿಗಳಿಗೆ ಸುಮಾರು ₹7,500 ಕೋಟಿ ವೆಚ್ಚವಾಗಬಹುದು ಎಂದು ಅಂದಾಜಿಸಲಾಗಿದೆ. ಯೋಜನೆ ಮುಗಿದ ಮೇಲೆ ಹಣ ಉಳಿಯುವ ಸಾಧ್ಯತೆ ಇದೆ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

ತುಮಕೂರು ರಸ್ತೆಯ ಮಾದಾವರದಿಂದ ಆರಂಭವಾಗಿ ಉತ್ತರ ಮತ್ತು ಪೂರ್ವದ ರಸ್ತೆಗಳ ಮೂಲಕ ಸಾಗಿ ದಕ್ಷಿಣ ದಿಕ್ಕಿನ ಕೋನಪ್ಪನ ಅಗ್ರಹಾರದ ಬಳಿಯ ಹೊಸೂರು ರಸ್ತೆಯಲ್ಲಿ ಅಂತ್ಯಗೊಳ್ಳುವ 73 ಕಿ.ಮೀ. ಉದ್ದದ ಯೋಜನೆಗೆ 67 ಗ್ರಾಮಗಳಲ್ಲಿ 2,557 ಎಕರೆ ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ. ಈಗಾಗಲೇ 2,810 ಎಕರೆ ಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. 3,586 ಭೂಮಾಲೀಕರ ಪೈಕಿ ಈವರೆಗೂ 500ಕ್ಕೂ ಅಧಿಕ ರೈತರು ಜಮೀನು ಸ್ವಾಧೀನಪಡಿಸಿಕೊಳ್ಳಲು ಸಮ್ಮತಿ ಪತ್ರ ಸಲ್ಲಿಸಿ, ಪರಿಹಾರ ಪಡೆದುಕೊಂಡಿದ್ದಾರೆ.

ತುಮಕೂರು ರಸ್ತೆಯಿಂದ ಯಲಹಂಕ, ಎಲೆಕ್ಟ್ರಾನಿಕ್ ಸಿಟಿ–ಮೈಸೂರು ರಸ್ತೆ ಮೂಲಕ ಬೆಂಗಳೂರು ಎಕ್ಸಿಬಿಷನ್ ಸೆಂಟರ್‌ವರೆಗೂ ಕಾರಿಡಾರ್ ಸಾಗಲಿದೆ. ಈ ರಸ್ತೆಯು ಬೆಂಗಳೂರಿನ ಉತ್ತರ ಭಾಗದಲ್ಲಿ 73 ಕಿ.ಮೀ ಸಾಗಲಿದ್ದು, ಉಳಿದದ್ದು ಬೆಂಗಳೂರಿನ ದಕ್ಷಿಣ ಭಾಗದಲ್ಲಿ ಸಾಗಲಿದೆ. ಶೇ 40ರಷ್ಟು ದಟ್ಟಣೆ ಕಡಿಮೆಯಾಗಲಿದ್ದು, ಎಲೆಕ್ಟ್ರಾನಿಕ್ ಸಿಟಿ, ತುಮಕೂರು ರಸ್ತೆ, ನೆಲಮಂಗಲ, ಮೈಸೂರು ರಸ್ತೆ ಕಡೆ ಹೋಗುವ ವಾಹನಗಳು ಈ ರಸ್ತೆಯಲ್ಲಿ ಸಾಗಲಿವೆ.

ರಸ್ತೆಯ ಎರಡೂ ಭಾಗದಲ್ಲಿ ಸರ್ವೀಸ್ ರಸ್ತೆ ಇರಲಿದ್ದು, ಪ್ರಮುಖ ರಸ್ತೆ ಟೋಲ್ ರಸ್ತೆಯಾಗಲಿದೆ. ರಸ್ತೆಯ ಮಧ್ಯೆ ನಮ್ಮ ಮೆಟ್ರೊ ಯೋಜನೆಗೆ 5 ಮೀಟರ್ ಕಲ್ಪಿಸಲಾಗುವುದು. ಉಳಿದ 35 ಮೀಟರ್ ಜಾಗವನ್ನು ರೈತರಿಗೆ ಪರಿಹಾರ ರೂಪದಲ್ಲಿ ಮರಳಿ ನೀಡಲಾಗುತ್ತದೆ.

ಮುಖ್ಯಾಂಶಗಳು

₹2,850 ಕೋಟಿ
ಮೊದಲ ಹಂತದ ಪ್ಯಾಕೇಜ್ ಮೊತ್ತ

₹1,569 ಕೋಟಿ
ಎರಡನೇ ಹಂತದ ಪ್ಯಾಕೇಜ್ ಮೊತ್ತ

₹3,413 ಕೋಟಿ
ಮೂರನೇ ಹಂತದ ಪ್ಯಾಕೇಜ್ ಮೊತ್ತ

‘ನಗರಕ್ಕೆ ದೊಡ್ಡ ಮಟ್ಟದಲ್ಲಿ ಅನುಕೂಲ’

‘ಭೂಸ್ವಾಧೀನ ಪ್ರಕ್ರಿಯೆ ಸುಗಮಗೊಳಿಸಲು ಈ ಯೋಜನೆಯನ್ನು ಮೂರು ಪ್ಯಾಕೇಜ್‌ಗಳಾಗಿ ವಿಂಗಡಿಸಲಾಗಿದ್ದು, ಮಾರ್ಚ್‌ನಲ್ಲಿ ಟೆಂಡರ್ ಪ್ರಕ್ರಿಯೆ ಆರಂಭಗೊಳ್ಳಲಿದೆ. ಸಂಚಾರ ದಟ್ಟಣೆ ನಿವಾರಣೆಗೆ ಈ ಯೋಜನೆ ಅಗತ್ಯವಾಗಿದೆ. ಈ ಯೋಜನೆಯಿಂದ ಬೆಂಗಳೂರು ನಗರಕ್ಕೆ ದೊಡ್ಡ ಮಟ್ಟದಲ್ಲಿ ಅನುಕೂಲ ಆಗಲಿದೆ’ ಎಂದು ಬಿಬಿಸಿ ವಿಶೇಷ ಉದ್ದೇಶದ ಘಟಕದ (ಎಸ್‌ಪಿವಿ) ಅಧ್ಯಕ್ಷ ಎಲ್.ಕೆ.ಅತೀಕ್ ತಿಳಿಸಿದರು.

ಎಲ್‌.ಕೆ. ಅತೀಕ್

ಭಾರತ– ಅಮೆರಿಕ ನಡುವಿನ ವ್ಯಾಪಾರ ಒಪ್ಪಂದಕ್ಕೆ ವಿರೋಧ

ತರಕಾರಿ ಪ್ರದರ್ಶಿಸಿ ಎಎಪಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದ ವಿರೋಧಿಸಿ ಆಮ್ ಆದ್ಮಿ ಪಕ್ಷದಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಇದೇ ವೇಳೆ ತರಕಾರಿಗಳನ್ನು ಪ್ರದರ್ಶಿಸಿ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಕಾರರು, ‘ಸ್ವದೇಶಿ ಬಳಸಿ, ವಿದೇಶಿ ತಿರಸ್ಕರಿಸಿ’, ‘ವ್ಯಾಪಾರ ಒಪ್ಪಂದ: ಅಮೆರಿಕಕ್ಕೆ ಸಿಹಿ, ಭಾರತಕ್ಕೆ ಕಹಿ’, ‘ಮೋದಿಜಿ ಚೆಲ್ಲಾಟ; ದೇಶದ ರೈತರಿಗೆ ಸಂಕಟ’ ಎಂಬ ಫಲಕಗಳನ್ನು ಪ್ರದರ್ಶಿಸಿದರು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು ಮಾತನಾಡಿ, ‘ಭಾರತ ಪರಂಪರಾನುಗತವಾಗಿ ಕೃಷಿ ಕ್ಷೇತ್ರವನ್ನು ತನ್ನ ಆರ್ಥಿಕತೆಯ ಬೆನ್ನೆಲುಬಾಗಿ ಕಾಪಾಡಿಕೊಂಡು ಬಂದಿದೆ. ಕೋಟ್ಯಂತರ ಸಂಖ್ಯೆಯ ಸಣ್ಣ ರೈತರು ಇಂದಿಗೂ ದೇಶದ ಆರ್ಥಿಕತೆಗೆ ಬೆನ್ನೆಲುಬಾಗಿದ್ದಾರೆ. ಇಂತಹ ಸಂದರ್ಭದಲ್ಲಿ ಅಮೆರಿಕದ ಒತ್ತಡ ಹಾಗೂ ಹಿತಾಸಕ್ತಿಗೆ ಬಲಿಯಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಎರಡು ದೇಶಗಳ ನಡುವಿನ ವ್ಯಾಪಾರ ಒಪ್ಪಂದವನ್ನು ಐತಿಹಾಸಿಕವೆಂದು ಹೇಳುತ್ತಲೇ ದೇಶದ ರೈತರಿಗೆ ಮರಣ ಶಾಸನ ಬರೆದಿದ್ದಾರೆ’ ಎಂದು ಕಳವಳ ವ್ಯಕ್ತಪಡಿಸಿದರು.

‘ದೇಶದಲ್ಲಿ 85ರಿಂದ 90 ಕೋಟಿ ಜನರು ಕೃಷಿ ಚಟುವಟಿಕೆಗಳು ಹಾಗೂ ಕೃಷಿ ಸಂಬಂಧಿತ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಬೆಳೆಗಳನ್ನು ವಿದೇಶಗಳಿಗೆ ರಫ್ತು ಮಾಡುವ ಮೂಲಕ ಉತ್ತಮ ಬೆಲೆ ನಿರೀಕ್ಷಿಸಬಹುದಾಗಿತ್ತು. ಆದರೆ, ಈ ವ್ಯಾಪಾರ ಒಪ್ಪಂದದಲ್ಲಿ ಯಾಂತ್ರಿಕೃತ ವ್ಯವಸ್ಥೆಯಿಂದ ಬೆಳೆದಿರುವ ಅಮೆರಿಕ ದೇಶದ ಬೆಳೆಗಳಿಗೆ ಭಾರತವು ಶೂನ್ಯ ಅಥವಾ ಕಡಿಮೆ ಸುಂಕದ ರೂಪದಲ್ಲಿ ಮಾರುಕಟ್ಟೆ ಸೃಷ್ಟಿಸಲು ಹೊರಟಿದೆ’ ಎಂದು ಆತಂಕ ವ್ಯಕ್ತಪಡಿಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು

ಪಕ್ಷದ ಕಾರ್ಯಾಧ್ಯಕ್ಷ ಸೀತಾರಾಮ ಗುಂಡಪ್ಪ ಮಾತನಾಡಿ, ‘ಅಮೆರಿಕವು ತನ್ನ ಯಾಂತ್ರೀಕೃತ ಕೃಷಿ ವ್ಯವಸ್ಥೆಯಿಂದ ಬೆಳೆದಿರುವ ಕೃಷಿ ಉತ್ಪನ್ನಗಳು ಅಗ್ಗವಾಗಿರುತ್ತವೆ. ಇವುಗಳನ್ನು ಭಾರತದ ಮಾರುಕಟ್ಟೆಗೆ ಪರಿಚಯಿಸಿದಾಗ ರೈತರು ಬೆಳೆದಿರುವ ಬೆಳೆಗಳಿಗೆ ಕವಡೆ ಕಾಸಿನ ಕಿಮ್ಮತ್ತು ಸಹ ಸಿಗುವುದಿಲ್ಲ’ ಎಂದರು.

ಪ್ರತಿಭಟನೆಯಲ್ಲಿ ರಾಜ್ಯ ಸಂಘಟನಾ ಕಾರ್ಯದರ್ಶಿ ಡಾ.ಸತೀಶ್ ಕುಮಾರ್, ಮುಖಂಡರಾದ ಉಷಾ ಮೋಹನ್, ಅಶೋಕ್ ಮೃತ್ಯುಂಜಯ, ಶಶಿಧರ ಆರಾಧ್ಯ, ಡಾ.ದಿನೇಶ್, ಪುಟ್ಟಣ್ಣ ಗೌಡ, ಪುಷ್ಪ ಕೇಶವ್ ಭಾಗವಹಿಸಿದ್ದರು.

ಖಾಸಗಿ ಫೈನಾನ್ಸ್ ₹2.60 ಕೋಟಿ ವಂಚನೆ

ಕೊಳ್ಳೇಗಾಲ (ಚಾಮರಾಜನಗರ ಜಿಲ್ಲೆ): ಅಧಿಕ ಬಡ್ಡಿ ಕೊಡುವುದಾಗಿ ನಂಬಿಸಿ ಸಾರ್ವಜನಿಕರಿಂದ ಹಣ ಪಡೆದು ₹2.60 ಕೋಟಿ ವಂಚಿಸಿದ ಆರೋಪದ ಮೇರೆಗೆ ತಮಿಳುನಾಡಿನ ಡಿ.ಆರ್.ಕಾರ್ತಿ ಚಿಟ್ ಇಂಡಿಯಾ ಪ್ರೈವೆಟ್ ಲಿಮಿಟೆಡ್‌ನ ಸ್ಥಳೀಯ ಶಾಖೆಯ ನಾಲ್ವರು ಸಿಬ್ಬಂದಿ ವಿರುದ್ಧ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೊಯಮತ್ತೂರು ಜಿಲ್ಲೆಯ ಸತ್ಯಮಂಗಲ ನಿವಾಸಿ ಹಾಗೂ ಶಾಖೆಯ ಮುಖ್ಯಸ್ಥ ಕಾರ್ತಿಕೇಯನ್, ವ್ಯವಸ್ಥಾಪಕ, ಸತ್ತೇಗಾಲ ಗ್ರಾಮದ ಪರಮೇಶ್ವರ್, ನಗರದ ನಿವಾಸಿಗಳಾದ ಸಹಾಯಕ ವ್ಯವಸ್ಥಾಪಕ ದಿಲೀಪ್ ಹಾಗೂ ಸಿಬ್ಬಂದಿ ಚಂದ್ರು ಆರೋಪಿಗಳು.

ಕಿ.ರಂ.ನಾಗರಾಜ್ ನೆನಪಿನ ಕಾವ್ಯ ಶಿವರಾತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿ.ರಂ.ನಾಗರಾಜ್ ನೆನಪಿನ ‘ಕಾವ್ಯ ಶಿವರಾತ್ರಿ ಅಹೋರಾತ್ರಿ ಕಾವ್ಯಗಾಯನ’ ಕಾರ್ಯಕ್ರಮವು ಬೆಂಗಳೂರು ವಿಶ್ವವಿದ್ಯಾಲಯದ ವೆಂಕಟಗಿರಿಗೌಡ ಸ್ಮಾರಕ ಸಭಾಂಗಣದಲ್ಲಿ ಭಾನುವಾರ ನಡೆಯಿತು.

ಜನಸಂಸ್ಕೃತಿ ಪ್ರತಿಷ್ಠಾನ, ಕಾವ್ಯಮಂಡಲ, ಬೆಂಗಳೂರು ವಿಶ್ವವಿದ್ಯಾಲಯದ ರಾಮನಗರ ಸ್ನಾತಕೋತ್ತರ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕವಿಗೋಷ್ಠಿಯೂ ನಡೆಯಿತು.

ವಿಶ್ರಾಂತ ಪ್ರಾಧ್ಯಾಪಕ ಟಿ.ವೆಂಕಟೇಶ ಮೂರ್ತಿ ಉದ್ಘಾಟಿಸಿದರು. ಶ್ರುತಿ ಶಿಲ್ಪಿ ಏಕತಾರಿ ರಾಮಯ್ಯ (ಕೆಂಚನಪಾಳ್ಯ) ಅವರಿಗೆ ಕಿ.ರಂ. ಪುರಸ್ಕಾರ ಪ್ರದಾನ ಮಾಡಲಾಯಿತು. ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ಕರ್ನಾಟಕ ಲಲಿತ ಕಲಾ ಅಕಾಡೆಮಿ ಅಧ್ಯಕ್ಷ ಪ.ಸ. ಕುಮಾರ್, ಕಿ.ರಂ. ಪುತ್ರಿ ಕೆ.ಎನ್. ಕವನ, ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಬಿ. ಗಂಗಾಧರ್, ಜನಸಂಸ್ಕೃತಿ ಅಧ್ಯಕ್ಷ ಪ್ರದೀಪ್ ಮಾಲ್ಗುಡಿ, ಸಂಸ ಸುರೇಶ್ ಉಪಸ್ಥಿತರಿದ್ದರು.

ಮಂಟೇಸ್ವಾಮಿ ಮತ್ತು ಮಲೆ ಮಹಾದೇಶ್ವರ ಮಹಾಕಾವ್ಯ ಗಾಯನವನ್ನು ಅಲ್ಕೆರೆ ಶಿವಕುಮಾರ್ ಮತ್ತು ಸಂಗಡಿಗರು ಅಹೋರಾತ್ರಿ ಪ್ರಸ್ತುತ ಪಡಿಸಿದರು.

ಏಕತಾರಿ ರಾಮಯ್ಯ ಕೆಂಚನಪಾಳ್ಯ ಅವರಿಗೆ ಕಿ.ರಂ. ಪುರಸ್ಕಾರ ಪ್ರದಾನ ಮಾಡಲಾಯಿತು

‘ಕಾಮಗಾರಿ ವಿಳಂಬವಾದರೆ ಕಠಿಣ ಕ್ರಮ’

ಬೆಂಗಳೂರು: ‘ಕಾಮಗಾರಿಗಳ ಅನುಷ್ಠಾನದಲ್ಲಿ ಲೋಪ ಅಥವಾ ವಿಳಂಬವಾದರೆ ಕಠಿಣ ಕ್ರಮಗಳನ್ನು ಎದುರಿಸಬೇಕಾದೀತು’ ಎಂದು ಕರ್ನಾಟಕ ಗ್ರಾಮೀಣ ಮೂಲಸೌಲಭ್ಯ ಅಭಿವೃದ್ಧಿ ನಿಗಮದ (ಕೆಆರ್‌ಐಡಿಎಲ್) ಎಂಜಿನಿಯರ್‌ಗಳಿಗೆ ಸಚಿವ ಪ್ರಿಯಾಂಕ್ ಖರ್ಗೆ ಎಚ್ಚರಿಕೆ ನೀಡಿದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಕೆಆರ್‌ಐಡಿಎಲ್ ಅನುಷ್ಠಾನಗೊಳಿಸುತ್ತಿರುವ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸಿದ ಅವರು, ‘ಎಂಜಿನಿಯರ್‌ಗಳು ಬದ್ಧತೆಯಿಂದ ಜವಾಬ್ದಾರಿಗಳನ್ನು ನಿರ್ವಹಿಸದಿದ್ದರೆ ಕಠಿಣ ಕ್ರಮ ಖಚಿತ’ ಎಂದರು.

ಗ್ರಾಮೀಣ ನೀರು ಸರಬರಾಜು ಇಲಾಖೆಯ ಮೂಲಕ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ವ್ಯಾಪ್ತಿಯ ಜಿಲ್ಲೆಗಳಲ್ಲಿ ಸಾಮೂಹಿಕ ಶೌಚಾಲಯಗಳ ನಿರ್ಮಾಣದಲ್ಲಿ ಆಗಿರುವ ವಿಳಂಬದ ಬಗ್ಗೆ ಪ್ರಸ್ತಾಪಿಸಿದ ಸಚಿವರು, ‘ಮೇ ಮೊದಲ ವಾರದಲ್ಲಿ ಶೌಚಾಲಯಗಳನ್ನು ನಿರ್ಮಿಸಿ ಬಳಕೆಗೆ ಸಿದ್ಧಪಡಿಸದಿದ್ದರೆ ಸಂಬಂಧಿಸಿದ ಎಂಜಿನಿಯರ್‌ಗಳನ್ನು ಅಮಾನತು ಮಾಡಲಾಗುವುದು’ ಎಂದು ಎಚ್ಚರಿಕೆ ನೀಡಿದರು.

ಆರೋಗ್ಯ ಖಾತೆ ಸಮರ್ಥರಿಗೆ ನೀಡಿ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ಆಸ್ಪತ್ರೆಗಳಲ್ಲಿನ ಔಷಧಗಳ ಕೊರತೆ ಆಡಳಿತಾತ್ಮಕ ವೈಫಲ್ಯದ ಸ್ಪಷ್ಟ ಸಂಕೇತ ಎಂದು ವ್ಯಾಖ್ಯಾನ ಮಾಡಿರುವ ‘ಪ್ರಜಾವಾಣಿ’ ಸಂಪಾದಕೀಯ ರಾಜ್ಯ ಸರ್ಕಾರದ ಕಾರ್ಯವೈಖರಿಗೆ ಕನ್ನಡಿ ಹಿಡಿದಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

‘ಬಡ ರೋಗಿಗಳ ಹಿತದೃಷ್ಟಿಯಿಂದ ಈ ಕೂಡಲೇ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರ ರಾಜೀನಾಮೆ ಪಡೆದು ಯಾರಾದರೂ ಸಮರ್ಥರಿಗೆ ಆರೋಗ್ಯ ಖಾತೆಯನ್ನು ನೀಡಬೇಕು’ ಎಂದು ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.

ಬಜೆಟ್ ಪೂರ್ವ ಸಭೆ: ಪರಿಶಿಷ್ಟ ಜಾತಿ ಪ್ರತಿನಿಧಿಸುವ ಶಾಸಕರ ಮನವಿ

‘ಪರಿಶಿಷ್ಟರ ಹಣ ಅನ್ಯ ಉದ್ದೇಶಕ್ಕೆ ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಸಿಎಸ್‌ಪಿ– ಟಿಎಸ್‌ಪಿ ಹಣವನ್ನು ಬೇರೆ ಉದ್ದೇಶಗಳಿಗೆ ಬಳಸಬಾರದು ಮತ್ತು ಈ ಬಾರಿ ಪರಿಶಿಷ್ಟ ಸಮುದಾಯಕ್ಕೆ ಇನ್ನೂ ಹೆಚ್ಚಿನ ಅನುದಾನ ನಿಗದಿ ಮಾಡಬೇಕು ಎಂದು ಪರಿಶಿಷ್ಟ ಜಾತಿ ಪ್ರತಿನಿಧಿಸುವ ಶಾಸಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.

ಸೋಮವಾರ ನಡೆದ ಬಜೆಟ್ ಪೂರ್ವ ಸಭೆಯಲ್ಲಿ ಮುಖ್ಯಮಂತ್ರಿಯವರು ಪರಿಶಿಷ್ಟ ಜಾತಿಯ ಶಾಸಕರಿಂದ ಸಲಹೆಗಳನ್ನು ಪಡೆದರು.

ಆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಗೃಹ ಸಚಿವ ಜಿ.ಪರಮೇಶ್ವರ, ‘ಪರಿಶಿಷ್ಟ ಸಮುದಾಯದ ಶಾಸಕರು ಹಲವು ಸಮಸ್ಯೆಗಳ ಕುರಿತು ಚರ್ಚೆ ಮಾಡಿದ್ದಾರೆ. ಪರಿಶಿಷ್ಟರಿಗೆ ಅನುದಾನ ನಿಗದಿ ಮಾಡಬೇಕು ಎಂದು ಕಾನೂನು ತಂದವರೇ ಸಿದ್ದರಾಮಯ್ಯ. ಅದರ ಅನ್ವಯ ಕಳೆದ ವರ್ಷ ₹42 ಸಾವಿರ ಕೋಟಿ ಹಣ ಮೀಸಲಿಟ್ಟಿದ್ದರು. ಆದರೆ, ಆ ಹಣವನ್ನೆಲ್ಲಾ ವಿವಿಧ ಇಲಾಖೆಗಳಿಗೆ ನೀಡಲಾಗಿತ್ತು. ಮುಂದೆ ಏನು ಮಾಡಬೇಕು ಎಂಬ ಬಗ್ಗೆ ಶಾಸಕರು ಸಲಹೆಗಳನ್ನು ನೀಡಿದ್ದಾರೆ’ ಎಂದರು.

ಎರಡೂವರೆ ಲಕ್ಷ ಹುದ್ದೆಗಳು ಖಾಲಿ ಇದ್ದು, ಇದರಲ್ಲಿ 42 ಸಾವಿರ ಹುದ್ದೆಗಳಿಗೆ ಎಸ್‌ಸಿ–ಎಸ್‌ಟಿ ಅಭ್ಯರ್ಥಿಗಳನ್ನು ಭರ್ತಿ ಮಾಡಬೇಕಿದೆ. ಆದಷ್ಟು ಬೇಗ ಈ ಹುದ್ದೆಗಳನ್ನು ತುಂಬಬೇಕು. ವಿವಿಧ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳನ್ನೂ ಭರ್ತಿ ಮಾಡಬೇಕು ಎಂಬ ಬೇಡಿಕೆಯನ್ನು ಮುಂದಿಟ್ಟಿದ್ದಾರೆ ಎಂದು ಅವರು ಹೇಳಿದರು.

‘ಎಸ್‌ಸಿ–ಎಸ್‌ಟಿ ಶಾಸಕರು ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡುವ ಯಾವುದೇ ಬೆಳವಣಿಗೆಗಳು ನಡೆದಿಲ್ಲ. ಅದರ ಅಗತ್ಯವೂ ಇಲ್ಲ. ಯಾವುದೇ ವಿಚಾರ ಹೈಕಮಾಂಡ್‌ಗೂ ಹೋಗುವ ಮುನ್ನ ಇಲ್ಲೇ ಆ ಸಮಸ್ಯೆ ಬಗೆಹರಿಸಿಕೊಳ್ಳುತ್ತೇವೆ’ ಎಂದರು.

ಬಂಗಾರಪೇಟೆ ಶಾಸಕ ಎಸ್.ಎನ್. ನಾರಾಯಣಸ್ವಾಮಿ , ‘ಇದೇ ಮೊದಲ ಬಾರಿಗೆ ಪರಿಶಿಷ್ಟ ಸಮುದಾಯದ ಬೇಡಿಕೆಗಳ ಕುರಿತು ಬಜೆಟ್ ಸಭೆಯಲ್ಲಿ ಚರ್ಚೆ ನಡೆಸಿದ್ದೇವೆ. ಪರಿಶಿಷ್ಟ ಜಾತಿಗೆ ಮೀಸಲಾದ ಹಣವನ್ನು ಸರಿಯಾಗಿ ಬಳಸಬೇಕು. ಅನ್ಯ ಉದ್ದೇಶಗಳಿಗೆ ಬಳಸಬಾರದು. ನಿಗದಿ ಮಾಡಿದ ಅಷ್ಟೂ ಹಣವನ್ನು ಬಿಡುಗಡೆ ಮಾಡಬೇಕು ಎಂದು ಮನವಿ ಮಾಡಿದ್ದೇವೆ’ ಎಂದರು.

ಗುತ್ತಿಗೆ ನೀಡುವ ವಿಚಾರದಲ್ಲೂ ಪರಿಶಿಷ್ಟ ಸಮುದಾಯಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಕೈಗಾರಿಕಾ ಪ್ರದೇಶಗಳಲ್ಲಿ ಪರಿಶಿಷ್ಟ ಸಮುದಾಯದ ಉದ್ಯಮಿಗಳಿಗೆ ಆದ್ಯತೆ ಮೇರೆಗೆ ಭೂಮಿಯನ್ನು ನೀಡಬೇಕು ಎಂದು ಕೋರಿದ್ದಾಗಿ ಅವರು ಹೇಳಿದರು.

ಚಿಟಿಕೆ ಸುದ್ದಿ

ಬೆಂಗಳೂರಿನಲ್ಲಿ ಆಂಥ್ರೊಪಿಕ್ ಕಚೇರಿ ಆರಂಭ

ಬೆಂಗಳೂರು: ಜಾಗತಿಕ ಮಟ್ಟದ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಕಂಪನಿ ಆಂಥ್ರೊಪಿಕ್, ಬೆಂಗಳೂರಿನ ಎಂಬಸಿ ಗಾಲ್ಫ್ ಲಿಂಕ್ಸ್ ಟೆಕ್ ಪಾರ್ಕ್‌ನಲ್ಲಿ ತನ್ನ ಕಚೇರಿಯನ್ನು ತೆರೆದಿದೆ. ಇದು ಏಷ್ಯಾ–ಪೆಸಿಫಿಕ್ ಪ್ರದೇಶದಲ್ಲಿ ಆಂಥ್ರೊಪಿಕ್‌ನ ಎರಡನೇ ಕಚೇರಿ ಆಗಿದೆ.

ಭಾರತವು ಕ್ಲೌಡ್ ಎ.ಐಗೆ ಎರಡನೇ ಅತಿದೊಡ್ಡ ಮಾರುಕಟ್ಟೆಯಾಗಿದೆ. ದೀರ್ಘಾವಧಿಯ ವ್ಯವಹಾರಕ್ಕಾಗಿ ಹೊಸ ಪಾಲುದಾರಿಕೆ ಪ್ರಾರಂಭಿಸುತ್ತಿದ್ದೇವೆ ಎಂದು ಕಂಪನಿ 'ಎಕ್ಸ್'ನಲ್ಲಿ ತಿಳಿಸಿದೆ.

ಶಾಲಾ ಕಟ್ಟಡದಿಂದ ಜಿಗಿದು 10ನೇ ತರಗತಿ ವಿದ್ಯಾರ್ಥಿ ಆತ್ಮಹತ್ಯೆ

ಚಿತ್ರದುರ್ಗ: ತಾಲ್ಲೂಕಿನ ಭರಮಸಾಗರದ ಖಾಸಗಿ ವಸತಿ ಶಾಲೆಯ ವಿದ್ಯಾರ್ಥಿಯೊಬ್ಬ ಕಟ್ಟಡದ 3ನೇ ಮಹಡಿಯಿಂದ ಜಿಗಿದು ಸೋಮವಾರ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. 10ನೇ ತರಗತಿಯಲ್ಲಿ ಓದುತ್ತಿದ್ದ ತಾಲ್ಲೂಕಿನ ಕರಿಯಣ್ಣನಹಳ್ಳಿ ಗ್ರಾಮದ ಜಿ. ಕೊಟ್ರೇಶ್ (16) ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿ.

ಜಿ.ಕೊಟ್ರೇಶ್

ಹಣ್ಣು ಹಂಚಿಕೊಳ್ಳುವ ಬಗ್ಗೆ ನಡೆದ ಜಗಳದಲ್ಲಿ ಗೆಳೆಯನೊಬ್ಬ ಚಪ್ಪಲಿಯಿಂದ ಹೊಡೆದ ಎಂದು ಅವಮಾನಿತನಾಗಿ ಈ ರೀತಿ ಮಾಡಿಕೊಂಡಿದ್ದಾನೆ ಎಂದು ಪೋಷಕರು ದೂರಿದ್ದಾರೆ.

ಭಾನುವಾರ ಶಾಲೆಗೆ ಬಂದಿದ್ದ ಕೊಟ್ರೇಶ್ ತಂದೆ ಗುರುಲಿಂಗಯ್ಯ ಶಿವರಾತ್ರಿ ಅಂಗವಾಗಿ ಮಗನಿಗೆ ಹೊಸ ಬಟ್ಟೆ, ಹಣ್ಣು ಕೊಡಿಸಿ ತೆರಳಿದ್ದರು. 'ಕೊಟ್ರೇಶ್ ಸಹಪಾಠಿಗಳಿಗೆ ಹಣ್ಣು ಹಂಚಿದ್ದರು. ಈ ವಿಚಾರದಲ್ಲಿ ಮತ್ತೊಬ್ಬ ಸಹಪಾಠಿಯೊಂದಿಗೆ ಜಗಳವಾಗಿತ್ತು. ಈ ವೇಳೆ ಸಹಪಾಠಿ ಕೊಟ್ರೇಶ್‌ಗೆ ಚಪ್ಪಲಿಯಿಂದ ಹೊಡೆದಿದ್ದ. ಇದರಿಂದ ಅವಮಾನಿತನಾದ ಕೊಟ್ರೇಶ್ ಆತ್ಮಹತ್ಯೆ ಮಾಡಿಕೊಂಡಿದ್ದಾನೆ' ಎಂದು ಗುರುಲಿಂಗಯ್ಯ ದೂರು ನೀಡಿದ್ದಾರೆ.

ಸೋಮವಾರ ಬೆಳಿಗ್ಗೆ ಶಾಲೆಗೆ ಬಂದಿದ್ದ ಕೊಟ್ರೇಶ್ 3ನೇ ಮಹಡಿಯಿಂದ ಜಿಗಿದಿದ್ದಾನೆ. ಕಟ್ಟಡದಿಂದ ಕೆಳಗೆ ಬೀಳುವ ದೃಶ್ಯಗಳು ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿವೆ. ಶಾಲಾ ಕೊಠಡಿಯ ಕಾರಿಡಾರ್‌ನಲ್ಲಿ ನಾಲ್ಕೈದು ಬಾರಿ ಓಡಾಡಿ ನಂತರ ಕೆಳಗೆ ಬೀಳುವ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಅಪಘಾತ: 2 ವರ್ಷದ ಮಗು ಸಾವು

ಹಳೇಹಳ್ಳಿ: ರಸ್ತೆ ದುರಸ್ತಿಗೆ ಆಗ್ರಹಿಸಿ ಸ್ಥಳೀಯರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಶಿವರಾತ್ರಿ ಹಬ್ಬದ ಅಂಗವಾಗಿ ದೇವಸ್ಥಾನಕ್ಕೆ ತೆರಳಿ ವಾಪಸ್ ಬರುವಾಗ ಹಿಂದಿನಿಂದ ಬಂದ ಕಾರೊಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಎರಡು ವರ್ಷದ ಮಗು ಮೃತಪಟ್ಟಿರುವ ಘಟನೆ ಕೆ.ಆರ್.ಪುರ ಸಂಚಾರ ಠಾಣೆ ವ್ಯಾಪ್ತಿಯ ಕಿತ್ತಗನೂರಿನ ಹಳೇಹಳ್ಳಿಯಲ್ಲಿ ನಡೆದಿದೆ.

ತ್ರಿಶೂಲ್

ತ್ರಿಶೂಲ್ ಮೃತ ಮಗು.

ಸಂಬಂಧಿಕರೊಂದಿಗೆ ಮಾರಗೊಂಡನಹಳ್ಳಿಯ ಶಿವನ ದೇವಸ್ಥಾನಕ್ಕೆ ಹೋಗಿ ದೇವರ ದರ್ಶನ ಪಡೆದು ದ್ವಿಚಕ್ರ ವಾಹನದಲ್ಲಿ ವಾಪಸ್ ಬರುವಾಗ ಈ ದುರ್ಘಟನೆ ಸಂಭವಿಸಿದೆ.

ಹಿಂದಿನಿಂದ ಬಂದ ಇನೋವಾ ಕಾರು ಡಿಕ್ಕಿ ಹೊಡೆದ ರಭಸಕ್ಕೆ ದ್ವಿಚಕ್ರ ವಾಹನ ಕೆಳಗಡೆ ಬಿದ್ದಿದೆ. ಈ ವೇಳೆ ರಸ್ತೆ ಮೇಲೆ ಮಗು ಬಿದ್ದಿತ್ತು. ಆಗ ಕಾರಿನ ಚಕ್ರಗಳು ಮಗುವಿನ ಮೇಲೆ ಹರಿದಿವೆ.

ಚಿಕ್ಕಬಳ್ಳಾಪುರದ ಹರೀಶ್ ಹಾಗೂ ಅನು ದಂಪತಿ ಪುತ್ರ ತ್ರಿಶೂಲ್. ದಂಪತಿ ಮಹಾರಾಷ್ಟ್ರದ ಉಜ್ಜೈನಿಗೆ ಪ್ರವಾಸಕ್ಕೆ ತೆರಳುವ ನಿಮಿತ್ತ ಮಗುವನ್ನು ಸಂಬಂಧಿಕರ ಮನೆಯಲ್ಲಿ ಬಿಟ್ಟು ತೆರಳಿದ್ದರು.

ಟ್ರ್ಯಾಕ್ಟರ್ ಡಿಕ್ಕಿ ಶಿಕ್ಷಕಿ ಸಾವು

ಆನೇಕಲ್: ಪಟ್ಟಣದ ಜಿಗಣಿ ರಸ್ತೆಯಲ್ಲಿ ಸೋಮವಾರ ಟ್ರ್ಯಾಕ್ಟರ್ ಡಿಕ್ಕಿ ಹೊಡೆದು ದ್ವಿಚಕ್ರ ವಾಹನದಲ್ಲಿ ಶಾಲೆಗೆ ಹೊರಟಿದ್ದ ಶಿಕ್ಷಕಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಯೋಗೇಶ್ವರಿ

ತಾಲ್ಲೂಕಿನ ಲಕ್ಷ್ಮೀಪುರದ ಸರ್ಕಾರಿ ಶಾಲೆಯ ಶಿಕ್ಷಕಿ ಯೋಗೇಶ್ವರಿ (46) ಮೃತ ದುರ್ದೈವಿ.

ಬೆಳಿಗ್ಗೆ ದ್ವಿಚಕ್ರ ವಾಹನದಲ್ಲಿ ಶಾಲೆಗೆ ಹೊರಟಿದ್ದ ಯೋಗೇಶ್ವರಿ ಅವರಿಗೆ ಜಿಗಣಿ ರಸ್ತೆಯಲ್ಲಿ ಹಿಂಬದಿಯಿಂದ ಬಂದ ಟ್ರ್ಯಾಕ್ಟರ್ ಡಿಕ್ಕಿ ಹೊಡೆದಿದೆ. ಡಿಕ್ಕಿ ರಭಸಕ್ಕೆ ಸ್ಥಳದಲ್ಲೇ ಮೃತಪಟ್ಟರು.

ಆನೇಕಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಟ್ರ್ಯಾಕ್ಟರ್ ಚಾಲಕನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಅಪಘಾತದ ಭೀಕರ ದೃಶ್ಯಗಳು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ.

ಕಿತ್ತಗನೂರಿನ ಹಳೇಹಳ್ಳಿಯಲ್ಲಿ ರಸ್ತೆ ಸರಿಪಡಿಸಲು ಆಗ್ರಹಿಸಿ ಸ್ಥಳೀಯರ ಪ್ರತಿಭಟನೆ

ಟಿಪ್ಪರ್ ಹರಿದು ಮಹಿಳೆ ಸಾವು

ಬೆಂಗಳೂರು: ಆಡುಗೋಡಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ತಾಯಿ ಮೃತಪಟ್ಟಿದ್ದು, ಅವರ ಮಗನಿಗೆ ಸಣ್ಣ ಗಾಯವಾಗಿದೆ.

ದ್ವಿಚಕ್ರ ವಾಹನಕ್ಕೆ ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ಅಮಲಾ (49) ಅವರು ರಸ್ತೆ ಮೇಲೆ ಬಿದ್ದರು. ಅವರ ಮೇಲೆ ಟಿಪ್ಪರ್ ಹರಿದ ಕಾರಣ ಎರಡೂ ಕಾಲುಗಳು ಜಖಂಗೊಂಡಿದ್ದವು. ಗಾಯಾಳುವನ್ನು ತಕ್ಷಣ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆಗೆ ಸ್ಪಂದಿಸಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ಸಂಬಂಧ ಟಿಪ್ಪರ್ ಚಾಲಕನ ವಿರುದ್ಧ ಆಡುಗೋಡಿ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

'ರಸ್ತೆ ಗುಂಡಿಗಳಿಂದಲೇ ಅಪಘಾತ ಸಂಭವಿಸಿದೆ' ಎಂದು ಸ್ಥಳೀಯರು ಆರೋಪಿಸಿದರೆ, 'ಚಾಲಕನ ನಿರ್ಲಕ್ಷ್ಯದಿಂದ ಅಪಘಾತ ಆಗಿದೆ' ಎಂದು ಪೊಲೀಸರು ಹೇಳಿದ್ದಾರೆ.

'ಚರ್ಚ್‌ಗೆ ಹೋಗಿ ದ್ವಿಚಕ್ರ ವಾಹನದಲ್ಲಿ ಅಮಲಾ ಅವರು ಮಗನ ಜೊತೆ ಹಿಂತಿರುಗುವ ವೇಳೆ ಆಡುಗೋಡಿಯ ಬಾಷ್ ಕಂಪನಿ ಮುಂದೆ ಅಪಘಾತ ಸಂಭವಿಸಿದೆ. ಎದುರಿಗೆ ಆಟೊ ಬಂದ ಕಾರಣ ಅಮಲಾ ಬ್ರೇಕ್ ಹಾಕಿದ್ದಾರೆ. ಆಗ ಹಿಂಬದಿಯಿಂದ ಬರುತ್ತಿದ್ದ ಟಿಪ್ಪರ್, ದ್ವಿಚಕ್ರ ವಾಹನದ ಮೇಲೆ ಹರಿದಿದೆ. ಅಪಘಾತದಲ್ಲಿ ಅವರ ಮಗನಿಗೆ ಸಣ್ಣ ಗಾಯಗಳಾಗಿವೆ. ಘಟನೆ ಬಳಿಕ ಟಿಪ್ಪರ್ ಚಾಲಕ ಪರಾರಿಯಾಗಿದ್ದಾನೆ' ಎಂದು ಮೃತ ಅಮಲಾ ಅವರ ಸಹೋದರ ತಿಳಿಸಿದ್ದಾರೆ.

ಕೆ.ಆರ್.ಪುರ ಸಂಚಾರ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಅಪಘಾತ ಸಂಭವಿಸಲು ರಸ್ತೆ ದುಃಸ್ಥಿತಿಯೇ ಕಾರಣ ಎಂದು ಸ್ಥಳೀಯ ನಿವಾಸಿಗಳು ಹಳೇಹಳ್ಳಿಯಲ್ಲಿ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಿದರು. ಕಿತ್ತಗನೂರು ಪಂಚಾಯಿತಿ ಕಾರ್ಯದರ್ಶಿ ಸ್ಥಳಕ್ಕೆ ಬಂದು ಶೀಘ್ರದಲ್ಲೇ ರಸ್ತೆ ದುರಸ್ತಿ ಮಾಡುವುದಾಗಿ ಭರವಸೆ ನೀಡಿದ ಮೇಲೆ ಪ್ರತಿಭಟನೆ ಕೈಬಿಡಲಾಯಿತು.

ಸುದ್ದಿ 2 ನಿಮಿಷ

'ಹೊಸೂರು ವಿಮಾನ ನಿಲ್ದಾಣ ವಾಯುಪ್ರದೇಶ ಮರುಪರಿಶೀಲಿಸಿ'

ಚೆನ್ನೈ: ಹೊಸೂರಿನಲ್ಲಿ ನಿರ್ಮಿಸಲು ಉದ್ದೇಶಿಸಿರುವ ವಿಮಾನ ನಿಲ್ದಾಣ ಸಂಬಂಧ ವಾಯುಪ್ರದೇಶವನ್ನು ಒದಗಿಸುವ ಕುರಿತು ಮರು ಪರಿಶೀಲಿಸುವಂತೆ ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲು ತಮಿಳುನಾಡು ಸರ್ಕಾರ ನಿರ್ಧರಿಸಿದೆ.

ತಮಿಳುನಾಡು ಕೈಗಾರಿಕಾ ಅಭಿವೃದ್ಧಿ ಪ್ರಾಧಿಕಾರ (ಟಿಡ್ಕೊ) ಯೋಜನೆಗೆ ಸ್ಥಳ ಅನುಮತಿ ಕೋರಿ ನಾಗರಿಕ ವಿಮಾನಯಾನ ಸಚಿವಾಲಯಕ್ಕೆ ಪ್ರಸ್ತಾವ ಸಲ್ಲಿಸಿತ್ತು. ಇದಕ್ಕೆ ಕಳೆದ ವಾರ ರಾಜ್ಯಸಭೆಯಲ್ಲಿ ಉತ್ತರಿಸಿದ್ದ ಸಚಿವರು, ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್ಎಎಲ್) ಕೈಗೆತ್ತಿಕೊಳ್ಳುತ್ತಿರುವ ಪ್ರಮುಖ ರಕ್ಷಣಾ ಯೋಜನೆಗಳ ವಾಯುಪ್ರದೇಶದ ಅಗತ್ಯತೆ ಗಮನದಲ್ಲಿರಿಸಿಕೊಂಡು, ಹೊಸೂರಿನಲ್ಲಿ ವಾಯುಪ್ರದೇಶ ನೀಡಲು ಸಾಧ್ಯವಿಲ್ಲ' ಎಂದು ತಿಳಿಸಿದ್ದರು.

ಇದರ ಬೆನ್ನಲ್ಲೇ, ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲು ತಮಿಳುನಾಡು ಸರ್ಕಾರ ನಿರ್ಧರಿಸಿದೆ.

'ಹೊಸೂರಿನಲ್ಲಿ ವಿಮಾನ ನಿಲ್ದಾಣ ಅಗತ್ಯತೆ ಕುರಿತು ಕೇಂದ್ರ ಸರ್ಕಾರಕ್ಕೆ ವಿವರಣೆ ನೀಡಲಿದ್ದೇವೆ. ನಿಲ್ದಾಣ ನಿರ್ಮಾಣದಿಂದ ಹೊಸೂರು ಮಾತ್ರವಲ್ಲದೇ, ದಕ್ಷಿಣ ಬೆಂಗಳೂರಿಗೂ ನೆರವಾಗಲಿದೆ. ಈಗಿರುವ ವಾಯುಪ್ರದೇಶವನ್ನು ಎಚ್ಎಎಲ್ ಜೊತೆಗೂ ಹಂಚಿಕೊಳ್ಳುವ ಕುರಿತು ವಿವರವಾದ ಮಾಹಿತಿ ನೀಡಲಿದ್ದೇವೆ' ಎಂದು ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ನೂತನ ವಿಮಾನ ನಿಲ್ದಾಣ ನಿರ್ಮಾಣ ಸಂಬಂಧ ಹೊಸೂರು ತಾಲ್ಲೂಕಿನ 12 ಕಂದಾಯ ಗ್ರಾಮ, ಕೃಷ್ಣಗಿರಿ ಜಿಲ್ಲೆಯ ಶೂಲಗಿರಿ ಗ್ರಾಮದ 3 ಸಾವಿರ ಎಕರೆ ಭೂಮಿಯನ್ನು ಈಗಾಗಲೇ ಗುರುತಿಸಿದೆ.

ತ್ರೈಮಾಸಿಕ ಪ್ರಗತಿ ವರದಿ ಬಿಲ್ಡರ್‌ಗಳಿಗೆ ಗಡುವು

ಬೆಂಗಳೂರು: ವಸತಿ ಯೋಜನೆಗಳ ತ್ರೈಮಾಸಿಕ ಪ್ರಗತಿ ವರದಿಯನ್ನು ಮಾರ್ಚ್ 31ರೊಳಗೆ ಸಲ್ಲಿಸುವಂತೆ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ಕೆ–ರೇರಾ) ಬಿಲ್ಡರ್‌ಗಳಿಗೆ ಗಡುವು ನೀಡಿದೆ.

'ಮಾರ್ಚ್ 31ರ ಒಳಗೆ ವರದಿ ಸಲ್ಲಿಸದಿದ್ದರೆ, ಏಪ್ರಿಲ್ 1 ರಿಂದಲೇ ದಂಡದ ಮೊತ್ತವನ್ನು ವಸೂಲಿ ಮಾಡಲು ಕ್ರಮ ಜರುಗಿಸಲಾಗುವುದು' ಎಂದು ನೋಟಿಸ್‌ನಲ್ಲಿ ಎಚ್ಚರಿಕೆ ನೀಡಿದೆ.

2025–26ನೇ ಸಾಲಿನ ಮೊದಲ ಮೂರು ತ್ರೈಮಾಸಿಕ ವರದಿಗಳನ್ನು ಸಲ್ಲಿಸದ ಬಿಲ್ಡರ್‌ಗಳಿಗೆ ಪ್ರತಿ ತ್ರೈಮಾಸಿಕ ವರದಿಗೆ ತಲಾ ₹25 ಸಾವಿರದಂತೆ ದಂಡ ವಿಧಿಸಲು ಪ್ರಾಧಿಕಾರ ತೀರ್ಮಾನಿಸಿದೆ. ಈ ಆದೇಶ ಫೆಬ್ರುವರಿ 7 ರಿಂದ ಜಾರಿಗೆ ಬಂದಿದೆ ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

ರಿಯಲ್ ಎಸ್ಟೇಟ್ ಅಭಿವೃದ್ಧಿ ಮತ್ತು ನಿಯಂತ್ರಣ ಕಾಯ್ದೆ ಅನ್ವಯ ವಸತಿ ಯೋಜನೆಯನ್ನು ನೋಂದಾಯಿಸುವ ಪ್ರತಿಯೊಬ್ಬ ಬಿಲ್ಡರ್ ಅಥವಾ ಪ್ರಮೋಟರ್ ಪ್ರಾಧಿಕಾರದ ವೆಬ್ ಪೋರ್ಟಲ್‌ಗಳಲ್ಲಿ ತ್ರೈಮಾಸಿಕ ವರದಿಗಳನ್ನು ಸಲ್ಲಿಸುವುದು ಕಡ್ಡಾಯವಾಗಿದೆ. ಈ ವರದಿಗಳಿಂದ ಗೃಹ ಖರೀದಿದಾರರು ತಮ್ಮ ಯೋಜನೆಗಳ ಕಾಮಗಾರಿ ಎಷ್ಟು ಪೂರ್ಣಗೊಂಡಿದೆ ಎಂಬ ಮಾಹಿತಿ ಪಡೆಯಲು ಸಾಧ್ಯವಾಗಲಿದೆ.

ಪ್ರತಿ ತ್ರೈಮಾಸಿಕ ಅಂದರೆ ಜೂನ್ 30ಕ್ಕೆ ಕೊನೆಗೊಂಡ ತ್ರೈಮಾಸಿಕ ವರದಿಯನ್ನು ಜುಲೈ ಮೊದಲ ವಾರದಲ್ಲಿ, 2ನೇ ತ್ರೈಮಾಸಿಕ ವರದಿಯನ್ನು ಅ.15ರೊಳಗೆ ಮತ್ತು ಮೂರನೇ ಹಾಗೂ ನಾಲ್ಕನೇ ವರದಿಗಳನ್ನು ಕ್ರಮವಾಗಿ ಜನವರಿ 15 ಮತ್ತು ಏಪ್ರಿಲ್ 15ರೊಳಗೆ ಸಲ್ಲಿಸಬೇಕು. ಪ್ರಾಧಿಕಾರದ ಆದೇಶವಿದ್ದರೂ ಬಿಲ್ಡರ್‌ಗಳು ವರದಿ ಸಲ್ಲಿಸದ ಕಾರಣ ದಂಡ ವಿಧಿಸಲು ನಿರ್ಧರಿಸಿದೆ.

ನಿವೃತ್ತ ನ್ಯಾಯಮೂರ್ತಿಗೆ ಬೆದರಿಕೆ: ಎಫ್‌ಐಆರ್

ಅಪರಾಧ ಸುದ್ದಿ

ಬೆಂಗಳೂರು: ನಗರ ಸೈಬರ್ ಅಪರಾಧ ವಿಭಾಗದ ಪೊಲೀಸ್ ಅಧಿಕಾರಿಗಳ ಸೋಗಿನಲ್ಲಿ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯೊಬ್ಬರಿಗೆ ದುಷ್ಕರ್ಮಿಗಳು ಕರೆ ಮಾಡಿ ಬೆದರಿಸಿದ್ದು, ಈ ಸಂಬಂಧ ಸೈಬರ್ ಅಪರಾಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿವೃತ್ತ ನ್ಯಾಯಮೂರ್ತಿ ಜೆ.ಚೆಲಮೇಶ್ವರ್ ಅವರಿಗೆ ಕರೆ ಮಾಡಿ ಬೆದರಿಸಿರುವ ಆರೋಪಿಗಳನ್ನು ಪತ್ತೆಹಚ್ಚಿ ಕ್ರಮ ಕೈಗೊಳ್ಳಬೇಕು ಎಂದು ಕೋರಿ ಸುಪ್ರೀಂ ಕೋರ್ಟ್ ಮಹಾ ಪ್ರಧಾನ ಕಾರ್ಯದರ್ಶಿ ಭರತ್ ಪರಾಶರ್ ಅವರು ದೂರು ನೀಡಿದ್ದಾರೆ.

ಜ.9ರಂದು ನಿವೃತ್ತ ನ್ಯಾಯಮೂರ್ತಿ ಅವರಿಗೆ ಕರೆ ಮಾಡಿದ್ದ ಅಪರಿಚಿತ ವ್ಯಕ್ತಿಗಳು, 'ತಾವು ಬೆಂಗಳೂರಿನ ಸೈಬರ್ ಕ್ರೈಂ ಅಧಿಕಾರಿಗಳು ಎಂದು ಪರಿಚಯಿಸಿಕೊಂಡಿದ್ದರು. ನಂತರ, ಸರ್ಕಾರದ ಹೆಸರನ್ನು ನೀವು ದುರುಪಯೋಗ ಪಡಿಸಿಕೊಳ್ಳುತ್ತಿದ್ದೀರಿ ಎಂಬುದಾಗಿ ಬೆದರಿಕೆ ಹಾಕಿದ್ದರು' ಎಂದು ಭರತ್ ಪರಾಶರ್ ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಹೇಳಿಕೆ ದಾಖಲು ಮಾಡಿಕೊಳ್ಳುತ್ತಿರುವ ಅಧಿಕಾರಿಗಳು

ಬೈರತಿ ಮೊಬೈಲ್‌ಗೆ ಸಿಐಡಿ ಶೋಧ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ರೌಡಿ ಶೀಟರ್ ಬಿಕ್ಲು ಶಿವು ಕೊಲೆ ಪ್ರಕರಣ
- ಕೊಲೆ ಸಂದರ್ಭದಲ್ಲಿ ಆರೋಪಿ ಬಳಸಿದ್ದ ಮೊಬೈಲ್
- ಸಾಕ್ಷ್ಯಾಧಾರಗಳನ್ನು ಮುಂದಿಟ್ಟು ಬೈರತಿಗೆ ಪ್ರಶ್ನೆ

ಬೆಂಗಳೂರು: ರೌಡಿ ಶೀಟರ್ ಬಿಕ್ಲು ಶಿವು ಅಲಿಯಾಸ್ ಶಿವಕುಮಾರ ಅವರ ಕೊಲೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಬಿಜೆಪಿ ಶಾಸಕ ಬೈರತಿ ಬಸವರಾಜ ಅವರ ಮೊಬೈಲ್‌ಗಾಗಿ ಸಿಐಡಿ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ಬೈರತಿ ಅವರನ್ನು ಬಂಧಿಸಿದ್ದರೂ ಅವರ ಮೊಬೈಲ್ ಜಪ್ತಿ ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಬಿಕ್ಲು ಶಿವು ಅವರ ಕೊಲೆ ನಡೆದಿದ್ದ ಸಂದರ್ಭದಲ್ಲಿ ಆರೋಪಿ ಬಳಸಿದ್ದ ಮೊಬೈಲ್‌ಗಾಗಿ ಶೋಧ ನಡೆಸಲಾಗುತ್ತಿದೆ ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಹೆಚ್ಚಿನ ವಿಚಾರಣೆಗಾಗಿ ಬೈರತಿ ಅವರನ್ನು ಕಸ್ಟಡಿಗೆ ಪಡೆದುಕೊಳ್ಳಲಾಗಿದೆ. ಪ್ರಶ್ನೆ ಕೇಳಿ ಹೇಳಿಕೆ ದಾಖಲು ಮಾಡಿಕೊಳ್ಳಲಾಗುತ್ತಿದೆ. ಪ್ರಕರಣದ ಮೊದಲ ಆರೋಪಿ ಜಗ್ಗ ಅಲಿಯಾಸ್ ಜಗದೀಶ್ ಹೇಗೆ ಪರಿಚಯ? ಪ್ರಕರಣದ ಇತರೆ ಆರೋಪಿಗಳ ಜತೆಗೆ ನೀವಿರುವ ಹಲವು ಫೋಟೊಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ? ಅವರೊಂದಿಗೆ ಹೊರರಾಜ್ಯಕ್ಕೆ ಹೋಗಿದ್ದು ಸತ್ಯವೇ ಎಂಬ ಪ್ರಶ್ನೆ ಕೇಳಲಾಗಿದೆ. ಕೆಲವು ಸಾಕ್ಷ್ಯಾಧಾರಗಳನ್ನೂ ಮುಂದಿಟ್ಟು ಪ್ರಶ್ನೆ ಕೇಳಲಾಗುತ್ತಿದೆ. ಆರೋಪಿ ಬೈರತಿ ಬಸವರಾಜ ಅವರು ಸ್ಪಷ್ಟವಾದ ಉತ್ತರ ನೀಡುತ್ತಿಲ್ಲ' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಜಗ್ಗ ಹಾಗೂ ಬೈರತಿ ಬಸವರಾಜ ಅವರು ಫೋನ್ ಸಂಭಾಷಣೆ ನಡೆಸಿರುವುದಕ್ಕೆ ಸಾಕ್ಷ್ಯಗಳು ಸಿಕ್ಕಿವೆ. ಭಾರತೀನಗರ ಪೊಲೀಸ್ ಠಾಣೆಯಲ್ಲಿ ಈ ಹಿಂದೆ ವಿಚಾರಣೆ ನಡೆಸಿದಾಗ ಆರೋಪಿ ಕೆಲವು ಸಂಗತಿಗಳನ್ನು ಮರೆಮಾಚಿದ್ದು ಕಂಡುಬಂದಿತ್ತು. ತನಿಖೆ ವೇಳೆ ದೊರೆತ ಸಾಕ್ಷ್ಯಾಧಾರಗಳ ಆಧಾರದ ಮೇಲೆ ವಿಚಾರಣೆ ನಡೆಸಿ ಹೇಳಿಕೆ ದಾಖಲಿಸಿಕೊಳ್ಳಲಾಗುತ್ತಿದೆ' ಎಂದು ಸಿಐಡಿ ಪೊಲೀಸರು ಹೇಳಿದರು.

ಕರ್ನಾಟಕ ಮುಖ ಮತ್ತು ದವಡೆ ಶಸ್ತ್ರಚಿಕಿತ್ಸಕರ ಸಂಘ (ಕೆಎಓಎಂಎಸ್ಐ) ಇತ್ತೀಚೆಗೆ ಆಯೋಜಿಸಿದ್ದ ಅಂತರರಾಷ್ಟ್ರೀಯ ಓರಲ್ ಮತ್ತು ಮ್ಯಾಕ್ಸಿಲೋಫೇಶಿಯಲ್ ಸರ್ಜನ್ ದಿನಾಚರಣೆಯಲ್ಲಿ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಬಿ.ಸಿ.ಭಗವಾನ್, ಕೆಎಓಎಂಎಸ್ಐ ಅಧ್ಯಕ್ಷ ಡಾ.ವೆಂಕಟೇಶ್ ಆನೇಹೊಸೂರು, ಕಾರ್ಯದರ್ಶಿ ಡಾ.ಗಿರೀಶ್ ಗೌಡ, ಆರ್.ವಿ. ಡೆಂಟಲ್ ಕಾಲೇಜಿನ ಪ್ರಾಂಶುಪಾಲ ಡಾ.ಪ್ರಶಾಂತ್ ಸಿ.ಎಸ್., ಡಾ.ದೀಪಕ್ ಎಸ್. ಭಾಗವಹಿಸಿದ್ದರು

ಪವಿತ್ರಾ ಗೌಡ ಜಾಮೀನು ಅರ್ಜಿ ವಜಾ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧಿತರಾಗಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿ ಇರುವ ಪವಿತ್ರಾ ಗೌಡ ಅವರ ಜಾಮೀನು ಅರ್ಜಿಯನ್ನು 57ನೇ ಸಿಸಿಎಚ್ ನ್ಯಾಯಾಲಯ ಸೋಮವಾರ ವಜಾಗೊಳಿಸಿದೆ.

ಪವಿತ್ರಾ ಗೌಡ

'ಪುತ್ರಿಗೆ ಪರೀಕ್ಷೆ ಸಮೀಪಿಸಿದ್ದರಿಂದ ಮಧ್ಯಂತರ ಜಾಮೀನು ನೀಡಬೇಕು' ಎಂದು ಪವಿತ್ರಾ ಅವರು ವಕೀಲರ ಮೂಲಕ ಜಾಮೀನು ಅರ್ಜಿ ಸಲ್ಲಿಸಿದ್ದರು. ಆದರೆ, ಕೋರ್ಟ್ ಇದನ್ನು ತಿರಸ್ಕರಿಸಿದೆ.

ಪವಿತ್ರಾ ಅವರ ಜಾಮೀನು ಅರ್ಜಿಗೆ ಆಕ್ಷೇಪಿಸಿದ ಪ್ರಾಸಿಕ್ಯೂಷನ್ ಪರ ವಕೀಲರು, ಜಾಮೀನು ಮಂಜೂರು ಮಾಡಬಾರದೆಂದು ಕೋರಿದರು. ಈ ಹಿಂದೆಯೂ ಪವಿತ್ರಾ ಗೌಡ ಅವರು ಸಲ್ಲಿಸಿದ್ದ ಜಾಮೀನು ಅರ್ಜಿ ವಜಾಗೊಂಡಿತ್ತು.

ಇದೇ ಪ್ರಕರಣದ 11ನೇ ಆರೋಪಿ ನಾಗರಾಜ್ ಅವರೂ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯವು ಆದೇಶ ಕಾಯ್ದಿರಿಸಿದೆ.

'ಪತ್ನಿ ಅನಾರೋಗ್ಯದಿಂದ ಬಳಲುತ್ತಿದ್ದು, ಅವರ ಶಸ್ತ್ರಚಿಕಿತ್ಸೆಯ ಸಂದರ್ಭದಲ್ಲಿ ನಾನು ಹಾಜರಿರಬೇಕು' ಎಂಬುದಾಗಿ ನಾಗರಾಜ್ ಅರ್ಜಿಯಲ್ಲಿ ಕೋರಿದ್ದಾರೆ.

ಪೊಲೀಸ್ ಸಮವಸ್ತ್ರದಲ್ಲಿ ಮನೆಗೆ ನುಗ್ಗಿ ₹20 ಲಕ್ಷ ದರೋಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಡರಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ನಿವಾಸಿ ರಿಯಲ್ ಎಸ್ಟೇಟ್ ಏಜೆಂಟ್ ಮನೆಗೆ ದರೋಡೆಕೋರರು ಸೋಮವಾರ ಮಧ್ಯಾಹ್ನ ಪೊಲೀಸರ ಸೋಗಿನಲ್ಲಿ ನುಗ್ಗಿ ₹20 ಲಕ್ಷ ದೋಚಿ ಪರಾರಿ ಆಗಿದ್ದಾರೆ.

ಬಿಇಎಲ್ ಲೇಔಟ್ ನಿವಾಸಿ ಹೊಂಬಾಳೇಗೌಡ ಅವರ ಮನೆಯಲ್ಲಿ ಕೃತ್ಯ ಎಸಗಲಾಗಿದೆ.

ಮಧ್ಯಾಹ್ನ 3 ಗಂಟೆ ಸುಮಾರಿಗೆ ಪೊಲೀಸ್ ಸಮವಸ್ತ್ರದಲ್ಲಿ ಬಂದ ಇಬ್ಬರು ಆರೋಪಿಗಳು, ನಿವಾಸಿಗಳನ್ನು ಬೆದರಿಸಿ ₹ 20 ಲಕ್ಷ ನಗದು, 500 ಗ್ರಾಂ ಚಿನ್ನಾಭರಣ ಸುಲಿಗೆ ಮಾಡಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಆರೋಪಿಗಳಿಗಾಗಿ ಶೋಧ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ರಿಯಲ್ ಎಸ್ಟೇಟ್ ಏಜೆಂಟ್ ಜತೆಗೆ ಗುತ್ತಿಗೆದಾರರಾಗಿರುವ ಹೊಂಬಾಳೇಗೌಡ ಅವರು ಮಧ್ಯಾಹ್ನ 3 ಗಂಟೆಗೆ ಪತ್ನಿ ಮಂಗಳಮ್ಮ ಮತ್ತು ಮೊಮ್ಮಗಳ ಜತೆ ಮನೆಯಲ್ಲಿ ಇದ್ದರು. ಈ ವೇಳೆ ಪೊಲೀಸ್ ಸಮವಸ್ತ್ರದಲ್ಲಿ ಬಂದ ಇಬ್ಬರು ವ್ಯಕ್ತಿಗಳು, ಬಾಗಿಲು ತಟ್ಟಿದ್ದಾರೆ. ಹೊಂಬಳೇಗೌಡ ಬಾಗಿಲು ತೆರೆದಾಗ, ಇಬ್ಬರು ತಾವು ಯಲಹಂಕ ಠಾಣೆಯ ಪಿಎಸ್ಐ ಎಂದು ಪರಿಚಯ ಮಾಡಿಕೊಂಡಿದ್ದರು. ಬಳಿಕ ಚಾಕು ಹಿಡಿದು ಬೆದರಿಸಿ ಸುಲಿಗೆ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮನೆಯ ಎಲ್ಲಾ ಕೋಣೆಗಳನ್ನು ಹುಡುಕಾಟ ನಡೆಸಿ, ನಗದು ಹಾಗೂ ಚಿನ್ನಾಭರಣ ದೋಚಿ ಪರಾರಿ ಆಗಿದ್ದಾರೆ. ದಂಪತಿಯ ಮೊಬೈಲ್‌ಗಳು ಮತ್ತು ಸಿಸಿಟಿವಿ ಕ್ಯಾಮೆರಾದ ಡಿವಿಆರ್ ಅನ್ನು ತೆಗೆದುಕೊಂಡು ಹೋಗಿದ್ದಾರೆ. ಕೋಣೆಯಲ್ಲಿದ್ದ ಮಗುವಿಗೆ ಯಾವುದೇ ತೊಂದರೆ ಕೊಟ್ಟಿಲ್ಲ ಎಂದು ಪೊಲೀಸರು ಹೇಳಿದರು. ಈ ಸಂಬಂಧ ಬ್ಯಾಡರಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಿಜಿಗಳ ಪರಿಶೀಲನೆಗೆ ಹೈಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಮಹಾನಗರದಲ್ಲಿನ ಪೇಯಿಂಗ್ ಗೆಸ್ಟ್ ಹೌಸ್‌ಗಳು (ಪಿಜಿ) ನಿಯಮಗಳನ್ನು ಸೂಕ್ತವಾಗಿ ಪಾಲನೆ ಮಾಡುತ್ತಿವೆಯೋ ಇಲ್ಲವೋ ಎಂಬ ಬಗ್ಗೆ ಇದೇ 18ರಿಂದ ಎರಡು ವಾರಗಳಲ್ಲಿ ಪರಿಶೀಲನೆ ನಡೆಸಿ ವರದಿ ಸಲ್ಲಿಸಿ' ಎಂದು ಹೈಕೋರ್ಟ್, ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ (ಜಿಬಿಎ) ಆದೇಶಿಸಿದೆ.

'ಪೇಯಿಂಗ್ ಗೆಸ್ಟ್ ಅಕಾಮಡೇಷನ್ ವೆಲ್‌ಫೇರ್ ಅಸೋಸಿಯೇಷನ್' ಅಧ್ಯಕ್ಷ ವೈ.ಭಾಸ್ಕರ ರೆಡ್ಡಿ ಸೇರಿದಂತೆ ಒಟ್ಟು ಎಂಟು ಜನರು ಸಲ್ಲಿಸಿರುವ ರಿಟ್ ಅರ್ಜಿಯನ್ನು ಆಲಿಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ನಿರ್ದೇಶಿಸಿದೆ.

'ಪಿಜಿಗಳನ್ನು ನಡೆಸುತ್ತಿರುವ ಕಟ್ಟಡಗಳು ಅನುಮೋದಿತ ನಕ್ಷೆಗೆ ಅನುಗುಣವಾಗಿ ನಿರ್ಮಾಣಗೊಂಡಿವೆಯೇ, ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಿಕೊಂಡಿವೆಯೇ ಎಂಬುದೂ ಸೇರಿದಂತೆ ಎಲ್ಲಾ ಅಂಶಗಳನ್ನು ಜಿಬಿಎ ವೈದ್ಯಾಧಿಕಾರಿ, ನಗರ ಯೋಜನಾಧಿಕಾರಿ ಅವರನ್ನು ಒಳಗೊಂಡ ತಂಡವು ಎರಡು ವಾರಗಳಲ್ಲಿ ಪರಿಶೀಲನೆ ನಡೆಸಿ ವರದಿ ನೀಡಬೇಕು' ಎಂದು ನ್ಯಾಯಪೀಠ ಸೂಚಿಸಿದೆ.

'ಪಿಜಿಗಳನ್ನು ತಪಾಸಣೆ ಮಾಡುವ ವೇಳೆ ಅರ್ಜಿದಾರರು ಭಾಗವಹಿಸಬಹುದು. ಇಲ್ಲವೇ, ತಮ್ಮ ಪ್ರತಿನಿಧಿಗಳನ್ನು ಕಳುಹಿಸಬಹುದು. ಒಂದು ವೇಳೆ ಅವರು ಪರಿಶೀಲನೆ ವೇಳೆ ಹಾಜರಿರಲಿಲ್ಲ ಎಂದಾದರೆ ಅಥವಾ ಸಹಕಾರ ನೀಡದಿದ್ದರೆ ಅವರು ನಂತರ ಯಾವುದೇ ಆಕ್ಷೇಪವನ್ನು ಎತ್ತಲು ಅವಕಾಶವಿಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಸ್ವಚ್ಛತೆ, ಸುರಕ್ಷತೆ, ಸಿಸಿಟಿವಿ ಕ್ಯಾಮೆರಾ, ಸೌಲಭ್ಯಗಳ ಕುರಿತು ಜಿಬಿಎ ಇತ್ತೀಚೆಗೆ ನಿಯಮಗಳನ್ನು ರೂಪಿಸಿತ್ತು. ನಿಯಮ ಪಾಲನೆ ಮಾಡದ ಪಿ.ಜಿ.ಗಳಿಗೆ ನೋಟಿಸ್ ನೀಡಲಾಗಿತ್ತು. ಅರ್ಜಿದಾರರು ಈ ನೋಟಿಸ್‌ಗಳನ್ನು ಪ್ರಶ್ನಿಸಿದ್ದಾರೆ.

ಕಮಿಷನರ್ ಹೆಸರಿನಲ್ಲಿ ನಕಲಿ ಫೇಸ್‌ಬುಕ್ ಖಾತೆ

ಬೆಂಗಳೂರು: ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಹೆಸರಲ್ಲಿ ನಕಲಿ ಫೇಸ್‌ಬುಕ್ ಖಾತೆ ತೆರೆದ ಆರೋಪಕ್ಕೆ ಸಂಬಂಧಿಸಿ ಕಿಡಿಗೇಡಿಗಳ ವಿರುದ್ಧ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಸೈಬರ್ ಕ್ರೈಂ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಶ್ರೀಶೈಲ್ ಬಾಗಲೂರ ಭೀಮರಾಯ್ ನೀಡಿರುವ ದೂರಿನ ಅನ್ವಯ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಸೀಮಾಂತ್ ಕುಮಾರ್ ಸಿಂಗ್ ಅವರ ಹೆಸರಿನಲ್ಲಿ ಹಿಂದಿ ಭಾಷೆಯಲ್ಲಿ ಪ್ರೊಫೈಲ್ ಸೃಷ್ಟಿಸಿದ್ದ ವಂಚಕರು, ಗಣ್ಯರ ಜೊತೆಗಿರುವ ಫೋಟೋಗಳನ್ನು ಪೋಸ್ಟ್ ಮಾಡಿದ್ದಾರೆ. ಪೊಲೀಸ್ ಕಮಿಷನರ್ ಅವರದ್ದೇ ಅಸಲಿ ಖಾತೆಯೆಂದು ಸಾಕಷ್ಟು ಜನ ಪ್ರತಿಕ್ರಿಯಿಸುತ್ತಿದ್ದು, ವಂಚನೆ ಮೂಲಕ ಹಣ ಪಡೆದಿರುವ ಬಗ್ಗೆ ದೂರುಗಳು ಬರಲಾರಂಭಿಸಿವೆ. ಹೀಗಾಗಿ ದೂರು ನೀಡಲಾಗಿದೆ ಎಂದು ಪೊಲೀಸರು ತಿಳಿಸಿದರು.

ರ್‍ಯಾಪಿಡ್ ಚೆಸ್ ಟೂರ್ನಿ ಇದೇ 22ಕ್ಕೆ

ಬೆಂಗಳೂರು: ಚಾಂಪಿಯನ್ಸ್ ಚೆಸ್ ಅಕಾಡೆಮಿಯು ಮಕ್ಕಳಿಗಾಗಿ ಇದೇ 22ರಂದು ರ್‍ಯಾಪಿಡ್ ಚೆಸ್ ಟೂರ್ನಿಯನ್ನು ಆಯೋಜಿಸಿದೆ. 10 ಹಾಗೂ 16 ವರ್ಷದೊಳಗಿನವರ ವಿಭಾಗದಲ್ಲಿ ಸ್ಪರ್ಧೆಗಳು ನಡೆಯಲಿವೆ. ಆರ್.ವಿ.ಕಾಲೇಜು ಬಳಿಯ ಕೃಷ್ಣ ಗಾರ್ಡನ್‌ನಲ್ಲಿ ಟೂರ್ನಿ ನಡೆಯಲಿದೆ.

ಅಭ್ಯರ್ಥಿಗಳು ತಮ್ಮ ಹೆಸರು ನೋಂದಣಿಗೆ www.championschessacademy.comಗೆ ಭೇಟಿ ನೀಡಬಹುದು. ನೋಂದಣಿಗೆ ಶುಕ್ರವಾರ (ಫೆ.20) ಕೊನೆಯ ದಿನ. ಹೆಚ್ಚಿನ ಮಾಹಿತಿಗೆ ಮೊ.ಸಂ. 9845466416 ಸಂಪರ್ಕಿಸಿ.

ಭರತ್‌ಗೆ ಖೇಲ್ ಪ್ರೋತ್ಸಾಹ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೈಹಿಕ ಶಿಕ್ಷಣ ತಜ್ಞ ಮತ್ತು ಅಂತರರಾಷ್ಟ್ರೀಯ ಅಥ್ಲೀಟ್ ಭರತ್ ಆರ್.ಎ. ಅವರು ಕೇಂದ್ರ ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ ಹಾಗೂ ಭಾರತೀಯ ದೈಹಿಕ ಶಿಕ್ಷಣ ಪ್ರತಿಷ್ಠಾನವು ನೀಡುವ 'ರಾಷ್ಟ್ರೀಯ ಖೇಲ್ ಪ್ರೋತ್ಸಾಹ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ.

ದೆಹಲಿಯ ಎನ್.ಡಿ.ಎಂ.ಸಿ ಸಭಾಂಗಣದಲ್ಲಿ ಈಚೆಗೆ ನಡೆದ ಸಮಾರಂಭದಲ್ಲಿ ಕೇಂದ್ರ ಸಚಿವ ಹರ್ಷ್ ಮಲ್ಹೋತ್ರಾ ಪ್ರಶಸ್ತಿ ಪ್ರದಾನ ಮಾಡಿದರು. ಕೆ.ಆರ್.ಪುರ ಮೂಲದ ಭರತ್ ಅವರು ಎರಡು ದಶಕಗಳಿಂದ ಕ್ರೀಡಾ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ದೈಹಿಕ ಶಿಕ್ಷಣ ಶಿಕ್ಷಕರಿಗಾಗಿ ಮೀಸಲಾದ 'ಡಾ. ಜಿ.ಪಿ. ಗೌತಮ್ ಪ್ರಶಸ್ತಿ'ಯನ್ನು ಅವರು ಸ್ವೀಕರಿಸಿದರು. ಈ ಗೌರವಕ್ಕೆ ಪಾತ್ರರಾದ ರಾಜ್ಯದ ಮೊದಲ ದೈಹಿಕ ಶಿಕ್ಷಣ ತಜ್ಞ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ.

ಬೆಂಗಳೂರಿನ ಭರತ್ ಆರ್.ಎ ಅವರು ಕೇಂದ್ರ ಸಚಿವ ಹರ್ಷ್ ಮಲ್ಹೋತ್ರಾ ಅವರಿಂದ ಪ್ರಶಸ್ತಿ ಸ್ವೀಕರಿಸಿದರು

ಪ್ರಸ್ತುತ ಮಂಡ್ಯದ ಜೆ.ಎಸ್.ಎಲ್ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಡಿಆರ್‌ಡಿಒದ ಜಿಟಿಆರ್‌ಇಗೆ ಭೇಟಿ ನೀಡಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್

'ಹೊಸ ಪೀಳಿಗೆ ಏರೋ ಎಂಜಿನ್ ಅಭಿವೃದ್ಧಿಪಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಪೀಳಿಗೆಯ ಏರೋ ಎಂಜಿನ್ (ವಿಮಾನದ ಎಂಜಿನ್) ಅಭಿವೃದ್ಧಿಗೆ ವಿಜ್ಞಾನಿಗಳು ಒತ್ತು ನೀಡಬೇಕು ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದರು.

ಡಿಆರ್‌ಡಿಒದ ಗ್ಯಾಸ್ ಟರ್ಬೈನ್ ಸಂಶೋಧನಾ ಸಂಸ್ಥೆಗೆ (ಜಿಟಿಆರ್‌ಇ) ಭೇಟಿ ನೀಡಿ, ದೇಶೀಯ ಮಿಲಿಟರಿ ಅನಿಲ ಟರ್ಬೈನ್ ಎಂಜಿನ್ ಅಭಿವೃದ್ಧಿಗೆ ಸಂಬಂಧಿಸಿದಂತೆ ಪ್ರಗತಿಯಲ್ಲಿರುವ ಯೋಜನೆಗಳ ಸ್ಥಿತಿಗತಿಯನ್ನು ಪರಿಶೀಲಿಸಿ ಅವರು ಮಾತನಾಡಿದರು.

ಐದನೇ ಪೀಳಿಗೆಯ ಏರೋ ಎಂಜಿನ್‌ನಲ್ಲಿದ್ದೇವೆ. ಇದು ಸಾಕಾಗಲ್ಲ. ಆರನೇ ಪೀಳಿಗೆಗೆ ಬೇಕಾದ ಸುಧಾರಿತ ತಂತ್ರಜ್ಞಾನಗಳ ಅಭಿವೃದ್ಧಿಯನ್ನು ಸಾಧ್ಯವಾದಷ್ಟು ಬೇಗ ಆರಂಭಿಸಬೇಕು. ಕೃತಕ ಬುದ್ಧಿಮತ್ತೆ ಮತ್ತು ಹೊಸ ತಂತ್ರಜ್ಞಾನ ಬಳಕೆ ಹೆಚ್ಚುತ್ತಿದೆ. ಅದಕ್ಕೆ ಪೂರಕವಾಗಿ ಸಂಶೋಧನೆಗಳು ನಡೆಯಬೇಕು ಎಂದು ಹೇಳಿದರು.

'ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಕೂಡ ಇಂತಹ ಎಂಜಿನ್‌ಗಳನ್ನು ತಯಾರಿಸಲು 25 ರಿಂದ 30 ವರ್ಷ ತೆಗೆದುಕೊಳ್ಳುತ್ತವೆ. ಭಾರತವು ಈ ಸಮಯವನ್ನು ಕಡಿಮೆ ಮಾಡಿಕೊಳ್ಳಬೇಕು. ಈಗಾಗಲೇ 20 ವರ್ಷಗಳು ಮುಗಿದಿವೆ. ಇನ್ನು ಆರೇಳು ವರ್ಷಗಳ ಒಳಗೆ ನಾವು ಗುರಿ ತಲುಪಬೇಕು' ಎಂದು ತಿಳಿಸಿದರು.

ಬದಲಾಗುತ್ತಿರುವ ಭೌಗೋಳಿಕ, ರಾಜಕೀಯ ಪರಿಸ್ಥಿತಿಯಲ್ಲಿ ಏರೋ ಎಂಜಿನ್ ತಂತ್ರಜ್ಞಾನದಲ್ಲಿ ಸ್ವಾವಲಂಬನೆ ಸಾಧಿಸುವುದು ಅಗತ್ಯ. ಈಗಿನ ಸಂದರ್ಭದಲ್ಲಿ ನಿರ್ಣಾಯಕವಾದ ತಂತ್ರಜ್ಞಾನ ಹೊಂದಿರುವ ರಾಷ್ಟ್ರಗಳು ಮಾತ್ರ ಸುರಕ್ಷಿತವಾಗಿರಲು ಸಾಧ್ಯ ಎಂದು ಪ್ರತಿಪಾದಿಸಿದರು.

18 ವರ್ಷಗಳಿಂದ ಬಾಕಿ ಇದ್ದ ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವಿನ ಮುಕ್ತ ವ್ಯಾಪಾರ ಒಪ್ಪಂದವು ಈಗ ಪೂರ್ಣಗೊಂಡಿದೆ. ಬ್ರಿಟನ್ ಜೊತೆಗಿನ ಜಂಟಿ ಅಧ್ಯಯನ ಮತ್ತು ಫ್ರಾನ್ಸ್‌ನೊಂದಿಗೆ ರಾಷ್ಟ್ರೀಯ ಏರೋ ಎಂಜಿನ್ ಮಿಷನ್ ಅಡಿಯಲ್ಲಿ ನಡೆಯುತ್ತಿರುವ ಮಾತುಕತೆಗಳು ಭಾರತಕ್ಕೆ ಪೂರಕವಾಗಿವೆ. ಈ ಸಹಯೋಗಗಳು ಹೊಸ ತಂತ್ರಜ್ಞಾನಗಳನ್ನು ಕಲಿಯಲು ಮತ್ತು ಸವಾಲುಗಳನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗಲಿವೆ ಎಂದರು.

ಪಹಲ್ಗಾಮ್‌ನಲ್ಲಿ ಪ್ರವಾಸಿಗರ ಹತ್ಯೆಗೆ ಪ್ರತೀಕಾರವಾಗಿ ನಡೆದ 'ಆಪರೇಷನ್ ಸಿಂಧೂರ'ದಲ್ಲಿ ಬಳಕೆಯಾದ ಸಂವಹನ ವ್ಯವಸ್ಥೆಯಿಂದ ಹಿಡಿದು ಶಸ್ತ್ರಾಸ್ತ್ರಗಳವರೆಗೆ ಎಲ್ಲವೂ ಸ್ವದೇಶಿ ನಿರ್ಮಿತವಾಗಿದ್ದು, ಇದು ಸೈನಿಕರ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ ಎಂದು ಹೇಳಿದರು.

ರಕ್ಷಣಾ ಇಲಾಖೆಯ ಕಾರ್ಯದರ್ಶಿ, ಆರ್ ಆ್ಯಂಡ್ ಡಿ ಮತ್ತು ಡಿಆರ್‌ಡಿಒ ಅಧ್ಯಕ್ಷ ಸಮೀರ್ ವಿ. ಕಾಮತ್, ಜಿಟಿಆರ್‌ಇಯ ಹಿರಿಯ ವಿಜ್ಞಾನಿಗಳು ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು.

ನಗರದ ಡಿಆರ್‌ಡಿಒದ ಗ್ಯಾಸ್ ಟರ್ಬೈನ್ ಸಂಶೋಧನಾ ಸಂಸ್ಥೆಗೆ (ಜಿಟಿಆರ್‌ಇ) ಭೇಟಿ ನೀಡಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ದೇಶೀಯ ಮಿಲಿಟರಿ ಅನಿಲ ಟರ್ಬೈನ್ ಎಂಜಿನ್ ಪರಿಶೀಲಿಸಿದರು

ವೇಮಗಲ್ ಹೆಲಿಕಾಪ್ಟರ್ ಜೋಡಣಾ ಘಟಕಕ್ಕೆ ಇಂದು ಚಾಲನೆ

ಕೋಲಾರ: ತಾಲ್ಲೂಕಿನ ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ಟಾಟಾ ಅಡ್ವಾನ್ಸ್ಡ್ ಸಿಸ್ಟಮ್ಸ್ ಲಿಮಿಟೆಡ್ (ಟಿಎಎಸ್ಎಲ್) ನಿರ್ಮಿಸಿರುವ ಏರ್‌ಬಸ್ ಎಚ್ 125 ಲಘು ಹೆಲಿಕಾಪ್ಟರ್ ಅಂತಿಮ ಜೋಡಣಾ ಘಟಕಕ್ಕೆ ಮಂಗಳವಾರ ಸಂಜೆ ಚಾಲನೆ ಸಿಗಲಿದೆ.

ಈ ಘಟಕಕ್ಕೆ ಮುಂಬೈನಿಂದ ಪ್ರಧಾನಿ ನರೇಂದ್ರ ಮೋದಿ ಹಾಗೂ ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುವೆಲ್ ಮ್ಯಾಕ್ರನ್ ಅವರು ವರ್ಚುವಲ್ ವೇದಿಕೆ ಮೂಲಕ ಚಾಲನೆ ನೀಡಲಿದ್ದಾರೆ.

ವೇಮಗಲ್‌ನಲ್ಲಿ ನಡೆಯುವ ಉದ್ಘಾಟನಾ ಕಾರ್ಯಕ್ರಮದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ಫ್ರಾನ್ಸ್ ರಕ್ಷಣಾ ಸಚಿವೆ ಕ್ಯಾಥರಿನ್ ವಾಟ್ರಿನ್, ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಪಾಲ್ಗೊಳ್ಳಲಿದ್ದಾರೆ. ಇದಕ್ಕೂ ಮೊದಲು ಉಭಯ ದೇಶಗಳ ನಡುವಿನ ರಕ್ಷಣಾ ಒಪ್ಪಂದ ಕುರಿತು ಬೆಂಗಳೂರಿನಲ್ಲಿ ಸಭೆ ನಡೆಯಲಿದೆ.

ಖಾಸಗಿ ವಲಯದ ಮೊದಲ ಘಟಕ: ಖಾಸಗಿ ವಲಯದಲ್ಲಿ ದೇಶದ ಮೊದಲ ಹೆಲಿಕಾಪ್ಟರ್ ತಯಾರಿಕಾ ಘಟಕ ಇದಾಗಿದೆ. ಸ್ಥಳೀಯವಾಗಿ ಮತ್ತಷ್ಟು ಉದ್ಯೋಗಾವಕಾಶ ಸೃಷ್ಟಿಯಾಗುವ ನಿರೀಕ್ಷೆಯನ್ನು ಈ ಭಾಗದ ಜನರು ಹೊಂದಿದ್ದಾರೆ.

ಬಾಂಬ್ ಬೆದರಿಕೆ ಭೀತಿಯಿಂದ ದಾವಣಗೆರೆ ಜಿಲ್ಲಾ ಕೋರ್ಟ್‌ನ ಹೊರಗಡೆ ವಕೀಲರು ಹಾಗೂ ಕಕ್ಷಿದಾರರು, ಸಾರ್ವಜನಿಕರು ಜಮಾಯಿಸಿದ್ದರು (ಎಡ ಚಿತ್ರ), ರಾಮನಗರದ ಕೋರ್ಟ್ ಆವರಣದಲ್ಲಿ ಬಾಂಬ್ ಪತ್ತೆ ಹಾಗೂ ಶ್ವಾನದಳದ ಸಿಬ್ಬಂದಿ ಶೋಧ ನಡೆಸಿದರು ಪ್ರಜಾವಾಣಿ ಚಿತ್ರಗಳು

ಕೋರ್ಟ್‌ಗಳಿಗೆ ಬಾಂಬ್ ಬೆದರಿಕೆ

ಧಾರವಾಡ ಹೈಕೋರ್ಟ್ ಪೀಠ, 6 ಜಿಲ್ಲೆಗಳ ಸೆಷನ್ಸ್ ಕೋರ್ಟ್‌ಗೆ ಇ–ಮೇಲ್ ಸಂದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳ ಸ್ಥಳೀಯ ಕೋರ್ಟ್‌ಗಳಿಗೆ ಬಾಂಬ್ ಇಡಲಾಗಿದೆ ಎಂದು ಸೋಮವಾರ ಬೆಳಿಗ್ಗೆ ಬಂದಿದ್ದ ಇ–ಮೇಲ್ ಸಂದೇಶ ದುಗುಡ ಮೂಡಿಸಿದ್ದು, ಅರ್ಧದಿನದ ಕಲಾಪ ವ್ಯತ್ಯಯವಾಯಿತು.

ರಾಮನಗರ, ಉತ್ತರ ಕನ್ನಡ, ಧಾರವಾಡ, ಮಂಡ್ಯ, ಮೈಸೂರು, ಹಾಸನ ಜಿಲ್ಲಾ ಕೇಂದ್ರಗಳಲ್ಲಿರುವ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್‌ಗಳಿಗೆ ಬೆಳಿಗ್ಗೆ ಇಂತಹ ಬೆದರಿಕೆ ಸಂದೇಶ ಬಂದಿತ್ತು.

ಕೂಡಲೇ ಜಾಗೃತರಾದ ಪೊಲೀಸರು, ಶ್ವಾನದಳ ಮತ್ತು ಬಾಂಬ್ ಪತ್ತೆ ತಜ್ಞರ ಜೊತೆಗೂಡಿ ಆಯಾ ಕೋರ್ಟ್ ಆವರಣದಲ್ಲಿ ತೀವ್ರ ತಪಾಸಣೆ ನಡೆಸಿದರು. ಬಳಿಕ ಇದು, ಹುಸಿ ಕರೆ ಎಂದು ಸಾಬೀತಾಯಿತು.

ರಾಮನಗರ ವರದಿ: ಬೆಂಗಳೂರು ದಕ್ಷಿಣ ಜಿಲ್ಲಾ ಕೋರ್ಟ್ ಸಂಕೀರ್ಣದಲ್ಲಿ ಹನ್ನೆರಡು ಆರ್‌ಡಿಎಕ್ಸ್ ಬಾಂಬ್ ಇಟ್ಟಿರುವುದಾಗಿ ಬಂದ ಇ-ಮೇಲ್ ಗಮನಿಸಿದ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶ ಎಂ.ಎಚ್. ಅಣ್ಣಯ್ಯನವರ ಇದನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗಮನಕ್ಕೆ ತಂದರು.

ಸತತ ಎರಡೂವರೆ ತಾಸು ಶೋಧ ನಡೆಸಿದರೂ ಸ್ಫೋಟಕ ಪತ್ತೆಯಾಗಲಿಲ್ಲ. ಇದೊಂದು ಹುಸಿ ಬೆದರಿಕೆ ಎಂದು ಎಲ್ಲರೂ ನಿಟ್ಟುಸಿರು ಬಿಟ್ಟರು.

ಮಧ್ಯಾಹ್ನ 3.30ರ ನಂತರ ಕೋರ್ಟ್ ಕಲಾಪ ಮತ್ತೆ ಆರಂಭವಾಯಿತು.

ಕಿತ್ತೂರು ಕರ್ನಾಟಕದಲ್ಲೂ ಗೊಂದಲ

ಹುಬ್ಬಳ್ಳಿ ವರದಿ: ಕಿತ್ತೂರು ಕರ್ನಾಟಕದ ಧಾರವಾಡದ ಹೈಕೋರ್ಟ್ ಪೀಠ, ಕಾರವಾರ, ಹಾವೇರಿಯ ಜಿಲ್ಲಾ ನ್ಯಾಯಾಲಯದಲ್ಲಿ ಬೆದರಿಕೆ ಕರೆ ಹಿಂದೆಯೇ ಎಲ್ಲರನ್ನು ಹೊರ ಕಳುಹಿಸಿ ಪರಿಶೀಲಿಸಲಾಯಿತು.

‘ಪರಿಶೀಲನೆ ವೇಳೆ ಸಂದೇಹಾಸ್ಪದ ಅಥವಾ ಸ್ಫೋಟಕ ವಸ್ತು ಪತ್ತೆಯಾಗಲಿಲ್ಲ. ಹಿಂದೆಯೂ ಧಾರವಾಡ ಪೀಠ ಮತ್ತು ಗದಗ ನ್ಯಾಯಾಲಯಕ್ಕೂ ಹುಸಿ ಬೆದರಿಕೆ ಬಂದಿತ್ತು’ ಎಂದು ಪೊಲೀಸರು ತಿಳಿಸಿದ್ದಾರೆ.

ಹಾಸನದಲ್ಲಿ ಎರಡನೇ ಬಾರಿ ಬೆದರಿಕೆ ಸಂದೇಶ

(ಮೈಸೂರು ವರದಿ): ಮೈಸೂರು ಭಾಗದ ಮಂಡ್ಯ, ಹಾಸನ, ಮಡಿಕೇರಿಯ ಜಿಲ್ಲಾ ಕೋರ್ಟ್ ಆವರಣದಲ್ಲೂ ಇಂತಹುದೇ ಸ್ಥಿತಿ ಕಂಡುಬಂತು. ತಪಾಸಣೆ ಬಳಿಕ ಹುಸಿ ಎಂದು ಸಾಬೀತಾಯಿತು.

ಮಂಡ್ಯದಲ್ಲಿ ಬೆಳಿಗ್ಗೆ ಕಲಾಪಗಳು ಆರಂಭಗೊಂಡ ಕೆಲ ನಿಮಿಷಗಳಲ್ಲಿಯೇ ಬೆದರಿಕೆ ಕರೆ ಬಂದಿತು.

ಹಾಸನದ ಜಿಲ್ಲಾ ಕೋರ್ಟ್‌ಗೆ 2ನೇ ಬಾರಿ ಬೆದರಿಕೆ ಇ-ಮೇಲ್ ಬಂದಿದೆ ಎಂದು ಪೊಲೀಸರು ತಿಳಿಸಿದರು.

‘ಮಡಿಕೇರಿಯಲ್ಲೂ ಬೆಳಿಗ್ಗೆ 9.30ಕ್ಕೆ ಮಾಹಿತಿ ಬಂದಿದ್ದು, ಮಧ್ಯಾಹ್ನ 12ರ ಒಳಗೆ ಪತ್ತೆ ಮಾಡಬೇಕು ಎಂಬ ಸಂದೇಶ ಇತ್ತು. ಹೀಗಾಗಿ, ತ್ವರಿತಗತಿಯಲ್ಲಿ ತಪಾಸಣೆ ನಡೆಸಲಾಯಿತು’ ಎಂದು ಪೊಲೀಸರು ತಿಳಿಸಿದ್ದಾರೆ.

ಮಂಗಳೂರು ವರದಿ: ನಗರದ ಜಿಲ್ಲಾ ನ್ಯಾಯಾಲಯಕ್ಕೆ ಬಾಂಬ್ ಬೆದರಿಕೆ ಬಂದಿದ್ದು, ಶೋಧ ನಡೆಯಿತು.

‘ತಪಾಸಣೆ ವೇಳೆ ಸ್ಫೋಟಕ ಪತ್ತೆಯಾಗಿಲ್ಲ. ಇ- ಮೇಲ್ ಸಂದೇಶ ಕುರಿತು ತನಿಖೆ ಮುಂದುವರಿದಿದೆ’ ಎಂದು ನಗರ ಪೊಲೀಸ್ ಕಮಿಷನರ್ ಸುಧೀರ್‌ಕುಮಾರ್ ರೆಡ್ಡಿ ತಿಳಿಸಿದ್ದಾರೆ.

‘ತಮಿಳುನಾಡಿನಿಂದ ಇ–ಮೇಲ್’

ದಾವಣಗೆರೆ: ಇಲ್ಲಿನ ಜಿಲ್ಲಾ ಕೋರ್ಟ್ ಅಂಗಳದಲ್ಲೂ ಸೋಮವಾರ ಬಾಂಬ್ ಬೆದರಿಕೆ ಕರೆಯಿಂದ ಆತಂಕ ಮೂಡಿದ್ದು, ಪರಿಶೀಲನೆಯ ಬಳಿಕ ಹುಸಿ ಎಂಬುದು ಖಚಿತವಾಗಿದೆ.

ಜಿಲ್ಲಾ ಕೋರ್ಟ್‌ನ ಆಡಳಿತಾಧಿಕಾರಿಗೆ ಇ–ಮೇಲ್ ಬಂದಿದ್ದು, ಆರ್‌ಡಿಎಕ್ಸ್ ಇಡಲಾಗಿದೆ ಎಂಬ ಮಾಹಿತಿ ಇತ್ತು. ಇದನ್ನು ಅಧಿಕಾರಿಗಳು ತಕ್ಷಣ ಪೊಲೀಸರಿಗೆ ತಿಳಿಸಿದರು. ಶ್ವಾನ ದಳ ಮತ್ತು ಬಾಂಬ್ ಪತ್ತೆ ದಳ ತಪಾಸಣೆ ನಡೆಸಿತು.

ಇದರಿಂದ ಬೆಳಗಿನ ಕಲಾಪ ಮುಂದೂಡಲಾಯಿತು. ವಕೀಲರು, ಕಕ್ಷಿದಾರರು ಮಧ್ಯಾಹ್ನದವರೆಗೆ ಆವರಣದ ಹೊರಗಿದ್ದರು. ಮಧ್ಯಾಹ್ನದ ಬಳಿಕ ಕಲಾಪಗಳು ನಡೆದವು. ‘ಇದು, ಹುಸಿ ಸಂದೇಶವಾಗಿದೆ. ತಮಿಳುನಾಡಿನಿಂದ ಇ–ಮೇಲ್ ಬಂದಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ’ ಎಂದು ಪೊಲೀಸ್ ವರಿಷ್ಠಾಧಿಕಾರಿ ಎಚ್.ಟಿ.ಶೇಖರ್ ತಿಳಿಸಿದರು.

ಚಟಿಕೆ ಸುದ್ದಿ

‘ಬಳ್ಳಾರಿ ಬ್ಯಾನರ್ ಗಲಾಟೆ: ಕಾನೂನು ಹೋರಾಟ’

ಕೊಪ್ಪಳ: ‘ಬಳ್ಳಾರಿ ಬ್ಯಾನರ್ ಗಲಾಟೆಗೆ ಸಂಬಂಧಿಸಿದಂತೆ ನ್ಯಾಯ ಪಡೆದುಕೊಳ್ಳಲು ಕಾನೂನು ಹೋರಾಟ ನಡೆಸಲು ನಿರ್ಧರಿಸಿದ್ದೇನೆ. ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸುವೆ’ ಎಂದು ಶಾಸಕ ಜನಾರ್ದನ ರೆಡ್ಡಿ ಹೇಳಿದರು.

ಜನಾರ್ದನ ರೆಡ್ಡಿ

ಸೋಮವಾರ ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿ, ‘ಕೋರ್ಟ್‌ಗೆ ಹೋಗುವುದು ಬಿಟ್ಟು ಬೇರೆ ಮಾರ್ಗವಿಲ್ಲ. ಇಬ್ಬರು ಪೊಲೀಸ್ ಅಧಿಕಾರಿಗಳು, ಶಾಸಕರ ವಿರುದ್ಧ ಕಾನೂನು ಹೋರಾಟ ಮಾಡುವೆ’ ಎಂದು ತಿಳಿಸಿದರು.

ಸ್ಪರ್ಧಾತ್ಮಕ ಪರೀಕ್ಷೆಗೆ ಉಚಿತ ತರಬೇತಿ

ದೊಡ್ಡಬಳ್ಳಾಪುರ (ಬೆಂಗಳೂರು ಗ್ರಾಮಾಂತರ ಜಿಲ್ಲೆ): ಇಲ್ಲಿನ ಆರ್.ಎಲ್. ಜಾಲಪ್ಪ ಅಕಾಡೆಮಿಯು ಕೆಎಎಸ್, ಪಿಎಸ್‌ಐ, ಎಫ್‌ಡಿಎ, ಎಸ್‌ಡಿಎ ಸೇರಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮಾರ್ಚ್ 1ರಿಂದ ಉಚಿತ ತರಬೇತಿ ನೀಡಲಿದೆ.

ಬಡ ಹಾಗೂ ಗ್ರಾಮೀಣ ಯುವಜನರಿಗೆ ನಾಲ್ಕು ತಿಂಗಳ ಉಚಿತ ತರಬೇತಿ ನೀಡಲಾಗುತ್ತಿದೆ. ಹೊರ ಊರಿನ ವಿದ್ಯಾರ್ಥಿಗಳಿಗೆ ವಸತಿ ಮತ್ತು ಊಟದ ವ್ಯವಸ್ಥೆ ಇರುತ್ತದೆ.

ಆಸಕ್ತರು ಫೆ.25ರೊಳಗೆ www.rljacademy.in ನಲ್ಲಿ ಅರ್ಜಿ ಸಲ್ಲಿಸಬೇಕು. ಮಾಹಿತಿಗೆ ಮೊಬೈಲ್ ಸಂಖ್ಯೆ 99006 06042, 97314 80759 ಸಂಪರ್ಕಿಸಲು ಅಕಾಡೆಮಿ ಕಾರ್ಯದರ್ಶಿ ಲಕ್ಷ್ಮಣ ಕೊಡಸೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಂದಗಿ: ಮಕ್ಕಳ ಕಥೆ– ಕವನಗಳ ಆಹ್ವಾನ

ಸಿಂದಗಿ (ವಿಜಯಪುರ ಜಿಲ್ಲೆ): ನಗರದ ಮಕ್ಕಳ ಬಳಗವು ಸುವರ್ಣ ಮಹೋತ್ಸವದ ಮಕ್ಕಳ ಕಥೆ–ಕವನಗಳನ್ನು ಪುಸ್ತಕ ರೂಪದಲ್ಲಿ ತರಲಿದ್ದು, ಪ್ರವೇಶಗಳನ್ನು ಆಹ್ವಾನಿಸಿದೆ. ತಲಾ ಎರಡು ಕಥೆ, ಕವನ ಕಳುಹಿಸಬಹುದು ಎಂದು ಬಳಗದ ಪ್ರಕಟಣೆ ತಿಳಿಸಿದೆ. ಬರಹ ಕಳುಹಿಸಲು ಏಪ್ರಿಲ್ 10 ಕೊನೆ ದಿನ.

ಸಂಪರ್ಕ ವಿಳಾಸ: ಹ.ಮ. ಪೂಜಾರ, ಸಂಚಾಲಕರು, ಮಕ್ಕಳ ಬಳಗ, ಸಂಗಮೇಶ್ವರ ಬಡಾವಣೆ, ಸಿಂದಗಿ–586128, ವಿಜಯಪುರ ಜಿಲ್ಲೆ. ದೂರವಾಣಿ ಸಂಖ್ಯೆ: 9448986222.

ಕಾಲುವೆಗೆ ಬಿದ್ದು ತಂದೆ, ಮಗ ಸಾವು

ಬೀದರ್: ಭಾಲ್ಕಿ ತಾಲ್ಲೂಕಿನ ಬ್ಯಾಲಹಳ್ಳಿ ಸಮೀಪ ಸೋಮವಾರ ಕಾರಂಜಾ ಜಲಾಶಯದ ಕಾಲುವೆಗೆ ಆಕಸ್ಮಿಕವಾಗಿ ಬಿದ್ದು ತಂದೆ, ಮಗ ಮೃತಪಟ್ಟಿದ್ದಾರೆ.

ವಿಶ್ವನಾಥ್ ಹೊಸಮನಿ

ಅಂಬರೀಶ್ ಹೊಸಮನಿ

ಹುಮನಾಬಾದ್ ತಾಲ್ಲೂಕಿನ ಹಳ್ಳಿಖೇಡ್ (ಬಿ) ಗ್ರಾಮದ ವಿಶ್ವನಾಥ್ ಅಂಬಣ್ಣ ಹೊಸಮನಿ (53), ಅವರ ಮಗ ಅಂಬರೀಶ್ (23) ಮೃತರು.

ಗಾರೆ ಕೆಲಸ ಮುಗಿಸಿ ತಂದೆ, ಮಗ ಮನೆಗೆ ಮರಳುತ್ತಿದ್ದರು. ಮಾರ್ಗ ಮಧ್ಯೆ ಅಂಬರೀಶ್ ಅವರು ಕಾಲುವೆಗೆ ಕೈ ಕಾಲು ತೊಳೆದುಕೊಳ್ಳಲು ಇಳಿದಿದ್ದಾರೆ. ಆಗ ಕಾಲು ಜಾರಿ ಬಿದ್ದಿದ್ದಾರೆ. ಮಗನನ್ನು ರಕ್ಷಿಸಲು ಧಾವಿಸಿದ ತಂದೆ ಸಹ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ ಎಂದು ಗೊತ್ತಾಗಿದೆ.

ಕಾಡಾನೆ ದಾಳಿ ಕಾರ್ಮಿಕ ಸಾವು

ಚಿಕ್ಕಮಗಳೂರು: ತಾಲ್ಲೂಕಿನ ಹುಣಸೇಹಳ್ಳಿ ಸಮೀಪದ ಪುರದಲ್ಲಿ ಕಾಡಾನೆ ದಾಳಿಗೆ ಸಿಲುಕಿ ಕೂಲಿ ಕಾರ್ಮಿಕ, ಮೂಲತಃ ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ತಿಳವಳ್ಳಿಯ ಯಲ್ಲಪ್ಪ ಶೇಖಪ್ಪ ಮಾರೇಕ್ಕನವರ(45) ಮೃತಪಟ್ಟಿದ್ದಾರೆ.

ಯಲ್ಲಪ್ಪ

ಗಾರೆ ಕೆಲಸ ಮಾಡುತ್ತಿದ್ದ ಅವರು ಬೆಳಗಿನ ಜಾವ ಒಬ್ಬರೇ ನಡೆದು ಹೋಗುತ್ತಿದ್ದಾಗ ಆನೆ ದಾಳಿ ನಡೆಸಿದ್ದು, ಗಾಯಗೊಂಡ ಅವರನ್ನು ಶಿವಮೊಗ್ಗ ಆಸ್ಪತ್ರೆಗೆ ಸಾಗಿಸಲಾಯಿತು. ಅಷ್ಟರಲ್ಲಿ ಅವರು ಮೃತಪಟ್ಟಿದ್ದರು. ಮೃತರ ಕುಟುಂಬಕ್ಕೆ ಹೆಚ್ಚಿನ ಪರಿಹಾರ ನೀಡಬೇಕು ಎಂದು ಆಗ್ರಹಿಸಿ ಸ್ಥಳೀಯರು ಪ್ರತಿಭಟನೆ ನಡೆಸಿದರು.

ಜಲಮಂಡಳಿ ವರ್ಸಸ್ ಎ. ರಾಜಪ್ಪ ಪ್ರಕರಣ

ನ್ಯಾಯಮೂರ್ತಿ ವಿ.ಆರ್.ಕೃಷ್ಣ ಅಯ್ಯರ್ ನೇತೃತ್ವದ ಏಳು ನ್ಯಾಯಮೂರ್ತಿಗಳ ಪೀಠವು 1978ರಲ್ಲಿ ತೀರ್ಪು ನೀಡಿ ‘ಉದ್ಯಮ’ಕ್ಕೆ ವಿಶಾಲ ಅರ್ಥ ನೀಡಿತ್ತು

‘ಉದ್ಯಮ’ ವ್ಯಾಖ್ಯಾನ ನಿರ್ಧಾರ ಸಾಂವಿಧಾನಿಕ ಪೀಠಕ್ಕೆ

ನವದೆಹಲಿ: 2020ರ ಕೈಗಾರಿಕಾ ಸಂಬಂಧ ಸಂಹಿತೆ ಮತ್ತು 1947ರ ಕೈಗಾರಿಕಾ ವಿವಾದ ಕಾಯ್ದೆಯ ಅಡಿಯಲ್ಲಿ ‘ಉದ್ಯಮ‘ದ ವ್ಯಾಖ್ಯಾನ ನಿರ್ಧರಿಸಲು ಒಂಬತ್ತು ನ್ಯಾಯಮೂರ್ತಿಗಳ ಸಂವಿಧಾನ ಪೀಠ ರಚಿಸುವುದಾಗಿ ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಹಾಗೂ ವಿ.ಎಂ. ಪಂಚೋಲಿ ಅವರ ಪೀಠವು, ‘ಸಂವಿಧಾನ ಪೀಠವು ಮಾರ್ಚ್ 17 ಹಾಗೂ 18ರಂದು ಪ್ರಕರಣದ ವಿಚಾರಣೆ ನಡೆಸಲಿದೆ. ಅರ್ಜಿದಾರರು ಹಾಗೂ ಪ್ರತಿವಾದಿಗಳು ಇದೇ 28ರೊಳಗೆ ಈಗಿರುವ ಆಕ್ಷೇಪಣೆಗಳಿಗೆ ಇನ್ನಷ್ಟು ಅಂಶ ಸೇರಿಸಿ ಹೊಸದಾಗಿ ಸಲ್ಲಿಸಬಹುದು ಹಾಗೂ ಹೆಚ್ಚುವರಿಯಾಗಿ ಹೊಸ ಆಕ್ಷೇಪಣೆಗಳನ್ನು ಸಲ್ಲಿಸಬಹುದು’ ಎಂದು ತಿಳಿಸಿತು.

ಬೆಂಗಳೂರು ಜಲಮಂಡಳಿ ವರ್ಸಸ್ ಎ. ರಾಜಪ್ಪ ಪ್ರಕರಣದಲ್ಲಿ ನ್ಯಾಯಮೂರ್ತಿ ವಿ.ಆರ್.ಕೃಷ್ಣ ಅಯ್ಯರ್ ನೇತೃತ್ವದ ಏಳು ನ್ಯಾಯಮೂರ್ತಿಗಳ ಪೀಠವು 1978ರಲ್ಲಿ ತೀರ್ಪು ನೀಡಿ ‘ಉದ್ಯಮ’ಕ್ಕೆ ವಿಶಾಲ ಅರ್ಥ ನೀಡಿತ್ತು. ಸರ್ಕಾರಿ ಉದ್ಯಮಗಳು, ಆಸ್ಪತ್ರೆಗಳು, ಶಿಕ್ಷಣ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು, ವೃತ್ತಿಪರ ಸೇವೆಗಳು ಹಾಗೂ ಕ್ಲಬ್‌ಗಳನ್ನೂ ಸೇರಿಸಿ ಉದ್ಯಮಕ್ಕೆ ವಿಸ್ತೃತ ವ್ಯಾಖ್ಯಾನ ನೀಡಿತ್ತು. ಇದು ಕಾರ್ಮಿಕರ ಹಕ್ಕುಗಳಿಗೆ ರಕ್ಷಣೆ ನೀಡುವಂತಹ ವ್ಯಾಖ್ಯಾನವಾಗಿತ್ತು.

ಉತ್ತರ ಪ್ರದೇಶ ವರ್ಸಸ್ ಜೈ ಬೀರ್ ಸಿಂಗ್ ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ನೇತೃತ್ವದ ಪಂಚ ನ್ಯಾಯಮೂರ್ತಿಗಳ ಪೀಠವು ಜಲಮಂಡಳಿ ಪ್ರಕರಣವನ್ನು 2005ರಲ್ಲಿ ವಿಸ್ತೃತ ಪೀಠಕ್ಕೆ ವರ್ಗಾಯಿಸಿತ್ತು. ಈ ಪ್ರಕರಣವನ್ನು ಏಳು ನ್ಯಾಯಮೂರ್ತಿಗಳ ಪೀಠವು 2017ರಲ್ಲಿ ಒಂಬತ್ತು ನ್ಯಾಯಮೂರ್ತಿಗಳ ಪೀಠಕ್ಕೆ ಉಲ್ಲೇಖಿಸಿತ್ತು.

ಪಟಾಕಿ ಕಾರ್ಖಾನೆಯಲ್ಲಿ ಬೆಂಕಿ: 7 ಸಾವು

ಜೈಪುರ (ಪಿಟಿಐ): ಗಾರ್ಮೆಂಟ್ ಕಾರ್ಖಾನೆ ಹೆಸರಿನಲ್ಲಿ ಕಾನೂನುಬಾಹಿರವಾಗಿ ಪಟಾಕಿ ತಯಾರು ಮಾಡುತ್ತಿದ್ದ ಕಾರ್ಖಾನೆಯಲ್ಲಿ ಬೆಂಕಿ ಹೊತ್ತಿಕೊಂಡು 7 ಮಂದಿ ಮೃತಪಟ್ಟಿರುವುದು ರಾಜಸ್ಥಾನದ ಖೈರತಲ್ ತಿಜಾರ ಜಿಲ್ಲೆಯ ಭಿವಾಡಿಯಲ್ಲಿ ಸೋಮವಾರ ನಡೆದಿದೆ.

‘ಕಾರ್ಖಾನೆ ಒಳಗೆ ಸುಮಾರು 20 ಮಂದಿ ಸಿಲುಕಿಕೊಂಡಿದ್ದರು. ಬೆಂಕಿ ಹೊತ್ತಿಕೊಳ್ಳುತ್ತಿದ್ದಂತೆಯೇ ಹಲವರು ಹೊರಗೆ ಓಡಿದರು’ ಎಂದು ಪೊಲೀಸರು’ ವಿವರಿಸಿದರು.

ಶಬರಿಮಲೆಗೆ ಮಹಿಳೆಯರ ಪ್ರವೇಶ: 9 ನ್ಯಾಯಮೂರ್ತಿಗಳಿಂದ ವಿಚಾರಣೆ

ವಿಸ್ತೃತ ಪೀಠಕ್ಕೆ ‘ಪ್ರವೇಶ’ ವಿವಾದ

ನವದೆಹಲಿ/ತಿರುವನಂತಪುರ (ಪಿಟಿಐ): ಕೇರಳದ ಶಬರಿಮಲೆ ದೇವಸ್ಥಾನ ಸೇರಿದಂತೆ ವಿವಿಧ ಧರ್ಮಗಳ ಪೂಜಾ ಸ್ಥಳಗಳಲ್ಲಿ ಮಹಿಳೆಯರ ಪ್ರವೇಶಕ್ಕೆ ನಿರ್ಬಂಧ ಹಾಗೂ ತಾರತಮ್ಯಕ್ಕೆ ಸಂಬಂಧಿಸಿದ ಅರ್ಜಿಗಳ ಅಂತಿಮ ವಿಚಾರಣೆಯನ್ನು ಒಂಬತ್ತು ನ್ಯಾಯಮೂರ್ತಿಗಳ ವಿಸ್ತೃತ ಪೀಠವು ಏಪ್ರಿಲ್ 7ರಂದು ಆರಂಭಿಸಲಿದೆ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರ ಪೀಠವು, ಈ ಪ್ರಕರಣದ ವಿಚಾರಣೆ ಏಪ್ರಿಲ್ 22ರಂದು ಕೊನೆಗೊಳ್ಳುವ ನಿರೀಕ್ಷೆಯಿದೆ ಎಂದಿತು.

ಮಾರ್ಚ್ 14 ಅಥವಾ ಅದಕ್ಕೂ ಮೊದಲು ತಮ್ಮ ವಾದಗಳನ್ನು ಲಿಖಿತವಾಗಿ ಸಲ್ಲಿಸುವಂತೆ ಪೀಠವು ಕಕ್ಷಿದಾರರಿಗೆ ಸೂಚಿಸಿದೆ. ಕೇಂದ್ರ ಸರ್ಕಾರದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ಶಬರಿಮಲೆ ದೇವಸ್ಥಾನಕ್ಕೆ ಎಲ್ಲಾ ವಯೋಮಾನದ ಮಹಿಳೆಯರ ಪ್ರವೇಶಕ್ಕೆ ಅನುಮತಿ ನೀಡುವ ತೀರ್ಪಿನ ಮರುಪರಿಶೀಲನೆಗೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಬೆಂಬಲಿಸುವುದಾಗಿ ನ್ಯಾಯಪೀಠಕ್ಕೆ ತಿಳಿಸಿದ್ದಾರೆ.

ತೀರ್ಪಿನ ಮರುಪರಿಶೀಲನೆಯನ್ನು ಬೆಂಬಲಿಸುವ ಕಕ್ಷಿದಾರರಿಗೆ ನೋಡಲ್ ವಕೀಲರಾಗಿ ಕೃಷ್ಣ ಕುಮಾರ್ ಸಿಂಗ್ ಅವರನ್ನು ಹಾಗೂ ಮರುಪರಿಶೀಲನೆ ವಿರೋಧಿಸುವವರಿಗೆ ನೋಡಲ್ ವಕೀಲರಾಗಿ ಶಾಶ್ವತಿ ಪಾರಿ ಅವರನ್ನು ಪೀಠವು ನೇಮಿಸಿದೆ.

‘ಹಿರಿಯ ವಕೀಲರಾದ ಶಿವಂ ಸಿಂಗ್ ಮತ್ತು ಕೆ.ಪರಮೇಶ್ವರ್ ಅವರನ್ನು ಅಮಿಕಸ್ ಕ್ಯೂರಿ ಆಗಿ ನೇಮಕ ಮಾಡಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡೂ ಕಡೆಯವರ ನಿಲುವನ್ನು ಶಿವಂ ಸಿಂಗ್ ಅವರು ಈ ನ್ಯಾಯಾಲಯಕ್ಕೆ ಸಲ್ಲಿಸುವರು’ ಎಂದು ಸಿಜೆಐ ಹೇಳಿದರು.

2018ರ ‘ಸುಪ್ರೀಂ’ ತೀರ್ಪು...

ಋತುಸ್ರಾವ ಆಗುವ ವಯಸ್ಸಿನ ಮಹಿಳೆಯರಿಗೆ ಕೂಡ ಶಬರಿಮಲೆ ದೇವಸ್ಥಾನ ಪ್ರವೇಶಿಸುವ ಹಕ್ಕಿದೆ ಎಂದು ಸುಪ್ರೀಂ ಕೋರ್ಟ್ 2018ರ ಸೆಪ್ಟೆಂಬರ್‌ನಲ್ಲಿ ತೀರ್ಪು ನೀಡಿತ್ತು. ಐವರು ನ್ಯಾಯಮೂರ್ತಿಗಳ ಸಾಂವಿಧಾನಿಕ ಪೀಠ 4:1 ಬಹುಮತದ ತೀರ್ಪು ನೀಡಿತ್ತು.

ಈ ತೀರ್ಪಿನ ಮರುಪರಿಶೀಲನೆ ಕೋರಿ ಹಲವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. 2019ರ ನವೆಂಬರ್‌ನಲ್ಲಿ ಅಂದಿನ ಸಿಜೆಐ ರಂಜನ್ ಗೊಗೊಯ್ ನೇತೃತ್ವದ ಐವರು ನ್ಯಾಯಮೂರ್ತಿಗಳ ಪೀಠ, ವಿವಿಧ ಧರ್ಮಗಳ ಪೂಜಾ ಸ್ಥಳಗಳಲ್ಲಿ ಮಹಿಳೆಯರ ವಿರುದ್ಧದ ತಾರತಮ್ಯದ ವಿಷಯದ ವಿಚಾರಣೆಯನ್ನು ವಿಸ್ತೃತ ಪೀಠಕ್ಕೆ ಒಪ್ಪಿಸಿತ್ತು.

ಶಬರಿಮಲೆ ದೇಗುಲಕ್ಕೆ ಮಹಿಳೆಯರ ಪ್ರವೇಶ ಕುರಿತ ಕಾನೂನಾತ್ಮಕ ಪ್ರಶ್ನೆಗಳನ್ನು ವಿಸ್ತೃತ ಪೀಠಕ್ಕೆ ವರ್ಗಾಯಿಸುವ ಅಧಿಕಾರ ಐವರು ನ್ಯಾಯಮೂರ್ತಿಗಳ ಪೀಠಕ್ಕೆ ಇದೆ ಎಂದು ಸುಪ್ರೀಂ ಕೋರ್ಟ್‌ನ ಪೀಠವೊಂದು 2020ರ ಮೇನಲ್ಲಿ ಹೇಳಿತ್ತು. ಆ ಬಳಿಕ ಕೋವಿಡ್ ಒಳಗೊಂಡಂತೆ ವಿವಿಧ ಕಾರಣಗಳಿಂದ ಸುಪ್ರೀಂ ಕೋರ್ಟ್ ಐದು ವರ್ಷಗಳವರೆಗೆ ಈ ವಿಷಯವನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಲಿಲ್ಲ. ಇದೀಗ, ಸಿಜೆಐ ಸೂರ್ಯ ಕಾಂತ್ ನೇತೃತ್ವದ ಪೀಠ ಅರ್ಜಿಗಳ ವಿಚಾರಣೆಗೆ ಮುಂದಾಗಿದೆ.

> ಶಬರಿಮಲೆಗೆ ಮಹಿಳೆಯರ ಪ್ರವೇಶ ವಿಚಾರಕ್ಕೆ ಸಂಬಂಧಿಸಿದಂತೆ ಸರ್ಕಾರವು ಸಂಬಂಧಪಟ್ಟವರ ಜತೆ ಚರ್ಚಿಸಿ ತನ್ನ ನಿಲುವನ್ನು ನ್ಯಾಯಾಲಯಕ್ಕೆ ತಿಳಿಸಲಿದೆ
>
> **ಪಿ.ರಾಜೀವ್,** ಕೇರಳದ ಕಾನೂನು ಸಚಿವ

> ಋತುಸ್ರಾವ ವಯಸ್ಸಿನ ಮಹಿಳೆಯರ ಶಬರಿಮಲೆ ಪ್ರವೇಶವನ್ನು ವಿರೋಧಿಸುವ ನಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ
>
> **ಜಿ.ಸುಕುಮಾರನ್ ನಾಯರ್,** ಪ್ರಧಾನ ಕಾರ್ಯದರ್ಶಿ, ನಾಯರ್ ಸರ್ವಿಸ್ ಸೊಸೈಟಿ

ಇತರ ಅರ್ಜಿಗಳ ವಿಚಾರಣೆ

ಒಂಬತ್ತು ನ್ಯಾಯಮೂರ್ತಿಗಳ ವಿಸ್ತೃತ ಪೀಠವು ಶಬರಿಮಲೆಗೆ ಸಂಬಂಧಿಸಿದ ಅರ್ಜಿಗಳ ಜತೆಯಲ್ಲೇ ಇದೇ ಸ್ವರೂಪದ ಎಲ್ಲಾ ಅರ್ಜಿಗಳನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಲಿದೆ. ಮಸೀದಿ ಹಾಗೂ ದರ್ಗಾಗಳಿಗೆ ಮಹಿಳೆಯರಿಗೆ ಪ್ರವೇಶ ನಿರಾಕರಣೆ, ಪಾರ್ಸಿ ಮಹಿಳೆಯು ಬೇರೆ ಸಮುದಾಯದ ಪುರುಷನನ್ನು ಮದುವೆಯಾದರೆ ಅಂಥ ಮಹಿಳೆಗೆ ಪವಿತ್ರ ಅಗ್ನಿ ಇರುವ ದೇಗುಲಕ್ಕೆ ಪ್ರವೇಶ ನಿರಾಕರಿಸುವುದು ಸೇರಿದಂತೆ ಇತರ ಅರ್ಜಿಗಳನ್ನೂ ವಿಸ್ತೃತ ಪೀಠಕ್ಕೆ ಒಪ್ಪಿಸಲಾಗಿದೆ.



ಕೊಳ್ಳೇಗಾಲದ ಮುಡುಗುಂಡದಿಂದ ಬಿಳಿರಂಗನ ಬೆಟ್ಟದ ವಡ್ಡುಗೆರೆ ಕಡೆಗೆ ಹೋಗುವ ರಸ್ತೆ ಬದಿಯ ಜಮೀನಿನಲ್ಲಿ ಮೆಲಾನಿನ್ ಹೆಚ್ಚಾಗಿರುವ, ಅಪರೂಪದ ಕರಿಬಣ್ಣದ ನರಿ ಕಾಣಿಸಿಕೊಂಡಿದೆ. ಈ ಚಿತ್ರವನ್ನು ವನ್ಯಜೀವಿ ಛಾಯಾಗ್ರಾಹಕರಾದ ಕಿರಣ್ ಮಿಠಾಯಿ ಕೊಳ್ಳೇಗಾಲ ಹಾಗೂ ನವೀನ್ ಕ್ಲಿಕ್ಕಿಸಿದ್ದಾರೆ

ಸಾಲದ ಹೊರೆಯೇ ರಾಜ್ಯ ಸರ್ಕಾರದ ಸಾಧನೆ – ನಿಖಿಲ್ ಕುಮಾರಸ್ವಾಮಿ

ವಿಜಯಪುರ: ‘ಸಾವಿರ ದಿನಗಳ ಸಾಧನೆ’ ಎಂದು ರಾಜ್ಯ ಸರ್ಕಾರ ಸಂಭ್ರಮ ಆಚರಿಸುತ್ತಿದೆ. ಸರ್ಕಾರ ಪ್ರತಿ ವರ್ಷ ₹1 ಲಕ್ಷ ಕೋಟಿ ಸಾಲ ಮಾಡಿ ಜನರ ಮೇಲೆ ಸಾಲ ಹೊರಿಸುತ್ತಿದೆ. ಇದೇ ಸರ್ಕಾರದ ದೊಡ್ಡ ಸಾಧನೆ ಮತ್ತು ಕೊಡುಗೆ’ ಎಂದು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ನಿಖಿಲ್

‘ಸಿ.ಎಂ., ಡಿಸಿಎಂ ನಿತ್ಯ ಕುರ್ಚಿ ಕಿತ್ತಾಟದಲ್ಲೇ ಕಾಲ ಕಳೆಯುತ್ತಿದ್ದಾರೆ. ಇದರಿಂದ ಸಂಪದ್ಭರಿತ ರಾಜ್ಯದಲ್ಲಿ ಬಡತನ ಆವರಿಸುತ್ತಿದೆ’ ಎಂದು ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಟೀಕಿಸಿದರು.

‘ಜೆಡಿಎಸ್ ಬೆಳ್ಳಿಹಬ್ಬ ಆಚರಿಸುತ್ತಿದ್ದು, ಈ ನಿಮಿತ್ತ ಫೆ.27ರಂದು ವಿಜಯಪುರ, ಧಾರವಾಡ, ಬಾಗಲಕೋಟೆ ಸೇರಿ ಏಳು ಜಿಲ್ಲೆಗಳ ಜನತಾ ಸಮಾವೇಶವನ್ನು ವಿಜಯಪುರದಲ್ಲಿ ನಡೆಸಲಾಗುವುದು’ ಎಂದರು.

‘ದೇವೇಗೌಡರು ಕಟ್ಟಿ ಬೆಳೆಸಿದ ಪ್ರಾದೇಶಿಕ ಪಕ್ಷ ಜೆಡಿಎಸ್, ನಾಯಕರನ್ನು ರೂಪಿಸುವ ಕಾರ್ಖಾನೆ. ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡಿದ್ದರೂ ಜೆಡಿಎಸ್ ತನ್ನ ಜಾತ್ಯತೀತ ಧೋರಣೆಯಿಂದ ಹಿಂದೆ ಸರಿದಿಲ್ಲ’ ಎಂದರು.

‘ಸಿದ್ಧಗಂಗಾ’ ರಥೋತ್ಸವ

ಪ್ರಜಾವಾಣಿ ಚಿತ್ರ:

ತುಮಕೂರಿನ ಸಿದ್ಧಗಂಗಾ ಮಠದಲ್ಲಿ ಸಿದ್ಧಲಿಂಗೇಶ್ವರ ಸ್ವಾಮಿಯ ರಥೋತ್ಸವ ಅಪಾರ ಸಂಖ್ಯೆಯ ಭಕ್ತರ ಸಮ್ಮುಖದಲ್ಲಿ ಸೋಮವಾರ ವಿಜೃಂಭಣೆಯಿಂದ ನೆರವೇರಿತು

ಮಕ್ಕಳಿಗೆ ಇ–ಹಾಜರಾತಿ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಹಾಗೂ ಅನುದಾನಿತ ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಗೆ 2026–27ನೇ ಸಾಲಿನಿಂದ ‘ಇ-ಹಾಜರಾತಿ’ ಕಡ್ಡಾಯಗೊಳಿಸಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮರು ಆದೇಶ ಹೊರಡಿಸಿದೆ.

ಮಕ್ಕಳ ಮುಖಚರ್ಯೆ ಗುರುತಿಸುವ ಮೂಲಕ ಇ-ಹಾಜರಾತಿ ದಾಖಲಿಸುವ ‘ನಿರಂತರ’ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದಾಗಿ ಕಳೆದ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಯೋಜನೆಯನ್ನು ಅನುಷ್ಠಾನಗೊಳಿಸಲು ಅಗತ್ಯವಾದ ಕೃತಕ ಬುದ್ಧಿಮತ್ತೆ ಆಧಾರಿತ ಮೊಬೈಲ್ ಹಾಗೂ ಇತರೆ ಪರಿಕರಗಳನ್ನು ರಾಜ್ಯದ 52,686 ಶಾಲೆಗಳಲ್ಲಿ ಅಳವಡಿಸಲು ₹5 ಕೋಟಿ ಅನುದಾನ ನೀಡಲಾಗಿತ್ತು. ಆದರೆ, 2025–26ನೇ ಸಾಲಿನಲ್ಲಿ ಅನುಷ್ಠಾನ ಸಾಧ್ಯವಾಗಿರಲಿಲ್ಲ. ಹಾಗಾಗಿ, ಹಿಂದಿನ ಆದೇಶ ಹಿಂಪಡೆದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಇ-ಆಡಳಿತ ಕೇಂದ್ರದ ಮೂಲಕ ₹2.16 ಕೋಟಿ ವೆಚ್ಚದಲ್ಲಿ 2026–27ನೇ ಸಾಲಿನಿಂದ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

ಬೋಧಕ, ಬೋಧಕೇತರರಿಗೆ ‘ಕಾಮ್ಸ್’: ಸರ್ಕಾರಿ ಶಾಲೆ ಹಾಗೂ ಕಾಲೇಜುಗಳ ಶಿಕ್ಷಕರು, ಮುಖ್ಯಶಿಕ್ಷಕರು, ಉಪನ್ಯಾಸಕರು, ಪ್ರಾಂಶುಪಾಲರು ಸೇರಿದಂತೆ ಎಲ್ಲ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಮೊಬೈಲ್ ಅಪ್ಲಿಕೇಷನ್ ಮೂಲಕ ಹಾಜರಾತಿ ದೃಢೀಕರಣ ಕಡ್ಡಾಯಗೊಳಿಸಿ ಶಾಲಾ ಶಿಕ್ಷಣ ಇಲಾಖೆ ಮತ್ತೊಂದು ಆದೇಶ ಹೊರಡಿಸಿದೆ.

ಇಲಾಖೆಯ ಕಚೇರಿಗಳಲ್ಲಿ ಬಯೋಮೆಟ್ರಿಕ್ ಹಾಜರಾತಿ ಯಂತ್ರಗಳನ್ನು ಕೈಬಿಟ್ಟು, ಮೊಬೈಲ್ ಆಧಾರಿತ (ಕರ್ನಾಟಕ ಹಾಜರಾತಿ ನಿರ್ವಹಣಾ ವ್ಯವಸ್ಥೆ) ಜಾರಿಗೊಳಿಸಲು ಸೂಚಿಸಲಾಗಿದೆ.

ಇಲಾಖೆ ಈಗಾಗಲೇ ಪಿಯು ಕಾಲೇಜು ಉಪನ್ಯಾಸಕರು ಹಾಗೂ ಕೆಲ ಆಯ್ದ ಶಾಲೆಗಳಲ್ಲಿ ‘ಕಾಮ್ಸ್’ ಜಾರಿಗೆ ತಂದಿದ್ದು, ಮುಂದಿನ ಶೈಕ್ಷಣಿಕ ವರ್ಷದಿಂದ ರಾಜ್ಯದ ಎಲ್ಲಾ ಸರ್ಕಾರಿ ಶಾಲಾ– ಕಾಲೇಜುಗಳಿಗೂ ಎಐ ಆಧಾರಿತ ಮುಖ ಗುರುತಿಸುವಿಕೆ ಹಾಜರಾತಿ ವ್ಯವಸ್ಥೆ ಕಡ್ಡಾಯವಾಗಿ ಜಾರಿಯಾಗಲಿದೆ. ಈ ನಿಯಮ ಪರೀಕ್ಷಾ ಕಾರ್ಯ ಹಾಗೂ ಮೌಲ್ಯಮಾಪನ ಕಾರ್ಯದಲ್ಲಿ ಭಾಗವಹಿಸುವವರಿಗೂ ಅನ್ವಯವಾಗಲಿದೆ.

‘ವಾಂಗ್ಚುಕ್ ಹೇಳಿಕೆ: ನೈಜ ಪ್ರತಿ ಸಲ್ಲಿಸಿ’

ನವದೆಹಲಿ (ಪಿಟಿಐ): ‘ಪರಿಸರ ಕಾರ್ಯಕರ್ತ ಸೊನಮ್ ವಾಂಗ್ಚುಕ್ ವಿರುದ್ಧ ಸಲ್ಲಿಸಿರುವ ವಿಡಿಯೊಗಳಲ್ಲಿರುವ ಸಂಭಾಷಣೆಯ ಅನುವಾದದಲ್ಲಿ ನಿಖರತೆ ಇಲ್ಲ’ ಎಂದು ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಸೋಮವಾರ ಹೇಳಿದೆ.

ಕಪಿಲ್ ಸಿಬಲ್ ಅವರು, ‘ವಾಂಗ್ಚುಕ್ ಹೇಳಿದ್ದಾರೆ ಎನ್ನಲಾದ ಮಾತುಗಳನ್ನು ಅವರು ಆಡಿಲ್ಲ’ ಎಂದು ವಾದಿಸಿದರು. ಇದನ್ನು ಆಲಿಸಿದ ನ್ಯಾಯಮೂರ್ತಿಗಳಾದ ಅರವಿಂದ್ ಕುಮಾರ್ ಮತ್ತು ಪಿ.ಬಿ. ವರಾಳೆ ಅವರ ಪೀಠವು, ವಾಂಗ್ಚುಕ್ ಅವರು ನೀಡಿದ ಹೇಳಿಕೆಗಳ ನಿಜವಾದ ಪ್ರತಿಗಳನ್ನು ಸಲ್ಲಿಸುವಂತೆ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜ್ ಅವರಿಗೆ ಸೂಚಿಸಿತು.

‘ವಾಂಗ್ಚುಕ್ ಏನೇ ಹೇಳಿದರೂ, ಅದರ ನಿಜವಾದ ಅನುವಾದ ಇರಬೇಕು. ನಿಮ್ಮ ಅನುವಾದ 7ರಿಂದ 8 ನಿಮಿಷಗಳಷ್ಟಿದೆ. ಆದರೆ, ಭಾಷಣ 3 ನಿಮಿಷಗಳಷ್ಟಿದೆ. ನಾವು ಕೃತಕ ಬುದ್ಧಿಮತ್ತೆಯ ಯುಗದಲ್ಲಿದ್ದು, ಅನುವಾದದಲ್ಲಿ ನಿಖರತೆ ಇಲ್ಲ’ ಎಂದಿತು.

ದತ್ತಾಂಶ ರಕ್ಷಣೆ: ಕೇಂದ್ರಕ್ಕೆ ‘ಸುಪ್ರೀಂ’ ನೋಟಿಸ್

ನವದೆಹಲಿ (ಪಿಟಿಐ): ಡಿಜಿಟಲ್ ವೈಯಕ್ತಿಕ ದತ್ತಾಂಶ ರಕ್ಷಣೆ (ಡಿಪಿಡಿಪಿ) ಕಾಯ್ದೆ–2023 ಹಲವಾರು ನಿಬಂಧನೆಗಳ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಸೋಮವಾರ ಒಪ್ಪಿಗೆ ನೀಡಿದೆ.

‘ಸಂಸತ್ತಿನಲ್ಲಿ ಜಾರಿಯಾದ ನಿಬಂಧನೆಗಳ ಕುರಿತು ನಾವು ಆಲಿಸದೇ, ಮಧ್ಯಂತರ ತಡೆ ನೀಡಲು ಸಾಧ್ಯವಿಲ್ಲ’ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಡಿಪಿಡಿಪಿ ಕಾಯ್ದೆ ಹಾಗೂ ಮಾಹಿತಿ ಹಕ್ಕು ಕಾಯ್ದೆಯ ನಿಬಂಧನೆಗಳ ಡಿಜಿಟಲ್ ದತ್ತಾಂಶ ಕಾಯ್ದೆಗೆ ಸಂಬಂಧಿಸಿ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ಕುರಿತು ಉತ್ತರಿಸಲು ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸುವಂತೆ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾ.ಜಾಯ್‌ಮಾಲ್ಯ ಬಾಗ್ಚಿ, ನ್ಯಾ. ವಿಪುಲ್ ಎಂ ಪಂಚೋಲಿ ಅವರಿದ್ದ ಪೀಠವು ತಿಳಿಸಿದೆ.

10ನೇ ತರಗತಿ ಮೊದಲ ಪರೀಕ್ಷೆ ಕಡ್ಡಾಯ

ಒಂದನೇ ಪುಟದಿಂದ...

‘ಮೂರು ಅಥವಾ ಅದಕ್ಕಿಂತ ಹೆಚ್ಚಿನ ವಿಷಯಗಳನ್ನು ಮೊದಲನೇ ಪರೀಕ್ಷೆಯಲ್ಲಿ ಬರೆಯದಿದ್ದರೆ, ಅಂಥ ವಿದ್ಯಾರ್ಥಿಯು ಎರಡನೇ ಪರೀಕ್ಷೆ ಬರೆಯುವುದಕ್ಕೆ ಅವಕಾಶವಿಲ್ಲ. ಇಂಥವರನ್ನು ‘ಪುನರಾವರ್ತಿತ ಅಭ್ಯರ್ಥಿ’ ಎಂದು ವಿಭಾಗೀಕರಿಸಲಾಗುವುದು. ಮತ್ತು ಈ ವಿದ್ಯಾರ್ಥಿಯು ಮುಂದಿನ ವರ್ಷದ ಫೆಬ್ರುವರಿಯಲ್ಲಿ ನಡೆಯುವ ಮೊದಲೇ ಪರೀಕ್ಷೆಯಲ್ಲಿ, ಪರೀಕ್ಷೆ ಬರೆಯಬಹುದಾಗಿದೆ’ ಎಂದು ಮಂಡಳಿ ವಿವರಿಸಿದೆ.

ಮೊದಲನೆಯದು ಅಂತಿಮ ಪರೀಕ್ಷೆಯಾಗಿರಲಿದ್ದು, ಎರಡನೆಯದು ಅಂಕಗಳನ್ನು ಉತ್ತಮಪಡಿಸಿಕೊಳ್ಳುವ ಅವಕಾಶ ಇರುವ ಮತ್ತೊಂದು ಪರೀಕ್ಷೆಯಾಗಿರಲಿದೆ. ಮಂಗಳವಾರದಿಂದ 10ನೇ ಮತ್ತು 12ನೇ ತರಗತಿಗೆ ಮೊದಲನೇ ಪರೀಕ್ಷೆ ಆರಂಭವಾಗಲಿದೆ. ಶಿಕ್ಷಣ ನೀತಿ 2020ರಲ್ಲಿ ಪರೀಕ್ಷಾ ಪದ್ಧತಿಯನ್ನು ಬದಲಾವಣೆ ಮಾಡಲಾಗಿತ್ತು.

ಶಿವಾಜಿ–ಟಿಪ್ಪು ಕುರಿತು ಕಾಂಗ್ರೆಸ್‌ನ ಹರ್ಷವರ್ಧನ್ ಸಪಕಲ್ ನೀಡಿದ್ದ ಹೇಳಿಕೆ

ಬಿಜೆಪಿ–‘ಕೈ’ ಮುಖಂಡರ ವಿರುದ್ಧ ಪ್ರಕರಣ

ಪುಣೆ (ಪಿಟಿಐ): ಛತ್ರಪತಿ ಶಿವಾಜಿ ಮಹಾರಾಜ ಮತ್ತು ಟಿಪ್ಪು ಸುಲ್ತಾನ್ ಅವರನ್ನು ‘ಸಮಾನಾಂತರ’ವಾಗಿ ನೋಡಿ, ಕಾಂಗ್ರೆಸ್‌ನ ಮಹಾರಾಷ್ಟ್ರ ಘಟಕದ ಅಧ್ಯಕ್ಷ ಹರ್ಷವರ್ಧನ್ ಸಪಕಲ್ ಅವರು ನೀಡಿದ್ದ ಹೇಳಿಕೆ ಕುರಿತು ನಡೆದಿದ್ದ ಹಿಂಸಾಚಾರಕ್ಕೆ ಸಂಬಂಧಿಸಿ ಬಿಜೆಪಿ ಹಾಗೂ ಕಾಂಗ್ರೆಸ್‌ನ ನಗರ ಅಧ್ಯಕ್ಷರು ಮತ್ತು ಹಲವು ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲಾಗಿವೆ.

ಘಟನೆ ಕುರಿತು ಎರಡೂ ಪಕ್ಷಗಳೂ ದೂರು ನೀಡಿವೆ. ಇದರ ಅನ್ವಯ ವಿವಿಧ ಸೆಕ್ಷನ್‌ಗಳಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ಸೋಮವಾರ ಮಾಹಿತಿ ನೀಡಿದರು.

‘ಬಿಜೆಪಿ ನಗರ ಅಧ್ಯಕ್ಷ ಧೀರಜ್ ಘಾಟೆ, ಪಕ್ಷದ ಯುವ ಮೋರ್ಚಾದ ಅಧ್ಯಕ್ಷ ದುಷ್ಯಂತ್ ಮೊಹೋಲ್ ಮತ್ತು 50ರಿಂದ 60 ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಕಾಂಗ್ರೆಸ್ ನಗರ ಅಧ್ಯಕ್ಷ ಅರವಿಂದ್ ಶಿಂದೆ, ಇಬ್ಬರು ಇತರ ನಾಯಕರು ಮತ್ತು ಗುರುತು ಪತ್ತೆಯಾಗದ ಕೆಲವು ಕಾರ್ಯಕರ್ತರ ವಿರುದ್ಧವೂ ಪ್ರಕರಣ ದಾಖಲಾಗಿದೆ’ ಎಂದರು.

ಹರ್ಷವರ್ಧನ್ ಅವರ ಹೇಳಿಕೆಯನ್ನು ವಿರೋಧಿಸಿ ಕಾಂಗ್ರೆಸ್ ಕಚೇರಿ ಎದುರು ಬಿಜೆಪಿ ಕಾರ್ಯಕರ್ತರು ಭಾನುವಾರ ಪ್ರತಿಭಟನೆ ನಡೆಸುತ್ತಿದ್ದ ವೇಳೆ ಎರಡೂ ಪಕ್ಷದ ಕಾರ್ಯಕರ್ತರ ಮಧ್ಯೆ ಕಲ್ಲು ತೂರಾಟ ನಡೆದಿತ್ತು. ಎರಡೂ ಪಕ್ಷಗಳ ಕಾರ್ಯಕರ್ತರು, ಒಬ್ಬರು ಪೊಲೀಸರು, ಇಬ್ಬರು ಪತ್ರಕರ್ತರು ಸೇರಿ 9 ಮಂದಿ ಗಾಯಗೊಂಡಿದ್ದರು.

ಕಾಂಗ್ರೆಸ್ ದೂರಿನಲ್ಲೇನಿದೆ?

ಘಾಟೆ, ಮೊಹೋಲ್ ಮತ್ತು 50ರಿಂದ 60 ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ಭವನದ ಹತ್ತಿರ ಬಂದು ಪ್ರಚೋದನಾಕಾರಿ ಘೋಷಣೆಗಳನ್ನು ಕೂಗಿದರು. ಕಲ್ಲುತೂರಾಟ ನಡೆಸಿದರು. ಇದರಿಂದ ಪಕ್ಷದ ಮೂವರು ಕಾರ್ಯಕರ್ತರಿಗೆ ಗಾಯಗಳಾಗಿವೆ

ಬಿಜೆಪಿ ದೂರಿನಲ್ಲೇನಿದೆ?

ಶಿಂದೆ ಮತ್ತು ಇತರೆ ಕಾಂಗ್ರೆಸ್ ಕಾರ್ಯಕರ್ತರು ಕಲ್ಲು ತೂರಾಟ ನಡೆಸಿದರು. ಇದರಿಂದ ಬಿಜೆಪಿ ಕಾರ್ಯಕರ್ತರು ಹಾಗೂ ಇಬ್ಬರು ಮಹಿಳಾ ಪೊಲೀಸ್ ಸಿಬ್ಬಂದಿಗೆ ಗಾಯಗಳಾಗಿವೆ

ಹೃದಯದ ಮಿಡಿತ ನೀಡದಿರಲಿ ಹೊಡೆತ

ಹೃದಯದ ಪ್ರತಿಯೊಂದು ಬಡಿತವೂ ಸುಮಾರು 70 ಎಂಎಲ್‌ಗಳಷ್ಟು ರಕ್ತವನ್ನು ರಕ್ತನಾಳಗಳಿಗೆ ಚಿಮ್ಮಿಸುತ್ತದೆ. ಈ ರಕ್ತವು ರಕ್ತನಾಳಗಳಲ್ಲಿ ಒಂದು ರೀತಿಯ ಅಲೆಯಂತೆ ಸರಿಯುತ್ತ ದೇಹದ ತುತ್ತತುದಿಯವರೆಗೂ ಸಾಗುತ್ತದೆ.

• ಡಾ ಶ್ರೀನಿವಾಸ ಹರಪನಹಳ್ಳಿ

ನಮಗೆಲ್ಲ ಗೊತ್ತಿರುವಂತೆ ಹೃದಯ ನಮ್ಮ ದೇಹದ ಬಹುಮುಖ್ಯ ಅಂಗ. ಹೃದಯದ 'ಲಬ್ ಡಬ್' ಮಿಡಿತವೇ ನಮ್ಮನ್ನು ಜೀವಂತವಾಗಿಡುವುದು ಮತ್ತು ದೇಹದ ಇನ್ನಿತರ ಅಂಗಗಳಿಗೆಲ್ಲ ಚೈತನ್ಯವನ್ನು ನೀಡುವುದು. ಹಾಗಾಗಿ ಹೃದಯಕ್ಕಿರುವ ಮಹತ್ವ ಮತ್ತು ಮನ್ನಣೆ ಉಳಿದ ಅಂಗಗಳಿಗಿಂತಲೂ ಕೊಂಚ ಹೆಚ್ಚೇ ಎಂದರೆ ಅತಿಶಯೋಕ್ತಿಯೇನಲ್ಲ.

ಈ ಹೃದಯ ನಿಮಿಷಕ್ಕೆ ಸರಾಸರಿ 70-80 ಬಾರಿ ಬಡಿಯುತ್ತದೆ. ನಾವು ನಮ್ಮ ಎದೆಯ ಎಡಭಾಗಕ್ಕೆ ಹಸ್ತವನ್ನಿರಿಸಿ ಅಥವಾ ಮಣಿಕಟ್ಟಿನ ಹತ್ತಿರದ ನಾಡಿ (ಪಲ್ಸ್) ಹಿಡಿದು ಹೃದಯದ ಬಡಿತವನ್ನು ಸುಲಭವಾಗಿ ಲೆಕ್ಕಹಾಕಬಹುದು. ಹೃದಯದ ಪ್ರತಿಯೊಂದು ಬಡಿತವೂ ಸುಮಾರು 70 ಎಂಎಲ್‌ಗಳಷ್ಟು ರಕ್ತವನ್ನು ರಕ್ತನಾಳಗಳಿಗೆ ಚಿಮ್ಮಿಸುತ್ತದೆ. ಈ ರಕ್ತವು ರಕ್ತನಾಳಗಳಲ್ಲಿ ಒಂದು ರೀತಿಯ ಅಲೆಯಂತೆ ಸರಿಯುತ್ತ ದೇಹದ ತುತ್ತತುದಿಯವರೆಗೂ ಸಾಗುತ್ತದೆ. ಈ ರೀತಿ ರಕ್ತಪರಿಚಲನೆ ಸರಾಗವಾಗಿ ಆಗದಿದ್ದರೆ ಅಂಗಗಳಿಗೆ ಸಾಕಷ್ಟು ಪೋಷಕಾಂಶಗಳು ತಲುಪುವುದೇ ಇಲ್ಲ.

ಹೃದಯಬಡಿತ ಒಂದು ಅನೈಚ್ಛಿಕ ಕ್ರಿಯೆ. ಅಂದರೆ ನಾವು ಹುಟ್ಟಿದ ಕ್ಷಣದಿಂದ ಸಾಯುವವರೆಗೂ ಅದು ತಂತಾನೇ ಲಯಬದ್ಧವಾಗಿ ಬಡಿದುಕೊಳ್ಳುತ್ತ ಒಂದು ಸಕ್ಷಮ ಪಂಪ್ ರೀತಿ ಕೆಲಸ ಮಾಡುತ್ತದೆ. ಅದಕ್ಕೆಂದೇ ಹೃದಯದಲ್ಲೊಂದು ಪುಟ್ಟ ಎಲೆಕ್ಟ್ರಿಕ್ ವ್ಯವಸ್ಥೆಯಿದೆ. ಹೃದಯದಲ್ಲಿರುವ 'ಎಸ್‌ಎ ನೋಡ್' ಎಂಬ ಪುಟ್ಟ ಜನರೇಟರ್‌ನಿಂದ ಹೊರಡುವ ವಿದ್ಯುತ್ ಸಂಕೇತಗಳು ಹೃದಯವನ್ನು ವ್ಯವಸ್ಥಿತವಾಗಿ ಹಿಗ್ಗಿಸುವುದು-ಕುಗ್ಗಿಸುವುದನ್ನು ಮಾಡುತ್ತವೆ. ಈ ವಿದ್ಯುತ್ ಸಂಕೇತಗಳನ್ನು ಕಾಗದದ ಮೇಲೆ ಛಾಪಿಸಿ ಹೃದಯದ ಸ್ಥಿತಿಯನ್ನು ತಿಳಿದುಕೊಳ್ಳಬಹುದು. ಈ ಕಾಗದವನ್ನೇ 'ಇಸಿಜಿ' ಎಂದು ಕರೆಯುತ್ತಾರೆ!

ಹೃದಯಬಡಿತ ನಿಯಮಿತವಾಗಿರದಿದ್ದರೆ ಹಲವಾರು ತೊಂದರೆಗಳು ಉದ್ಭವಿಸುತ್ತವೆ. ಎದೆ ಒಮ್ಮೆಲೆ ಢವಢವ ಬಡಿದುಕೊಂಡಿತು, ಹೃದಯದ ಬಡಿತವೇ ನಿಂತಂತೆ ಅನ್ನಿಸಿತು, ಕಣ್ಣು ಕತ್ತಲೆ ಬಂತು, ತಲೆ ತಿರುಗಿದಂತಾಯಿತು ಎಂಬ ಉದ್ಗಾರಗಳನ್ನು ನಾವು ಅನೇಕ ಬಾರಿ ಕೇಳುತ್ತಿರುತ್ತೇವೆ. ಇದು ಕೇವಲ ಉತ್ಪ್ರೇಕ್ಷೆಯಲ್ಲ. ಹೃದಯಬಡಿತದ ತಾಳ ತಪ್ಪಿದಾಗ ಆಗುವ ಅನುಭವಗಳೂ ಕೂಡ. ಹೇಗೆ ತಪ್ಪಿದ ತಾಳ ರಾಗದ ಸುಶ್ರಾವ್ಯಕ್ಕೆ ಭಂಗ ತರಬಹುದೋ ಅದೇ ರೀತಿ ಹೃದಯದ ತಾಳವು ತಪ್ಪಿದಾಗ ನಮ್ಮ ಆರೋಗ್ಯದ ಮೇಲೂ ಗಂಭೀರ ಪರಿಣಾಮ ಬೀರುತ್ತದೆ. ಹಾಗಾದರೆ ಈ ಅನಿಯಮಿತ ಹೃದಯಬಡಿತದ ಬಗ್ಗೆ ಕೊಂಚ ತಿಳಿದುಕೊಳ್ಳೋಣ.

ಅನಿಯಮಿತ ಹೃದಯಬಡಿತವನ್ನು (ವೈದ್ಯಕೀಯ ಭಾಷೆಯಲ್ಲಿ 'ಅರಿಧ್ಮಿಯಾ' ಎನ್ನುತ್ತಾರೆ) ಸಾಮಾನ್ಯವಾಗಿ ಇದನ್ನು 'ಬ್ರ್ಯಾಡಿ-ಅರಿಧ್ಮಿಯಾ' (ಅತಿಕಡಿಮೆ ಹೃದಯಬಡಿತ) ಮತ್ತು 'ಟ್ಯಾಕಿ-ಅರಿಧ್ಮಿಯಾ' (ಅತಿಜಾಸ್ತಿ ಹೃದಯಬಡಿತ) ಎಂದು ವಿಂಗಡಿಸಬಹುದು. ಅಲ್ಲದೇ ಹೃದಯಬಡಿತದ ವೇಗ ಸರಿ ಇದ್ದು ಅನವಶ್ಯಕ ಬಡಿತಗಳು, ಅವಧಿಪೂರ್ವ ಬಡಿತಗಳು ಮತ್ತು ತಪ್ಪಿದ ಬಡಿತಗಳು ಎಂದು ಕೂಡ ವರ್ಗೀಕರಣ ಮಾಡಬಹುದು. 'ಫಿಬ್ರಿಲೇಷನ್' ಎಂಬ ಅಪಾಯಕಾರಿ ವಿಧವೂ ಉಂಟು. ಇಸಿಜಿಯಲ್ಲೇ ಈ ಎಲ್ಲ ತೊಂದರೆಗಳನ್ನು ಕಂಡುಹಿಡಿಯಬಹುದಾದರೂ ಕೆಲವೊಮ್ಮೆ ಹೃದಯದ ಸ್ಕ್ಯಾನ್, ಇನ್ನಿತರೆ ಪರೀಕ್ಷೆಗಳು ಬೇಕಾಗುತ್ತವೆ.

ಈ ಅನಿಯಮಿತ ಹೃದಯಬಡಿತಗಳು ಶೇ 1.5–5ರಷ್ಟು ಜನರಲ್ಲಿ ಮಾತ್ರ ಕಂಡುಬರುತ್ತವೆ. ಇವು ಸಾಮಾನ್ಯವಾಗಿ ಸೌಮ್ಯಸ್ವರೂಪದ್ದಾಗಿದ್ದರೂ ಕೆಲವೊಮ್ಮೆ ಮಾರಣಾಂತಿಕವೂ ಆಗಬಹುದು. ಅನಿಯಮಿತ ಹೃದಯಬಡಿತದ ಮುಖ್ಯ ಸಮಸ್ಯೆಯೆಂದರೆ ಹೃದಯ ಲಯಬದ್ಧವಾಗಿ ಬಡಿದುಕೊಳ್ಳುವುದಿಲ್ಲ. ಹಾಗಾಗಿ ದೇಹದ ಅಂಗಾಂಗಗಳಿಗೆ ನಿಯಮಿತವಾಗಿ ರಕ್ತಚಲನೆಯಾಗದೇ ಆಮ್ಲಜನಕ ಮತ್ತಿತರ ಪೌಷ್ಟಿಕಾಂಶಗಳು ಸಿಗದೇ ಹೋಗುತ್ತವೆ. ಆಗ ವ್ಯಕ್ತಿ ತನ್ನ ದಿನನಿತ್ಯದ ಕೆಲಸಕಾರ್ಯಗಳನ್ನು ಮಾಡಿಕೊಳ್ಳಲು ಹೆಣಗಾಡಬೇಕಾಗುತ್ತದೆ. ಎದೆ ತೀವ್ರವಾಗಿ ಬಡಿದುಕೊಂಡಂತೆ, ಉಸಿರಾಡಲು ಕಷ್ಟವಾದಂತೆ ಆಗಬಹುದು. ಕೆಲವೊಮ್ಮೆ ಮೂರ್ಛೆ ಹೋಗಬಹುದು. ಹೃದಯಾಘಾತ ಕೂಡ ಆಗಬಹುದು. ರಕ್ತದ ಚಲನೆ ತೀರಾ ನಿಧಾನವಾದಾಗ ರಕ್ತ ಹೆಪ್ಪುಗಟ್ಟಬಹುದು. ಹೆಪ್ಪುಗಟ್ಟಿದ ರಕ್ತದ ಕಣಗಳು ತೇಲಿಹೋಗಿ ಚಿಕ್ಕಚಿಕ್ಕ ರಕ್ತನಾಳಗಳನ್ನೇ ಮುಚ್ಚಿಬಿಡಬಹುದು.

ಅನಿಯಮಿತ ಹೃದಯಬಡಿತಕ್ಕೆ ಹಲವಾರು ಕಾರಣಗಳಿವೆ. ಯಾವುದೇ ಹೃದಯಸಂಬಂಧಿ ರೋಗವಿದ್ದರೆ, ಹೆಚ್ಚಿನ ಬಿ.ಪಿ. ಇದ್ದರೆ ಹೃದಯದ ಮೇಲೆ ಒತ್ತಡ ಹೆಚ್ಚಿ ವಿದ್ಯುತ್ ಸಂಕೇತಗಳು ಏರುಪೇರಾಗುವ ಸಾಧ್ಯತೆಗಳಿರುತ್ತವೆ. ಹಳೆಯ ಹೃದಯಾಘಾತದಿಂದಾದ ಗಾಯ ಕೆಲವೊಮ್ಮೆ ಜನರೇಟರ್ ತರಹ ಅನವಶ್ಯಕ ವಿದ್ಯುತ್ ಸಂಕೇತಗಳನ್ನು ನೀಡಲಾರಂಭಿಸುತ್ತದೆ. ಆಹಾರದಲ್ಲಿನ ಖನಿಜಗಳ ಅಸಮತೋಲನ ಕೂಡ ವಿದ್ಯುತ್ ಸಂಕೇತಗಳ ಮೇಲೆ ದುಷ್ಪರಿಣಾಮವನ್ನುಂಟು ಮಾಡುತ್ತದೆ. ಧೂಮಪಾನ, ಮದ್ಯಪಾನ, ಕೆಲವು ಔಷಧಗಳು ಕೂಡ ಅನಿಯಮಿತ ಹೃದಯಬಡಿತಕ್ಕೆ ಕಾರಣವಾಗಬಲ್ಲವು. ಯಾವುದೇ ರೀತಿಯ ಮಾನಸಿಕ ಅಥವಾ ದೈಹಿಕ ಒತ್ತಡ ಕೂಡ ಹೃದಯದ ಬಡಿತವನ್ನು ಏರುಪೇರು ಮಾಡಬಲ್ಲದು.

ಅನಿಯಮಿತ ಹೃದಯಬಡಿತವನ್ನು ತಡೆಗಟ್ಟಲು ಅನೇಕ ಮಾರ್ಗಗಳಿವೆ. ಹೃದಯಸಂಬಂಧಿ ರೋಗವಿದ್ದರೆ ಅದಕ್ಕೆ ಸೂಕ್ತ ಚಿಕಿತ್ಸೆಯನ್ನು ಕೊಡಿಸಿ ಹೃದಯ ಆದಷ್ಟು ಸುಸ್ಥಿತಿಯಲ್ಲಿರುವಂತೆ ಕಾಪಾಡಿಕೊಳ್ಳಬೇಕು. ಉಪ್ಪು ಮತ್ತು ಕೊಬ್ಬಿನ ಅಂಶ ಕಡಿಮೆ ಇರುವ, ವಿಟಮಿನ್, ಖನಿಜಯುಕ್ತ ಸಮತೋಲಿತ ಆಹಾರಸೇವನೆ ನಮ್ಮ ಗುರಿಯಾಗಬೇಕು. ದುಶ್ಚಟಗಳನ್ನು ವರ್ಜಿಸುವುದು, ನಿಯಮಿತ ವ್ಯಾಯಾಮ, ಯೋಗ ಅಥವಾ ಧ್ಯಾನದಿಂದ ಮಾನಸಿಕ ಮತ್ತು ಶಾರೀರಿಕ ಒತ್ತಡವನ್ನು ಕಡಿಮೆ ಮಾಡಿಕೊಳ್ಳುವುದು ಹೃದಯದ ದೃಷ್ಟಿಯಿಂದ ಬಹುಮುಖ್ಯ.

ಹೃದಯಬಡಿತವನ್ನು ತಹಬಂದಿಗೆ ತರಲು ಹಲವಾರು ಔಷಧಗಳು ಇವೆ. ಅಲ್ಲದೇ ಪೇಸ್‌ಮೇಕರ್ ಅಳವಡಿಕೆ, ಹೃದಯದಲ್ಲೇ ಪುಟ್ಟ ಜನರೇಟರ್ (ICD) ಅಳವಡಿಕೆಯಂತಹ ಅತ್ಯಾಧುನಿಕ ಚಿಕಿತ್ಸೆಯಿಂದಲೂ ಹೃದಯಬಡಿತವನ್ನು ನಿಯಂತ್ರಿಸಬಹುದು. ತಜ್ಞವೈದ್ಯರು ಅನಿಯಮಿತ ಹೃದಯಬಡಿತವನ್ನು ಪತ್ತೆ ಮಾಡಿ ಸೂಕ್ತ ಚಿಕಿತ್ಸೆಯನ್ನು ನೀಡಬಲ್ಲರು.

ರೇಬಿಸ್ ಮಾರಣಾಂತಿಕ ರೋಗ

• ಡಾ.ವಿನಯ ಶ್ರೀನಿವಾಸ್

ಮನೆಯಲ್ಲಿ ಸಾಕಿದ ಬೆಕ್ಕು ಕಚ್ಚಿ ಮಹಿಳೆಯೋರ್ವರು ರೇಬಿಸ್ ರೋಗಕ್ಕೆ ತುತ್ತಾಗಿ ಮರಣ ಹೊಂದಿದ ಘಟನೆ ಕೆಲವು ತಿಂಗಳುಗಳ ಹಿಂದೆ ಪತ್ರಿಕೆಯಲ್ಲಿ ವರದಿಯಾಗಿತ್ತು. ಹೌದು, ರೇಬಿಸ್ ಒಂದು ಮಾರಣಾಂತಿಕ ರೋಗ. ಅಂಕಿ–ಅಂಶಗಳ ಪ್ರಕಾರ ಭಾರತದಲ್ಲಿ ಪ್ರತಿ ವರ್ಷ ಇಪ್ಪತ್ತು ಸಾವಿರಕ್ಕೂ ಹೆಚ್ಚು ಜನ ಈ ರೋಗದಿಂದ ಮರಣ ಹೊಂದುತ್ತಿದ್ದಾರೆ.

ರೇಬಿಸ್ ಒಂದು ಪ್ರಾಣಿಜನ್ಯ ರೋಗ. ಮುಖ್ಯವಾಗಿ ಮಾಂಸಾಹಾರಿ ಸಸ್ತನಿಗಳಾದ ನಾಯಿ, ಬೆಕ್ಕು, ನರಿ, ಮುಂಗುಸಿ, ತೋಳ ಮೊದಲಾದ ಪ್ರಾಣಿಗಳಲ್ಲಿ ಇದು ಕಂಡುಬರುತ್ತದೆ. ಸೋಂಕಿತ ಪ್ರಾಣಿಗಳು ಕಚ್ಚಿದಾಗ ವ್ಯಕ್ತಿಗೆ ರೋಗ ಬರುವ ಸಂಭವವಿರುತ್ತದೆ. ಅಮೆರಿಕ ಮತ್ತು ಆಸ್ಟ್ರೇಲಿಯಾದಂತಹ ದೇಶಗಳಲ್ಲಿ ಸೋಂಕಿತ ಬಾವಲಿಗಳು ರೇಬಿಸ್‌ಗೆ ಕಾರಣವಾಗಿದ್ದರೆ, ಭಾರತದಲ್ಲಿ ಶೇ 99ಕ್ಕೂ ಹೆಚ್ಚಿನ ಸಂದರ್ಭಗಳಲ್ಲಿ ನಾಯಿಕಡಿತವೇ ಕಾರಣವಾಗಿದೆ.

ರೇಬಿಸ್ ಒಂದು ವೈರಾಣುವಿನಿಂದ ಉಂಟಾಗುವ ರೋಗ. ಈ ರೋಗದಿಂದ ಬಳಲುವ ಪ್ರಾಣಿಗಳ ಲಾಲಾರಸ (ಜೊಲ್ಲು), ಕಣ್ಣೀರು, ಮೂತ್ರ, ವಾಂತಿ ಮತ್ತಿತರ ದೇಹದ ಸ್ರವಿಕೆಯಲ್ಲಿ ವೈರಾಣುಗಳು ಇರುತ್ತವೆ. ರೋಗದಿಂದ ಬಳಲುವ ಪ್ರಾಣಿ ಮನುಷ್ಯನನ್ನು ಕಚ್ಚಿದಾಗ ಅಥವಾ ಗೀರಿದಾಗ ಬಾಯಿಯ ಲಾಲಾರಸದಲ್ಲಿದ್ದ ವೈರಾಣುಗಳು ಅಲ್ಲಿ ಪ್ರವೇಶ ಪಡೆಯುತ್ತವೆ. ಅಲ್ಲಿನ ಅಂಗಾಂಶಗಳಲ್ಲಿ ದ್ವಿಗುಣಗೊಂಡ ವೈರಾಣುಗಳು ನರಗಳ ಮೂಲಕ ಮಿದುಳನ್ನು ತಲುಪುತ್ತವೆ. ಮಿದುಳು ಮತ್ತು ನರಮಂಡಲದ ಮೇಲೆ ಪರಿಣಾಮ ಬೀರುವ ಈ ವೈರಾಣುಗಳು ಪುನಃ ನರಗಳ ಮೂಲಕವೇ ದೇಹದ ಇತರ ಸ್ನಾಯುಗಳು, ಹೃದಯ, ಚರ್ಮ, ಅಡ್ರೆನಲ್ ಗ್ರಂಥಿ ಮತ್ತು ಲಾಲಾರಸ ಗ್ರಂಥಿಗಳನ್ನು ತಲುಪುತ್ತವೆ.

ರೇಬಿಸ್ ರೋಗಕ್ಕೆ ತುತ್ತಾದ ವ್ಯಕ್ತಿಯು ತೀವ್ರತರವಾದ ಸ್ನಾಯುಸೆಳೆತದಿಂದ ಬಳಲುತ್ತಾನೆ. 'ಹೈಡ್ರೋಫೋಬಿಯಾ' ಎಂದೇ ಗುರುತಿಸಲಾಗುವ ಈ ಕಾಯಿಲೆಯಲ್ಲಿ ನೀರಿನ ಶಬ್ದ ಅಥವಾ ದೃಶ್ಯವೂ ವ್ಯಕ್ತಿಯ ಗಂಟಲು ಹಾಗೂ ಕುತ್ತಿಗೆಯ ಸ್ನಾಯುಗಳನ್ನು ಬಿಗಿಗೊಳಿಸುತ್ತವೆ. ಹಾಗಾಗಿಯೇ ಆ ವ್ಯಕ್ತಿ ನೀರನ್ನು ಕಂಡರೆ ಭಯ ಬೀಳುತ್ತಾನೆ. ಬೆಳಕು ಮತ್ತು ಗಾಳಿಯೂ ಈ ಸ್ನಾಯುಸೆಳೆತವನ್ನು ಪ್ರಚೋದಿಸಬಲ್ಲದು. ಸಂಪೂರ್ಣ ಸ್ನಾಯುಗಳ ಬಲಹೀನತೆ ಮತ್ತು ಪ್ರಜ್ಞಾಹೀನ ಸ್ಥಿತಿಯನ್ನು ತಲುಪಿ, ಮುಂದಿನ ಮೂರರಿಂದ ಐದು ದಿನಗಳಲ್ಲಿ ಆ ವ್ಯಕ್ತಿ ಮರಣ ಹೊಂದುತ್ತಾನೆ. ಹೌದು, ರೇಬಿಸ್‌ಗೆ ಸೂಕ್ತ ಚಿಕಿತ್ಸೆ ಇಲ್ಲ. ಹಾಗಾಗಿಯೇ ನಾವು ಕಾಯಿಲೆ ಬಾರದಂತೆ ಮುಂಜಾಗ್ರತಾ ಕ್ರಮಗಳ ಬಗ್ಗೆ ತಿಳಿದಿರಬೇಕು.

ನಾಯಿ ಅಥವಾ ಯಾವುದೇ ಪ್ರಾಣಿ ಕಚ್ಚಿದಾಗ ಏನು ಮಾಡಬೇಕು?

ಆದಷ್ಟು ಬೇಗ ಗಾಯವನ್ನು ಚೆನ್ನಾಗಿ ಸ್ವಚ್ಛಗೊಳಿಸಬೇಕು. ಸಾಬೂನನ್ನು ಬಳಸಿ, ರಭಸದಿಂದ ಬೀಳುವ ನಲ್ಲಿಯ ನೀರಿನ ಕೆಳಗೆ ಗಾಯವನ್ನಿರಿಸಿ ಸುಮಾರು ಹದಿನೈದು ನಿಮಿಷಗಳವರೆಗೆ ಸ್ವಚ್ಛಗೊಳಿಸುವುದು ಮುಖ್ಯ. ಈ ರೀತಿ ಮಾಡುವುದರಿಂದ ಅಲ್ಲಿರುವ ವೈರಾಣುಗಳು ನರಗಳ ಮೂಲಕ ದೇಹವನ್ನು ಪ್ರವೇಶಿಸುವ ಮೊದಲೇ ನಶಿಸಿ ಹೋಗುತ್ತವೆ. ನಂತರ ಸಮಯ ವ್ಯಯ ಮಾಡದೇ ಹತ್ತಿರದ ಆಸ್ಪತ್ರೆಗೆ ವ್ಯಕ್ತಿಯನ್ನು ಕರೆದೊಯ್ಯಬೇಕು. ಅಲ್ಲಿ ವೈದ್ಯರು ವೈರಾಣುಗಳಿಗೆಂದೇ ಇರುವ ಸೂಕ್ತ ನಂಜುನಿವಾರಕ ದ್ರಾವಣಗಳನ್ನು ಬಳಸಿ ಗಾಯವನ್ನು ಮತ್ತೊಮ್ಮೆ ಸ್ವಚ್ಛಗೊಳಿಸುತ್ತಾರೆ. ಈ ಗಾಯಗಳನ್ನು ಹೊಲಿಗೆ ಹಾಕಿ ಮುಚ್ಚದಿರುವುದು ಹೆಚ್ಚು ಸೂಕ್ತ. ದೊಡ್ಡ ಗಾಯಗಳಿದ್ದು, ತೀವ್ರ ರಕ್ತಸ್ರಾವವಿದ್ದಾಗ ಮಾತ್ರವೇ ರೇಬಿಸ್ ಇಮ್ಯುನೋಗ್ಲೋಬ್ಯುಲಿನ್ ದ್ರಾವಣವನ್ನು ಗಾಯದ ಮೇಲೆ ಸಿಂಪಡಿಸಿ ಆದಷ್ಟು ಕಡಿಮೆ ಹೊಲಿಗೆಗಳನ್ನು ಬಳಸಿ ಗಾಯವನ್ನು ಮುಚ್ಚುತ್ತಾರೆ. ನಂತರ ಗಾಯದ ತೀವ್ರತೆ, ಗಾತ್ರ, ಅದು ದೇಹದ ಯಾವ ಭಾಗದಲ್ಲಿದೆ (ಕುತ್ತಿಗೆ, ಮುಖ ಹಾಗೂ ಕೈಗಳ ಮೇಲೆ ಆದ ಗಾಯವು ಹೆಚ್ಚು ಅಪಾಯ) ಎಂಬ ಅಂಶಗಳನ್ನು ಗಮನಿಸಿ ವೈದ್ಯರು ಲಸಿಕೆ ಮತ್ತು ರೇಬಿಸ್ ಇಮ್ಯುನೋಗ್ಲೋಬ್ಯುಲಿನ್ ಚುಚ್ಚುಮದ್ದನ್ನು ಸೂಚಿಸುತ್ತಾರೆ. ಅವೆರಡನ್ನೂ ತಪ್ಪದೆ ಹಾಕಿಸಿಕೊಳ್ಳುವುದು ಬಹಳ ಮುಖ್ಯ. ಸಾಮಾನ್ಯವಾಗಿ ಐದು ಲಸಿಕೆಗಳನ್ನು (0,1, 3, 14 ಮತ್ತು 28ನೇ ದಿನ) ಹಾಕಲಾಗುತ್ತದೆ. ಹಿಂದಿನಂತೆ ಹೊಟ್ಟೆಯ ಭಾಗದಲ್ಲಿ ಚರ್ಮದ ಕೆಳಗೆ ಕೊಡುವ ಚುಚ್ಚುಮದ್ದುಗಳು ಈಗ ಬಳಕೆಯಲ್ಲಿಲ್ಲ. ಈಗ ಕೈಗಳಿಗೆ ಲಸಿಕೆಯನ್ನು ಕೊಡಲಾಗುತ್ತದೆ. ಲಸಿಕೆಯ ಬಗೆ ಮತ್ತು ಕಂಪೆನಿಯನ್ನು ಆಧರಿಸಿ ಲಸಿಕೆಯ ಪ್ರಮಾಣ ಮತ್ತು ಸಂಖ್ಯೆಯಲ್ಲಿ ತುಸು ವ್ಯತ್ಯಾಸವಿರಬಹುದು.

ಕಡ್ಡಾಯ ಲಸಿಕೆ ಯಾರಿಗೆಲ್ಲ ಬೇಕಾಗುತ್ತದೆ?

ನಾಯಿಗಳ ಆರೈಕೆಯಲ್ಲಿ ತೊಡಗಿ ಅವುಗಳೊಂದಿಗೆ ನಿರಂತರ ಸಂಪರ್ಕದಲ್ಲಿರುವವರು, ಪಶುವೈದ್ಯರ ಸಹಾಯಕರು, ರೇಬಿಸ್ ಲಸಿಕೆ ತಯಾರಿಕಾ ಘಟಕದಲ್ಲಿ ಕಾರ್ಯನಿರ್ವಹಿಸುವವರು, ಕಾಡುಗಳಲ್ಲಿ ಕಾರ್ಯನಿರ್ವಹಿಸುವ ಪ್ರಕೃತಿ ಶಾಸ್ತ್ರಜ್ಞರು ರೇಬಿಸ್ ಲಸಿಕೆಯನ್ನು ಮೊದಲೇ ಹಾಕಿಸಿಕೊಳ್ಳುವುದು ಉತ್ತಮ. ಆ ಕ್ಷೇತ್ರದಲ್ಲಿ ಉದ್ಯೋಗವನ್ನು ಮುಂದುವರಿಸುತ್ತಿದ್ದ ಸಂದರ್ಭದಲ್ಲಿ ಅವರು ಬೂಸ್ಟರ್ ಚುಚ್ಚುಮದ್ದನ್ನೂ ವೈದ್ಯರ ಸಲಹೆಯ ಮೇರೆಗೆ ಹಾಕಿಸಿಕೊಳ್ಳಬೇಕಾಗುತ್ತದೆ.

ಪ್ರಾಣಿಪ್ರಿಯರೇ, ಎಚ್ಚರದಿಂದಿರಿ!

ಮುದ್ದಿಗಾಗಿ ನಾಯಿ–ಬೆಕ್ಕುಗಳನ್ನು ಸಾಕಿರುವವರು ಕಡ್ಡಾಯವಾಗಿ ಅವುಗಳಿಗೆ ಪಶುವೈದ್ಯರಲ್ಲಿ ಕರೆದೊಯ್ದು ರೇಬಿಸ್ ಲಸಿಕೆಯನ್ನು ನಿಯಮಿತವಾಗಿ ಹಾಕಿಸಬೇಕು. ಅವು ಬೀದಿನಾಯಿಗಳ ಸಂಪರ್ಕಕ್ಕೆ ಬರದಂತೆ ಆದಷ್ಟು ಎಚ್ಚರವನ್ನು ವಹಿಸಬೇಕು.

ನೆನಪಿಡಿ

ಅಪರಿಚಿತ ನಾಯಿ, ಬೆಕ್ಕುಗಳಂಥ ಪ್ರಾಣಿ ಕಚ್ಚಿದಾಗ ಅಥವಾ ಗೀರಿದಾಗ ಲಸಿಕೆ ಕಡ್ಡಾಯ. ರೇಬಿಸ್ ಲಸಿಕೆಯನ್ನು ಹಾಕಿಸಿಕೊಂಡ ನಾಯಿ ಕಚ್ಚಿದಾಗಲೂ ನೀವು ಲಸಿಕೆಯನ್ನು ಹಾಕಿಸಿಕೊಳ್ಳುವುದು ಒಳ್ಳೆಯದು. ಒಂದು ವೇಳೆ ಆ ನಾಯಿಯು ಮುಂದಿನ ಹತ್ತು ದಿನಗಳವರೆಗೂ ಆರೋಗ್ಯವಾಗಿದ್ದಲ್ಲಿ ನೀವು ವೈದ್ಯರಲ್ಲಿ ಚರ್ಚಿಸಿ ಲಸಿಕೆಯನ್ನು ನಿಲ್ಲಿಸಬಹುದು. ರೇಬಿಸ್ ಒಂದು ಗಂಭೀರ ಮತ್ತು ಮಾರಣಾಂತಿಕ ರೋಗ. ನಾಯಿ ಕಡಿತಕ್ಕೊಳಗಾದಾಗ ಲಸಿಕೆ ಹಾಕಿಸಿಕೊಳ್ಳಲು ಯಾವುದೇ ಸಬೂಬನ್ನು ಹೇಳದಿರಿ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಗಣಿತ

ಎಸ್ಎಸ್ಎಲ್‌ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) $\tan\theta$ ಮತ್ತು $\cot\theta$ ಗಳ ಗುಣಲಬ್ಧವು

(A) 0 (B) 1
(C) $\sin\theta$ (D) −1

Ans: $\tan\theta \times \cot\theta$

$= \tan\theta \times \frac{1}{\tan\theta} = 1$

$\therefore$ (B) 1

2) ಆಟದಲ್ಲಿ ಗೆಲ್ಲುವ ಸಂಭವನೀಯತೆಯು $\frac{5}{6}$. ಆದರೆ ಸೋಲುವ ಸಂಭವನೀಯತೆ

(A) $-\frac{5}{6}$ (B) $\frac{5}{6}$
(C) $-\frac{1}{6}$ (D) $\frac{1}{6}$

ಉತ್ತರ: **(D)**

3) (2, 3) ಮತ್ತು (4, 7) ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯ ಬಿಂದುವಿನ ನಿರ್ದೇಶಾಂಕಗಳು

(A) (3, 5) (B) (7, 3)
(C) (3, 4) (D) (8, 3)

ಉತ್ತರ: (A) (3, 5)

4) ಚಿತ್ರದಲ್ಲಿ ತೋರಿಸಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು (ಮಾರ್ಚ್–2021)



(A) $x + y = 1$ ಮತ್ತು $2x - y = 1$
(B) $2x + y = 2$ ಮತ್ತು $x + y = 2$
(C) $2x - y = 2$ ಮತ್ತು $4x - y = 4$
(D) $y - x = 0$ ಮತ್ತು $x - y = 1$

ಉತ್ತರ:–(ಸಿ) 2x-y=2 ಮತ್ತು 4x-y=4

5) (3, -2) ಮತ್ತು (4, 5) ಬಿಂದುಗಳನ್ನು ಸೇರಿಸುವ ರೇಖೆಯ ಇಳಿಜಾರು

(A) 3 (B) 5
(C) 7 (D) 8

ಉತ್ತರ : (C) 7

6) ಕೊಟ್ಟಿರುವ ಚಿತ್ರದಲ್ಲಿ $\sin\theta$ ದ ಬೆಲೆಯು...........



(A) $\frac{1}{2}$ (B) $\frac{\sqrt{3}}{2}$
(C) $\sqrt{3}$ (D) $\frac{2}{\sqrt{3}}$

ಉತ್ತರ:– (ಎ) ½

7) ಈ ಕೆಳಗಿನ ದತ್ತಾಂಶಗಳ ಸರಾಸರಿಯು...

ಅಂಕಗಳು	1	3	5	7

(A) 16 (B) 5
(C) 1.6 (D) 4

ಉತ್ತರ:– (ಡಿ)4

8) ΔABC ನಲ್ಲಿ, AB= 6√3cm, AC= 12cm ಮತ್ತು BC=6 cm. ಆದರೆ B ಯು................

(A) 120° (B) 60°
(C) 90° (D) 45°

ಉತ್ತರ:– (ಸಿ) 90°

ಪರಿಹಾರ:– ΔABCದಲ್ಲಿ, AB = 6√3 cm, AC = 12cm ಮತ್ತು BC = 6 cm. (ದತ್ತ)



$AB^2 = 108$
$AC^2 = 144$
ಮತ್ತು $BC^2 = 36$
$AB^2 + BC^2 = AC^2$

ಕೊಟ್ಟಿರುವ ತ್ರಿಭುಜ ΔABC ಪೈಥಾಗೋರಸ್ ಪ್ರಮೇಯದ ಲಕ್ಷಣಗಳನ್ನು ಹೊಂದಿದೆ, ಹೀಗಾಗಿ ಇದೊಂದು ಲಂಬಕೋನ ತ್ರಿಭುಜವಾಗಿದೆ. ಹೀಗಾಗಿ ∠Bವು ಲಂಬಕೋನವಾಗಿದೆ.

$\therefore \angle B = 90°$

ಪಿಯುಸಿ ಪರೀಕ್ಷೆ ದಿಕ್ಸೂಚಿ — PHYSICS

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

REVISION: MODEL QUESTIONS

33) Derive an expression for impedance and current in LCR series circuit using phasor diagram.

Ans:- The current lags behind the potential difference V_L by angle of $\pi/2$, so V_L is represented by OB perpendicular to the direction of I.

The current leads the potential difference V_C by an angle of $\pi/2$, so V_C is represented by OF perpendicular to the direction of I.

Since V_L and V_C are in opposite phase, so their resultant

$(V_L - V_C)$ is represented by OD (Here, $V_L > V_C$).
The resultant of V_R and $(V_L - V_C)$ is given by OH.
The magnitude of OG is given by

$$OH = \sqrt{(OA)^2 + (OD)^2} = \sqrt{V_R^2 + (V_L - V_C)^2}$$

Phasor-diagram Solution of Series LCR circuit

$$\Rightarrow V = \sqrt{V_R^2 + (V_L - V_C)^2}$$

$$V = \sqrt{I^2R^2 + (IX_L - IX_C)^2} = I\sqrt{R^2 + (X_L - X_C)^2}$$

$$\text{(or)}\ \frac{V}{I} = \sqrt{R^2 + (X_L - X_C)^2}$$

But $\frac{V}{1} = Z$, where Z is the effective opposition of LCR circuit to A.C. called impedance of the circuit.

$\therefore$ Impedance (Z) of LCR circuit is given by,

$Z = \sqrt{R^2 + (X_L - X_C)^2}$ the general relation for impedance.

Extra information

The above relation is known to be
Clearly, (i) if X_L and X_C both are equal i.e., $X_L = X_C$, then $Z = R$ i.e. expression for pure resistive circuit,
(ii) If $X_L = 0$, then $Z = \sqrt{R^2 + X_C^2}$ i.e. expression for series RC circuit.
(iii) If $X_C = 0$, then $Z = Z = \sqrt{R^2 + X_L^2}$ i.e. expression for series RL circuit.

$$\text{Again, } I = \frac{V}{Z} \Rightarrow I = \frac{V}{\sqrt{R^2 + (X_L - X_C)^2}} = \frac{V}{\sqrt{R^2 + \left(L\omega - \frac{1}{C\omega}\right)^2}}$$

$$\left(\because X_L = L\omega \text{ and } X_C = \frac{1}{C\omega}\right)$$

Let ϕ be the phase angle between V and I, then from Figure already shown-

$$\tan\phi = \frac{V_L - V_C}{V_R} = \frac{IX_L - IX_C}{IR} = \frac{X_L - X_C}{R}$$

Putting $X_L = L\omega$ and $X_C = \frac{1}{C\omega}$, we get $\tan\phi = \frac{\left(L\omega - \frac{1}{C\omega}\right)}{R}$

Also $\cos\phi = \frac{R}{Z} = \frac{R}{\sqrt{R^2 + (X_L - X_C)^2}}$

34) Write any three properties of electric field lines.

Ans:- Three properties of electric field lines are:

1) Originate from positive charges and end on negative charges: Electric field lines always start at a positive charge and terminate at a negative charge.

2) Never intersect: Electric field lines can never cross each other at any point in space.

3) Density indicates field strength: Where the field lines are closer together, the electric field strength is stronger, and where they are further apart, the field is weaker.

35) Give any three results of experimental study of photoelectric effect.

Ans:- Three results of the experimental study of the photoelectric effect are:

Threshold frequency: There is a minimum frequency of light, called the threshold frequency, below which no electrons are emitted.

Kinetic energy: The kinetic energy of emitted electrons increases linearly with the frequency of light.

Number of emitted electrons: The number of emitted electrons increases with the intensity of light.

36) (a) What is Bohr's Model of an Atom?

Ans:- The Bohr model of the atom was proposed by Neil Bohr in 1915. It came into existence with the modification of Rutherford's model of an atom. Rutherford's model introduced the nuclear model of an atom, in which he explained that a nucleus (positively charged) is surrounded by negatively charged electrons.

Introduction to the Bohr Model:- Bohr theory modified the atomic structure model by explaining that electrons move in fixed orbitals (shells) and not anywhere in between and he also explained that each orbit (shell) has a fixed energy. Rutherford explained the nucleus of an atom and Bohr modified that model into electrons and their energy levels.



Bohr's Model of an Atom

Bohr's model consists of a small nucleus (positively charged) surrounded by negative electrons moving around the nucleus in orbits. Bohr found that an electron located away from the nucleus has more energy, and the electron which is closer to nucleus has less energy

(b) Write the three postulates of Bohr's atom model

Ans:- Postulates of Bohr's Model of an Atom

*In an atom, electrons (negatively charged) revolve around the positively charged nucleus in a definite circular path called orbits or shells.

*Each orbit or shell has a fixed energy and these circular orbits are known as orbital shells.

*The energy levels are represented by an integer (n=1, 2, 3…) known as the quantum number. This range of quantum number starts from nucleus side with n=1 having the lowest energy level. The orbits n=1, 2, 3, 4… are assigned as K, L, M, N…. shells and when an electron attains the lowest energy level, it is said to be in the ground state.

*The electrons in an atom move from a lower energy level to a higher energy level by gaining the required energy and an electron moves from a higher energy level to lower energy level by losing energy.



ಸರ್ವಾಂಗೀಣ ಅಭಿವೃದ್ಧಿಗೆ ಕಂಕಣ

ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳಿಂದ ಜನಪರ ಯೋಜನೆಗಳು ಜಾರಿಗೊಂಡಿದ್ದು, ನಗರ ಮತ್ತು ಗ್ರಾಮಾಂತರ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿ ಸಾಧ್ಯವಾಗುತ್ತಿದೆ. ಗ್ಯಾರಂಟಿ ಯೋಜನೆಗಳೊಂದಿಗೆ ನಾನಾ ಕಾರ್ಯಕ್ರಮಗಳು ಜನರ ಅಭ್ಯುದಯಕ್ಕೆ ನಾಂದಿಯಾಗುತ್ತಿವೆ.

ಬೆಂಗಳೂರು : ರಾಜ್ಯ ಸರ್ಕಾರ ಒಂದು ಸಾವಿರ ದಿನಗಳ ಸಮರ್ಥ ಆಡಳಿತವನ್ನು ನೀಡಿದ್ದು, ಜನಪರ ಕಾಳಜಿಯನ್ನು ಮುಂದುವರೆಸಿದೆ. ಜತೆಗೆ, ತನ್ನ ಜನಪರ ಕಾರ್ಯಕ್ರಮಗಳ ಜಾರಿಗೆ ಕಂಕಣ ಕಟ್ಟಿಕೊಂಡಂತೆ ಸಾಲು ಸಾಲು ಯೋಜನೆಗಳನ್ನು ಜನರ ಮಡಿಲಿಗೆ ಸಮರ್ಪಿಸುತ್ತಿದೆ. ರಾಜ್ಯ ಸರ್ಕಾರ ಈಗಾಗಲೇ 1.6ಲಕ್ಷ ಕೋಟಿ ವೆಚ್ಚದಲ್ಲಿ ಪಂಚ ಗ್ಯಾರಂಟಿಗಳಾದ ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿ, ಯುವನಿಧಿ, ಅನ್ನಭಾಗ್ಯ ಯೋಜನೆಗಳನ್ನು ಸಮರ್ಥವಾಗಿ ನೀಡಿ ಜನ ಮೆಚ್ಚುಗೆ ಗಳಿಸಿದೆ. ಈ ಪಟ್ಟಿಗೆ ಹೊಸದಾಗಿ ಭೂ ಗ್ಯಾರಂಟಿಯನ್ನು ಸೇರಿಸುವ ಮೂಲಕ ತನ್ನ ಅಧಿಕಾರಾವಧಿಯ ನಡುವೆ ಹೊಸ ಕೊಡುಗೆ ನೀಡಿದೆ. ಭೂ ವ್ಯಾಜ್ಯಗಳ ನಡುವೆ ಹಕ್ಕು ಪತ್ರಗಳಿಗೆ ಅಲೆಯುವ ಜನರ ನಾಡಿ ಅರಿತ ಸರ್ಕಾರ, ಜನರಿಗೆ ಮನೆ ಬಾಗಿಲಿಗೆ ಕಂದಾಯ ಸೌಕರ್ಯ ತಲುಪುವಂತೆ ಯೋಜನೆ ರೂಪಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಸೇರಿ ರಾಜ್ಯದ ಎಲ್ಲಾ ವರ್ಗಗಳ ಸರ್ವಾಂಗೀಣ ಅಭಿವೃದ್ಧಿಗೆ ಈ ಯೋಜನೆಗಳು ಸಾಕಷ್ಟು ನೆರವಾಗುತ್ತಿದೆ. ಹಾವೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ 6ನೇ ಗ್ಯಾರಂಟಿ 'ಭೂ ಗ್ಯಾರಂಟಿ' ಯೋಜನೆ ಜಾರಿಯಾಗಿದ್ದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ರವರು ಮತ್ತೊಂದು ಯೋಜನೆಯನ್ನೂ ಸಹ ಜನರಿಗೆ ಅರ್ಪಿಸುವುದಾಗಿ ಘೋಷಿಸಿದ್ದಾರೆ. ವಿಶೇಷವಾಗಿ ರಾಜ್ಯದ ರೈತಾಪಿ ವರ್ಗದ ನಿರೀಕ್ಷೆ ಅರಿತಿರುವ ಸರ್ಕಾರ ತನ್ನ 7ನೇ ಗ್ಯಾರಂಟಿಯಾಗಿ 'ನೀರಿನ ಗ್ಯಾರಂಟಿ' ಜಾರಿಗೆ ತರುವುದಾಗಿ ಘೋಷಿಸಿದೆ. ಆ ಮೂಲಕ ರಾಜ್ಯದ ನದಿಗಳ ವ್ಯಾಜ್ಯಗಳು, ಅಂತರ್ಜಲ ಅವಲಂಬನೆ ಸೇರಿ ನಾನಾ ಸಮಸ್ಯೆಗಳನ್ನು ಇತ್ಯರ್ಥಗೊಳಿಸಿ, ಪ್ರತಿಯೊಬ್ಬರಿಗೂ ಕುಡಿಯುವ ನೀರು, ಕೃಷಿಗೆ ನೀರಿನ ವ್ಯವಸ್ಥೆಯನ್ನು ಮಾಡುವ ಮಹತ್ವಾಕಾಂಕ್ಷೆಯ ಯೋಜನೆ ಇದಾಗಿರಲಿದೆ. ಒಟ್ಟಾರೆ, ರಾಜ್ಯ ಸರ್ಕಾರ ದೇಶದಲ್ಲೇ ಮೊದಲ ಬಾರಿಗೆ ಗ್ಯಾರಂಟಿಗಳನ್ನು ಜಾರಿಗೆ ತರುವುದು ಮಾತ್ರವಲ್ಲದೇ ಜನಮನ್ನಣೆ ಗಳಿಸುವುದರಲ್ಲಿ ಸೈ ಎನಿಸಿಕೊಂಡಿದೆ.

- **ಅರಣ್ಯ ಇಲಾಖೆಯ** ಪ್ರಗತಿ : 2024-25 ಮತ್ತು 2025-26ರ ಆಯವ್ಯಯಗಳಲ್ಲಿ ಅರಣ್ಯ ಮತ್ತು ಪರಿಸರ ಇಲಾಖೆಗೆ ಸರಾಸರಿ ₹2,000 ಕೋಟಿಯಿಂದ ₹2,500 ಕೋಟಿವರೆಗೆ ಒಟ್ಟು ಅನುದಾನವನ್ನು ಮೀಸಲಿಡಲಾಗಿದೆ. ಇದರಲ್ಲಿ ಸಿಬ್ಬಂದಿ ವೇತನ ಹೊರತುಪಡಿಸಿ, ಅಭಿವೃದ್ಧಿ ಕಾರ್ಯಗಳಿಗೆ ಸುಮಾರು 40% ಹಣ ಬಳಕೆಯಾಗುತ್ತಿದೆ.
- **ವನ್ಯಜೀವಿ ಪರಿಹಾರ ಧನ :** ಸರ್ಕಾರವು ವನ್ಯಜೀವಿ ದಾಳಿಯಿಂದ ಆಗುವ ಹಾನಿಗೆ ನೀಡುವ ಪರಿಹಾರವನ್ನು ಗಣನೀಯವಾಗಿ ಹೆಚ್ಚಿಸಿದೆ. ಪ್ರಾಣಾಪಾಯಕ್ಕೆ ₹15 ಲಕ್ಷ ಮತ್ತು ಶಾಶ್ವತ ಅಂಗವಿಕಲತೆ ₹10 ಲಕ್ಷಕ್ಕೆ ಏರಿಕೆ ಮಾಡಲಾಗಿದೆ. ಬೆಳೆ ಹಾನಿಗೂ ಪ್ರತ್ಯೇಕ ಪರಿಹಾರ ಒದಗಿಸಲಾಗುತ್ತದೆ.
- **ವನ್ಯಜೀವಿ ಕಾರ್ಯಪಡೆ:** ಆನೆ ದಾಳಿ ತಡೆಯಲು ಹಾಸನ, ಕೊಡಗು, ಚಿಕ್ಕಮಗಳೂರು ಭಾಗಗಳಲ್ಲಿ ಹೊಸದಾಗಿ ಕಾರ್ಯಪಡೆಗಳನ್ನು ರಚಿಸಿ, ಸುಮಾರು ₹10-15 ಕೋಟಿ ಹೆಚ್ಚುವರಿ ಅನುದಾನ ನೀಡಲಾಗಿದೆ.
- ಕೇಂದ್ರ ಮತ್ತು ರಾಜ್ಯದ ಸಹಭಾಗಿತ್ವದ ಅಡಿಯಲ್ಲಿ ₹500 ಕೋಟಿಗೂ ಹೆಚ್ಚು ಮೊತ್ತವನ್ನು ಅರಣ್ಯೀಕರಣ ಮತ್ತು ಮಣ್ಣು ಸಂರಕ್ಷಣೆಗಾಗಿ ಬಳಸಲಾಗುತ್ತಿದೆ.
- ಪ್ರತಿ ತಾಲ್ಲೂಕಿನಲ್ಲಿ ಮಾದರಿ ನರ್ಸರಿಗಳನ್ನು ಸ್ಥಾಪಿಸಲು ತಲಾ ₹25 ಲಕ್ಷದಿಂದ ₹50 ಲಕ್ಷ** ವ್ಯಯಿಸಲಾಗಿದೆ.
- ಇಕೋ-ಟೂರಿಸಂ ಮತ್ತು ಸಿಬ್ಬಂದಿ ನೇಮಕಾತಿ : ಅರಣ್ಯ ರಕ್ಷಕರ ಕೊರತೆ ನೀಗಿಸಲು 500+ ಅರಣ್ಯ ರಕ್ಷಕರು ಮತ್ತು ಡ್ರೈವರ್‌ಗಳ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ.
- ಇಕೋ-ಟೂರಿಸಂ ಮೂಲಕ ವಾರ್ಷಿಕ ಸುಮಾರು ₹50-80 ಕೋಟಿ ಆದಾಯ ನಿರೀಕ್ಷಿಸಲಾಗಿದ್ದು, ಇದನ್ನು ಮತ್ತೆ ಅರಣ್ಯ ಅಭಿವೃದ್ಧಿಗೆ ಬಳಸಲಾಗುತ್ತಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ರಾಜ್ಯ ಸರ್ಕಾರ ಕಳೆದ 1ಸಾವಿರ ದಿನಗಳ ಅವಧಿಯಲ್ಲಿ ನಗರಾಭಿವೃದ್ಧಿ ಇಲಾಖೆಯಿಂದ ರಾಜ್ಯದ ನಗರಗಳ ಮೂಲಸೌಕರ್ಯ ಬದಲಾವಣೆಗೆ ಮತ್ತು ವಿಶೇಷವಾಗಿ ಬೆಂಗಳೂರಿನ ಸರ್ವಾಂಗೀಣ ಅಭಿವೃದ್ಧಿಗೆ ಹಲವು ಮಹತ್ವದ ಯೋಜನೆಗಳನ್ನು ಜಾರಿಗೆ ತಂದಿದೆ.

ಬ್ರ್ಯಾಂಡ್ ಬೆಂಗಳೂರು: ಬೆಂಗಳೂರನ್ನು ಜಾಗತಿಕ ಮಟ್ಟದ ನಗರವನ್ನಾಗಿ ರೂಪಿಸಲು ಈ ಯೋಜನೆಯನ್ನು ಆದ್ಯತೆಯ ಮೇಲೆ ಕೈಗೆತ್ತಿಕೊಳ್ಳಲಾಗಿದೆ. 2025-26ರ ಬಜೆಟ್‌ನಲ್ಲಿ ಬೆಂಗಳೂರಿನ ಅಭಿವೃದ್ಧಿಗೆ ಅನುದಾನ ಮೀಸಲಿಡಲಾಗಿದೆ. ಸಂಚಾರ ದಟ್ಟಣೆ ನಿವಾರಣೆ, ಘನತ್ಯಾಜ್ಯ ನಿರ್ವಹಣೆ, ಸುಗಮ ಸಂಚಾರ ಮತ್ತು ಹಸಿರು ಬೆಂಗಳೂರು ನಿರ್ಮಾಣಕ್ಕಾಗಿ 'ಬ್ರ್ಯಾಂಡ್ ಬೆಂಗಳೂರು' ಅಡಿಯಲ್ಲಿ 21 ವಿವಿಧ ಯೋಜನೆಗಳಿಗೆ ₹1,800 ಕೋಟಿ ಘೋಷಿಸಲಾಗಿದೆ.

ನಮ್ಮ ಮೆಟ್ರೋ ವಿಸ್ತರಣೆ ಮತ್ತು ಸುರಂಗ ರಸ್ತೆ ಸಂಚಾರ ದಟ್ಟಣೆ ಕಡಿಮೆ ಮಾಡಲು ಬೃಹತ್ ಸಾರಿಗೆ ಯೋಜನೆಗಳಿಗೆ ಚಾಲನೆ ನೀಡಲಾಗಿದೆ.

- ಡಬಲ್ ಡೆಕ್ಕರ್ ಫ್ಲೈ ಓವರ್ : ಮೆಟ್ರೋ ಹಂತ-3ರ ಜೊತೆಗೆ 40.5 ಕಿ.ಮೀ ಉದ್ದದ ಡಬಲ್ ಡೆಕ್ಕರ್ ಫ್ಲೈ ಓವರ್ ನಿರ್ಮಾಣ ಉದ್ದೇಶಿಸಲಾಗಿದೆ.
- ಸುರಂಗ ರಸ್ತೆ: ಬೆಂಗಳೂರಿನ ಪ್ರಮುಖ ವೃತ್ತಗಳಲ್ಲಿ ಸಂಚಾರ ದಟ್ಟಣೆ ತಪ್ಪಿಸಲು ಸುರಂಗ ರಸ್ತೆಗಳ(ಟನಲ್ ರಸ್ತೆ) ನಿರ್ಮಾಣಕ್ಕೆ ಡಿಪಿಆರ್ ಸಿದ್ಧಪಡಿಸಲಾಗುತ್ತಿದೆ.
- ಅಮೃತ ನಗರೋತ್ಥಾನ ಯೋಜನೆ : ರಾಜ್ಯದ ವಿವಿಧ ನಗರಗಳ ಅಭಿವೃದ್ಧಿಗಾಗಿ ಈ ಯೋಜನೆಗೆ ಒತ್ತು ನೀಡಲಾಗಿದೆ.
- ನಗರ ಪ್ರದೇಶಗಳಲ್ಲಿ ರಸ್ತೆ ಅಭಿವೃದ್ಧಿ, ಉದ್ಯಾನವನ, ಮತ್ತು ಚರಂಡಿ ವ್ಯವಸ್ಥೆ ಸುಧಾರಿಸಲಾಗುತ್ತಿದೆ. ಬೆಂಗಳೂರು ನಗರವೊಂದರಲ್ಲೇ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಅಡಿಯಲ್ಲಿ ಸಾವಿರಾರು ಕಿ.ಮೀ ರಸ್ತೆ ಡಾಂಬರೀಕರಣ ಪೂರ್ಣಗೊಂಡಿದೆ.
- ರಾಜಕಾಲುವೆ ಅಭಿವೃದ್ಧಿ ಮತ್ತು ನೆರೆ ನಿಯಂತ್ರಣ : ಮಳೆಗಾಲದಲ್ಲಿ ಉಂಟಾಗುವ ನೆರೆಯನ್ನು ತಡೆಗಟ್ಟಲು ಬೃಹತ್ ಮೊತ್ತದ ಅನುದಾನ ನೀಡಲಾಗಿದೆ. K-100 ಯೋಜನೆ: ಕೋರಮಂಗಲ ರಾಜಕಾಲುವೆಯನ್ನು ಮಾದರಿ ಜಲಮಾರ್ಗವನ್ನಾಗಿ ಅಭಿವೃದ್ಧಿಪಡಿಸಲು ಅನುದಾನ ವಿನಿಯೋಗ ಮಾಡಲಾಗಿದೆ. ನಗರದ ಪ್ರಮುಖ ರಾಜಕಾಲುವೆಗಳ ಹೂಳೆತ್ತಲು ಮತ್ತು ತಡೆಗೋಡೆ ನಿರ್ಮಾಣಕ್ಕೆ ಅನುದಾನ ಮೀಸಲಿಡಲಾಗಿದೆ.
- ಬಿಬಿಎಂಪಿ ವ್ಯಾಪ್ತಿಯಲ್ಲಿ ಹೊಸ ರಸ್ತೆಗಳ ನಿರ್ಮಾಣ : ಕಾಲುವೆಗಳ ಬಫರ್ ವಲಯದಲ್ಲಿ 300 ಕಿ.ಮೀ ಹೊಸ ರಸ್ತೆಗಳನ್ನು ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ಇದು ನಗರದ ಒಳಭಾಗದಲ್ಲಿ ಸಂಚಾರ ಸುಗಮಗೊಳಿಸಲು ಸಹಕಾರಿಯಾಗಿದೆ.

ಯೋಜನೆ	ಅನುದಾನ	ಉದ್ದೇಶ
ಬೆಂಗಳೂರು ಸಮಗ್ರ ಅಭಿವೃದ್ಧಿ	₹7,000 ಕೋಟಿ	ಮೂಲಸೌಕರ್ಯ ಮೇಲ್ದರ್ಜೆಗೇರಿಸುವುದು
ಡಬಲ್ ಡೆಕ್ಕರ್ ಫ್ಲೈ ಓವರ್	ಕೋಟ್ಯಾಂತರ ರೂ.	ಸಂಚಾರ ದಟ್ಟಣೆ ನಿವಾರಣೆ
ಬ್ರ್ಯಾಂಡ್ ಬೆಂಗಳೂರು (21 ಯೋಜನೆ)	₹1,800 ಕೋಟಿ	ನಾಗರಿಕ ಸೌಲಭ್ಯಗಳ ಸುಧಾರಣೆ
ಹೊಸ ರಸ್ತೆಗಳ ನಿರ್ಮಾಣ (300 ಕಿ.ಮೀ)	₹3,000 ಕೋಟಿ	ಸಂಪರ್ಕ ರಸ್ತೆಗಳ ಅಭಿವೃದ್ಧಿ

ಯೋಜನೆಯ ಹೆಸರು	ಅನುದಾನ	ವಿವರ
ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ	₹100 - ₹120 ಕೋಟಿ (ವಾರ್ಷಿಕ)	ಪ್ರತಿ ಸಸಿಗೆ 3 ವರ್ಷಗಳಲ್ಲಿ ಒಟ್ಟು ₹125 ಪ್ರೋತ್ಸಾಹಧನ. ಸುಮಾರು 2-3 ಕೋಟಿ ಸಸಿಗಳ ವಿತರಣೆ
ಸಸ್ಯ ಶ್ಯಾಮಲ ಯೋಜನೆ	₹20 - ₹25 ಕೋಟಿ	ರಾಜ್ಯದ ಸುಮಾರು 48,000 ಶಾಲೆಗಳಲ್ಲಿ 50 ಲಕ್ಷಕ್ಕೂ ಹೆಚ್ಚು ಸಸಿಗಳನ್ನು ನೆಡುವ ಗುರಿ.
ಮಾನವ-ವನ್ಯಜೀವಿ ಸಂಘರ್ಷ ತಡೆ	₹150 - ₹200 ಕೋಟಿ (ರೈಲ್ವೆ ಬ್ಯಾರಿಕೇಡ್ ಸೇರಿ)	ಮರಣ ಹೊಂದಿದ ಕುಟುಂಬಕ್ಕೆ ₹15 ಲಕ್ಷ ಪರಿಹಾರ. ವಾರ್ಷಿಕವಾಗಿ ಸುಮಾರು 50-60 ಕಿ.ಮೀ ರೈಲ್ವೆ ಬ್ಯಾರಿಕೇಡ್ ನಿರ್ಮಾಣ.
ಹಸಿರು ಕರ್ನಾಟಕ ಅಭಿಯಾನ	₹150 ಕೋಟಿಗೂ ಹೆಚ್ಚು	ವರ್ಷಕ್ಕೆ ಸರಾಸರಿ 5 ಕೋಟಿ ಸಸಿಗಳನ್ನು ನೆಡುವ ಬೃಹತ್ ಗುರಿ.
ಅರಣ್ಯ ಭೂಮಿ ಸಂರಕ್ಷಣೆ	₹10 - ₹15 ಕೋಟಿ (ಸರ್ವೇ ಕಾರ್ಯಕ್ಕೆ)	ಒತ್ತುವರಿಯಾದ ಸುಮಾರು 2,500 - 3,000 ಎಕರೆ ಭೂಮಿಯ ಮರು ಸ್ವಾಧೀನ.

ಗ್ರಾಮೀಣಾಭಿವೃದ್ಧಿ ಸಮಗ್ರ ಅನುದಾನದ ನೆರವು

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ತನ್ನ ಅಧಿಕಾರಾವಧಿಯ ಯಶಸ್ವಿ 1,000 ದಿನಗಳನ್ನು ಪೂರೈಸಿದೆ. ಈ ಅವಧಿಯಲ್ಲಿ ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯು ಗ್ರಾಮೀಣ ಭಾಗದ ಜನರ ಜೀವನಮಟ್ಟ ಸುಧಾರಿಸಲು ಹಲವು ಮಹತ್ವದ ಯೋಜನೆಗಳನ್ನು ಜಾರಿಗೊಳಿಸಿದೆ. ಕಳೆದ 1,000 ದಿನಗಳ ಪ್ರಮುಖ ಸಾಧನೆಗಳು ಮತ್ತು ಅಂಕಿಅಂಶಗಳ ವರದಿಯನ್ನಿಲ್ಲಿ ನೀಡಲಾಗಿದೆ.

- ಭೂ ಗ್ಯಾರಂಟಿ ಮತ್ತು ಹಕ್ಕುಪತ್ರ ವಿತರಣೆ : ಸರ್ಕಾರದ 1,000 ದಿನಗಳ ಸಂಭ್ರಮಾಚರಣೆಯ ಅಂಗವಾಗಿ ಹಾವೇರಿಯಲ್ಲಿ ನಡೆದ ಸಮಾವೇಶದಲ್ಲಿ 'ಭೂ ಗ್ಯಾರಂಟಿ' ಯೋಜನೆಯಡಿ ದಾಖಲೆ ಪ್ರಮಾಣದ ಹಕ್ಕುಪತ್ರಗಳನ್ನು ವಿತರಿಸಲಾಗಿದೆ.
- ಕಳೆದ 1,000 ದಿನಗಳಲ್ಲಿ ಒಟ್ಟು 2.20 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ ನೀಡಲಾಗಿದೆ.
- ಫೆ.14, 2026 ರಂದು ಹಾವೇರಿಯಲ್ಲಿ 1.06 ಲಕ್ಷ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲಾಯಿತು.
- ಗ್ರಾಮೀಣ ಭಾಗದ ನಿವೇಶನ ರಹಿತ ಕೃಷಿ ಕಾರ್ಮಿಕರು ಮತ್ತು ಬಡವರಿಗೆ ತಮ್ಮದೇ ಆದ ಸ್ವಂತ ಭೂಮಿಯ ಹಕ್ಕು ಒದಗಿಸುವ ಗುರಿಯನ್ನು ಹೊಂದಲಾಗಿದೆ.
- ಜಲಜೀವನ್ ಮಿಷನ್ (JJM) - ಕುಡಿಯುವ ನೀರು ; ಗ್ರಾಮೀಣ ಭಾಗದ ಪ್ರತಿ ಮನೆಗೆ ನಳದ ಮೂಲಕ ನೀರು ಒದಗಿಸುವಲ್ಲಿ ರಾಜ್ಯ ಸರ್ಕಾರ ಮಹತ್ವದ ಪ್ರಗತಿ ಸಾಧಿಸಿದೆ.
- ರಾಜ್ಯದ ಗ್ರಾಮೀಣ ಕುಟುಂಬಗಳಿಗೆ ಶೇ.86% ಕ್ಕಿಂತ ಹೆಚ್ಚು ನಳದ ಸಂಪರ್ಕ ಕಲ್ಪಿಸಲಾಗಿದೆ.
- ಪ್ರಸಕ್ತ ಹಣಕಾಸು ವರ್ಷದಲ್ಲಿ (2025-26) ರಾಜ್ಯ ಸರ್ಕಾರವು ₹11,050 ಕೋಟಿ ಅನುದಾನವನ್ನು ಈ ಯೋಜನೆಗಾಗಿ ಮೀಸಲಿಟ್ಟಿದೆ.
- ಯೋಜನೆಯ ಆರಂಭದಿಂದ ಈವರೆಗೆ ಒಟ್ಟು ₹35,698 ಕೋಟಿ ವೆಚ್ಚ ಮಾಡಲಾಗಿದ್ದು, ಇದರಲ್ಲಿ ರಾಜ್ಯದ ಪಾಲು ₹24,598 ಕೋಟಿಗಳಷ್ಟಿದೆ.
- ನರೇಗಾ ಮತ್ತು ಹೊಸ ಘೋಷಣೆ ; ಗ್ರಾಮೀಣ ಜನರಿಗೆ ಉದ್ಯೋಗ ಖಾತರಿ ನೀಡುವ ನರೇಗಾ ಯೋಜನೆಯಡಿ ಕರ್ನಾಟಕವು ಮುಂಚೂಣಿಯಲ್ಲಿದೆ.
- ಗಾಂಧಿ ಗ್ರಾಮ: ರಾಜ್ಯದ ಎಲ್ಲಾ 6,000 ಗ್ರಾಮ ಪಂಚಾಯತ್‌ಗಳ ಕಟ್ಟಡಗಳಿಗೆ 'ಮಹಾತ್ಮ ಗಾಂಧಿ' ಅವರ ಹೆಸರನ್ನು ನಾಮಕರಣ ಮಾಡಲು ಸರ್ಕಾರ ನಿರ್ಧರಿಸಿದೆ.
- ನಿರ್ವಹಣೆ: ವಾರ್ಷಿಕವಾಗಿ ಸುಮಾರು ₹6,000 ಕೋಟಿ ಹಣವನ್ನು ನರೇಗಾ ಯೋಜನೆಯಡಿ ಕೂಲಿ ಮತ್ತು ಸಾಮಗ್ರಿ ವೆಚ್ಚಕ್ಕಾಗಿ ಬಳಕೆ ಮಾಡಲಾಗುತ್ತಿದೆ.
- ಸವಾಲು: ಕೇಂದ್ರ ಸರ್ಕಾರದ ಅನುದಾನ ಹಂಚಿಕೆಯ ನೀತಿಯಲ್ಲಿ ಬದಲಾವಣೆಯಾಗಿದ್ದರೂ, ರಾಜ್ಯವು ತನ್ನ ಪಾಲಿನ ಹಣವನ್ನು ಬಿಡುಗಡೆ ಮಾಡಿ ಕೆಲಸಗಳನ್ನು ಮುಂದುವರಿಸಿದೆ.
- ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) - ಹಂತ 2 ; ಗ್ರಾಮಗಳನ್ನು ಬಯಲು ಮುಕ್ತ ಶೌಚ ಮುಕ್ತ ಮಾಡುವ ನಿಟ್ಟಿನಲ್ಲಿ ಪ್ರಗತಿ ಸಾಧಿಸಲಾಗಿದೆ.
- ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ: ರಾಜ್ಯದ ಬಹುತೇಕ ಗ್ರಾಮಗಳಲ್ಲಿ ಕಸ ವಿಂಗಡಣೆ ಘಟಕಗಳು ಮತ್ತು 'ಬೂದು ನೀರು' ನಿರ್ವಹಣಾ ಘಟಕಗಳನ್ನು ಸ್ಥಾಪಿಸಲಾಗಿದೆ.
- ಶಾಲಾ-ಅಂಗನವಾಡಿ: 97% ಕ್ಕಿಂತ ಹೆಚ್ಚು ಶಾಲೆ ಮತ್ತು ಅಂಗನವಾಡಿಗಳಿಗೆ ಸುಸಜ್ಜಿತ ಶೌಚಾಲಯ ಮತ್ತು ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ.
- ಗ್ರಾಮ ಪಂಚಾಯತ್ ಬಲವರ್ಧನೆ : ಗ್ರಾಮ ಪಂಚಾಯತ್‌ಗಳಲ್ಲಿ 'ಬಾಪೂಜಿ ಸೇವಾ ಕೇಂದ್ರ'ಗಳ ಮೂಲಕ 100 ಕ್ಕೂ ಹೆಚ್ಚು ಸೇವೆಗಳನ್ನು ಆನ್‌ಲೈನ್‌ನಲ್ಲಿ ನೀಡಲಾಗುತ್ತಿದೆ.
- ಅನುದಾನ ಬಳಕೆ : ಪಂಚಾಯತ್ ರಾಜ್ ಸಂಸ್ಥೆಗಳಿಗೆ 15 ನೇ ಹಣಕಾಸು ಆಯೋಗದ ಅನುದಾನವನ್ನು ಸಮರ್ಪಕವಾಗಿ ಬಳಸಿ ರಸ್ತೆ, ಚರಂಡಿ ಮತ್ತು ಬೀದಿ ದೀಪಗಳ ವ್ಯವಸ್ಥೆ ಮಾಡಲಾಗಿದೆ.

ರಾಜ್ಯ ಸರ್ಕಾರದ ಕೆಲ ಉದ್ದೇಶಿತ ಅಭಿವೃದ್ಧಿ ಕಾರ್ಯಕ್ರಮಗಳು

- ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯಿಂದ ನೀರನ್ನು ಎತ್ತಿ ಅರಸೀಕೆರೆ ತಾಲೂಕಿನ ಕೆಂಕೆರೆ ಮತ್ತು ಇತರೆ 20 ಕೆರೆಗಳನ್ನು ತುಂಬಿಸುವ ₹32 ಕೋಟಿ ಮೊತ್ತದ ಯೋಜನೆಗೆ ಅನುಮೋದನೆ.

- ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನಲ್ಲಿ ಹೊಸ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರವನ್ನು ₹73.75 ಕೋಟಿ ಅಂದಾಜು ಮೊತ್ತದಲ್ಲಿ ಕೆಕೆಆರ್‌ಡಿಬಿ ಅನುದಾನದಲ್ಲಿ ಸ್ಥಾಪಿಸಲು ಆಡಳಿತಾತ್ಮಕ ಅನುಮೋದನೆ.
- ಕಲಬುರಗಿಯಲ್ಲಿ ನೂತನ ಜಿಲ್ಲಾ ಪಂಚಾಯತ್ ಕಟ್ಟಡ ನಿರ್ಮಿಸಲು ₹49.65 ಕೋಟಿ ಅನುದಾನ.
- ರಾಜ್ಯದಲ್ಲಿ ಒತ್ತುವರಿಯಾಗಿರುವ 328 ದೇವಾಲಯಗಳ ಆಸ್ತಿಗಳನ್ನು ಸಂರಕ್ಷಿಸಲು ಒತ್ತುವರಿ ತೆರವುಗೊಳಿಸಿ ಭೂ ವರಾಹ ಯೋಜನೆಯಡಿ ಈ ದೇವಾಲಯಗಳ ಸ್ಥಿರಾಸ್ತಿಗಳನ್ನು ದಾಖಲೀಕರಣಗೊಳಿಸುವ ₹15 ಕೋಟಿ ಯೋಜನೆಗೆ ಒಪ್ಪಿಗೆ.
- ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಿಗೆ ₹37.80 ಕೋಟಿ ವೆಚ್ಚದಲ್ಲಿ ಕಂಪ್ಯೂಟರ್ ಲ್ಯಾಬ್‌ಗಳನ್ನು ಸ್ಥಾಪಿಸಲು ಅನುಮೋದನೆ.
- ಬೆಂಗಳೂರಿನ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಕೆಪಿಟಿಸಿಎಲ್‌ನ ಯಲಹಂಕ ಕಂಬೈನ್ಡ್ ಸೈಕಲ್ ಪವರ್ ಪ್ಲಾಂಟ್‌ಗೆ ತೃತೀಯ ಸಂಸ್ಕರಿಸಿದ ನೀರನ್ನು ಪೂರೈಸಲು ಜಕ್ಕೂರಿನಲ್ಲಿರುವ 15 ಎಂಎಲ್‌ಡಿ ತೃತೀಯ ಸಂಸ್ಕರಿಸಿದ ಘಟಕದ 5 ವರ್ಷಗಳ ಸಮಗ್ರ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ₹39.10 ಕೋಟಿ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಅನುಮೋದನೆ.
- ಚಿಕ್ಕಬಳ್ಳಾಪುರ, ಕೆಜಿಎಫ್ ಮತ್ತು ವಿಜಯಪುರ ಎಪಿಎಂಸಿಗಳಲ್ಲಿ ₹60 ಕೋಟಿ ವೆಚ್ಚದಲ್ಲಿ ನಬಾರ್ಡ್ ಅನುದಾನದೊಂದಿಗೆ ಮೂಲಸೌಕರ್ಯ ಕೈಗೊಳ್ಳಲು ಅನುಮೋದನೆ.
- ಸಾಮಾಜಿಕ ಜಾಲತಾಣಗಳಲ್ಲಿ ಹರಡಲಾಗುವ ಸುಳ್ಳು ಸುದ್ದಿ, ತಪ್ಪು ಮಾಹಿತಿ ಮತ್ತು ದ್ವೇಷ ಪೂರಿತ ಪೋಸ್ಟ್‌ಗಳನ್ನು ಪತ್ತೆ ಮಾಡಲು ಅನುಕೂಲವಾಗುವಂತೆ ₹67.26 ಕೋಟಿ ವೆಚ್ಚದಲ್ಲಿ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ತಂತ್ರಾಂಶ ಖರೀದಿಸಲು ತೀರ್ಮಾನ.
- 2025- 26ನೇ ಸಾಲಿನಲ್ಲಿ ಶುಚಿ ಕಾರ್ಯಕ್ರಮದಡಿ ಸ್ಯಾನಿಟರಿ ನ್ಯಾಪ್ಕಿನ್ ಪ್ಯಾಡ್‌ಗಳು ಹಾಗೂ ಮುಟ್ಟಿನ ಕಪ್‌ಗಳನ್ನು ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಸರ್ಕಾರಿ, ಅನುದಾನಿತ ಶಾಲೆಗಳು, ಕಾಲೇಜುಗಳು ಹಾಗೂ ವಿದ್ಯಾರ್ಥಿ ನಿಲಯಗಳಲ್ಲಿನ ಹೆಣ್ಣು ಮಕ್ಕಳಿಗೆ ವಿತರಿಸಲು ಹೊರಡಿಸಿರುವ ಆದೇಶಗಳಿಗೆ ಘಟನೋತ್ತರ ಅನುಮೋದನೆ.
- ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ 'ಸಾರಥಿ' ಯೋಜನೆಯಡಿ ಆಟೋ ರಿಕ್ಷಾ ಮತ್ತು ಕಾರುಗಳನ್ನು ಖರೀದಿಸಲು ₹19.18 ಕೋಟಿ ಸಹಾಯಧನ ಹಾಗೂ ಇ-ವೆಂಡಿಂಗ್ ಯೋಜನೆಯಡಿ ಇ-ವೆಂಡಿಂಗ್ ವಾಹನಗಳನ್ನು ಖರೀದಿಸಲು ₹42.84 ಕೋಟಿ ಸಹಾಯಧನವನ್ನು ಅರ್ಹ ಫಲಾನುಭವಿಗಳು ಮತ್ತು ಬೀದಿ ಬದಿ ವ್ಯಾಪಾರಿಗಳಿಗೆ ಒದಗಿಸುವ ಯೋಜನೆಗೆ ಒಪ್ಪಿಗೆ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಕೆರೆಯೊಂದರಲ್ಲಿ ಚಿನ್ನಾಟವಾಡುತ್ತಿರುವ ಹುಲಿಗಳು

- ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯಲ್ಲಿ ಮಾನವ - ವನ್ಯಜೀವಿ ಸಂಘರ್ಷ ತಡೆಗಟ್ಟಲು ₹11.65 ಕೋಟಿ ವೆಚ್ಚದಲ್ಲಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕೆ ಅನುಮೋದನೆ.
- ಉಡುಪಿ ಜಿಲ್ಲೆಯ ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಾಲಯದಲ್ಲಿ ನೂತನ ಸೌಪರ್ಣಿಕಾ ಅತಿಥಿಗೃಹ ನಿರ್ಮಾಣ ಕಾಮಗಾರಿಯನ್ನು ₹16 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಅನುಮೋದನೆ.
- ಕೆಕೆಆರ್‌ಡಿಬಿ ಯೋಜನೆಯಡಿ ಕಲಬುರಗಿ ವೃತ್ತದ ಪ್ರಾದೇಶಿಕ ಮತ್ತು ಸಾಮಾಜಿಕ ಅರಣ್ಯ ವಿಭಾಗ, ಬೀದರ್, ರಾಯಚೂರು, ಕಲಬುರಗಿ, ಯಾದಗಿರಿ ಹಾಗೂ ಬಳ್ಳಾರಿ ವೃತ್ತದ ಕೊಪ್ಪಳ ಪ್ರಾದೇಶಿಕ ಮತ್ತು ಸಾಮಾಜಿಕ ಅರಣ್ಯ ವಿಭಾಗಗಳ ₹100 ಕೋಟಿ ವೆಚ್ಚದ ಕಾಮಗಾರಿಗಳಿಗೆ ಅನುಮೋದನೆ.

ಭೂ ವ್ಯಾಜ್ಯಗಳಿಂದ ಮುಕ್ತಿ ನೀಡಲೆಂದೇ 'ಭೂ ಗ್ಯಾರಂಟಿ'

ಏನಿದು ಭೂ ಗ್ಯಾರಂಟಿ ಯೋಜನೆ?

ಯಾವುದೇ ಕೋರ್ಟ್ ಕಲಾಪಗಳನ್ನು ಪರಿಶೀಲಿಸಿದರೆ ಅರ್ಧದಷ್ಟು ಪ್ರಕರಣಗಳು ಭೂ ವ್ಯಾಜ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳಾಗಿರುತ್ತವೆ. ಈ ವ್ಯಾಜ್ಯಗಳಿಂದ ಜನ ಎಷ್ಟು ಪರದಾಡುತ್ತಿದ್ದಾರೆಂದು ನಮ್ಮ ಸರ್ಕಾರಕ್ಕೆ ಗೊತ್ತಿದೆ. ಹೀಗಾಗಿಯೇ, ದೇಶದಲ್ಲೇ ಮೊದಲ ಬಾರಿಗೆ ಕೆಲ ವಿನೂತನ ಪ್ರಯೋಗಗಳ ಮೂಲಕ ಜನರಿಗೆ ಈ ಅಲೆದಾಟದಿಂದ ಮುಕ್ತಿ ನೀಡಲೆಂದು ಭೂ ಗ್ಯಾರಂಟಿ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ಈ ಯೋಜನೆಯಡಿ ಜನರಿಗೆ ಅವರವರ ಬಾಗಿಲ ಬಳಿಯೇ ಭೂ ದಾಖಲೆಗಳು ಸಿಗುವ ವ್ಯವಸ್ಥೆ ಕಲ್ಪಿಸಿದ್ದೇವೆ. ವಿಶೇಷವಾಗಿ 2ಲಕ್ಷಕ್ಕೂ ಅಧಿಕ ಕುಟುಂಬಗಳಿಗೆ ಭೂ ದಾಖಲೆಗಳನ್ನು ವಿತರಿಸುವ ಮೂಲಕ ಜನರ ಕಷ್ಟಗಳಿಗೆ ಸ್ಪಂದಿಸುವ ಪ್ರಮಾಣಿಕ ಪ್ರಯತ್ನ ಮಾಡಿದ್ದೇವೆ. ಕಂದಾಯ ಸೇವೆಗಳನ್ನು ಡಿಜಿಟಲೀಕರಣಗೊಳಿಸಿದ್ದು, ಜನ ತಾವು ಕುಳಿತಲ್ಲೇ ಕಂದಾಯ ಇಲಾಖೆಯ ಸೇವೆಗಳನ್ನು ಪಡೆಯಬಹುದಾಗಿದೆ.

ಕಂದಾಯ ಇಲಾಖೆಯಿಂದ ಜನಪರ ಯೋಜನೆಗಳೇನು?

ರಾಜ್ಯದಲ್ಲಿ ಕಂದಾಯ ಇಲಾಖೆಯನ್ನು ಜನಸ್ನೇಹಿಗೊಳಿಸುವ ನಿಟ್ಟಿನಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಅನೇಕ ವರ್ಷಗಳಿಂದ ಕಂದಾಯ ಇಲಾಖೆಯಲ್ಲಿ ಕಡತಗಳ ನಾಪತ್ತೆ ಎನ್ನುವುದು ದೊಡ್ಡ ಸವಾಲಾಗಿ ಪರಿಣಮಿಸಿತ್ತು. ಈ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರದಿಂದ ಕಾಗದ ರಹಿತ ಕಚೇರಿಗಳನ್ನು ಮಾಡಲು ಡಿಜಿಟಲ್ ಸ್ಪರ್ಶ ನೀಡಲಾಗಿದೆ. ಆ ಮೂಲಕ ರಾಜ್ಯದಲ್ಲಿ ಆರ್‌ಐ ಹಂತದಿಂದ ಸಚಿವರ ಕಚೇರಿ ವರೆಗೆ ಎಲ್ಲವೂ ಕಾಗದ ರಹಿತ ವ್ಯವಹಾರ ಮಾಡುವ ಹಂತಕ್ಕೆ ಇಲಾಖೆ ಬದಲಾವಣೆ ಕಂಡಿದೆ. ರಾಜ್ಯದಲ್ಲಿ ಸರ್ಕಾರಿ ಭೂಮಿಯನ್ನು ರಕ್ಷಿಸುವ ನಿಟ್ಟಿನಲ್ಲಿ ಲ್ಯಾಂಡ್ ಬೀಟ್ ಕಾರ್ಯಕ್ರಮ ಆರಂಭಿಸಿದ್ದು, ಈಚರೆಗೆ 14.3ಲಕ್ಷ ಆಸ್ತಿಗಳ ರಕ್ಷಣೆ ಸಾಧ್ಯವಾಗಿದೆ. ಹೀಗೆ ಸದಾ ರಾಜ್ಯ ಸರ್ಕಾರದಿಂದ ಜನಪರ ಆಡಳಿತ ಸಿಗುವಂತಾಗಿದೆ.

ಕಂದಾಯ ಇಲಾಖೆಯಲ್ಲಾಗಿರುವ ಬದಲಾವಣೆಗಳೇನು?

ರಾಜ್ಯದಲ್ಲಿ ಕಂದಾಯ ಇಲಾಖೆಯ ಸರ್ವೇ ವಿಭಾಗ, ನೋಂದಣಿ ಕಚೇರಿಗಳು ಸದಾ ಜನಜಂಗುಳಿಯಿಂದ ಕೂಡಿರುತ್ತಿದ್ದವು. ಭೂ ವ್ಯಾಜ್ಯಗಳಿಂದ ಈ ಇಲಾಖೆಗಳನ್ನು ಕಂಡರೆ ತಲೆನೋವು ಎಂಬಂತೆ ಜನ ನೋಡುವ ಸ್ಥಿತಿಗೆ ತಲುಪಿದ್ದವು. ಆದರೆ, ರಾಜ್ಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಮತ್ತು ಕಾಂಗ್ರೆಸ್ ಪಕ್ಷ ನನ್ನಲ್ಲಿ ನಂಬಿಕೆಯನ್ನಿಟ್ಟು ಕಂದಾಯ ಇಲಾಖೆ ಸಚಿವ ಸ್ಥಾನ ನೀಡಿದ ಬಳಿಕ ಈ ಸ್ವರೂಪ ಬದಲಿಸಬೇಕೆಂದು ನಿಶ್ಚಯಿಸಿದೆ. ಇದರ ಭಾಗವಾಗಿ ರಾಜ್ಯಾದ್ಯಂತ ಕಂದಾಯ ಇಲಾಖೆಯನ್ನು ಬಲಪಡಿಸಲು ಮುಂದಾದೆ. ನಮ್ಮ ಇಲಾಖೆಯ ವ್ಯಾಪ್ತಿಯ ವಿಎಗಳಿಂದ ಹಿಡಿದು ರಾಜ್ಯದ ಎಸಿಎಸ್ ವರೆಗೆ ಎಲ್ಲರೂ ಈ ಬದಲಾವಣೆಗಳಿಗೆ ಹೊಂದಿಕೊಂಡರು. ಹೀಗಾಗಿಯೇ, ಯಶಸ್ವಿಯಾಗಿ ಕಂದಾಯ ಗ್ರಾಮ ಕಾರ್ಯಕ್ರಮ ಯಶಸ್ವಿಯಾಗಿದೆ. ಇದಕ್ಕೆ ಪೂರಕವಾಗಿ ರಾಜ್ಯ ಸರ್ಕಾರ ಸದಾ ಸಿಬ್ಬಂದಿ ಬಲ ನೀಡುತ್ತ ಬಂದಿದೆ. ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇಲಾಖೆಗೆ 1ಸಾವಿರ ವಿಎಗಳ ನೇಮಕಕ್ಕೆ ಅವಕಾಶ ಮಾಡಿಕೊಟ್ಟರು. ಹೀಗಾಗಿ, ಸಿಬ್ಬಂದಿ ಬಲದಿಂದ ಕಂದಾಯ ಇಲಾಖೆಯ ಕಾರ್ಯಕ್ರಮ ಜಾರಿ ಸಹಕಾರಿಯಾಗಿದೆ. ಜತೆಗೆ, ರಾಜ್ಯಾದ್ಯಂತ 8500 ವಿಎಗಳಿಗೆ ಲ್ಯಾಪ್‌ಟಾಪ್, 7850 ವಿಎಗಳಿಗೆ ಕಚೇರಿ, 1239 ಪರವಾನಿಗೆ ಹೊಂದಿದ ಸರ್ವೇಯರ್‌ಗಳ ನೇಮಕ, 34 ಎಡಿಎಲ್‌ಆರ್ ನೇಮಕ ಸೇರಿದಂತೆ ಸಾಕಷ್ಟು ಸಿಬ್ಬಂದಿ ಬಲ ಕಂದಾಯ ಇಲಾಖೆಗೆ ಸಿಕ್ಕಿದೆ. ಜತೆಗೆ, ಸರ್ವೇ ಕಾರ್ಯಗಳಿಗೆ ಅತ್ಯಾಧುನಿಕ ಉಪಕರಣಗಳನ್ನು ಖರೀದಿಸಲು ಸಹ ರಾಜ್ಯ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿದೆ. ಹೀಗೆ, ಸದಾ ಇಲಾಖೆಗೆ ಸರ್ಕಾರದಿಂದ ನೆರವು ಸಿಗುತ್ತಿರುವ ಹಿನ್ನೆಲೆ ಸಾಕಷ್ಟು ಬದಲಾವಣೆ ತರಲು ಸಾಧ್ಯವಾಗಿದೆ.



ಸರ್ಕಾರದ ಜನಪರ ಕಾರ್ಯಕ್ರಮಗಳ ಅನುಷ್ಠಾನ ಹೇಗಿದೆ?

ರಾಜ್ಯದಲ್ಲಿ ಈಗಾಗಲೇ ಜಾರಿಯಾಗಿರುವ ಗ್ಯಾರಂಟಿಗಳು ಸರ್ಕಾರದ ಜನಪರ ಕಾಳಜಿಯನ್ನು ತೋರುತ್ತವೆ. ಇದೇ ಸಾಲಿಗೆ ಭೂ ಗ್ಯಾರಂಟಿ ಸಹ ಸೇರ್ಪಡೆಯಾಗಿದ್ದು, ರಾಜ್ಯಾದ್ಯಂತ ಇದರ ಅನುಷ್ಠಾನಕ್ಕೆ ನಿತ್ಯ ಕಂದಾಯ ಇಲಾಖೆಯ ಸಾಕಷ್ಟು ಸಿಬ್ಬಂದಿ ದುಡಿದಿದ್ದಾರೆ. ಜತೆಗೆ, ಜನರ ಅಲೆದಾಟ ತಪ್ಪಿಸಲು ಅಗತ್ಯ ಸಿದ್ಧತೆಗಳಿಗಾಗಿ ನಮ್ಮ ಸಿಬ್ಬಂದಿ ನಿರಂತರವಾಗಿ ಸಾವಿರಾರು ಮನೆಗಳಿಗೆ ಭೇಟಿ ನೀಡಿದ್ದಾರೆ. ಆ ಮೂಲಕ ಇಂದು ಲಕ್ಷಾಂತರ ಹಕ್ಕುಪತ್ರಗಳನ್ನು ವಿತರಿಸುವ ಹಂತಕ್ಕೆ ಬದಲಾವಣೆಯಾಗಿದೆ.

ಕೃಷ್ಣಭೈರೇಗೌಡ, ಸಚಿವರು, ಕಂದಾಯ ಇಲಾಖೆ.

ಸಂವಿಧಾನದ ಆಶಯ ಈಡೇರಿಕೆಗೆ ನಿರಂತರ ಯತ್ನ

ಸರ್ಕಾರದ ಯೋಜನೆಗಳ ಅನುಷ್ಠಾನ ಹೇಗಿದೆ?

ರಾಜ್ಯದಲ್ಲಿ ಸಮಾಜವಾದಿ ಚಿಂತನೆ, ಹಿಂದುಳಿಗ ವರ್ಗ, ಅಲ್ಪಸಂಖ್ಯಾತರು ಸೇರಿ ಸಮಾಜದಲ್ಲಿ ಶೋಷಣೆಗೆ ಒಳಗಾಗುವ ಯಾವುದೇ ಜನರ ಧ್ವನಿಯಾಗಲು ಸಿದ್ದರಾಮಯ್ಯನವರು ಸದಾ ಸಿದ್ಧರಿರುತ್ತಾರೆ. ಅವರ ಜನಪರ ಕಾಳಜಿ ಸರ್ಕಾಧ ಎಲ್ಲಾ ಯೋಜನೆಗಳಲ್ಲೂ ಕಾಣುತ್ತದೆ. ಸರ್ಕಾರದ ಹಿಂದಿನ ಅವಧಿಯಲ್ಲಿ ಜಾರಿಗೆ ತಂದಿದ್ದ ಭಾಗ್ಯಗಳ ಅನುಷ್ಠಾನ ಮಾತ್ರವಲ್ಲದೇ ಪ್ರಸ್ತುತ ಗ್ಯಾರಂಟಿಗಳಲ್ಲೂ ಸಹ ಜನಪರ ಕಾಳಜಿಯೇ ಅಗ್ರಗಣ್ಯ. ಹಣಕಾಸು ಮಂತ್ರಿಗಳಾಗಿ ಸುದೀರ್ಘ ಅನುಭವವುಳ್ಳ ಅವರು ಹೇಗಾದರೂ ಬಜೆಟ್‌ನಲ್ಲಿ ಯೋಜನೆಗಳಿಗೆ ಹಣ ಹೊಂದಿಸುವ ಪರಿಣತಿ ಹೊಂದಿದ್ದಾರೆ. ವಿಶೇಷವಾಗಿ, ಹಿಂದುಳಿದ ವರ್ಗಗಳ ಅಭ್ಯುದಯಕ್ಕೆ ಸದಾ ಮಿಡಿಯುವ ಮನಸ್ಸು ಸರ್ಕಾರಕ್ಕಿದೆ. ಹೀಗಾಗಿಯೇ, ಕಳೆದ 1ಸಾವಿರ ದಿನಗಳ ಆಡಳಿತದಲ್ಲಿ ಅನೇಕ ಯೋಜನೆಗಳು ಜನರನ್ನು ಮುಟ್ಟಿವೆ.

ಸರ್ಕಾರದಿಂದ ಇಲಾಖೆಯ ಯೋಜನೆಗಳಿಗೆ ಸ್ಪಂದನೆ ಹೇಗಿದೆ?

ರಾಜ್ಯ ಸರ್ಕಾರ ಎಲ್ಲಾ ಇಲಾಖೆಗಳ ಮೂಲಕ ಜನ ಕಲ್ಯಾಣಕ್ಕೆ ಯೋಜನೆಗಳನ್ನು ಜಾರಿಗೆ ತರುತ್ತಿದೆ. ವಿಶೇಷವಾಗಿ ಸಮಾಜ ಕಲ್ಯಾಣ ಇಲಾಖೆ ನೇತೃತ್ವ ವಹಿಸಿದ ನನಗೆ ಸಿದ್ದರಾಮಯ್ಯನವರು ಕಳೆದ 4ದಶಕಗಳಿಂದ ಪರಿಚಯ. ಆ ಸ್ನೇಹ, ಸಮಾಜವಾದಿ ತತ್ವಾದರ್ಶಗಳು ಬಡವರ ಪರ ದುಡಿಯುವ ನಮ್ಮ ಉದ್ದೇಶಗಳಿಗೆ ನೆರವಾಗಿದೆ. ಹೀಗಾಗಿಯೇ, ಇಲಾಖೆಯ ಎಲ್ಲಾ ಕಾರ್ಯಕ್ರಮಗಳಿಗೆ ಸರ್ಕಾರದ ನೆರವು ಇದ್ದೇ ಇರುತ್ತದೆ. ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟರಿಗೆ ಆಯವ್ಯಯದಲ್ಲಿ ಹಣ ಮೀಸಲಿಡುವ ಯೋಜನೆ ಸಂಬಂಧ ಎಸ್ಸಿಪಿ-ಟಿಎಸ್ಪಿ ಕಾಯ್ದೆ, ಎಸ್ಸಿ ಒಳ ಮೀಸಲಾತಿ, ಎಸ್ಸಿ,ಎಸ್ಟಿ ಬಡ್ತಿ ಮೀಸಲಾತಿ ಮಸೂದೆ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ 20ಲಕ್ಷದಿಂದ 10ಕೋಟಿವರೆಗೆ ಸಾಲ (4% ಬಡ್ಡಿ) ಸೌಕರ್ಯ ಸೇರಿದಂತೆ ಸಮಾಜದಲ್ಲಿನ ಆರ್ಥಿಕ ಅಶಕ್ತರಿಗೆ ಅಗತ್ಯ ಬಲ ತುಂಬುವ ಕೆಲಸಕ್ಕೆಂದೂ ಒಪ್ಪುತ್ತಾರೆ. ಹೀಗಾಗಿಯೇ, ಸಮಾಜ ಕಲ್ಯಾಣ ಇಲಾಖೆಯ ಯೋಜನೆಗಳಿಗೆ ಸರ್ಕಾರ ಸದಾ ಬೆಂಬಲವಾಗಿ ನಿಂತಿದೆ.

ಇಲಾಖೆಯ ಪ್ರಮುಖ ಕಾರ್ಯಕ್ರಮಗಳೇನು?

ರಾಜ್ಯದಲ್ಲಿ ಯುವಕರೆಲ್ಲಾ ಮೌಢ್ಯ, ಕೋಮುವಾದದತ್ತ ಹೆಚ್ಚಿನ ಆಕರ್ಷಣೆಗೆ ಒಳಗಾಗುತ್ತಿರುವ ಅಂಶ ಗಮನಕ್ಕೆ ಬಂತು. ದೇಶದಲ್ಲಿ ನಾವೆಲ್ಲಾ ಒಂದು ಎನ್ನುವ ಭಾವನೆಯಲ್ಲಿ ಬದುಕಬೇಕು. ಸಮುದಾಯಗಳ ನಡುವೆ ಕಿಚ್ಚು ಹಚ್ಚುವ ಯಾವುದೇ ಸಿದ್ಧಾಂತಗಳಿಗೆ ನಾವು ಅವಕಾಶ ಮಾಡಿಕೊಡುವುದಿಲ್ಲ. ಹೀಗಾಗಿ, ಶಾಲಾ, ಕಾಲೇಜುಗಳಲ್ಲಿ ಪ್ರಾರ್ಥನೆ ವೇಳೆ ಸಂವಿಧಾನ ಪೀಠಿಕೆ ಓದು ಕಡ್ಡಾಯಗೊಳಿಸಿದೆವು. ಇದೇ ರೀತಿ, ರಾಜ್ಯದೆಲ್ಲೆಡೆ ಸಂವಿಧಾನದ ಆಶಯಗಳ ಕುರಿತು ಜನರಲ್ಲಿ ಹೆಚ್ಚಿನ ಅರಿವು ಮೂಡಬೇಕೆನ್ನುವ ಸದುದ್ದೇಶದಿಂದಲೇ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನದಂದು ಸಂವಿಧಾನ ಮಾನವ ಸರಪಳಿ ರಚಿಸಿದ್ದೆವು. ಬೀದರ್‌ನಿಂದ ಚಾಮರಾಜನಗರದವರೆಗೆ 25ಲಕ್ಷಕ್ಕೂ ಅಧಿಕ ಜನರಿಂದ 2500ಕಿಮೀಯ ಈ ಮಾನವ ಸರಪಳಿ ಕಾರ್ಯಕ್ರಮ ವಿಶ್ವ ದಾಖಲೆ ಸೃಷ್ಟಿಸಿತು. ಹೀಗೆ, ರಾಜ್ಯ ಸರ್ಕಾರ ಸದಾ ಜನಪರ, ಸಂವಿಧಾನಾತ್ಮಕ ಅಂಶಗಳ ಯಾವುದೇ ಕಾರ್ಯಕ್ರಮಕ್ಕೆ ಸಜ್ಜಾಗಿ ಯೋಜನೆಗಳ ಅನುಷ್ಠಾನ ಮಾಡುತ್ತಿದೆ.

ಎಚ್.ಸಿ.ಮಹದೇವಪ್ಪ, ಸಮಾಜ ಕಲ್ಯಾಣ ಇಲಾಖೆ ಸಚಿವರು.

ಪ್ರಿಯಾಂಕ್ ಮಾತಿಗೆ ಪರ–ವಿರುದ್ಧ ಧ್ವನಿ

ಆರ್‌ಎಸ್‌ಎಸ್ ಕುರಿತಂತೆ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಕಾರ್ಯಕ್ರಮವೊಂದರಲ್ಲಿ ಆಡಿರುವ ಮಾತುಗಳ ಬಗ್ಗೆ ಬಿಜೆಪಿ, ವಿಎಚ್‌ಪಿ ನಾಯಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದರೆ, ಕಾಂಗ್ರೆಸ್ ನಾಯಕರು ಅವರ ಪರ ಧ್ವನಿ ಎತ್ತಿದ್ದಾರೆ

ದೇಶಭಕ್ತರನ್ನು ಅವಮಾನಿಸುವ ಕುತಂತ್ರದ ಭಾಗ: ವಿಎಚ್‌ಪಿ

ನಾಗಪುರ (ಪಿಟಿಐ): ರಾಷ್ಟ್ರೀಯ ಸ್ವಯಂಸೇವಕ ಸಂಘದ ವಿರುದ್ಧ ಟೀಕೆ ಮಾಡಿರುವ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಸೋಮವಾರ ತರಾಟೆಗೆ ತೆಗೆದುಕೊಂಡಿದ್ದು, 'ಸಚಿವರ ಹೇಳಿಕೆಯು ದೇಶಭಕ್ತರನ್ನು ಅವಮಾನಿಸುವ ಕುತಂತ್ರದ ಭಾಗ' ಎಂದು ಹೇಳಿದೆ.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿಎಚ್‌ಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಮಿಲಿಂದ್ ಪರಾಂಡೆ, 'ಹಿಂದೂಗಳು ಜಾಗೃತರಾಗುವುದನ್ನು ಸಹಿಸದ ಅನೇಕ ವ್ಯಕ್ತಿಗಳು ಭಾರತದಲ್ಲಿ ಇದ್ದಾರೆ. ಅವರು ಅಸಂಬದ್ಧ ಹೇಳಿಕೆಗಳನ್ನು ನೀಡುತ್ತಿರುತ್ತಾರೆ. ಕೆಟ್ಟ ಪದಗಳನ್ನು ಬಳಸಿ ದೇಶಭಕ್ತ ಸಂಘಟನೆಗಳನ್ನು ಅವಮಾನಿಸುವುದು ಅವರ ಬೌದ್ಧಿಕ ದಿವಾಳಿತನವನ್ನು ತೋರಿಸುತ್ತದೆ' ಎಂದು ವಾಗ್ದಾಳಿ ನಡೆಸಿದರು.

'ಅವರು (ಖರ್ಗೆ) ಹೇಳಿದ್ದು ಸಂಪೂರ್ಣ ಸುಳ್ಳು ಮತ್ತು ಅದು ಅವರಿಗೂ ತಿಳಿದಿದೆ. ಆದರೆ, ದೇಶಭಕ್ತರ ಮಾನಹಾನಿ ಮಾಡುವ ಉದ್ದೇಶದಿಂದ ಆ ಕೆಲಸ ಮಾಡುತ್ತಾರೆ. ಅಂಥವರನ್ನು ಮತ್ತೆ ಅಧಿಕಾರಕ್ಕೆ ತರಬೇಕೇ ಎಂದು ಕರ್ನಾಟಕದ ಜನರು ಯೋಚಿಸಬೇಕು' ಎಂದರು.

'ಹಿಂದೂಗಳ ಹಿತಾಸಕ್ತಿಯಲ್ಲಿ ನಂಬಿಕೆ ಇರುವವರು ಕೇಂದ್ರ ಮತ್ತು ರಾಜ್ಯಗಳಲ್ಲಿ ಅಧಿಕಾರದಲ್ಲಿರಬೇಕು ಎಂದು ವಿಎಚ್‌ಪಿ ಯಾವಾಗಲೂ ಪ್ರತಿಪಾದಿಸುತ್ತದೆ' ಎಂದು ಹೇಳಿದರು.

> ಪ್ರಿಯಾಂಕ್ ಖರ್ಗೆಗೆ ಆರ್‌ಎಸ್‌ಎಸ್ ಕುರಿತು ಸದಾ ನಕಾರಾತ್ಮಕವಾಗಿ (ನೆಗೆಟಿವ್) ಮಾತನಾಡುವುದು ಚಟವಾಗಿದೆ. ಇವರೊಂದು ರೀತಿಯಲ್ಲಿ ನೆಗೆಟಿವ್ ದೆವ್ವ
> **ಎನ್. ರವಿಕುಮಾರ್,** ವಿಧಾನಪರಿಷತ್ ವಿರೋಧಪಕ್ಷದ ಮುಖ್ಯಸಚೇತಕ

> ಸಂವಿಧಾನದ ಆಶೋತ್ತರಗಳನ್ನು ವೈಯಕ್ತಿಕ ಲಾಭಕ್ಕೆ ಬಳಸಿಕೊಂಡಿರುವ ನೀವು 'ಇದಿ ಅಮೀನ್' ಮಾದರಿಯಲ್ಲಿ ಕಲಬುರಗಿ ಜನರ ಜೀವ ಹೀರುವ ದೆವ್ವಗಳಾಗಿದ್ದೀರಿ
> **ವಿ.ಸುನಿಲ್‌ಕುಮಾರ್,** ಬಿಜೆಪಿ ಶಾಸಕ

ದ್ವೇಷ, ಹತಾಶೆಯ ಪ್ರತೀಕ: ವಿಜಯೇಂದ್ರ

ಬಿ.ವೈ. ವಿಜಯೇಂದ್ರ

ಆರ್‌ಎಸ್‌ಎಸ್ ಕುರಿತು ಸದಾ ತಲೆಕೆಟ್ಟ ಮತ್ತು ಉದಾಸ ಮಾತುಗಳನ್ನಾಡುವ ಸಚಿವ ಪ್ರಿಯಾಂಕ್ ಖರ್ಗೆ ಅವರು ನಾಗಪುರಕ್ಕೆ ಹೋಗಿ ಅಲ್ಲಿ ಒಂದಿಷ್ಟು ಆರ್‌ಎಸ್‌ಎಸ್ ಕುರಿತು ಅಧ್ಯಯನ ಮಾಡಿ, ಬಳಿಕ ಮಾತನಾಡಲಿ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಕ್ಷಿಣಕನ್ನಡ ಜಿಲ್ಲೆಯ ವಿರುದ್ಧ ಪ್ರಿಯಾಂಕ್ ಮಾತನಾಡಿದ್ದಾರೆ. ಕಳೆದ 50 ವರ್ಷಗಳಿಂದ ಕಲಬುರಗಿ ಮಾತ್ರವಲ್ಲ, ಇಡೀ ಕಲ್ಯಾಣ ಕರ್ನಾಟಕ ಇವರ ಕುಟುಂಬದ ಹಿಡಿತದಲ್ಲಿದೆ. ಮಲ್ಲಿಕಾರ್ಜುನ ಖರ್ಗೆ ಮತ್ತು ಪ್ರಿಯಾಂಕ್ ಖರ್ಗೆ ಸುದೀರ್ಘ ಅಧಿಕಾರ ಅನುಭವಿಸುತ್ತಲೇ ಬಂದಿದ್ದಾರೆ. ರಾಜ್ಯದ 59 ಅತಿ ಹೆಚ್ಚು ಹಿಂದುಳಿದ ತಾಲ್ಲೂಕುಗಳಲ್ಲಿ ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕ ಭಾಗದಲ್ಲೇ ಇವೆ. ಶಿವಮೊಗ್ಗ ಬಗ್ಗೆಯೂ ಸವಾಲು ಹಾಕಿದ್ದಾರೆ. ಶಿವಮೊಗ್ಗ ಮತ್ತು ಕಲಬುರ್ಗಿ ಅಭಿವೃದ್ಧಿ ಚರ್ಚೆಗೂ ಸಿದ್ಧ ಎಂದರು.

ಕಲಬುರಗಿಯಲ್ಲಿ 12 ದಿನಗಳಿಂದ 9 ಬಡಾವಣೆಗಳಲ್ಲಿ ಕುಡಿಯುವ ನೀರು ಬಂದಿಲ್ಲ. ಆ ಕಡೆ ಗಮನಹರಿಸಲು ಇವರಿಗೆ ಪುರುಸೊತ್ತಿಲ್ಲ. ಕಳೆದ ಎರಡೂವರೆ ವರ್ಷದಲ್ಲಿಎಷ್ಟು ಕೆಡಿಪಿ ಸಭೆಗಳನ್ನು ನಡೆಸಿದ್ದಾರೆ ಎಂಬ ಮಾಹಿತಿ ನೀಡಲಿ ಎಂದು ಆಗ್ರಹಿಸಿದರು.

ಕಾಂಗ್ರೆಸ್ 'ಡೆವಿಲ್ಸ್ ವರ್ಕ್‌ಶಾಪ್': ಛಲವಾದಿ

ನಾರಾಯಣ ಸ್ವಾಮಿ

'ಕಾಂಗ್ರೆಸ್ ದೇಶದ ಪರವಾಗಿದ್ದರೆ ಆರ್‌ಎಸ್‌ಎಸ್ ಆ ಪಕ್ಷಕ್ಕೂ ಬೆಂಬಲ ನೀಡುತ್ತದೆ' ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ.

'ಆರ್‌ಎಸ್‌ಎಸ್ ದೆವ್ವದ ಸಂಘಟನೆ ಅಲ್ಲ, ಅದು ದೇಶ ಭಕ್ತರ ಕೂಟ. ಕಾಂಗ್ರೆಸ್ ಅನ್ನು ಯಾವಾಗಲೂ 'ಡೆವಿಲ್ ವರ್ಕ್‌ಶಾಪ್' ಎಂದು ಕರೆಯಲಾಗುತ್ತಿದೆ. ಹೀಗಾಗಿ ಅವರು ದೆವ್ವಕ್ಕೆ ಹೋಲಿಸಿದ್ದಾರೆ. ಸಂಘವು ದೇವರ ಆಶೀರ್ವಾದದಿಂದ ಇರುವ ಕೂಟ. ದೇವರ ನೆರಳಿನಲ್ಲಿ ಈ ಪ್ರಪಂಚದಲ್ಲಿರುವ ಪ್ರತಿಯೊಂದು ಜೀವಿಯೂ ಜೀವಿಸುತ್ತದೆ' ಎಂದಿದ್ದಾರೆ.

ಆರ್‌ಎಸ್‌ಎಸ್ ಕಚೇರಿ ಮೇಲೆ ದಾಳಿ ಮಾಡಲಿ: ಸಚಿವ ಶಿವರಾಜ ತಂಗಡಗಿ

ಶಿವರಾಜ ತಂಗಡಗಿ

ಕೊಪ್ಪಳ: 'ಆರ್‌ಎಸ್‌ಎಸ್ ಕುರಿತು ಸಚಿವ ಪ್ರಿಯಾಂಕ್ ಖರ್ಗೆ ಅವರು ಸರಿಯಾಗಿ ಹೇಳಿದ್ದಾರೆ. ಕೇಂದ್ರ ಸರ್ಕಾರ ಮತ್ತೊಬ್ಬರ ಮೇಲೆ ಇಡಿ, ಐಟಿ, ಸಿಬಿಐ ದಾಳಿ ಮಾಡುವ ಬದಲು ಆರ್‌ಎಸ್‌ಎಸ್ ಕಚೇರಿ ಮೇಲೆ ಮೊದಲು ದಾಳಿ ನಡೆಸಲಿ' ಎಂದು ಹಿಂದುಳಿದ ವರ್ಗಗಳ ಖಾತೆ ಸಚಿವ ಶಿವರಾಜ ತಂಗಡಗಿ ಹೇಳಿದರು.

ಸೋಮವಾರ ಇಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಯಾವತ್ತಿದ್ದರೂ ಆರ್‌ಎಸ್‌ಎಸ್ ಲೆಕ್ಕ ಕೊಡಲೇಬೇಕು. ನೂರು ವರ್ಷಗಳನ್ನು ಪೂರೈಸಿರುವ ಸಂಸ್ಥೆಗೆ ದೊಡ್ಡಮೊತ್ತ ಎಲ್ಲಿಂದ ಬರುತ್ತದೆ. ಯಾರೆಲ್ಲ ಹಣ ಕೊಡುತ್ತಾರೆ ಎನ್ನುವುದು ಬಹಿರಂಗವಾಗಬೇಕು' ಎಂದು ಪ್ರತಿಪಾದಿಸಿದರು.

'ದೊಡ್ಡ ಸಂಸ್ಥೆಯಾದರೂ ಆರ್‌ಎಸ್‌ಎಸ್ ಏಕೆ ನೋಂದಣಿಯಾಗಿಲ್ಲ, ಆರ್‌ಎಸ್‌ಎಸ್ ಕಚೇರಿ ಮೇಲೆ ಕೇಂದ್ರ ತನಿಖಾ ಸಂಸ್ಥೆಗಳು ದಾಳಿ ನಡೆಸಿ ಹಣದ ಮೂಲ ಪತ್ತೆ ಹಚ್ಚಲಿ' ಎಂದು ವಾಗ್ದಾಳಿ ನಡೆಸಿದರು.

'ರಾಜ್ಯ ಹಾಗೂ ದೇಶದಲ್ಲಿ ಕೋಮುವಾದ ಹೆಚ್ಚುತ್ತಿದೆ. ದೊಡ್ಡ ಪ್ರಮಾಣದ ಹೂಡಿಕೆಗೆ ಉತ್ತಮ ವಾತಾವರಣ ಇರಬೇಕು. ಹೂಡಿಕೆದಾರರು ಇದನ್ನು ವಿಚಾರ ಮಾಡುತ್ತಾರೆ. ಅದಕ್ಕೆ ಕರಾವಳಿ ಭಾಗಕ್ಕೆ ಐಟಿ, ಬಿಟಿ ಬರುತ್ತಿಲ್ಲ. ಬಿಜೆಪಿಗರಿಗೆ ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ' ಎಂದರು.

> ಆರ್‌ಎಸ್‌ಎಸ್ ಒಂದು ನೋಂದಾಯಿತ ಸಂಸ್ಥೆಯಲ್ಲ ಎಂದು ಸ್ವತಃ ಮೋಹನ್ ಭಾಗವತ್ ಹೇಳಿದ್ದಾರೆ. ನೋಂದಣಿಯಾಗದ ಸಂಸ್ಥೆಯನ್ನು 'ಫೋರ್ಸ್' ಎನ್ನಬೇಕಾಗುತ್ತದೆ
> **ಬಿ.ಕೆ. ಹರಿಪ್ರಸಾದ್,** ವಿಧಾನಪರಿಷತ್ ಕಾಂಗ್ರೆಸ್ ಸದಸ್ಯ

ಬೌದ್ಧಿಕ ದಿವಾಳಿತನಕ್ಕೆ ಸಾಕ್ಷಿ– ರಮೇಶ್ ಬಾಬು

'ಪ್ರಿಯಾಂಕ್ ಖರ್ಗೆ ಮತ್ತು ಅವರ ಕುಟುಂಬದ ವಿರುದ್ಧ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ತಮ್ಮ ಪಟಾಲಾಂ ಜೊತೆ ಅಲವತ್ತುಕೊಂಡಿರುವುದು ಅವರ ಬೌದ್ಧಿಕ ದಿವಾಳಿತನಕ್ಕೆ ಸಾಕ್ಷಿ' ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್ ಬಾಬು ಟೀಕಿಸಿದ್ದಾರೆ.

'ಅಧ್ಯಕ್ಷ ಸ್ಥಾನ ಉಳಿಸಿಕೊಳ್ಳಲು ಪದೇ ಪದೇ ದೆಹಲಿಗೆ ದಂಡಯಾತ್ರೆ ಮಾಡುತ್ತಿರುವ ವಿಜಯೇಂದ್ರ ಅವರಿಗೆ, ಆರ್‌ಎಸ್‌ಎಸ್ ಅನ್ನು ಸಮರ್ಥಿಸುವ ಅನಿವಾರ್ಯ ಸೃಷ್ಟಿ ಆಗಿರುವುದು ದೊಡ್ಡ ವಿಪರ್ಯಾಸ' ಎಂದಿದ್ದಾರೆ.

'ಪ್ರಿಯಾಂಕ್ ಅವರು ಸಂಘ ಪರಿವಾರದ ಅಸ್ತಿತ್ವ, ನೋಂದಣಿ ಕಾರ್ಯ ಮತ್ತು ಚಟುವಟಿಕೆಯನ್ನು ಪ್ರಶ್ನಿಸುತ್ತಿದ್ದಾರೆ. ನೋಂದಣಿ ಕುರಿತು ಸಮರ್ಪಕವಾದ ಉತ್ತರ ನೀಡಲು ಸಂಘ ಪರಿವಾರದವರಿಗೆ ಸಾಧ್ಯವಾಗಿಲ್ಲ. ಪ್ರತಿಪಾದನೆಗೆ ಅಥವಾ ಸಮರ್ಥನೆಗೆ ನಿಲ್ಲುವ ಮೂಲಕ ಸಂಘ ಪರಿವಾರದ ಮತ್ತೊಂದು ಮುಖವನ್ನು ಕಳಂಕಿತ ನಾಯಕ ವಿಜಯೇಂದ್ರ ಜನರ ಮುಂದೆ ತೆರೆದಿಟ್ಟಿದ್ದಾರೆ' ಎಂದು ಕುಟುಕಿದ್ದಾರೆ.

'ಪ್ರಿಯಾಂಕ್ ಅವರನ್ನಾಗಲಿ, ಖರ್ಗೆಯವರ ಕುಟುಂಬವನ್ನಾಗಲಿ, ಸಿದ್ಧಾಂತವನ್ನಾಗಲಿ ಅಥವಾ ಕರ್ನಾಟಕಕ್ಕೆ ಅವರು ಕೊಟ್ಟಿರುವ ಕೊಡುಗೆಗಳನ್ನಾಗಲಿ ಪ್ರಶ್ನಿಸುವ ಯಾವುದೇ ನೈತಿಕತೆಯನ್ನು ವಿಜಯೇಂದ್ರ ಉಳಿಸಿಕೊಂಡಿಲ್ಲ. ಅವರಿಂದ ನೈತಿಕತೆಯ ಪಾಠ ಹೇಳಿಸಿಕೊಳ್ಳುವ ಅವಶ್ಯಕತೆ ಖರ್ಗೆ ಕುಟುಂಬಕ್ಕೆ, ಕಾಂಗ್ರೆಸ್‌ಗೆ ಅಥವಾ ಕರ್ನಾಟಕದ ಜನರಿಗೆ ಇಲ್ಲ' ಎಂದೂ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಕಲ್ಯಾಣ'ಕ್ಕೆ ದೆವ್ವಗಳನ್ನು ಓಡಿಸೋ ದಿನ ದೂರವಿಲ್ಲ'


ಆರ್‌.ಅಶೋಕ

'ಆರ್‌ಎಸ್‌ಎಸ್ ಅನ್ನು ವಾಚಾಮ ಗೋಚರವಾಗಿ ಬೈದರೆ, ನಿರಂತರವಾಗಿ ನಿಂದಿಸಿದರೆ ಹೈಕಮಾಂಡ್‌ನ ನಾಯಕರನ್ನು ಮೆಚ್ಚಿಸಿ ಯಾವುದಾದರೂ ಸ್ಥಾನಮಾನ ಪಡೆಯಬಹುದು. ಇನ್ನೂ ಹೆಚ್ಚಿನ ಅಧಿಕಾರ ಸಿಗಬಹುದು ಎಂಬ ಭ್ರಮೆಯಲ್ಲಿರುವ ಪ್ರಿಯಾಂಕ್ ಅದನ್ನೇ ನಿತ್ಯ ಚಾಳಿ ಮಾಡಿಕೊಂಡಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.

ನಾಲ್ಕು ದಶಕಗಳಿಂದ ಕಲ್ಯಾಣ ಕರ್ನಾಟಕದ ಜನರ ಕೃಪಾಕಟಾಕ್ಷದಿಂದ ಅಧಿಕಾರ ಅನುಭವಿಸಿ, ಅಭಿವೃದ್ಧಿಗೆ ಮಾತ್ರ ನಾಳೆ ಬಾ ಎಂಬ ಶಾಶ್ವತವಾದ ಬೋರ್ಡ್ ಹಾಕಿಕೊಂಡಿದ್ದಾರೆ. ಕಲ್ಯಾಣ ಕರ್ನಾಟಕದ ಜನತೆಗೆ ನಂಬಿಕೆ ದ್ರೋಹ ಮಾಡುತ್ತಿರುವ ದೆವ್ವಗಳನ್ನು ಓಡಿಸುವ ದಿನ ದೂರವಿಲ್ಲ ಎಂದು ಅವರು ಕಿಡಿಕಾರಿದ್ದಾರೆ.

ಸುದ್ದಿ 2 ನಿಮಿಷ

'ನಾಯಕತ್ವ ಚರ್ಚೆ ಎಲ್ಲಿದೆ, ಕೋರ್ಟ್ ಬೀದಿ ನಾಯಿ ಹಿಡಿಯಲು ಹೇಳಿದೆ'

ಬೆಂಗಳೂರು: 'ರಾಜ್ಯದಲ್ಲಿ ನಾಯಕತ್ವದ ಚರ್ಚೆ ಎಲ್ಲಿದೆ? ಕೋರ್ಟ್ ಬೀದಿ ನಾಯಿ ಹಿಡಿದು ಶೆಲ್ಟರ್‌ಗಳಲ್ಲಿ ಒಳಗೆ ಹಾಕಿ ಎಂದು ಹೇಳುತ್ತಿದೆ. ಇಲ್ಲಿ ರಾಜಕೀಯ ನಾಯಕತ್ವ ಗಟ್ಟಿಯಾಗಿದೆ' ಎಂದು ಸಚಿವ ಎಚ್‌.ಸಿ. ಮಹದೇವಪ್ಪ ನೀಡಿದ ಹೇಳಿಕೆ ಚರ್ಚೆಗೆ ಕಾರಣವಾಗಿದೆ.

'ನಾಯಕತ್ವದ ವಿಚಾರಕ್ಕೆ ಸಂಬಂಧಪಟ್ಟಂತೆ ರಾಜ್ಯ ನಾಯಕರಾಗಿ ಕೆಲವರು ಗೊಂದಲ ಸೃಷ್ಟಿ ಆಗುತ್ತಿದೆಯಲ್ಲವೇ' ಎಂದು ಸುದ್ದಿಗಾರರು ಕೇಳಿದಾಗ ಮಹದೇವಪ್ಪ ಈ ರೀತಿ ಪ್ರತಿಕ್ರಿಯಿಸಿದರು.

'ಹೈಕಮಾಂಡ್ ಮಧ್ಯಪ್ರವೇಶಿಸಬೇಕು' ಎಂದು ಶಾಸಕರು ಹೇಳುತ್ತಿದ್ದಾರಲ್ಲ? ಎಂಬ ಪ್ರಶ್ನೆಗೆ, 'ಹೈಕಮಾಂಡ್‌ಗೆ ನಿರ್ದೇಶನ ನೀಡುವವರು ಯಾರು? ನಾನೂ, ನೀವೂ ಕೊಡಲು ಆಗುವುದಿಲ್ಲ. ಹೈಕಮಾಂಡ್‌ನವರೇ ಹೇಳಬೇಕು. ಬಾಲವೇ ನಾಯಿಯನ್ನು ಅಲುಗಾಡಿಸಿದರೆ? ಹೈಕಮಾಂಡ್ ಅನ್ನು ಅಲುಗಾಡಿಸಲು ಸಾಧ್ಯವೇ' ಎಂದು ಪ್ರಶ್ನಿಸಿದರು.

'ಹೈಕೋರ್ಟ್ ಹೇಳಿರುವುದಕ್ಕೂ ರಾಜ್ಯ ನಾಯಕರಿಗೂ ಏನು ಸಂಬಂಧ? ಹಾದಿಬೀದಿಯಲ್ಲಿ ಮಾತನಾಡುವುದನ್ನು ನೀವು ಮುಚ್ಚಿಸಬೇಕು ಎಂಬುದು ನಿಮ್ಮ ಮಾತಿನ ಅರ್ಥವೇ' ಎಂದು ಸುದ್ದಿಗಾರರು ಪ್ರಶ್ನಿಸಿದಾಗ, 'ನನಗೆ ಗೊತ್ತಿಲ್ಲಪ್ಪ. ನೀವೆ ಅದನ್ನು ಅರ್ಥ ಮಾಡಿಕೊಳ್ಳಬೇಕು. ನಾನು ಏನೂ ಹೇಳಿಲ್ಲ. ಇಲ್ಲಿ ನಾಯಕತ್ವ ಗಟ್ಟಿಯಾಗಿದೆ. ಪದೇ ಪದೇ ಮಾತನಾಡುವ ಅಗತ್ಯವಿಲ್ಲ' ಎಂದಷ್ಟೇ ಹೇಳಿದರು.

ವ್ಯಕ್ತಿ ಪೂಜೆ ಮಾಡುವುದಿಲ್ಲ: 'ವ್ಯಕ್ತಿ ಪೂಜೆ ಮಾಡಬಾರದು ಎಂದು ಅಂಬೇಡ್ಕರ್ ಹೇಳಿದ್ದಾರೆ. ವ್ಯಕ್ತಿ ಪೂಜೆಯು ಸರ್ವಾಧಿಕಾರಿಯನ್ನು ಸೃಷ್ಟಿಸುತ್ತದೆ. ಸರ್ವಾಧಿಕಾರಿಯು ಪ್ರಜಾಪ್ರಭುತ್ವ ಧ್ವಂಸ ಮಾಡುತ್ತಾನೆ ಎಂದು ಹೇಳಿದ್ದಾರೆ. ಹೀಗಾಗಿ ನಾನು ವ್ಯಕ್ತಿ ಪೂಜೆ ಮಾಡುವುದಿಲ್ಲ' ಎಂದು ಮಹದೇವಪ್ಪ ಹೇಳಿದರು.

'ಸಿದ್ದರಾಮಯ್ಯ ಅವರ ಪೂಜೆ ಮಾಡಿಲ್ಲವೇ' ಎಂಬ ಪ್ರಶ್ನೆಗೆ, 'ನಾನೆಂದೂ ಸಿದ್ದರಾಮಯ್ಯ ಅವರ ಪೂಜೆ ಮಾಡಿಲ್ಲ. ಬುದ್ಧ, ಬಸವ, ಅಂಬೇಡ್ಕರ್ ಬಿಟ್ಟರೆ ಬೇರೆ ಯಾರ ಪೂಜೆಯನ್ನೂ ಮಾಡಿಲ್ಲ' ಎಂದರು.

'ಡಿಕೆಶಿ ಬಂಡೆಯಲ್ಲ, ಎಂಜಿನ್'

ಬೆಂಗಳೂರು: 'ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಬಂಡೆ ಎನ್ನುವುದಕ್ಕಿಂತ ರೈಲಿನ ಎಂಜಿನ್ ಎನ್ನಬೇಕು. ಅವರು ಎಲ್ಲರನ್ನೂ ಎಳೆದುಕೊಂಡು ಹೋಗುತ್ತಿದ್ದಾರೆ' ಎಂದು ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ರೈಲು ಹತ್ತಿರ ಬಂದಾಗ ಜೋರಾಗಿ ಕೂಗುತ್ತದೆ. ಅದೇ ರೀತಿ ಶಿವಕುಮಾರ್ ಬಂದಾಗ ದೊಡ್ಡ ಆರ್ಭಟ ಆಗುತ್ತದೆ' ಎಂದರು.

'ಸಿದ್ದರಾಮಯ್ಯ ಮತ್ತು ಶಿವಕುಮಾರ್ ಇಬ್ಬರೂ ಎಂಜಿನ್‌ಗಳು. ಸರ್ಕಾರದಲ್ಲಿ ಸಿದ್ದರಾಮಯ್ಯ ಮುಂದಿರುತ್ತಾರೆ. ಪಕ್ಷದ ಅಧ್ಯಕ್ಷರು ಹಿಂದಿರುತ್ತಾರೆ. ಪಕ್ಷದ ವಿಚಾರ ಬಂದಾಗ ಶಿವಕುಮಾರ್ ಮುಂದಿರುತ್ತಾರೆ' ಎಂದು ಹೇಳಿದರು.

ರಾಷ್ಟ್ರ ಗೀತೆ ಮುಖ್ಯ: 'ವಂದೇ ಮಾತರಂ ಆನಂದ್ ಮಠದ ಪ್ರಾರ್ಥನೆ. ಅದರಲ್ಲಿ ಏಳು ಕೋಟಿ ಜನರು ಎಂದು ಮಾತ್ರ ಇದೆ. ಆದರೆ, ಜನಗಣಮನ ಇಡೀ ದೇಶಕ್ಕೆ ಅನ್ವಯವಾಗುತ್ತದೆ. ನಮ್ಮ ರಾಷ್ಟ್ರ ಗೀತೆಯಲ್ಲಿ ದ್ರಾವಿಡ, ಉತ್ಕಲ, ಕಾಶ್ಮೀರ ಎಂದು ಇದೆ. ಆದರೆ, ವಂದೇ ಮಾತರಂನಲ್ಲಿ ತುಮಿ ದುರ್ಗೆ, ತುಮಿ ಮಾತಾ ಎಂದು ಇದೆ. ಮೊದಲು ವಂದೇ ಮಾತರಂ ಬಳಿಕ ರಾಷ್ಟ್ರ ಗೀತೆ ಹಾಡುವುದು ರಾಷ್ಟ್ರಗೀತೆಗೆ ಅಪಮಾನ ಮಾಡಿದಂತೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಆರ್‌ಎಸ್‌ಎಸ್ ಇಲ್ಲದಿದ್ದರೆ ಬಿಜೆಪಿಯು ಜೆಡಿಎಸ್‌ಗಿಂತಲೂ ಕನಿಷ್ಠ' ಎಂಬ ಪ್ರಿಯಾಂಕ್ ಖರ್ಗೆ ಮಾತನ್ನು ಒಪ್ಪಬಹುದೇ?

ಹೌದು ಇಲ್ಲ ಗೊತ್ತಿಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಕೇಂದ್ರದ ಸಕ್ಷಮ್ ಯೋಜನೆ 17,454 ಟಿ.ವಿ ಪೂರೈಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಸಕ್ಷಮ್ ಯೋಜನೆ ಅಡಿ ರಾಜ್ಯದ ಅಂಗನವಾಡಿ ಕೇಂದ್ರಗಳಿಗೆ 17,454 ಎಲ್‌ಇಡಿ ಟಿ.ವಿಗಳನ್ನು ಪೂರೈಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹೇಳಿದೆ.

ಸಕ್ಷಮ್ ಯೋಜನೆಯ ಅಂಗನವಾಡಿ ಕಟ್ಟಡಗಳ ಉನ್ನತೀಕರಣದಡಿ ಆರ್ಥಿಕ ಇಲಾಖೆಯ ಒಪ್ಪಿಗೆ ನಂತರ 2024ರ ನವೆಂಬರ್‌ನಲ್ಲಿ ಸಚಿವ ಸಂಪುಟದ ಅನುಮೋದನೆ ಪಡೆಯಲಾಗಿತ್ತು. ಬಳಿಕ, ಜಿಇಎಂ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಿ ನಿಯಮಾನುಸಾರ ಟಿ.ವಿಗಳನ್ನು ಖರೀದಿಸಿ, ಸರಬರಾಜು ಮಾಡಲಾಗಿದೆ ಎಂದು ಸ್ಪಷ್ಟನೆ ನೀಡಿದೆ.

'ಪ್ರಜಾವಾಣಿ'ಯ ಫೆ.6ರ ಸಂಚಿಕೆಯಲ್ಲಿ ಪ್ರಕಟವಾದ 'ಟೆಂಡರ್ ಬಿಟ್ಟು ಟಿ.ವಿ ಖರೀದಿ' ವರದಿಯಲ್ಲಿ ಕೇಂದ್ರ ಪುರಸ್ಕೃತ ಯೋಜನೆ ಅಡಿ 15,000 ಟಿ.ವಿ ಖರೀದಿಸಲಾಗಿದೆ ಎಂದಿದೆ. ಆದರೆ, ಪೂರೈಸಿದ್ದು 17,454. ಯಾವುದೇ ರೀತಿಯ ಖರೀದಿ ನಿಯಮಗಳ ಉಲ್ಲಂಘನೆ ಆಗಿಲ್ಲ ಎಂದು ಇಲಾಖೆಯ ನಿರ್ದೇಶಕರು ಹೇಳಿದ್ದಾರೆ.

ಕಲಾ ಸಂಭ್ರಮ...

ಪ್ರಜಾವಾಣಿ ಚಿತ್ರ:

ಬೆಂಗಳೂರು ಮಲ್ಲೇಶ್ವರದಲ್ಲಿರುವ ಶ್ರೀ ಕಾಡುಮಲ್ಲೇಶ್ವರ ಸ್ವಾಮಿ ದೇವಾಲಯದಲ್ಲಿ ಸೋಮವಾರ ನಡೆದ ಬ್ರಹ್ಮ ರಥೋತ್ಸವದಲ್ಲಿ ವಿವಿಧ ಜನಪದ ಕಲಾತಂಡಗಳು ಭಾಗವಹಿಸಿದ್ದವು

ವಿದೇಶ ಪ್ರವಾಸಕ್ಕೆ 'ಕೈ' ಶಾಸಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಡಳಿತರೂಢ ಕಾಂಗ್ರೆಸ್‌ನ ಸುಮಾರು 25ಕ್ಕೂ ಹೆಚ್ಚು ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರನ್ನು ಒಳಗೊಂಡ ತಂಡ ಮಂಗಳವಾರ (ಫೆ. 17) ವಿದೇಶ ಪ್ರವಾಸಕ್ಕೆ ತೆರಳಲಿದೆ.

ಶಾಸಕರಾದ ಪುಟ್ಟರಂಗಶೆಟ್ಟಿ, ಎಚ್‌.ಡಿ. ತಮ್ಮಯ್ಯ, ದೇವೇಂದ್ರಪ್ಪ, ಅಲ್ಲಮ ಪ್ರಭು ಪಾಟೀಲ, ಬಿ.ಬಿ. ಚಿಮ್ಮನಕಟ್ಟಿ, ಮಹಾಂತೇಶ ಕೌಜಲಗಿ, ರಾಘವೇಂದ್ರ ಹಿಟ್ನಾಳ್, ಅನಿಲ್ ಚಿಕ್ಕಮಾದು, ರಘುಮೂರ್ತಿ ಮತ್ತಿತರರು ಆಸ್ಟ್ರೇಲಿಯಾ, ನ್ಯೂಜಿಲೆಂಡ್‌ಗೆ ತೆರಳಲಿದ್ದು, ಮಾರ್ಚ್ 3ರಂದು ವಾಪಸಾಗಲಿದ್ದಾರೆ.

'ನಾನು ವಿದೇಶ ಪ್ರವಾಸ ಕೈಗೊಳ್ಳುವುದಿಲ್ಲ' ಎಂದು ಸಚಿವ ಕೆ. ವೆಂಕಟೇಶ್ ಹೇಳಿದ್ದರೂ ವಿದೇಶ ಪ್ರವಾಸಕ್ಕೆ ತೆರಳುವವರ ಪಟ್ಟಿಯಲ್ಲಿ ಅವರ ಹೆಸರೂ ಇದೆ.

ನಾಯಕತ್ವ ಬದಲಾವಣೆ ವಿಚಾರದ ಚರ್ಚೆಯ ಮಧ್ಯೆಯೇ ಕಾಂಗ್ರೆಸ್‌ನ 35 ಶಾಸಕರ ತಂಡ ವಿದೇಶ ಪ್ರವಾಸ ಕೈಗೊಳ್ಳುವ ಮಾತು ಕೇಳಿಬಂದಿತ್ತು. ಶಾಸಕರು ವೈಯಕ್ತಿಕವಾಗಿ ವಿದೇಶ ಪ್ರವಾಸ ಕೈಗೊಂಡರೆ ತಪ್ಪೇನು ಎಂಬ ಧಾಟಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದರು.

'ಶಾಸಕರ ಉದ್ದೇಶಿತ ವಿದೇಶ ಪ್ರವಾಸವು ಸರ್ಕಾರ ಮತ್ತು ಪಕ್ಷಕ್ಕೆ ಮುಜುಗರ ಉಂಟು ಮಾಡಲಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವರಿಷ್ಠರ ಗಮನಕ್ಕೆ ತಂದಿದ್ದರು ಎಂದು ಹೇಳಲಾಗಿತ್ತು. ಬಳಿಕ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಪ್ರವಾಸ ಕೈಗೊಳ್ಳದಂತೆ ಸೂಚನೆ ನೀಡಿದ್ದರು ಎಂದೂ ಹೇಳಲಾಗಿದೆ.

ಎಸ್ಕಾಂಗಳಿಗೆ ₹34,980 ಕೋಟಿ ನಷ್ಟ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಐದು ವಿದ್ಯುತ್ ಸರಬರಾಜು ಕಂಪನಿಗಳು (ಎಸ್ಕಾಂ) 2025ನೇ ಆರ್ಥಿಕ ವರ್ಷದಲ್ಲಿ ₹34,980 ಕೋಟಿ ನಷ್ಟದಲ್ಲಿವೆ. ಜತೆಗೆ, ₹47,993 ಕೋಟಿ ಸಾಲದ ಹೊರೆಯನ್ನೂ ಹೊತ್ತಿವೆ.

ಕೇಂದ್ರ ಇಂಧನ ಸಚಿವಾಲಯವು ಇತ್ತೀಚೆಗೆ ಬಿಡುಗಡೆ ಮಾಡಿರುವ ವಿದ್ಯುತ್ ಸರಬರಾಜು ಕಂಪನಿಗಳ ವಾರ್ಷಿಕ ಕಾರ್ಯಕ್ಷಮತೆ ವರದಿಯಲ್ಲಿ ಈ ಬಗ್ಗೆ ಉಲ್ಲೇಖ ಇದೆ. ತಮಿಳುನಾಡಿನ ಎಸ್ಕಾಂಗಳು (₹1.19 ಲಕ್ಷ ಕೋಟಿ) ಅತ್ಯಧಿಕ ನಷ್ಟ ಅನುಭವಿಸಿವೆ. ನಂತರದ ಸ್ಥಾನಗಳಲ್ಲಿ ಉತ್ತರ ಪ್ರದೇಶ, ರಾಜಸ್ಥಾನ, ತೆಲಂಗಾಣ, ಮಧ್ಯ ಪ್ರದೇಶ ಹಾಗೂ ಕರ್ನಾಟಕದ ಎಸ್ಕಾಂಗಳಿವೆ.

ಸಚಿವಾಲಯವು ದೇಶದ 54 ಕಂಪನಿಗಳ ಕಾರ್ಯಕ್ಷಮತೆ ಮೌಲ್ಯಮಾಪನ ಮಾಡಿದೆ. ಶ್ರೇಯಾಂಕದಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು (ಬೆಸ್ಕಾಂ) ರೆಡ್ ಕಾರ್ಡ್ ಪಡೆದು 51ನೇ ಸ್ಥಾನದಲ್ಲಿದೆ. ರಾಜ್ಯದ ಯಾವುದೇ ಕಂಪನಿಯು ಅಗ್ರ 10ರಲ್ಲಿ ಸ್ಥಾನ ಪಡೆದಿಲ್ಲ.

ಶಾಸಕ ಸುಬ್ಬಾರೆಡ್ಡಿ ಅನರ್ಹ...

ಒಂದನೇ ಪುಟದಿಂದ...

ಇದೇ ವೇಳೆ ಮುನಿರಾಜು ಅವರನ್ನು ವಿಜೇತ ಅಭ್ಯರ್ಥಿಯಾಗಿ ಘೋಷಣೆ ಮಾಡಲು ನ್ಯಾಯಪೀಠ ಸ್ಪಷ್ಟವಾಗಿ ನಿರಾಕರಿಸಿದೆ.

ನ್ಯಾಯಪೀಠ ತೆರೆದ ನ್ಯಾಯಾಲಯದಲ್ಲಿ ತನ್ನ ಆದೇಶ ಪ್ರಕಟ ಮಾಡುತ್ತಿದ್ದಂತೆಯೇ, ಸುಬ್ಬಾರೆಡ್ಡಿ ಪರ ಹಿರಿಯ ವಕೀಲರು, 'ನ್ಯಾಯಪೀಠದ ಈ ಆದೇಶದ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗುವುದು. ಅಲ್ಲಿಯವರೆಗೆ ಈ ಆದೇಶಕ್ಕೆ ತಡೆ ನೀಡಬೇಕು' ಎಂದು ಕೋರಿದರು.

ಈ ಮನವಿಗೆ ಅರ್ಜಿದಾರರ ಪರ ವಕೀಲರು ಆಕ್ಷೇಪ ವ್ಯಕ್ತಪಡಿಸಿದರು. ಈ ಕುರಿತಂತೆ ಕ್ಲುಪ್ತ ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, ತನ್ನ ಆದೇಶಕ್ಕೆ ತಡೆ ನೀಡಲು ನಿರಾಕರಿಸಿತು. ಸಿ. ಮುನಿರಾಜು ಪರ ಹೈಕೋರ್ಟ್ ವಕೀಲ ಮಂಜುನಾಥ ಹಿರಾಳ್ ವಕಾಲತ್ತು ವಹಿಸಿದ್ದರು. ಹಿರಿಯ ವಕೀಲೆ ನಳಿನಾ ಮಾಯೇಗೌಡ ವಾದ ಮಂಡಿಸಿದ್ದರು.

ಪ್ರಕರಣವೇನು?: ಕರ್ನಾಟಕ ವಿಧಾನ ಸಭೆಯ 224 ಕ್ಷೇತ್ರಗಳಿಗೆ 2023ರ ಮೇ 10ರಂದು ಚುನಾವಣೆ ನಡೆದಿತ್ತು. ಬಾಗೇಪಲ್ಲಿ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿದ್ದ ಎಸ್.ಎನ್.ಸುಬ್ಬಾರೆಡ್ಡಿ 82,128 ಮತಗಳನ್ನು ಪಡೆದು ಜಯಗಳಿಸಿದ್ದರು. ಸಮೀಪದ ಪ್ರತಿಸ್ಪರ್ಧಿ ಬಿಜೆಪಿ ಅಭ್ಯರ್ಥಿ ಸಿ.ಮುನಿರಾಜು 62,949 ಮತ ಪಡೆಯುವ ಮೂಲಕ 19,179 ಮತಗಳ ಅಂತರದಿಂದ ಸೋತಿದ್ದರು. ಸುಬ್ಬಾರೆಡ್ಡಿ ಆಯ್ಕೆ ಪ್ರಶ್ನಿಸಿ ಸಿ.ಮುನಿರಾಜು 2023ರ ಜೂನ್ 24ರಂದು ಹೈಕೋರ್ಟ್ ಮೆಟ್ಟಿಲೇರಿದ್ದರು.

ಆಕ್ಷೇಪ ಏನಿತ್ತು?: 'ಸುಬ್ಬಾರೆಡ್ಡಿ 2023ರ ಏಪ್ರಿಲ್ 20ರಂದು ನಾಮಪತ್ರ ಸಲ್ಲಿಸಿದ್ದಾರೆ. ನಾಮಪತ್ರ ಸಲ್ಲಿಸುವಾಗ ಯಾವುದೇ ಉಮೇದುವಾರ ತನ್ನ ಪತ್ನಿ ಮತ್ತು ಅವಲಂಬಿತರಿಗೆ ಸೇರಿದ ಆಸ್ತಿಗಳು, ಹೊಣೆಗಾರಿಕೆಗಳ ವಿವರಗಳ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಬೇಕು. ಬಾಂಡ್, ಶೇರ್‌ಗಳಲ್ಲಿನ ಹೂಡಿಕೆ, ಸಾಲಪತ್ರಗಳು, ಕಂಪನಿಗಳ ವಿವರ, ಮ್ಯೂಚುವಲ್ ಫಂಡ್, ವೈಯಕ್ತಿಕ ಸಾಲ ಸೇರಿದಂತೆ ಎಲ್ಲಾ ರೀತಿಯ ಹಣಕಾಸು ವಹಿವಾಟುಗಳ ಪಾರದರ್ಶಕ ಮಾಹಿತಿ ಒದಗಿಸಬೇಕು. ಆದರೆ, ಸುಬ್ಬಾರೆಡ್ಡಿ ತಮ್ಮ ನಾಮಪತ್ರದೊಂದಿಗೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ತಮಗೆ ಸೇರಿದ ಸಂಪತ್ತು, ಸಾಲಗಳು, ಹೊಣೆಗಾರಿಕೆ, ಹೂಡಿಕೆ ಸೇರಿದಂತೆ ಅನೇಕ ಮಹತ್ವದ ಮಾಹಿತಿಗಳನ್ನು ಬಹಿರಂಗಪಡಿಸಿಲ್ಲ' ಎಂದು ಆಕ್ಷೇಪಿಸಿದ್ದರು.

ಕೋರಿಕೆ: 'ಸುಬ್ಬಾರೆಡ್ಡಿ ಆಯೋಗಕ್ಕೆ ಅಪೂರ್ಣ ಹಾಗೂ ತಪ್ಪು ಮಾಹಿತಿ ನೀಡಿದ್ದಾರೆ. ಇದು ಚುನಾವಣಾ ಅಕ್ರಮಗಳ ವ್ಯಾಪ್ತಿಗೆ ಒಳಪಡಲಿದೆ. ಆದ್ದರಿಂದ, ಸುಬ್ಬಾರೆಡ್ಡಿ ಆಯ್ಕೆಯನ್ನು ರದ್ದುಗೊಳಿಸಬೇಕು. ಎರಡನೇ ಅತಿ ಹೆಚ್ಚು ಮತಗಳಿಸಿರುವ ನನ್ನನ್ನೇ ವಿಜೇತ ಅಭ್ಯರ್ಥಿ ಎಂದು ಘೋಷಿಸಬೇಕು' ಎಂದು ಮುನಿರಾಜು ಕೋರಿದ್ದರು.

> ರಾಹುಲ್‌ಗಾಂಧಿ ಅವರು ಈಗ ಬಾಗೇಪಲ್ಲಿಗೆ ಬಂದು ವೋಟ್ ಚೋರಿ, ಎಲೆಕ್ಷನ್ ಚೋರಿ ವಿರುದ್ಧ ಪ್ರತಿಭಟನೆ ಮಾಡ್ತಾರಾ
> **ಆರ್.ಅಶೋಕ,** ವಿಧಾನಸಭೆ ವಿರೋಧ ಪಕ್ಷದ ನಾಯಕ

ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ (ನಿ.)

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಹಳೇ ಅಂಚೆ ಕಛೇರಿ ಕಟ್ಟಡ, ಮೊದಲನೇ ಮಹಡಿ, ಪಶುವೈದ್ಯಕೀಯ ಕಾಲೇಜು ಆವರಣ, ಹೆಬ್ಬಾಳ, ಬೆಂಗಳೂರು–24

ದೂರವಾಣಿ ಸಂಖ್ಯೆ–080–22236837, ಇ–ಮೇಲ್: ksmdmc@gmail.com

ಸಂ: ಕರಾಮಾಅ&ಮಾನಿನಿ.ಬೈಪ,ಸತೋನಿ/02/2025–26 ದಿನಾಂಕ:13.02.2026

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮ ನಿಯಮಿತ ಹೆಬ್ಬಾಳ, ಬೆಂಗಳೂರು ರವರ ಅಧೀನದಲ್ಲಿನ ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕು, ಬೈರಾಪಟ್ಟಣ ತೋಟಗಾರಿಕೆ ಕ್ಷೇತ್ರದಲ್ಲಿ ನಿರ್ಮಾಣ ಮಾಡಿರುವ ತೋಟಗಾರಿಕೆ ಬಹು ಉತ್ಪನ್ನಗಳ ಕೊಯ್ಲೋತ್ತರ ಉಪಚಾರ ಘಟಕದ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಸಾರ್ವಜನಿಕ/ಸಂಸ್ಥೆಗಳಿಗೆ ವಹಿಸಲ ಇ–ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗಿದೆ. ಸದರಿ ಘಟಕದ ವಾರ್ಷಿಕ ಅಂದಾಜು ಬಾಡಿಗೆ ಮೊತ್ತ **ರೂ 22,10,000/–**, ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 13.03.2026** ಸಂಜೆ **5:00 ಗಂಟೆಗೆ , EMD ರೂ 45,000/** ತಾಂತ್ರಿಕ ಹಾಗೂ ಆರ್ಥಿಕ ಬಿಡ್‌ಗಳನ್ನು ಕ್ರಮವಾಗಿ **ದಿನಾಂಕ: 16.03.2026** ಮತ್ತು **17.03.2026** ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ **htpps://www.kppp.karnataka.gov.in** ಸಂಪರ್ಕಿಸಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ವಾಸಾಸಂಇ/ಬೆಂ.ನ/ಶಿರಡಿ ಸಾಯಿ/5663/2025–26

ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕರ್ನಾಟಕ ಒಂದು ರಾಜ್ಯ, ಹಲವು ಜಗತ್ತುಗಳು. ಪ್ರವಾಸೋದ್ಯಮ ಇಲಾಖೆ

CIN :U70100KA2015SGC081817

ನಂ.54, 5ನೇ ಮಹಡಿ, ಇಂಧನಭವನ, ರೇಸ್ ಕೋರ್ಸ್ ರಸ್ತೆ, ರಿನೇಸನ್ಸ್ ಹೋಟೆಲ್ ಎದುರು, ಬೆಂಗಳೂರು–560001. ದೂರವಾಣಿ : 080–22352525

ಸಂಖ್ಯೆ: ಕೆ.ಟಿ.ಐ.ಎಲ್/ಯೋ–01/ಕ.ವಿ/ಬೀ.ಜಿ/02/2025–26 ದಿನಾಂಕ: 16.02.2026

ಟೆಂಡರ್ ಪ್ರಕಟಣೆ

ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮದಿಂದ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಈ ಕೆಳಕಂಡ ಟೆಂಡರ್‌ಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಪ್ರಕಟಿಸಲಾಗಿರುತ್ತದೆ. ಟೆಂಡರ್‌ಗೆ ಸಂಬಂಧಿಸಿದ ವೇಳಾಪಟ್ಟಿ ಮತ್ತು ಟೆಂಡರ್ ದಾಖಲೆಗಳು ಇ–ಸಂಗ್ರಹಣೆ (ಕೆ.ಪಿ.ಪಿ.ಪಿ) ವೇದಿಕೆಯಲ್ಲಿ ಲಭ್ಯವಿರುತ್ತದೆ.

ಕ್ರ ಸಂ	ಕಾಮಗಾರಿಯ ವಿವರ	ಟೆಂಡರ್ ಸಂಖ್ಯೆ
1.	ಬೀದರ್ ಜಿಲ್ಲೆ, ಬೀದರ್ ತಾಲ್ಲೂಕಿನ ಬೀದರ್ ನಗರ ವ್ಯಾಪ್ತಿಯಲ್ಲಿನ ಮೈಲೂರು ವಾರ್ಡ್ ನಂ.28 ರಲ್ಲಿನ ಶ್ರೀ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ದೇವಸ್ಥಾನದ ಪ್ರವಾಸಿ ಮೂಲಭೂತ ಸೌಕರ್ಯ ಹಾಗೂ ಜೀರ್ಣೋದ್ಧಾರ ಕಾಮಗಾರಿ.	KTIL/2025-26/ BD/WORK_ INDENT37, Dt: 13.02.2026
2.	ಗದಗ ಜಿಲ್ಲೆ, ಲಕ್ಕುಂಡಿ ಗ್ರಾಮದ ಶಿವಪ್ಪಯ್ಯನ ಮಠದ ಹತ್ತಿರ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ಕಾಮಗಾರಿ.	KTIL/2025-26/ BD/WORK_ INDENT38, Dt: 13.02.2026
3.	ಗದಗ ಜಿಲ್ಲೆ, ಲಕ್ಕುಂಡಿ ಗ್ರಾಮದ ಎಮ್.ಕೆ.ಬಿ.ಎಸ್ ಶಾಲೆಯ ಹತ್ತಿರ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ಕಾಮಗಾರಿ	KTIL/2025-26/ BD/WORK_ INDENT39, Dt: 13.02.2026

ಟೆಂಡರ್ ವಿವರಗಳು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಲಭ್ಯವಿದ್ದು, ದಿನಾಂಕ : 13.02.2026 ರಿಂದ (https://www.kppp.karnataka.gov.in) ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು (https://www.kppp.karnataka.gov.in) ನಲ್ಲಿ ವಿದ್ಯುನ್ಮಾನ (Electronic) ವಿಧಾನದಲ್ಲಿ ಪಾವತಿಸಬೇಕಾಗಿರುತ್ತದೆ. ಆಸಕ್ತಿಯುಳ್ಳ ಸಂಸ್ಥೆಗಳು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ನೊಂದಾಯಿಸುವ ಅಗತ್ಯವಿದೆ.

ಸಹಿ/–
ಕಾರ್ಯಪಾಲಕ ಅಭಿಯಂತರರು, ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ
ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ.

DIPR/CP/5661/NR/2025-26

ಮೂರು ವರ್ಷದಿಂದ ಶಾಸಕ ಸುಬ್ಬಾರೆಡ್ಡಿ ನಾನಾ ಹೋರಾಟ

ಸದಸ್ಯತ್ವ ಅಸಿಂಧು: ಸಚಿವನಾಗುವ ಕನಸಿಗೆ ಅಡ್ಡಿ

• ಡಿ.ಎಂ.ಕುರ್ಕೆ ಪ್ರಶಾಂತ್

ಚಿಕ್ಕಬಳ್ಳಾಪುರ: ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದ ಬಾಗೇಪಲ್ಲಿ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಅವರಿಗೆ 'ಶಾಸಕ ಸ್ಥಾನ ಅಸಿಂಧು' ಎನ್ನುವ ಹೈಕೋರ್ಟ್ ಆದೇಶದಿಂದ ತೊಡಕಾಗಿದೆ. ಸಚಿವನಾಗಲೇಬೇಕು ಎನ್ನುವ ಅವರ ಹೋರಾಟಕ್ಕೆ ಇದರಿಂದ ಹಿನ್ನಡೆ ಆಗುವ ಸಾಧ್ಯತೆ ಹೆಚ್ಚಿದೆ.

ರಾಜ್ಯದ ಗಡಿಭಾಗ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಿಂದ 2013ರಲ್ಲಿ ಪಕ್ಷೇತರ ಶಾಸಕರಾಗಿ ಆಯ್ಕೆಯಾದ ಸುಬ್ಬಾರೆಡ್ಡಿ ನಂತರ ಕಾಂಗ್ರೆಸ್ ಸೇರಿದರು. 2018 ಮತ್ತು 2023ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಗೆಲುವು ಸಾಧಿಸಿದರು. ಜಿಲ್ಲೆಯಲ್ಲಿ ಅವರು ಕಾಂಗ್ರೆಸ್‌ನ ಹಿರಿಯ ಶಾಸಕ ಎನಿಸಿದ್ದಾರೆ.

2023ರ ಗೆಲುವಿನ ನಂತರ ಸುಬ್ಬಾರೆಡ್ಡಿ ಅವರು ಸಚಿವ ಸ್ಥಾನಕ್ಕಾಗಿ ಕಸರತ್ತು ಆರಂಭಿಸಿದ್ದಾರೆ. ಮತ್ತೊಂದೆಡೆ ರಾಜಕೀಯ ಪ್ರತಿಸ್ಪರ್ಧಿ ಬಿಜೆಪಿಯ ಅಭ್ಯರ್ಥಿ ಸಿ.ಮುನಿರಾಜು ಹೂಡುತ್ತಿದ್ದ ಬಾಣಗಳಿಗೆ ಪ್ರತ್ಯಸ್ತ್ರ ಹೂಡುವಲ್ಲೇ ಹೆಚ್ಚು ಸಮಯ ಕಳೆದಿದ್ದಾರೆ. ಈ ಕಾರಣದಿಂದ ಸುಬ್ಬಾರೆಡ್ಡಿ ಒಂದಲ್ಲಾ ಒಂದು ವಿಚಾರವಾಗಿ ಸುದ್ದಿ ಆಗುತ್ತಿದ್ದಾರೆ.

ಸುಬ್ಬಾರೆಡ್ಡಿ ಅವರಿಗೆ 2024ರ ಜನವರಿಯಲ್ಲಿ ರಾಜ್ಯ ಬೀಜ ನಿಗಮದ ಅಧ್ಯಕ್ಷ ಸ್ಥಾನ ನೀಡಲಾಯಿತು. 'ಸಚಿವ ಸ್ಥಾನದ ಹೊರತು ಯಾವುದೇ ನಿಗಮದ ಅಧ್ಯಕ್ಷ ಸ್ಥಾನ ಬೇಡವೇ ಬೇಡ' ಎಂದು ಸ್ಪಷ್ಟವಾಗಿ ನಿರಾಕರಿಸಿದರು. ಸಚಿವ ಸ್ಥಾನದ ಬಗ್ಗೆ ಅಷ್ಟೊಂದು ನಿರೀಕ್ಷೆ ಅವರಲ್ಲಿತ್ತು.

ಈ ವೇಳೆ ಅವರು, ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಅವರಿಗೆ ಬರೆದ ಸುದೀರ್ಘ ಪತ್ರವೊಂದು ಸಚಿವ ಸ್ಥಾನದ ಆಕಾಂಕ್ಷಿಗಳ ಕುರಿತು ರಾಜ್ಯ ಮಟ್ಟದಲ್ಲಿ ಚರ್ಚೆಗೆ ಗ್ರಾಸವಾಗಿತ್ತು.

2019ರಲ್ಲಿ ಕರ್ನಾಟಕದಲ್ಲಿ ಬಿಜೆಪಿ ಸರ್ಕಾರ ರಚನೆಗೆ ನಡೆದ ಆಪರೇಷನ್ ಕಮಲದ ವೇಳೆ ಸುಬ್ಬಾರೆಡ್ಡಿ ಅವರಿಗೂ ಗಾಳ ಹಾಕಲಾಗಿತ್ತು. ಆದರೆ ಅವರು ಕಾಂಗ್ರೆಸ್‌ನಲ್ಲಿಯೇ ಉಳಿದರು. ಸಚಿವ ಸ್ಥಾನದ ಹಕ್ಕು ಪ್ರತಿಪಾದನೆ ವೇಳೆ ಈ 'ಆಪರೇಷನ್' ವಿಚಾರವನ್ನು ಪ್ರಸ್ತಾಪಿಸುತ್ತಿದ್ದರು.

ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆಯ ನಿಯಮಗಳ ಉಲ್ಲಂಘನೆ ಪ್ರಕರಣದಲ್ಲಿ 2025ರ ಜುಲೈನಲ್ಲಿ ಎಸ್.ಎನ್.ಸುಬ್ಬಾರೆಡ್ಡಿ ಅವರ ಮನೆ, ಕಚೇರಿ ಮೇಲೆ ಇ.ಡಿ ಅಧಿಕಾರಿಗಳು ದಾಳಿ ನಡೆಸಿದರು.

'ವಿದೇಶಗಳಲ್ಲಿ ನನ್ನ ಹೆಸರಿನಲ್ಲಿ ಬ್ಯಾಂಕ್ ಖಾತೆ, ವ್ಯವಹಾರ ಇರುವುದನ್ನು ಸಾಬೀತುಪಡಿಸಿದರೆ ನನ್ನ ಆಸ್ತಿಗಳನ್ನು ಸರ್ಕಾರಕ್ಕೆ ಬರೆದು ಕೊಡುತ್ತೇನೆ' ಎಂದು ಸುಬ್ಬಾರೆಡ್ಡಿ ಸವಾಲು ಹಾಕಿದ್ದರು. ಈ ದಾಳಿ ರಾಜಕೀಯ ಪಿತೂರಿ ಎಂದು ತಮ್ಮ ಪ್ರತಿಸ್ಪರ್ಧಿ ಸಿ.ಮುನಿರಾಜು ಅವರತ್ತ ಬೆರಳು ತೋರಿದ್ದರು.

ಎಸ್.ಎನ್. ಸುಬ್ಬಾರೆಡ್ಡಿ ಮತ್ತು ಸಿ.ಮುನಿರಾಜು ರಾಜಕೀಯ ಕಾದಾಟ ಹೈಕೋರ್ಟ್ ಮೆಟ್ಟಿಲೇರಿತ್ತು.

ಸಂಭ್ರಮದ ನಡುವೆ ಬೇಸರ

ಚಿಕ್ಕಬಳ್ಳಾಪುರ ಹಾಲು ಒಕ್ಕೂಟ (ಚಿಮುಲ್) ಅಧ್ಯಕ್ಷ ಸ್ಥಾನ ಚುನಾವಣೆ ಸೋಮವಾರ ನಡೆಯಿತು. ಪಟ್ಟು ಹಿಡಿದು ತಮ್ಮ ಬೆಂಬಲಿಗ ಹಾಗೂ ಬಾಗೇಪಲ್ಲಿ ಕ್ಷೇತ್ರದ ನಿರ್ದೇಶಕ ಮಂಜುನಾಥ ರೆಡ್ಡಿ ಅವರನ್ನು ಸುಬ್ಬಾರೆಡ್ಡಿ ಅಧ್ಯಕ್ಷರನ್ನಾಗಿ ಮಾಡಿದರು. ಅಧ್ಯಕ್ಷರ ಆಯ್ಕೆಯ ವಿಜಯೋತ್ಸವದಲ್ಲಿ ಮತ್ತು ನಂದಿ ಜಾತ್ರೆಯಲ್ಲಿ ಶಾಸಕರು ಪಾಲ್ಗೊಳ್ಳಬೇಕಿತ್ತು. ಚಿಮುಲ್ ಅಧ್ಯಕ್ಷ ಆಯ್ಕೆ ಸಂಬಂಧ ಚಿಕ್ಕಬಳ್ಳಾಪುರದ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯಲ್ಲಿ ಪಾಲ್ಗೊಂಡ ಅವರು, 'ತುರ್ತು' ಎಂದು ಎಲ್ಲ ಕಾರ್ಯಕ್ರಮ ರದ್ದುಗೊಳಿಸಿ ಬೆಂಗಳೂರಿಗೆ ತೆರಳಿದರು.

'ಚುನಾವಣೆ ನಂತರ ತೆರಿಗೆ ಪಾವತಿ'

ತೆರಿಗೆ ವಂಚನೆಯ ಮೂಲಕ ಸರ್ಕಾರಕ್ಕೆ ಸುಬ್ಬಾರೆಡ್ಡಿ ಕೋಟ್ಯಂತರ ರೂಪಾಯಿ ವಂಚಿಸಿದ್ದರು. ಜನರಿಗೆ ತಪ್ಪು ಮಾಹಿತಿ ನೀಡಿದ್ದರು. ಈ ಬಗ್ಗೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದೆ. ನ್ಯಾಯಮೂರ್ತಿ ಅವರು ನಮ್ಮ ಅರ್ಜಿ ಪುರಸ್ಕರಿಸಿ ಈ ತೀರ್ಪು ನೀಡಿದ್ದಾರೆ ಎಂದು ಬಿಜೆಪಿ ಮುಖಂಡ ಸಿ.ಮುನಿರಾಜು 'ಪ್ರಜಾವಾಣಿ'ಗೆ ತಿಳಿಸಿದರು.

ಚುನಾವಣೆಯ ನಂತರ ತೆರಿಗೆ ಪಾವತಿಸಿದರು. ತಕ್ಷಣವೇ ನಾನು ಈ ಬಗ್ಗೆ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದೆ. ಸುಬ್ಬಾರೆಡ್ಡಿ ಈಗ ಶಾಸಕರಲ್ಲ. ನನಗೆ 63 ಸಾವಿರ ಮತಗಳನ್ನು ನೀಡಿದ ಬಾಗೇಪಲ್ಲಿ ಕ್ಷೇತ್ರದ ಜನರ ಗೆಲುವು ಇದು ಎಂದರು.

ಹೈಕೋರ್ಟ್ ಮೆಟ್ಟಿಲೇರಲು ಅರ್ಜಿದಾರರಿಗೆ ಸೂಚನೆ

ಹಿಮಂತ ಬಿಸ್ವ

ನವದೆಹಲಿ (ಪಿಟಿಐ): ನಿರ್ದಿಷ್ಟ ಸಮುದಾಯದ ಮೇಲೆ ಗುರಿಯಿಟ್ಟು ಗುಂಡು ಹೊಡೆದ ವಿಡಿಯೊಗೆ ಸಂಬಂಧಿಸಿದಂತೆ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ವಿರುದ್ಧ ಕಾನೂನು ಕ್ರಮಕ್ಕೆ ಒತ್ತಾಯಿಸಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಈ ಕುರಿತು ಗುವಾಹಟಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸುವಂತೆ ಅರ್ಜಿದಾರರಿಗೆ ಸೂಚನೆ ನೀಡಿದೆ.

ಅರ್ಜಿಯನ್ನು ತ್ವರಿತಗತಿಯಲ್ಲಿ ವಿಚಾರಣೆ ನಡೆಸುವಂತೆ ಗುವಾಹಟಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗೆ ಸುಪ್ರೀಂ ಕೋರ್ಟ್ ತಿಳಿಸಿದೆ.

'ನೀವು ಯಾವ ಕಾರಣಕ್ಕಾಗಿ ಗುವಾಹಟಿ ಹೈಕೋರ್ಟ್‌ಗೆ ತೆರಳಲಿಲ್ಲ? ಅವರ ಅಧಿಕಾರವನ್ನು ದುರ್ಬಲಗೊಳಿಸಬೇಡಿ. ಅರ್ಜಿದಾರರು ಸಂಯಮದಿಂದ ವರ್ತಿಸಿ, ಸಾಂವಿಧಾನಿಕ ಮೌಲ್ಯವನ್ನು ಉಳಿಸಿಕೊಳ್ಳುವುದು ಅಗತ್ಯ. ಚುನಾವಣೆಗೂ ಮುನ್ನ ಇಂದೊಂದು ಅಭ್ಯಾಸವಾಗಿಬಿಟ್ಟಿದೆ' ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾ.ಜಾಯ್‌ಮಾಲ್ಯ ಬಾಗ್ಚಿ, ನ್ಯಾ. ವಿಪುಲ್ ಎಂ ಪಂಚೋಲಿ ಅವರಿದ್ದ ಪೀಠವು ತಿಳಿಸಿದೆ.

ನಾಗೇಂದ್ರನ್ ಹೇಳಿಕೆಗೆ ತ್ರಿಶಾ ಖಂಡನೆ

ಪ್ರಜಾವಾಣಿ ವಾರ್ತೆ


ತ್ರಿಶಾ ಕೃಷ್ಣನ್

ಚೆನ್ನೈ: ಟಿವಿಕೆ ಮುಖ್ಯಸ್ಥ, ನಟ ವಿಜಯ್ ಜೊತೆಗೆ ನಟಿ ತ್ರಿಶಾ ಕೃಷ್ಣನ್ ಸಂಬಂಧ ಹೊಂದಿದ್ದಾರೆ ಎಂದು ತಮಿಳುನಾಡು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನೈನಾರ್ ನಾಗೇಂದ್ರನ್ ಹೇಳಿದ್ದಾರೆ. ಈ ಹೇಳಿಕೆ 'ಅಸಹ್ಯಕರ' ಎಂದು ತ್ರಿಶಾ ಸೋಮವಾರ ಟೀಕಿಸಿದ್ದಾರೆ.

ಕಳೆದ ವಾರ ವಿಜಯ್ ಅವರನ್ನು ಟೀಕಿಸುವ ವೇಳೆ ನಾಗೇಂದ್ರನ್ ಅವರು, 'ವಿಜಯ್ ಮೊದಲು ತ್ರಿಶಾ ಅವರ ಮನೆಯಿಂದ ಹೊರಬಂದು ತಮ್ಮ ಕುಟುಂಬದೊಂದಿಗೆ ಉತ್ತಮ ರೀತಿಯಲ್ಲಿ ಇರಬೇಕು' ಎಂದು ಹೇಳಿದ್ದರು. ಬಳಿಕ ಹೇಳಿಕೆ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದರು.

'ರಾಜ್ಯ ರಾಜಕಾರಣದಲ್ಲಿ ಉನ್ನತ ಸ್ಥಾನದಲ್ಲಿರುವ ವ್ಯಕ್ತಿಯಿಂದ ಇಂಥ ಅಸಹ್ಯಕರ ಮತ್ತು ಅಸಂಬದ್ಧ ಹೇಳಿಕೆಯನ್ನು ತ್ರಿಶಾ ಅವರು ನಿರೀಕ್ಷಿಸಿರಲಿಲ್ಲ. ಅವರು ಯಾವುದೇ ರಾಜಕೀಯ ಪಕ್ಷದೊಂದಿಗೆ ಸಂಬಂಧ ಹೊಂದಿಲ್ಲ ಎಂಬುದನ್ನು ಈಗಾಗಲೇ ಸ್ಪಷ್ಟಪಡಿಸಿದ್ದಾರೆ' ಎಂದು ತ್ರಿಶಾ ಪರ ವಕೀಲರು ತಿಳಿಸಿದ್ದಾರೆ.

'ಯಾರದ್ದೇ ವೈಯಕ್ತಿಕ ವಿಚಾರಗಳು ಸಾರ್ವಜನಿಕ ಹೇಳಿಕೆಗಳಿಗೆ ಬಳಕೆಯಾಗಬಾರದು. ತ್ರಿಶಾ ಅವರ ಹೆಸರನ್ನು ಈ ವಿಚಾರಗಳಲ್ಲಿ ಎಳೆದು ತರಬಾರದು' ಎಂದು ಮನವಿ ಮಾಡಿದ್ದಾರೆ.

'ಅಪರಾಧ ನಿರ್ಣಯ ಪ್ರಮಾಣದಲ್ಲಿ ಏರಿಕೆ'

ಹೊಸ ಕಾನೂನುಗಳಿಂದ ಪ್ರಕರಣಗಳ ತ್ವರಿತ ವಿಲೇವಾರಿ

ದೆಹಲಿಯಲ್ಲಿ ಸೋಮವಾರ ನಡೆದ 79ನೇ 'ಸ್ಥಾಪನಾ ದಿನ'ದ ಪರೇಡ್‌ನಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಗವಹಿಸಿದ್ದರು

ನವದೆಹಲಿ (ಪಿಟಿಐ): ದೇಶದಲ್ಲಿ ಮೂರು ಹೊಸ ಕ್ರಿಮಿನಲ್ ಕಾನೂನುಗಳು ಸಂಪೂರ್ಣವಾಗಿ ಜಾರಿಯಾದ ಬಳಿಕ, ಪ್ರಕರಣಗಳಲ್ಲಿ ಶಿಕ್ಷೆ ವಿಧಿಸುವ ಪ್ರಮಾಣವು ಶೇ 80ರಷ್ಟು ಹೆಚ್ಚಾಗಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ತಿಳಿಸಿದರು.

ದೆಹಲಿಯಲ್ಲಿ ಸೋಮವಾರ ನಡೆದ 79ನೇ 'ಸ್ಥಾಪನಾ ದಿನ'ದ ಪರೇಡ್‌ನಲ್ಲಿ ಭಾಗವಹಿಸಿ ಮಾತನಾಡಿದ ಅವರು, ಹೊಸ ಕ್ರಿಮಿನಲ್ ಕಾನೂನುಗಳು ದೇಶದ ಕಾನೂನು ವ್ಯವಸ್ಥೆಯಲ್ಲಿ ಅತಿ ದೊಡ್ಡ ಸುಧಾರಣೆ ತರಲಿವೆ. ಪ್ರಕರಣಗಳ ತ್ವರಿತ ವಿಲೇವಾರಿ ಮತ್ತು ಅಪರಾಧ ನಿರ್ಣಯಕ್ಕೆ ಇವುಗಳು ನೆರವಾಗಲಿವೆ ಎಂದು ಹೇಳಿದರು.

ಭಾರತೀಯ ದಂಡ ಸಂಹಿತೆ (ಐಪಿಸಿ), ಅಪರಾಧ ದಂಡ ಪ್ರಕ್ರಿಯಾ ಸಂಹಿತೆ (ಸಿಆರ್‌ಪಿಸಿ) ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆಗೆ ಪರ್ಯಾಯವಾಗಿ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್), ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (ಬಿಎನ್‌ಎಸ್‌ಎಸ್) ಹಾಗೂ ಭಾರತೀಯ ಸಾಕ್ಷ್ಯ ಅಧಿನಿಯಮವನ್ನು (ಬಿಎಸ್‌ಎ) 2024ರ ಜುಲೈ 1ರಂದು ಜಾರಿಗೊಳಿಸಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ನಾಯಕತ್ವದಲ್ಲಿ 2014ರ ನಂತರದ 12 ವರ್ಷಗಳು ಭಾರತದ ಆಂತರಿಕ ಭದ್ರತೆ ಇತಿಹಾಸದಲ್ಲಿ ಸುವರ್ಣ ಯುಗವಾಗಿದೆ ಎಂದು ಶ್ಲಾಘಿಸಿದರು.

ವಿಶೇಷ ದಳದ ಸಮಗ್ರ ಕೇಂದ್ರ ಕಚೇರಿ ಮತ್ತು ಸುರಕ್ಷಿತ ನಗರ ಯೋಜನೆಯ ಮೊದಲ ಹಂತ ಸೇರಿದಂತೆ ದೆಹಲಿ ಪೊಲೀಸ್ ವಿಭಾಗಕ್ಕೆ ಸಂಬಂಧಿಸಿದ ನೂತನ ಉಪಕ್ರಮಗಳಿಗೆ ಅವರು ಚಾಲನೆ ನೀಡಿದರು.

> **11 ರಾಜ್ಯಗಳಲ್ಲಿ ವ್ಯಾಪಿಸಿದ್ದ ನಕ್ಸಲ್‌ವಾದದಿಂದ ದೇಶದ ಆಂತರಿಕ ಭದ್ರತೆಗೆ ಬೆದರಿಕೆ ಇತ್ತು. ಈ ವರ್ಷ ಮಾರ್ಚ್ ಹೊತ್ತಿಗೆ ಈ ರಾಜ್ಯಗಳು ಸಂಪೂರ್ಣ ನಕ್ಸಲ್‌ಮುಕ್ತ ಆಗಲಿವೆ**
> **ಅಮಿತ್ ಶಾ**
> ಕೇಂದ್ರ ಗೃಹ ಸಚಿವ

'ದೈಹಿಕ ಸಂಬಂಧ ಬೆಳೆಸುವ ಮುನ್ನ ಎಚ್ಚರ ಅಗತ್ಯ'

ಒಂದನೇ ಪುಟದಿಂದ...

ಬಳಿಕ ನ್ಯಾಯಪೀಠವು, 'ಆರೋಪಿ ಜೊತೆಗೆ ದುಬೈಗೆ ಪ್ರಯಾಣ ಬೆಳೆಸಿ, ದೈಹಿಕ ಸಂಬಂಧ ಬೆಳೆಸಿದ್ದೇಕೆ' ಎಂದು ಮಹಿಳೆಯನ್ನು ಪ್ರಶ್ನಿಸಿತು.

'ಇದು ಪರಸ್ಪರ ಒಪ್ಪಿಗೆಯಲ್ಲಿ ನಡೆದ ಸಂಬಂಧವಾಗಿದೆ. ನಾವು ಹಳೆಯ ಕಾಲದವರಾಗಿರಬಹುದು. ಆದರೆ ಮದುವೆಗೂ ಮುಂಚಿತವಾಗಿ ದೈಹಿಕ ಸಂಬಂಧ ಬೆಳೆಸುವ ಮುನ್ನ ಎಚ್ಚರಿಕೆಯಿಂದಿರಬೇಕು. ವಿವಾಹಕ್ಕೂ ಮೊದಲು ಯಾರನ್ನೂ ನಂಬಬಾರದು' ಎಂದು ಹೇಳಿತು.

ನ್ಯಾಯಮೂರ್ತಿ ನಾಗರತ್ನ ಅವರು, 'ಅಷ್ಟೊಂದು ಕಟ್ಟುನಿಟ್ಟಿನವರಾಗಿದ್ದರೆ ಆರೋಪಿಯೊಂದಿಗೆ ದುಬೈಗೆ ಪ್ರಯಾಣಿಸಬಾರದಿತ್ತು. ಇದು ಪರಸ್ಪರ ಒಪ್ಪಿಗೆಯಿಂದ ನಡೆದ ಸಂಬಂಧವಾಗಿದೆ ಎಂದೆನಿಸುತ್ತಿದೆ. ಒಪ್ಪಿತ ಸಂಬಂಧವಿದ್ದಾಗ ದೋಷಾರೋಪ ನಿಗದಿ ಮಾಡಲು ಸಾಧ್ಯವಿಲ್ಲ. ಹೀಗಾಗಿ ಸಂಧಾನದ ಮೂಲಕ ಇತ್ಯರ್ಥ ಮಾಡಿಕೊಳ್ಳಲು ಸೂಚಿಸುತ್ತೇವೆ' ಎಂದು ಹೇಳಿದರು. ಮಹಿಳೆಗೆ ಪರಿಹಾರ ನೀಡಿ ಪ್ರಕರಣ ಇತ್ಯರ್ಥ ಮಾಡಿಕೊಳ್ಳುವಂತೆ ಆರೋಪಿ ಪರ ವಕೀಲರಿಗೆ ತಿಳಿಸಿದರು.

'ಪ್ರಕರಣ ಇತ್ಯರ್ಥಪಡಿಸುವ ಮಾರ್ಗೋಪಾಯವನ್ನು ಹುಡುಕಿ' ಎಂದು ಮಹಿಳೆಯ ಪರ ವಕೀಲರಿಗೆ ತಿಳಿಸಿದರು. ನಂತರ ನ್ಯಾಯಪೀಠವು ಪ್ರಕರಣದ ವಿಚಾರಣೆಯನ್ನು ಬುಧವಾರಕ್ಕೆ ಮುಂದೂಡಿತು.

ಪ್ರಕರಣ ಏನು?: ಮದುವೆಯಾಗುವುದಾಗಿ ನಂಬಿಸಿ ದುಬೈಗೆ ಕರೆದೊಯ್ದು ದೈಹಿಕ ಸಂಬಂಧ ಬೆಳೆಸಲಾಗಿದೆ ಮತ್ತು ಒಪ್ಪಿಗೆ ಇಲ್ಲದೆ ಇಬ್ಬರೂ ಒಟ್ಟಿಗಿರುವ ದೃಶ್ಯಗಳನ್ನು ವಿಡಿಯೊ ಮಾಡಿಕೊಳ್ಳಲಾಗಿದೆ. ಆನಂತರ ವಿಡಿಯೊವನ್ನು ಪ್ರಸಾರ ಮಾಡುವುದಾಗಿ ಬೆದರಿಕೆಯೊಡ್ಡಲಾಗುತ್ತಿದೆ ಎಂದು ಆರೋಪಿಸಿ ಮಹಿಳೆ ದೂರು ದಾಖಲಿಸಿದ್ದರು. ದೆಹಲಿ ಹೈಕೋರ್ಟ್ ಮತ್ತು ವಿಚಾರಣಾ ನ್ಯಾಯಾಲಯವು ಆರೋಪಿಯ ಜಾಮೀನು ಅರ್ಜಿಯನ್ನು ತಿರಸ್ಕರಿಸಿದ್ದವು. ಆರೋಪಿ ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ಸರಸ್ವತಿ ಹೆಗಡೆಗೆ 'ಶಿವಲಿಂಗ' ಪ್ರಶಸ್ತಿ

ಬೆಂಗಳೂರು: ವಚನಜ್ಯೋತಿ ಬಳಗದ ಸಂಸ್ಥಾಪಕ ಪಂಡಿತ ಕೆ.ಪಿ. ಶಿವಲಿಂಗಯ್ಯನವರ ನೆನಪಿನಲ್ಲಿ ನೀಡುವ 'ಶಿವಲಿಂಗ ಪ್ರಶಸ್ತಿ'ಗೆ ಶಿರಸಿಯ ಹಿಂದೂಸ್ತಾನಿ ಗಾಯಕಿ ಸರಸ್ವತಿ ಹೆಗಡೆ ಅವರು ಆಯ್ಕೆಯಾಗಿದ್ದಾರೆ.

ಕನ್ನಡ ಭಾಷೆ, ಸಂಸ್ಕೃತಿ, ವಿಶೇಷವಾಗಿ ವಚನ ಚಳವಳಿಯ ಪ್ರಸರಣದಲ್ಲಿ ತೊಡಗಿದವರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. ಇಂದಿರಾಗಾಂಧಿ ಕಲಾಕೇಂದ್ರದಲ್ಲಿ ಫೆ.22ರಂದು ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಪ್ರಶಸ್ತಿಯು ₹10 ಸಾವಿರ ನಗದು ಎಂದು ಬಳಗದ ಅಧ್ಯಕ್ಷ ಪಿನಾಕಪಾಣಿ ತಿಳಿಸಿದ್ದಾರೆ.

ಕಾರ್ಮಿಕರ ಭವಿಷ್ಯ ನಿಧಿ ಸಂಘಟನೆ
(ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ, ಭಾರತ ಸರ್ಕಾರ)
ಕ್ಷೇತ್ರೀಯ ಕಾರ್ಯಾಲಯ, ರಾಜರಾಜೇಶ್ವರಿನಗರ, ರಾಜರಾಜೇಶ್ವರಿ ರೀಜೆನ್ಸಿ, ನಂ. 570, 26ನೇ ಕ್ರಾಸ್, ಐಡಿಯಲ್ ಹೋಂ ಕೋ ಆಪರೇಟಿವ್ ಸೊಸೈಟಿ ಬಡಾವಣೆ, ಬೆಂಗಳೂರು 560098. Tele: 080-28603108/125
Email: ro.rrnagar@epfindia.gov.in Website: www.epfindia.gov.in

ಸಾರ್ವಜನಿಕರ ಗಮನಕ್ಕೆ
ಸಂಬಂಧಪಟ್ಟವರ ಅಹವಾಲಿಗೆ
ಮೆ॥ ನಿಯೋ ಶಾರ್ಪ್ ಇಂಜಿನೀರಿಂಗ್ ಸಂಸ್ಥೆಯು ಭವಿಷ್ಯ ನಿಧಿ ನಿಯಮದಡಿ ನೊಂದಾಯಿತಗೊಂಡಿದ್ದು ಭವಿಷ್ಯ ನಿಧಿ ಕೋಡ್ ಸಂ. BG/MRD/43929 ಅನ್ನು ಹೊಂದಿದೆ. ಜುಲೈ 2009 ರಿಂದ ಆಗಸ್ಟ್ 2014 ರವರೆಗೆ ಈ ಸಂಸ್ಥೆಯು ಕಾರ್ಮಿಕರ ಭವಿಷ್ಯ ನಿಧಿ ವಂತಿಗೆಯನ್ನು ಕಟ್ಟಿಲ್ಲವಾದ್ದರಿಂದ ತತ್ಸಂಬಂಧ ಸೆಕ್ಷನ್ 7Aರ ಅಡಿಯಲ್ಲಿ ವಿಚಾರಣೆ ನಡೆಯುತ್ತಿದೆ. ಈ ಪ್ರಕಟಣೆ ಮೂಲಕ ತಿಳಿಸುವುದೇನೆಂದರೆ ಯಾರಾದರೂ ಕಾರ್ಮಿಕರು ಮೇಲ್ಕಂಡ ಅವಧಿಯಲ್ಲಿ ಮೇಲೆ ತಿಳಿಸಿದ ಸಂಸ್ಥೆಯಲ್ಲಿ ಕೆಲಸ ಮಾಡಿದ್ದರೆ ಅಥವಾ ಮೇಲ್ಕಂಡ ವಿಚಾರಣೆ ಸಂಬಂಧ ಯಾರಿಗಾದರೂ ಮಾಹಿತಿ ಇದ್ದಲ್ಲಿ ಈ ಮೇಲ್ಕಂಡ ವಿಳಾಸಕ್ಕೆ ದಿನಾಂಕ 24/02/2026 ಮಂಗಳವಾರ ಮಧ್ಯಾಹ್ನ 3.00 ಗಂಟೆಗೆ ನಡೆಯುವ ವಿಚಾರಣೆಯಲ್ಲಿ ಭಾಗವಹಿಸಿ, ತಮಗೆ ತಿಳಿದ ಮಾಹಿತಿ ಹಂಚಿಕೊಳ್ಳುವುದು.
ಸಹಿ/- ಕೆ. ವೆಂಕಟಸುಬ್ಬಯ್ಯ
ಕ್ಷೇತ್ರೀಯ ಭವಿಷ್ಯ ನಿಧಿ ಆಯುಕ್ತರು-II

ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ, ಮಂಡ್ಯ
ಪ್ರಧಾನ ಕಛೇರಿ, ಮಂಡ್ಯ – 571401. ದೂರವಾಣಿ ಸಂಖ್ಯೆ : 08232-226010, 226011
ಸಂಖ್ಯೆ:ಆಡಳಿತ:ಸಿಬ್ಬಂದಿ:1215:2025-26 ದಿನಾಂಕ : 16-02-2026
: ಅಲ್ಪಾವಧಿ ಇ-ಟೆಂಡರ್ ಮರು ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ) :
ಮಂಡ್ಯ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ., ಮಂಡ್ಯ ಇದರ ಪ್ರಧಾನ ಕಛೇರಿ ಹಾಗೂ 62 ಶಾಖೆಗಳಿಗೆ ಮತ್ತು ಹೊಸ ಶಾಖೆಗಳಿಗೆ ಭದ್ರತಾ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಹೊರಸಂಪನ್ಮೂಲದಿಂದ ಪೂರೈಸಲು ಆಸಕ್ತಿಯುಳ್ಳ ಟೆಂಡರುದಾರರಿಂದ ಅರ್ಜಿಯನ್ನು ಆಹ್ವಾನಿಸಲಾಗಿದ್ದು, ವಿವರವನ್ನು ಕರ್ನಾಟಕ ಇ-ಪೋರ್ಟಲ್ ಜಾಲತಾಣ https://kppp.karnataka.gov.in/ ಇಲ್ಲಿ ಪಡೆಯಬಹುದಾಗಿರುತ್ತದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 24-02-2026ರ ಬೆಳಿಗ್ಗೆ 11.00 ಗಂಟೆ ಆಗಿರುತ್ತದೆ.

Tender No:	Tender Name:
MDCCB/2025-26/SE0023/CALL-2	Tender for security Guard

ಸಹಿ/- ಮುಖ್ಯಕಾರ್ಯನಿರ್ವಹಣಾಧಿಕಾರಿ, ಮಂಡ್ಯ ಡಿ.ಸಿ.ಸಿ. ಬ್ಯಾಂಕ್ ನಿ., ಮಂಡ್ಯ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
ಬೆವಿಕಂ BESCOM
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)
(CIN: U04010KA2002SGC030438)
ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)
ಬೆವಿಕಂ, ವಿಚಾರಣೆ/ಇಂಡೆಂಟ್ ಸಂ. ಬೆಸ್ಕಾಂ/2025-26/ಇಎಲ್/ವರ್ಕ್ ಇಂಡೆಂಟ್ 1000 ಅನ್ವಯ ಬೆವಿಕಂನ ಪಶ್ಚಿಮ ವೃತ್ತ ವ್ಯಾಪ್ತಿಯಲ್ಲಿ ವಿವಿಧ ಸಂರಚನೆಯ ಮತ್ತು ವಿವಿಧ ಮಾದರಿಯ ಡಾಸ್ ಮತ್ತು ನಾನ್-ಡಾಸ್ ಆರ್.ಎಂ.ಯುಗಳ ದೋಷ ತಡೆಗಟ್ಟುವಿಕೆ ಮತ್ತು ನಿರ್ವಹಣಾ ಕಾಮಗಾರಿಗಾಗಿ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ ಒಂದು ವರ್ಷದ ಅವಧಿಗೆ (ಹೆಚ್ಚುವರಿ ಮತ್ತೊಂದು ವರ್ಷ ಅವಧಿಗೆ ವಿಸ್ತರಿಸಬಹುದಾಗಿದೆ) ಅರ್ಹ ಬಿಡ್‌ದಾರರಿಂದ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ.
ಬಿಡ್ ದಾಖಲೆಗಳ ಲಭ್ಯತೆ: **18.02.2026**. ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **20.03.2026** ರಂದು **17.00** ಗಂಟೆವರೆಗೆ. ಬಿಡ್ ದಾಖಲೆಯನ್ನು ತೆರೆಯುವ ದಿನಾಂಕ: **23.03.2026** ರಂದು **17.15** ಗಂಟೆಗೆ.
ಕೆಪಿಪಿ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ಮೂಲಕ ಟೆಂಡರ್‌ಗಳನ್ನು ಪಡೆಯಬಹುದು. ಇಚ್ಛೆಯುಳ್ಳ ಬಿಡ್ದುದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು. ಬಿಡ್ದುದಾರರು ಕೆಪಿಪಿ ಸಹಾಯವಾಣಿ ಸಂಖ್ಯೆಗಳು (+91-8046010000, +91-8068948777) ಅಥವಾ ಇ-ಮೇಲ್: support@eprochelpdesk.com ನಿಂದ ಸಹಾಯವನ್ನು ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದು.
ಸಹಿ/-
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ ಮೊಬೈಲ್ APP Download ಮಾಡಿಕೊಳ್ಳಿ
ಮುಖ್ಯ ಪ್ರಧಾನ ವ್ಯವಸ್ಥಾಪಕರು (ವಿ)
ಖರೀದಿ, ಬೆವಿಕಂ

ಕರ್ನಾಟಕ ಸರ್ಕಾರ
ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ
ಪ್ರಾಂಶುಪಾಲರವರ ಕಛೇರಿ, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ ನಂ.2, ಪಿ.ಕಾಳಿಂಗರಾವ್ ರಸ್ತೆ, ಸುಬ್ಬಯ್ಯ ವೃತ್ತ ಬೆಂಗಳೂರು-560027
ದೂರವಾಣಿ : 080-22222681
No:FSDA/2025-26/SE0028 Date: 16.02.2026
ಇ-ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿ)
Karnataka Public Procurement Portal (e- procurement) ಮುಖಾಂತರ ಮಾತ್ರ
ಸದಸ್ಯ ಕಾರ್ಯದರ್ಶಿ, ಟೆಂಡರ್ ಆಹ್ವಾನ ಪ್ರಾಧಿಕಾರ, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು ಇವರು ಪರೀಕ್ಷಾ ಪ್ರಾಧಿಕಾರ ಮಂಡಳಿ, ಬೆಂಗಳೂರು. ಇಲ್ಲಿಗೆ ಬೇಕಾಗಿರುವ ಸಾಫ್ಟ್‌ವೇರ್ ನಿರ್ವಹಣೆಗೆ ಎಎಂಸಿ ಒದಗಿಸಲು ಅಲ್ಪಾವಧಿ ಟೆಂಡರ್ ಮೂಲಕ ಸರಬರಾಜುದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ.
ಟೆಂಡರ್ ಫಾರಂಗಳನ್ನು ವೆಬ್‌ಸೈಟ್, https://kppp.karnataka.gov.in (Karnataka Public Procurement Portal Government of Karnataka) ನಿಂದ ದಿನಾಂಕ: 16-02-2026 ರಿಂದ 24-02-2026, ಸಂಜೆ 5:30 ಗಂಟೆವರೆಗೆ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ Queries ಕೊನೆಯ ದಿನಾಂಕ: 19-02-2026 ಸಂಜೆ 5:30 ಗಂಟೆವರೆಗೆ. ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ:27-02-2026 ರಂದು ಬೆಳಿಗ್ಗೆ 11:30 ಗಂಟೆಗೆ ಮತ್ತು ಫೈನ್ಯಾಶಿಯಲ್ ಬಿಡ್ ತೆರೆಯುವ ದಿನಾಂಕ: 02-03-2026 ನಂತರ ಆಗಿರುತ್ತದೆ.
ಟೆಂಡರ್ ತೆರೆಯುವ ದಿನಾಂಕವು ಸಾರ್ವತ್ರಿಕ ರಜೆಯೆಂದು ಘೋಷಿಸಲ್ಪಟ್ಟರೆ, ಅದರ ಮುಂದಿನ ಅಧಿಕೃತ ಕೆಲಸದ ದಿನದಂದು ಟೆಕ್ನಿಕಲ್ ಬಿಡ್ ತೆರೆಯಲಾಗುವುದು. ಇತರೆ ವಿವರಗಳನ್ನು ಪ್ರಾಂಶುಪಾಲರವರ ಕಛೇರಿ, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ ನಂ.2, ಪಿ.ಕಾಳಿಂಗರಾವ್ ರಸ್ತೆ, ಸುಬ್ಬಯ್ಯ ವೃತ್ತ ಬೆಂಗಳೂರು-560027 ಇಲ್ಲಿ ಖುದ್ದಾಗಿ ಪಡೆಯಬಹುದು.
ಸಹಿ/-
ಸದಸ್ಯ ಕಾರ್ಯದರ್ಶಿ,
ಟೆಂಡರ್ ಆಹ್ವಾನ ಪ್ರಾಧಿಕಾರ, ಬೆಂಗಳೂರು.
DIPR/CP/5666/Zen/2025-26

ಕರ್ನಾಟಕ ಸರ್ಕಾರ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು, ಹಾಸನ ವಿಭಾಗ, ಅರಣ್ಯ ಭವನ, ಡೈರಿ ಸರ್ಕಲ್, ಬಿ.ಎಂ. ರಸ್ತೆ, ಹಾಸನ-573 201.
ಸಂಖ್ಯೆ : ಬಿ2/ಕೆಎಸ್‌ಎಫ್‌ಐಸಿ/ನೆಡುತೋಪು ಕತರಾವಣೆ/ವಿವ-135/2025-26 ದಿನಾಂಕ:13.02.2026.
ಅಲ್ಪಾವಧಿ ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ)
2025-26ನೇ ಸಾಲಿನಲ್ಲಿ ಹಾಸನ ವಿಭಾಗ ವ್ಯಾಪ್ತಿಯಲ್ಲಿನ ವಿವಿಧ ವಲಯಗಳಲ್ಲಿನ ನೆಡುತೋಪು ಕತರಾವಣೆಯಾದ ನಂತರ ದೊರೆಯುವ ನೀಲಗಿರಿ & ಅಕೇಶಿಯಾ ಬುಡಗಳನ್ನು ಬೇರು ಸಮೇತ ಕಿತ್ತು ತೆರವುಗೊಳಿಸುವ ಕಾಮಗಾರಿಗೆ ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ದಿನಾಂಕ: 21.02.2026 ರಂದು 16.00 (ಸಂಜೆ 4.00 ಗಂಟೆ) ಗಂಟೆಯವರೆವಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಕಛೇರಿ ಕೆಲಸದ ದಿವಸಗಳಲ್ಲಿ ಅಥವಾ https://kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ.
ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ತಾಂತ್ರಿಕ ಸಹಾಯಕರು, ಹಾಸನ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/1078/ಕೆಎಸ್‌ಎಂಸಿಎ/2025-26

ಕರ್ನಾಟಕ ಸರಕಾರ
ಭೂದಾಖಲೆಗಳ ಉಪನಿರ್ದೇಶಕರ ಕಾರ್ಯಾಲಯ, ಕೊಪ್ಪಳ.
ಸಂ :ಭೂದಾಉನಿಕೊ/ಹೊ.ಗು.ಬಾ.ಜ./ಇ-ಟೆಂಡರ್/01/2025-26 ದಿನಾಂಕ: 16.02.2026
ಟೆಂಡರ್ ಪ್ರಕಟಣೆ
ಕೊಪ್ಪಳ ಜಿಲ್ಲೆಯ ಅಧೀನ ಭೂದಾಖಲೆಗಳ ಸಹಾಯಕ ನಿರ್ದೇಶಕರುಗಳ ಕಚೇರಿಗಳಲ್ಲಿ ಅಡವಿ ಭೂಮಾಪಕರಿಗೆ ಸಹಾಯಕರಾಗಿ ಕೆಲಸ ನಿರ್ವಹಿಸಲು ಹೊರಗುತ್ತಿಗೆ ಆಧಾರದ ಮೇಲೆ 29 ಜನ ಅಪ್ರವೀಣ ಕಾರ್ಮಿಕರನ್ನು ಒಂದು ವರ್ಷದ ಅವಧಿಗೆ ಪಡೆಯುವ ಸಂಬಂಧ The Karnataka Transparency in Public Procurements Act, 1999(As amended by Act 21 of 2001 and 4 of 2003) 27 ನೇ ನಿಯಮದಂತೆ ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪನಿರ್ದೇಶಕರು ಇವರ ಕಾರ್ಯಾಲಯಕ್ಕೆ ಪೂರ್ವಾರ್ಹತೆಯುಳ್ಳ ಸಂಸ್ಥೆಗಳಿಂದ (Pre qualified tenders duly empanelled by e-governance) ಮಾತ್ರ ಆನ್‌ಲೈನ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಟೆಂಡರ್ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ
(1) ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 02.03.2026 ಸಂಜೆ 5-00 ಗಂಟೆಯವರೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 04.03.2026 ಬೆಳಿಗ್ಗೆ 11.00 ಗಂಟೆಗೆ (3) ಹಣಕಾಸು ಬಿಡ್ ತೆರೆಯುವ ದಿನಾಂಕ: 09.03.2026 ಬೆಳಿಗ್ಗೆ 11.00 ಗಂಟೆಗೆ (4) ಕಚೇರಿಯ ಮೇಲ್ ವಿಳಾಸ: Email:ddlrkoppal3@gmail.com
ಹೆಚ್ಚಿನ ಮಾಹಿತಿಗಾಗಿ ಭೂದಾಖಲೆಗಳ ಉಪನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದು. ಮೊ.ನಂ:9731062389
ಸಹಿ/- ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂದಾಖಲೆಗಳ ಉಪನಿರ್ದೇಶಕರು ಕೊಪ್ಪಳ
ವಾ.ಸಾ.ಇ/ಕೊಪ್ಪಳ/683/ದೇಶಪಾಂಡೆಪಬ್ಲಿಸಿಟಿ/2025-26

ನಗರಸಭಾ ಕಾರ್ಯಾಲಯ, ಹೊಸಕೋಟೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ-562114,
ದೂರವಾಣಿ:-27931221, ಸಹಾಯವಾಣಿ: 27931759
Email:-itstaff_ulb_hosakote@yahoo.com Website: www.hosakotecity.mrc.gov.in
ನಂ.ನಸಹೊ/ಆಶಾ/ಘವನಿ/ಟೆಂಡರ್/ಸಿಆರ್/12/2025-26 ದಿನಾಂಕ: 16.02.2026
"ಮರು ಟೆಂಡರ್ ಪ್ರಕಟಣೆ" (ಇ-ಪ್ರೊಕ್ಯೂರ್‌ಮೆಂಟ್ ಕೆ.ಟಿ.ಪಿ.ಪಿ ಪೋರ್ಟಲ್ ಮೂಲಕ)
ಪೌರಾಯುಕ್ತರು ನಗರಸಭೆ ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಂದ 2025-26ನೇ ಸಾಲಿನ ಸ್ವಚ್ಛ ಭಾರತ್ ಮಿಷನ್ 2.0 ಯೋಜನೆಯಡಿ ಈ ಕೆಳಕಂಡ ಕಾಮಗಾರಿಗೆ ಕರ್ನಾಟಕ ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್ ಪ್ರಕಾರ ಮರು ಟೆಂಡರ್‌ನ್ನು ದ್ವಿ-ಪದ್ಧತಿಯಡಿ ಅರ್ಹ ದರ್ಜೆಯ ನೋಂದಾಯಿತ ಗುತ್ತಿಗೆದಾರರಿಂದ / ಸಂಸ್ಥೆಯಿಂದ ಭಾಗವಹಿಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಕರೆಯಲಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ರೂ. ಗಳಲ್ಲಿ
01	DMA/2025-26/OW/WORK_INDENT52011/CALL-2	125.14	1,87,710/-

1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in/#/portal/portal-home ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. 2) ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಆರೋಗ್ಯ ಶಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು (ಪರಿಸರ) ರವರನ್ನು ಸಂಪರ್ಕಿಸುವುದು.
ಸಹಿ/- ಪೌರಾಯುಕ್ತರು ನಗರಸಭೆ, ಹೊಸಕೋಟೆ.
ವಾಸಾಸಂಇ/ವಾ.ಪ್ರ/ಶಿರಡಿಸಾಯಿ/5675/2025-26

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಗಾಂಧಿನಗರ ವಿಭಾಗ, 2ನೇ ಮಹಡಿ, ಬಿಬಿಎಂಪಿ ಸಂಕೀರ್ಣ, ಧನ್ವಂತರಿ ರಸ್ತೆ, ಬೆಂಗಳೂರು – 560009.
ಸಂಖ್ಯೆ: ಕಾಅ/ಜಿಎನ್‌ಆರ್/ಟೆಂಡರ್/ಕೆಪಿಪಿಪಿ/012/2025-26 ದಿನಾಂಕ: 16-02-2026
ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ದ್ವಿ-ಲಕೋಟೆ ಪದ್ಧತಿ) (ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ, ಬೆಂಕೇನಪಾ, ಬೆಂಗಳೂರು ಇವರು ಕೆಳಕಂಡ ಕಾಮಗಾರಿಗಳಿಗೆ ಬೆಂಕೇನ ಪಾಲಿಕೆಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರು ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ದರ್ಜೆಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರಿಂದ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಗಾಂಧಿನಗರದ ವಾರ್ಡ್ ಸಂಖ್ಯೆ. 123 ರಲ್ಲಿನ ಬಿಬಿಎಂಪಿ ವಿಭಾಗೀಯ ಕಛೇರಿ ನಿರ್ಮಾಣ ಮತ್ತು ವಲಯ ಕಛೇರಿ ಕಟ್ಟಡದ ಸುಧಾರಣೆಗಳ ಕಾಮಗಾರಿ. (2ನೇ ಕರೆ) – (ಪ್ಯಾಕೇಜ್-1) – ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 402.73, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 6,05,000/-
2	ಗಾಂಧಿನಗರದ ಉಪ ವಿಭಾಗದಲ್ಲಿರುವ ಬಿಬಿಎಂಪಿ ಉದ್ಯಾನವನಗಳು, ಸಮುದಾಯ ಭವನ, ಶೌಚಾಲಯಗಳು ಮತ್ತು ರುದ್ರಭೂಮಿಯ ದುರಸ್ತಿಗಳು ಹಾಗೂ ಸುಧಾರಣೆಗಳ ಕಾಮಗಾರಿ. (3ನೇ ಕರೆ) – (ಪ್ಯಾಕೇಜ್-4) – ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 396.76, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 5,95,144/-
3	ಸುಭಾಷ್‌ನಗರದ ವಾರ್ಡ್ ಸಂಖ್ಯೆ. 124 ರಲ್ಲಿನ ಎಸ್.ಸಿ / ಎಸ್.ಟಿ ಪ್ರದೇಶಗಳಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿ ಕೆಲಸಗಳು ಮತ್ತು ಬ್ಲಾಕ್ ಸಂಖ್ಯೆ. 35.2, 69, 35.1, 34.2, 34.1, 41.1 ರಲ್ಲಿ ಇತರೆ ಸಂಬಂಧಿತ ಕೆಲಸಗಳ ಕಾಮಗಾರಿ. (2ನೇ ಕರೆ) – ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 205.04, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 3,07,580/-
4	ಓಕಳೀಪುರಂ ವಾರ್ಡ್ ಸಂಖ್ಯೆ. 125 ರಲ್ಲಿನ ಎಸ್.ಸಿ / ಎಸ್.ಟಿ ಪ್ರದೇಶಗಳಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿ ಕೆಲಸಗಳು ಮತ್ತು ಬ್ಲಾಕ್ ಸಂಖ್ಯೆ. 53, 52, 51, 50 ರಲ್ಲಿ ಇತರೆ ಸಂಬಂಧಿತ ಕೆಲಸಗಳ ಕಾಮಗಾರಿ. (2ನೇ ಕರೆ) – ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 144.19, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 2,16,300/-

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: https://kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 03-03-2026 ರಂದು 16.00 ಗಂಟೆವರೆಗೆ. 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: 05-03-2026 ರಂದು 12.30 ಗಂಟೆಗೆ. 4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: ಕೆಪಿಪಿಪಿ ಮೂಲಕ ತಿಳಿಸಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.
ಸಹಿ/- ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ, ಬೆಂಕೇನಪಾ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ಸಂಖ್ಯೆ 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560052. ಫೋನ್: 080-22268677/78/79, ಫ್ಯಾಕ್ಸ್: 080-22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in
ನಂ: ಕವಿನಿಆ/ಡಿಡಿ(ಜಕಾತಿ)/OP37&39/2025-26/1503 ದಿನಾಂಕ: 16.02.2026
ಸಾರ್ವಜನಿಕ ವಿಚಾರಣೆ ವೇಳಾಪಟ್ಟಿಯಲ್ಲಿನ ಬದಲಾವಣೆಯ ಕುರಿತು ಸೂಚನೆ
ಬೆಸ್ಕಾಂ ಮತ್ತು ಕೆಪಿಟಿಸಿಎಲ್‌ನ ಎ.ಪಿ.ಆರ್. ಅರ್ಜಿಗಳಿಗೆ ಸಂಬಂಧಿಸಿದಂತೆ ಗುರುವಾರ ಫೆಬ್ರವರಿ 19, 2026ರಂದು ನಿಗದಿಪಡಿಸಲಾಗಿದ್ದ ಸಾರ್ವಜನಿಕ ವಿಚಾರಣೆಯನ್ನು ಮುಂದೂಡಲಾಗಿದೆ.
ಪರಿಷ್ಕೃತ ವೇಳಾಪಟ್ಟಿ ಈ ಕೆಳಗಿನಂತಿದೆ:
ಬೆಸ್ಕಾಂ : **ಶುಕ್ರವಾರ ಫೆಬ್ರವರಿ 20, 2026, ಬೆಳಿಗ್ಗೆ 11:00 ಗಂಟೆಗೆ**
ಕೆಪಿಟಿಸಿಎಲ್ : **ಶುಕ್ರವಾರ ಫೆಬ್ರವರಿ 20, 2026, ಮಧ್ಯಾಹ್ನ 03:00 ಗಂಟೆಗೆ**
ಸ್ಥಳ : ನ್ಯಾಯಾಂಗಣ ಸಭಾಂಗಣ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಸಂಖ್ಯೆ 16 ಸಿ-1, ಮೊದಲನೇ ಮಹಡಿ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು-560052.
ಸಹಿ/- ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ
DIPR/CP/YC/5669/2025-26

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ವೃತ್ತ ಕಛೇರಿ, ಬಿ.ಡಿ.ಎ, ಕಛೇರಿ ಹತ್ತಿರ, ಬ.ಬಾಗೇವಾಡಿ ರಸ್ತೆ, ಹು.ವಿ.ಸ.ಕಂ.ನಿ.ನಿ. ವಿಜಯಪುರ, ಮೊಬೈಲ್ ನಂ: 94483-70248
ಇ-ಮೇಲ್ ಐಡಿ : seebjp.hescom@gmail.com
Corporate Identity Number (CIN) : U31401KA2002SGC030437
ಕ್ರ.ಸಂ.ಹೆಸ್ಕಾಂ/ವಿಜೆಪಿ/ಅ.ಅ.(ವಿ)/ಹಿಆಸ/25-26/242 ದಿನಾಂಕ : 30-01-2026
ಅಂತಿಮ ಕರೆ ನೋಟಿಸು
ಶ್ರೀ ವಿವೇಕಾನಂದ ಎಸ್.ತಾಂಬೆ, ಕಿರಿಯ ಮಾಪಕ ಓದುಗ ಕಾರ್ಯ ಮತ್ತು ಪಾಲನೆ ಉಪ-ವಿಭಾಗ ಬಬಲೇಶ್ವರ ಮಮದಾಪೂರ ಶಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ತಾವು ದಿನಾಂಕ : 30-01-2019 ರಿಂದ 17-10-2025 ವರೆಗೆ ಕಚೇರಿಗೆ ಅನಧಿಕೃತ ಗೈರು ಹಾಜರಾಗಿರುತ್ತೀರಿ. ತಮಗೆ ಕೆಲಸಕ್ಕೆ ಹಾಜರಾಗುವಂತೆ ಈ ಕಛೇರಿಯಿಂದ ಪತ್ರ ಸಂಖ್ಯೆ : ವಿಜೆಪಿ/ಅಅ(ವಿ)/ಹಿಆಸ/25-26/198-99 : ದಿನಾಂಕ : 06-11-2025 ಅಂತಿಮ ಕಾರಣ ಕೇಳುವ ನೋಟಿಸ ನೋಂದಣಿ ಅಂಚೆ ಮುಖಾಂತರ ಜಾರಿ ಮಾಡಲಾಗಿತ್ತು. ಸದರಿ ನೋಟಿಸನ್ನು ತಾವು ಸ್ವೀಕರಿಸಿರುವುದಿಲ್ಲ. ಹಾಗೂ ಇನ್ನೂವರೆಗೂ ಕಚೇರಿಯ ಕೆಲಸಕ್ಕೆ ಹಾಜರಾಗಿರುವುದಿಲ್ಲ. ತಮ್ಮ ಗೈರು ಹಾಜರದಿಂದಾಗಿ ನಿಗಮದ ಕೆಲಸ-ಕಾರ್ಯಗಳು ಕುಂಠಿತಗೊಂಡಿರುವುದು ಹಾಗೂ ತಮಗೆ ನಿಗಮದಲ್ಲಿ ಕೆಲಸ ನಿರ್ವಹಿಸುವ ಆಸಕ್ತಿ ಇರುವುದಿಲ್ಲವೆಂದು ಕಂಡು ಬಂದಿರುತ್ತದೆ. ಆದ್ದರಿಂದ ಈ ಅಂತಿಮ ಕರೆ ನೋಟಿಸು ಪ್ರಕಟಗೊಂಡ 15 ದಿವಸಗಳೊಳಗೆ ಸಕಾರಣದೊಂದಿಗೆ ಕೆಲಸಕ್ಕೆ ಹಾಜರಾಗುವುದು ಒಂದು ವೇಳೆ ಕೆಲಸಕ್ಕೆ ಹಾಜರ ಆಗದಿದ್ದಲ್ಲಿ ಯಾವುದೇ ಸೂಚನೆ ನೀಡದೇ ತಮ್ಮನ್ನು ಕೆಲಸದಿಂದ ತೆಗೆದು ಹಾಕಲಾಗುವುದು.
ಸಹಿ/- ಅಧೀಕ್ಷಕ ಅಭಿಯಂತರರು (ವಿದ್ಯುತ್)
ಕಾರ್ಯ ಮತ್ತು ಪಾಲನೆ ವೃತ್ತ,
ಹೆಸ್ಕಾಂ ವಿಜಯಪೂರ
ವಾಸಾಇ/ಧಾ/ಕೆಎಸ್‌ಎಂಸಿಎ/1233/2025-26

ಪೊಲೀಸ್ ಇಲಾಖೆ
ಪೊಲೀಸ್ ಮಹಾನಿರ್ದೇಶಕರು ರವರ ಕಛೇರಿ ಪೊಲೀಸ್ ಗಣಕ ವಿಭಾಗ,
7ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560001, ಇ-ಮೇಲ್ :dgppcw@ksp.gov.in ದೂರವಾಣಿ : 22353871
ಸಂಖ್ಯೆ: 16/ಸಂಗ್ರಹ/ಎಡಿಜಿಪಿ/ಪಿಸಿಡಬ್ಲ್ಯೂ/2024-25 ದಿನಾಂಕ : 13.02.2026
ಇ-ಟೆಂಡರ್ ಪ್ರಕಟಣೆ
ಪೊಲೀಸ್ ಗಣಕ ವಿಭಾಗದ ವತಿಯಿಂದ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಿಗೆ ಅವಶ್ಯಕತೆ ಇರುವ ಈ ಕೆಳಕಂಡ ಉಪಕರಣಗಳನ್ನು ಸರಬರಾಜು ಮಾಡಿ ಅಳವಡಿಸುವ ಕುರಿತು ಕೆ.ಟಿ.ಪಿ.ಪಿ ಕಾಯ್ದೆ 1999 ನಿಯಮ 2000ರ ಪ್ರಕಾರ ಕರ್ನಾಟಕ ಸರ್ಕಾರದ ಇ-ಟೆಂಡರ್ ಪ್ರಕ್ರಿಯೆ ಮೂಲಕ ಅರ್ಜಿಗಳನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ.

ಕ್ರ ಸಂ	ಟೆಂಡರ್ ಸಂಖ್ಯೆ	ಟೆಂಡರ್ ಸಂಕ್ಷಿಪ್ತ ವಿವರ	ಸಂಖ್ಯೆ	ಟೆಂಡರ್ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ
1	KSP/2025-26/IND0303/Call-3	Supply of Medium End Desktop	400	18/03/2026 by 17:30 hrs
2		Supply of Medium End Laptop	24	

ಈ ನಿಟ್ಟಿನಲ್ಲಿ ಕುಶಲತೆ ಪಡೆದಿರುವ ಸಂಸ್ಥೆಗಳು ವಿವರವಾದ ಷರತ್ತು ಮತ್ತು ನಿಬಂಧನೆ ಹಾಗೂ ತಾಂತ್ರಿಕ ವಿವರ ಒಳಗೊಂಡಿರುವ ಟೆಂಡರ್ ದಾಖಲಾತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. ಮೇಲ್ಕಂಡ ಉಪಕರಣಗಳನ್ನು ಸರಬರಾಜು ಮಾಡಿ ಅಳವಡಿಸಲು ಇಚ್ಛಿಸುವವರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳುವುದು. ಇ-ಖರೀದಿಯ ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಇ-ಪ್ರೊಕ್ಯೂರ್‌ಮೆಂಟ್ ಸೆಲ್, ಇ-ಆಡಳಿತ ಇಲಾಖೆ, ಬಹುಮಹಡಿಗಳ ಕಟ್ಟಡ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು-560001 ಇಲ್ಲಿ ವ್ಯವಸ್ಥೆಗೊಳಿಸುತ್ತಿದ್ದು, ಎಲ್ಲಾ ಸರಬರಾಜುದಾರರು ದೂರವಾಣಿ ಸಂಖ್ಯೆ 91-8046010000 + 91-8068948777 ಗಳಿಗೆ ಸಂಪರ್ಕಿಸಿ ಸಹಾಯವನ್ನು ಪಡೆಯಬಹುದು. ಇ-ಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸರಬರಾಜುದಾರರು ಇ-ಖರೀದಿ ವ್ಯವಸ್ಥೆಯಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಅಥವಾ ಹೆಲ್ಪ್‌ಲೈನ್ 91-8046010000 +91-8068948777ಗಳನ್ನು ಸಂಪರ್ಕಿಸತಕ್ಕದ್ದು. ದಿನಾಂಕ : 17.02.2026 ರಿಂದ ದಾಖಲಾತಿಯು https://kppp.karnataka.gov.in ನಲ್ಲಿ ಲಭ್ಯವಿರುತ್ತದೆ.
1) ವಿವರಗಳು : ಟೆಂಡರ್ ಫಾರಂ ಡೌನ್‌ಲೋಡ್ ಮಾಡಲು ಮತ್ತು ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : (17/02/2026 ರಿಂದ 18/03/2026 ರ 17:30 ಗಂಟೆಯವರೆಗೆ) (2) ಇಎಂಡಿ ಮೊತ್ತ : ರೂ. 4,71,200/-(ನಾಲ್ಕು ಲಕ್ಷದ ಎಪ್ಪತ್ತೊಂದು ಸಾವಿರದ ಎರಡು ನೂರು ಮಾತ್ರ) ಗಳನ್ನು ಈ ಕೆಳಕಂಡ ವಿಧಾನಗಳ ಮೂಲಕ ಪಾವತಿ ಮಾಡಬಹುದು. (ಎ) ಕ್ರೆಡಿಟ್ ಕಾರ್ಡ್, (ಬಿ) ಡೆಬಿಟ್ ಕಾರ್ಡ್, (ಸಿ) ನ್ಯಾಷನಲ್ ಎಲೆಕ್ಟ್ರಾನಿಕ್ ಫಂಡ್ ಟ್ರಾನ್ಸ್‌ಫರ್, (ಡಿ) ಪಾವತಿ ವಿವರ ಬಿಡ್ ಡಾಕ್ಯುಮೆಂಟ್‌ನಲ್ಲಿ ತಿಳಿಸಿರುವಂತೆ (ಇ-ಪಾವತಿ ವಿವರ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ) (3) ಪ್ರೀ ಬಿಡ್ ಸಭೆ : 25-02-2026 ರ 12.00 ಗಂಟೆಗೆ (4) ತಾಂತ್ರಿಕ ಬಿಡ್ : 20-03-2026 ರ 11.00 ಗಂಟೆಗೆ (5) ವಾಣಿಜ್ಯ ಬಿಡ್ : 26-03-2026 ರ ಬೆಳಿಗ್ಗೆ 11.30 ಗಂಟೆಗೆ.
ಸಹಿ/-
ಪೊಲೀಸ್ ಮಹಾ ನಿರ್ದೇಶಕರು,
ಪೊಲೀಸ್ ಗಣಕ ವಿಭಾಗ, ಬೆಂಗಳೂರು
DIPR/CP/5654/Zen/2025-26

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ
ಕುಲಸಚಿವರ ಕಾರ್ಯಾಲಯ, ಉದ್ಯಾನಗಿರಿ, ನವನಗರ, ಬಾಗಲಕೋಟ - 587104, ಕರ್ನಾಟಕ. ದೂ.: 08354-230276/278/280
ಮಿಂಚಂಚೆ : registrar@uhsbagalkot.edu.in
ಸಂಖ್ಯೆ : ಕು.ಸ./ತೋ.ವಿ.ವಿ./ಘಟಿಕೋತ್ಸವ-15/2073/2025-26
ದಿನಾಂಕ : 12-02-2026
ಅಧಿಸೂಚನೆ
ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದ 15 ನೇ ಘಟಿಕೋತ್ಸವವು ಜೂನ್ 2026 ರ ಮೊದಲ ಪಕ್ಷದಲ್ಲಿ ಜರುಗಲಿದೆ. ಈ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಮಹಾವಿದ್ಯಾಲಯಗಳಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿಗಳಲ್ಲಿ ದಿನಾಂಕ : 30-03-2026 ರ ಒಳಗಾಗಿ ತೇರ್ಗಡೆ ಹೊಂದಿರುವ ಅಭ್ಯರ್ಥಿಗಳು ಸದರಿ ಘಟಿಕೋತ್ಸವದಲ್ಲಿ "ಸಮಕ್ಷಮ" ಇಲ್ಲವೇ "ಅನುಪಸ್ಥಿತಿಯಲ್ಲಿ" ಪದವಿಯನ್ನು ಪಡೆಯಬಹುದಾಗಿದೆ.
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 30-03-2026 ವಿವರವಾದ ಅಧಿಸೂಚನೆ, ಅರ್ಜಿ ನಮೂನೆ, ಚಲನ್ ಪ್ರತಿ ಹಾಗೂ ಇತರೆ ಹೆಚ್ಚಿನ ಮಾಹಿತಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ : https://uhsbagalkot.karnataka.gov.in ನಲ್ಲಿ ಪಡೆಯಬಹುದು.
ಸಹಿ/- ಕುಲಸಚಿವರು,
ತೋ.ವಿ.ವಿ., ಬಾಗಲಕೋಟ.
ಡಿಐಪಿಆರ್/ಬಾಗಲಕೋಟೆ/587/ಮಣಿಪಾಲ್/2025-26

ಅಲ್ಪಸಂಖ್ಯಾತರ ನಿರ್ದೇಶನಾಲಯ
ನಂ-16ಸಿ, ಮೌಲಾನಾ ಅಬ್ದುಲ್ ಕಲಾಂ ಅಜಾದ್ ಭವನ, ಮಿಲ್ಲರ್ ಟ್ಯಾಂಕ್ ರಸ್ತೆ, ವಸಂತನಗರ, ಬೆಂಗಳೂರು-560052.
Website:-https://dom.karnataka.gov.in
ಪತ್ರಿಕಾ ಪ್ರಕಟಣೆ
ಮೆಟ್ರಿಕ್ ನಂತರದ ವಿವಿಧ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2025-26ನೇ ಸಾಲಿಗೆ ನೀಡಲಾಗುತ್ತಿರುವ ಮೆಟ್ರಿಕ್ ನಂತರದ "ಶುಲ್ಕಮರುಪಾವತಿ ಯೋಜನೆಯ" ಸೌಲಭ್ಯಕ್ಕಾಗಿ ವಿದ್ಯಾರ್ಥಿಗಳು, ಪೋಷಕರು ಹಾಗೂ ಶಿಕ್ಷಣ ಸಂಸ್ಥೆಗಳ ಮನವಿ ಮೇರೆಗೆ ಆನ್ಲೈನ್ ಮೂಲಕ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು 28.02.2026 ರವರೆಗೆ ವಿಸ್ತರಿಸಲಾಗಿದೆ.
ಆದ್ದರಿಂದ ಸದರಿ ಯೋಜನೆಯ ಸದುಪಯೋಗ ಪಡೆಯಲು ಅರ್ಹ ವಿದ್ಯಾರ್ಥಿಗಳು ಕೂಡಲೇ https://ssp.postmatric.karnataka.gov.in/ ಲಿಂಕ್ ಮೂಲಕ ಕೊನೆಯ ದಿನಾಂಕದೊಳಗಾಗಿ ಆನ್ಲೈನ್ ನಲ್ಲಿ ಅರ್ಜಿಗಳನ್ನು ಸಲ್ಲಿಸಬಹುದಾಗಿರುತ್ತದೆ ಎಂದು ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ಬೆಂಗಳೂರು ರವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.
*ಹೆಚ್ಚಿನ ಮಾಹಿತಿಗಾಗಿ Website: https://dom.karnataka.gov.in ಗೆ ಭೇಟಿ ನೀಡಬಹುದಾಗಿರುತ್ತದೆ. ರಾಜ್ಯ ವಿದ್ಯಾರ್ಥಿವೇತನದ ಸಹಾಯವಾಣಿ ಸಂಖ್ಯೆ:1902ಗೆ ಕರೆ ಮಾಡಬಹುದಾಗಿರುತ್ತದೆ.
ದಿನಾಂಕ: 16.02.2026
ಸ್ಥಳ: ಬೆಂಗಳೂರು.
ಸಹಿ\-
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು.
DIPR/CP/5660/NR/2025-26

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ದೂರವಾಣಿ ಸಂ: 08338/ 273859 ಇ-ಮೇಲ್: eepwdckd@gmail.com
ಕ್ರಸಂ. ಲೋ.ಇ./ಚಿ.ವಿ/ಸ.ಇಂ-1/ಟೆಂಡರ್/2025-26/7193 ದಿನಾಂಕ:13/02/2026
ಅವಧಿ ವಿಸ್ತರಣೆ ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ-1
ಈ ಕಚೇರಿ ಇ-ಟೆಂಡರ್ ಪ್ರಕಟಣೆ ಕ್ರ.ಸಂ.ಲೋ.ಇ./ಚಿ.ವಿ/ಸ.ಇಂ-1/ಟೆಂಡರ್/2025-26/6910 ದಿನಾಂಕ: 09/02/2026 ರಡಿ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಪ್ರಕಟಣೆಯಲ್ಲಿನ ಕ್ರ.ಸಂ. ಕ್ರ.ಸಂ. 6, 7, 10, 13, 15, 30, 51, 53 ಮತ್ತು 66 ರಲ್ಲಿನ ಕಾಮಗಾರಿಗಳಿಗೆ ಈ ಕೆಳಗಿನಂತೆ ಅವಧಿ ವಿಸ್ತರಣೆ ಮಾಡಲಾಗಿದೆ.
ಕ್ರ.ಸಂ. 3, 4, 6 ಮತ್ತು 8 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಆಕ್ಷೇಪಣೆ-ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:21-02-2026(ಸಾಯಂಕಾಲ 5.30 ಗಂಟೆಯವರೆಗೆ), 2)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:23-02-2026 (ಸಾಯಂಕಾಲ5.00 ಗಂಟೆಯವರೆಗೆ), 3)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 25-02-2026 (ಸಾಯಂಕಾಲ 4.30 ಗಂಟೆಗೆ), 4)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 5)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್‌ದಲ್ಲಿ ಸ್ವಯಂ ಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆ ಯಾಗುವುದು.
ಕ್ರ.ಸಂ. 1, 2, 5, 7 ಮತ್ತು 9 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಆಕ್ಷೇಪಣೆ-ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ : 25-02-2026(ಸಾಯಂಕಾಲ 5.30 ಗಂಟೆಯವರೆಗೆ), 2)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:27-02-2026 (ಸಾಯಂಕಾಲ 5.00 ಗಂಟೆಯವರೆಗೆ), 3)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):02-03-2026 (ಸಾಯಂಕಾಲ 4.30 ಗಂಟೆಗೆ), 4)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"
5)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್‌ದಲ್ಲಿ ಸ್ವಯಂ ಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆ ಯಾಗುವುದು.
ಉಳಿದ ಉಪವಿಧಿಗಳಲ್ಲಿ/ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.
ಸಹಿ/-ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-1854/KSMCA/2025-26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಪ್ರತಿಭೆಗೆ ಶಾಸ್ತ್ರಜ್ಞಾನವಿದ್ದರೆ ವಜ್ರಕ್ಕೆ ಕುಂದಣವಿಟ್ಟಂತೆ.

–ತರಾಸು

ಸಂಪಾದಕೀಯ

ನಕಲಿ ಪ್ರಮಾಣಪತ್ರಗಳ ಹಾವಳಿ ಶಿಕ್ಷಣ ವ್ಯವಸ್ಥೆಗೆ ಕಾಯಕಲ್ಪ ಅಗತ್ಯ

ರಾಜ್ಯದ ಸರ್ಕಾರಿ ಪದವಿ ಕಾಲೇಜುಗಳಲ್ಲಿ ಕೆಲಸ ಮಾಡುತ್ತಿದ್ದ 200ಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಈಚೆಗೆ ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದಾರೆ. ಇದು ಉತ್ತರದಾಯಿತ್ವದ ಪ್ರಜ್ಞೆಯಿಂದ ನೀಡಿರುವ ರಾಜೀನಾಮೆಯಂತೆ ಕಾಣಿಸುತ್ತಿಲ್ಲ; ಬದಲಿಗೆ ಇದು ಗಂಭೀರ ಸ್ವರೂಪ ಪಡೆದುಕೊಳ್ಳುತ್ತಿರುವ ಹಗರಣವೊಂದರಿಂದ ಮೌನವಾಗಿ ಹೊರಬರುವ ಯತ್ನದಂತೆ ಕಾಣುತ್ತಿದೆ. ಹಲವರು ಸಲ್ಲಿಸಿದ್ದ ಪಿಎಚ್.ಡಿ ಪ್ರಮಾಣಪತ್ರಗಳ ವಿಶ್ವಾಸಾರ್ಹತೆ ಬಗ್ಗೆ ಅನುಮಾನ ಮೂಡಿದ್ದು, ರಾಜ್ಯದ ಉನ್ನತ ಶಿಕ್ಷಣ ಇಲಾಖೆಯು ಪರಿಶೀಲನೆ ಆರಂಭಿಸಿದೆ. ಇದರ ನಂತರದಲ್ಲಿ ಈ ರಾಜೀನಾಮೆಗಳ ಬಗ್ಗೆ ವರದಿಯಾಗಿದೆ. ಇಲಾಖೆಯ ಪ್ರಮುಖ ಪ್ರಕ್ರಿಯೆಯ ಪ್ರಮಾಣ ಸಾಂಸ್ಥಿಕ ವೈಫಲ್ಯವೊಂದು ಕಣ್ಣಿಗೆ ರಾಚುವಂತೆ ಕಂಡುಬಂದಿದೆ. ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಎನ್‌ಇಟಿ) ಅಥವಾ ರಾಜ್ಯ ಅರ್ಹತಾ ಪರೀಕ್ಷೆಯಲ್ಲಿ (ಕೆ-ಸೆಟ್) ಉತ್ತೀರ್ಣರಾಗಿದ್ದರೆ ಮಾತ್ರ ಪದವಿ ಕಾಲೇಜುಗಳಲ್ಲಿ ಉಪನ್ಯಾಸಕರಾಗಬಹುದು ಎಂಬ ನಿಯಮ ಇದೆ. ಪಿಎಚ್.ಡಿ ಪ್ರಮಾಣ ಪತ್ರ ಇದ್ದರೆ ಎನ್‌ಇಟಿ, ಕೆ-ಸೆಟ್ ಪ್ರಮಾಣಪತ್ರದ ಅಗತ್ಯ ಇರುವುದಿಲ್ಲ. ಹೀಗಾಗಿ ಹಲವರು ನಕಲಿ ಪಿಎಚ್.ಡಿ ಪ್ರಮಾಣಪತ್ರ ಸಲ್ಲಿಸಿದ್ದಾರೆ ಎಂದು ಆರೋಪಿಸಲಾಗಿದೆ. ಇದು ಮೂಲಭೂತ ಪ್ರಶ್ನೆಯೊಂದನ್ನು ಎತ್ತುತ್ತದೆ. ಸರಿಯಾದ ಪರಿಶೀಲನೆ ನಡೆಸದೆ ಈ ಪ್ರಮಾಣಪತ್ರಗಳನ್ನು ಒಪ್ಪಿಕೊಂಡಿದ್ದು ಹೇಗೆ? ನೇಮಕಾತಿ ಪ್ರಕ್ರಿಯೆ ನಿರ್ವಹಿಸುತ್ತಿರುವವರ ಪಾತ್ರ ಇಲ್ಲದೆ ಈ ಬಗೆಯ ಲೋಪಗಳು ಆಗುವುದು ಸಾಧ್ಯವೇ?

ಇಂತಹ ಅಭ್ಯರ್ಥಿಗಳು ಅಕ್ರಮ ನಡೆಸಿರುವುದಷ್ಟೇ ಅಲ್ಲ; ಅವರು ತಮಗಿಂತ ಹೆಚ್ಚು ಅರ್ಹರಾಗಿದ್ದ ಇತರರಿಗೆ ಸಿಗಬಹುದಾಗಿದ್ದ ಅವಕಾಶ ಕಿತ್ತುಕೊಂಡಿದ್ದಾರೆ ಕೂಡ. ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎಂಬ ಕಾರಣಕ್ಕೆ ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಅವಕಾಶ ಕೊಡಬಾರದು. ಸಿಐಡಿ ಪೊಲೀಸರಿಂದ ತನಿಖೆ ನಡೆಸಿ, ನಕಲಿ ಪ್ರಮಾಣಪತ್ರಗಳನ್ನು ಗಿಟ್ಟಿಸಿಕೊಂಡಿದ್ದು ಹೇಗೆ ಎಂಬುದನ್ನು ಪತ್ತೆ ಮಾಡಬೇಕು. ನಕಲಿ ಪ್ರಮಾಣಪತ್ರ ಸಿದ್ಧಪಡಿಸಿಕೊಡುವ ಜಾಲದ ಆಳ-ಅಗಲವನ್ನು ಬಯಲಿಗೆಳೆಯಬೇಕು. ಅಕ್ರಮದಲ್ಲಿ ವಿಶ್ವವಿದ್ಯಾಲಯಗಳ ಅಥವಾ ಅಲ್ಲಿನ ಕೆಲವು ವಿಭಾಗಗಳ ಅಧಿಕಾರಿಗಳ ಪಾತ್ರ ಏನಾದರೂ ಇದೆಯೇ ಎಂಬುದು ಗೊತ್ತಾಗಬೇಕು. ನೇಮಕಾತಿ ಪ್ರಕ್ರಿಯೆಯಲ್ಲಿ ಹಣದ ಕೊಡು-ಕೊಳ್ಳುವಿಕೆ ಆಗಿದೆಯೇ ಎಂಬ ಪ್ರಶ್ನೆಗೆ ಉತ್ತರ ಸಿಗಬೇಕು. ಮುಂದಿನ ದಿನಗಳಲ್ಲಿ ನಡೆಯುವ ನೇಮಕಾತಿ ಪ್ರಕ್ರಿಯೆಗಳಲ್ಲಿ ಇಂತಹ ಅಕ್ರಮ ನಡೆಯುವುದನ್ನು ತಡೆಯಲು ಸಮಗ್ರವಾದ ಪ್ರಮಾಣಿತ ಕಾರ್ಯಾಚರಣೆ ವಿಧಾನವೊಂದನ್ನು (ಎಸ್‌ಒಪಿ) ರೂಪಿಸಲಾಗುತ್ತದೆ ಎಂದು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಆಯುಕ್ತೆ ಮಂಜುಶ್ರೀ ಎನ್. ಹೇಳಿದ್ದಾರೆ. ಆದರೆ, ಈ ಆಶ್ವಾಸನೆಯನ್ನು ಗಮನಿಸಿದರೆ, ಲೂಟಿ ಕೆಲಸ ಮುಗಿದ ನಂತರ ಖಜಾನೆಗೆ ಬೀಗ ಭದ್ರಪಡಿಸುವ ಕೆಲಸ ಇದು ಎಂಬಂತೆ ಕಾಣುತ್ತದೆ. ನಕಲಿ ದಾಖಲೆಗಳನ್ನು ಸಲ್ಲಿಸಿದ್ದ ಕಾರಣಕ್ಕಾಗಿ 40 ಮಂದಿ ಸಹಾಯಕ ಪ್ರಾಧ್ಯಾಪಕರನ್ನು 2017ರಲ್ಲಿ ಡಿಬಾರ್ ಮಾಡಲಾಗಿತ್ತು. ಇದು ವ್ಯವಸ್ಥೆಗೆ ಎಚ್ಚರಿಕೆಯ ಕರೆಗಂಟೆಯಾಗಿ ಕೆಲಸ ಮಾಡಬೇಕಿತ್ತು. ಯಾವುದೇ ಸುಧಾರಣೆಗಳ ಕೇಂದ್ರ ಸ್ಥಾನದಲ್ಲಿ 'ಪಾರದರ್ಶಕತೆ' ಇರಬೇಕು. ವಿಶ್ವವಿದ್ಯಾಲಯಗಳು ಪಿಎಚ್.ಡಿ ಹಾಗೂ ಎಂ.ಫಿಲ್ ಪದವಿಯ ವಿವರವನ್ನು ತಮ್ಮ ವೆಬ್‌ಸೈಟ್ ಮೂಲಕ ಪ್ರಕಟಿಸುವ ವ್ಯವಸ್ಥೆ ಜಾರಿಗೆ ಬರಬೇಕು. ಅಂಕಪಟ್ಟಿ, ಪದವಿ ಪ್ರಮಾಣಪತ್ರ ಸೇರಿದಂತೆ ವಿಶ್ವವಿದ್ಯಾಲಯಗಳ ಎಲ್ಲ ಪ್ರಮಾಣಪತ್ರಗಳನ್ನು ಡಿಜಿಟಲ್ ಮಾಡಬೇಕು. ಇಂತಹ ವ್ಯವಸ್ಥೆಯು ಅಕ್ರಮಗಳಿಗೆ ಲಗಾಮು ಹಾಕುವುದಷ್ಟೇ ಅಲ್ಲದೆ, ಪ್ರಮಾಣಪತ್ರ ಕಳೆದುಕೊಂಡ ವಿದ್ಯಾರ್ಥಿಗಳಿಗೆ ಅದನ್ನು ತ್ವರಿತವಾಗಿ ಪಡೆಯುವುದಕ್ಕೂ ನೆರವಾಗುತ್ತದೆ.

ಸರ್ಕಾರಿ ಪದವಿ ಕಾಲೇಜುಗಳಲ್ಲಿನ ನೂರಾರು ಅತಿಥಿ ಉಪನ್ಯಾಸಕರು ನಕಲಿ ಪ್ರಮಾಣಪತ್ರಗಳನ್ನು ಸಲ್ಲಿಸಿ ಉದ್ಯೋಗ ಪಡೆದಿರುವುದು ಶಿಕ್ಷಣ ವ್ಯವಸ್ಥೆಯ ಆಳ ಹುಳುಕುಗಳನ್ನು ಸೂಚಿಸುವಂತಿದೆ.

ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವುದು ಬಹಳ ಸಹಜವಾಗಿರುವುದು ಈ ಸಮಸ್ಯೆಯ ಮೂಲ ಕಾರಣದಂತೆ ಇದೆ. ತಾತ್ಕಾಲಿಕ ನೇಮಕದ ಸಂಸ್ಕೃತಿಯು ಅಡ್ಡದಾರಿಗಳನ್ನು ಕಂಡುಕೊಳ್ಳುವುದಕ್ಕೆ ಅನುವು ಮಾಡಿಕೊಡುತ್ತದೆ. ಬೋಧಕ ಹುದ್ದೆಗಳು ಖಾಲಿ ಆದಂತೆಲ್ಲ ಅವುಗಳನ್ನು ಭರ್ತಿ ಮಾಡುವ ಕೆಲಸ ಸರ್ಕಾರದ ಕಡೆಯಿಂದ ಆಗಬೇಕು. ಅತಿಥಿ ಉಪನ್ಯಾಸಕರ ಹುದ್ದೆಗಳನ್ನು ಉದ್ದಿಮೆಗಳ ಹಾಗೂ ವಿವಿಧ ಕ್ಷೇತ್ರಗಳ ಪರಿಣತರಿಗೆ ಮಾತ್ರ ಮೀಸಲಾಗಿ ಇಡಬೇಕು. ಅತಿಥಿ ಉಪನ್ಯಾಸಕ ಹುದ್ದೆಗಳು ಕಾಯಂ ಉಪನ್ಯಾಸಕರಿಗೆ ಪರ್ಯಾಯ ಎಂಬಂತೆ ಆಗಬಾರದು. ಈಗಿನ ವಿದ್ಯಮಾನವು ರಾಜ್ಯದ ಶಿಕ್ಷಣ ವ್ಯವಸ್ಥೆಯ ಸಮಗ್ರ ಪರಿಷ್ಕರಣೆಯ ಅಗತ್ಯವನ್ನು ಹೇಳುತ್ತಿದೆ.

ಚಾಟಿ



ಒಪ್ಪಂದದ ಕರಾಳ ಸತ್ಯ

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಇತ್ತೀಚಿನ ಹೇಳಿಕೆಗಳು ಮತ್ತು ಭಾರತದ ಜೊತೆಗಿನ ಅರೆಬರೆ ವ್ಯಾಪಾರ ಒಪ್ಪಂದಗಳನ್ನು ಗಮನಿಸಿದರೆ, ಇದು ದೇಶದ ಹಿತಾಸಕ್ತಿಗಿಂತ ಹೆಚ್ಚಾಗಿ ಮೋದಿಯವರ 'ಆಪ್ತ ಉದ್ಯಮಿ'ಗಳ ಹಿತಾಸಕ್ತಿ ಕಾಪಾಡಲು ಮಾಡಿಕೊಂಡಿರುವ ಒಪ್ಪಂದದಂತಿದೆ.

ಆದಿತ್ಯ ಸಮರ್ಥ, 'ಎಕ್ಸ್'ನಿಂದ

ಕಿಡಿನುಡಿ

ಪ್ರಿಯಾಂಕ್ ಖರ್ಗೆ ಹಾಗೂ ಅವರ ಪಿತಾಶ್ರೀಯವರ ಸರ್ವಾಧಿಕಾರದ ಫಲವಾಗಿ ಕಲಬುರಗಿ ವಿಭಾಗದ ಜಿಲ್ಲೆಗಳು ರಕ್ತಕಣ್ಣೀರು ಸುರಿಸುತ್ತಿವೆ. ತಲಾ ಆದಾಯ ಹಾಗೂ ಶಿಕ್ಷಣದಲ್ಲಿ ಈ ವಿಭಾಗವು ರಾಜ್ಯದಲ್ಲೇ ಕೊನೆಯ ಸ್ಥಾನದಲ್ಲಿದೆ. ಇದಕ್ಕೆ ಈ ಇಬ್ಬರ ಉತ್ಕೃಷ್ಟ ಆಡಳಿತ ಕಾರಣವಲ್ಲವೆ?

ವಿ. ಸುನಿಲ್‌ಕುಮಾರ್, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಶನಿವಾರ, 17-2-2001

• ವೀರಪ್ಪನ್ ಭಂಟ ಸೇತುಕುಳಿ ಗೋವಿಂದನ್ ಬಂಧನ

ಕೊಯಮತ್ತೂರು, ಫೆ. 16 (ಯುಎನ್‌ಐ)– ತಮಿಳುನಾಡು ವಿಶೇಷ ಕಾರ್ಯಾಚರಣೆ ಪಡೆ ಇಂದು ವೀರಪ್ಪನ್‌ನ ನಿಕಟವರ್ತಿಯಾಗಿದ್ದ ಸೇತುಕುಳಿ ಗೋವಿಂದನ್‌ನನ್ನು ಸಿರುವಾಣಿ ಅರಣ್ಯದಲ್ಲಿ ಬಂಧಿಸುವ ಮೂಲಕ ಮಹತ್ವದ ಸಾಧನೆ ಮಾಡಿದೆ.

ವೀರಪ್ಪನ್‌ನ ಬಲಗೈ ಭಂಟನೆಂದೇ ಗುರುತಿಸಿಕೊಂಡಿದ್ದ ಸೇತುಕುಳಿಯನ್ನು ಹಿಡಿಯಲು ಬಹುಮಾನ ಕೂಡ ಘೋಷಿಸಲಾಗಿತ್ತು. ಸಿರುವಾಣಿ ಅರಣ್ಯದಲ್ಲಿ ಪೊಲೀಸರಿಂದ ಸುತ್ತುವರಿಯಲ್ಪಟ್ಟ ಸೇತುಕುಳಿ ಶರಣಾದ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಗೋವಿಂದನ್ ಬಂಧನದಿಂದ ಎಸ್‌ಟಿಎಫ್ ಪ್ರಮುಖ ಜಯವೊಂದನ್ನು ಸಾಧಿಸಿದಂತಾಗಿದೆ.

• ಗಡಿ ಚಳವಳಿ ಪುನರ್ ರೂಪಿಸಲು ಶಿವಸೇನೆ ಯೋಜನೆ

ಬೆಳಗಾವಿ, ಫೆ. 16– ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದ ಇತ್ಯರ್ಥಪಡಿಸುವಂತೆ ಕೇಂದ್ರದ ಮೇಲೆ ಒತ್ತಡ ತರಲು ಶಿವಸೇನೆಯು ಚಳವಳಿಯನ್ನು ಪುನರ್ ರೂಪಿಸಲಿದೆ ಎಂದು ಕೇಂದ್ರದ ಭಾರೀ ಕೈಗಾರಿಕಾ ಖಾತೆ ಸಚಿವ ಹಾಗೂ ಶಿವಸೇನೆ ಪಕ್ಷದ ಮುಖಂಡ ಮನೋಹರ ಜೋಶಿ ಸುದ್ದಿಗಾರರಿಗೆ ತಿಳಿಸಿದರು.

75 ವರ್ಷಗಳ ಹಿಂದೆ

ಶನಿವಾರ, 17-2-1951

• ಕೋಟಲೆಗಾರರ ನಿರ್ಮೂಲನಕ್ಕೆ ಉಗ್ರ ಕ್ರಮ ಅಗತ್ಯ

ನವದೆಹಲಿ, ಫೆ. 16– ರಾಷ್ಟ್ರದಲ್ಲಿ ಇರುವ 'ತುಂಟರನ್ನು ಮತ್ತು ಭಯೋತ್ಪಾದಕರನ್ನು' ಅಡಗಿಸುವ ಸಲುವಾಗಿ ಉಗ್ರ ಮತ್ತು ಕಠಿಣ ಕ್ರಮ ಕೈಗೊಳ್ಳಬೇಕು ಎಂಬುವುದಾಗಿ ಗೃಹ ಸಚಿವ ಸಿ. ರಾಜಗೋಪಾಲಾಚಾರಿ ಅವರು ಇಂದು ಕರೆಕೊಟ್ಟರು. ಮುನ್ನೆಚ್ಚರಿಕೆ ಸ್ಥಾನಬದ್ಧತೆ (ತಿದ್ದುಪಡಿ) ಮಸೂದೆಯನ್ನು ಕುರಿತ ಚರ್ಚೆಗೆ ಪಾರ್ಲಿಮೆಂಟಿನಲ್ಲಿ ಉತ್ತರ ಕೊಡುತ್ತ ಈ ರೀತಿ ನುಡಿದರು.

ಜನತೆಗೆ ಕಮ್ಯುನಿಸ್ಟರನ್ನು ಕಂಡರೆ ಆಗದು. ಕಾಳಸಂತೆಕೋರರನ್ನು ಕಂಡರೆ ದ್ವೇಷ. ಸಾರಿಗೆ ಅಥವಾ ಸರಬರಾಜುಗಳಿಗೆ ಅಡ್ಡಪಡಿಸುವವರನ್ನು ಕಂಡರೂ ದ್ವೇಷವೇ. ಕೋಮು ಕೋಮುಗಳ ಮಧ್ಯೆ ಬೆಂಕಿ ಹಚ್ಚಿ ದ್ವೇಷದ ಜ್ವಾಲೆಯನ್ನು ಹಬ್ಬಿಸುವವರನ್ನು ಕಂಡರೂ ಜನತೆಗೆ ಆಗದು' ಎಂಬುದಾಗಿ ಗೃಹ ಸಚಿವ ರಾಜಗೋಪಾಲಾಚಾರಿ ಅವರು ಸ್ಪಷ್ಟಪಡಿಸಿದರು.

ವಿಜ್ಞಾನ: ನಕಲಿಗೇನು ಮದ್ದು?

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಸತ್ಯಕ್ಕಿಂತಲೂ ಸುಳ್ಳಿನ ವೇಗ ಹೆಚ್ಚು ಎನ್ನುವ ಮಾತು ವಿಜ್ಞಾನಕ್ಕೂ ಅನ್ವಯಿಸುತ್ತದೆ. ವೈಜ್ಞಾನಿಕ ಸತ್ಯಗಳಿಗಿಂತಲೂ ಅವೈಜ್ಞಾನಿಕ ಸಂಗತಿಗಳೇ ಹೆಚ್ಚು ಬೇಗ ಜನರನ್ನು ಮುಟ್ಟುತ್ತವೆ ಹಾಗೂ ಪ್ರಭಾವಿಸುತ್ತವೆ. ಆದರೆ, ಸಮಾಜದ ಪ್ರಗತಿಯು ವೈಜ್ಞಾನಿಕ ಸತ್ಯಗಳನ್ನು ಅವಲಂಬಿಸಿದೆಯೇ ಹೊರತು, ಮೌಢ್ಯಗಳನ್ನು ಆಧರಿಸಿಲ್ಲ.

'ಪ್ರೇಮಿಗಳ ದಿನ'ಕ್ಕೂ ಮುನ್ನಾದಿನವಾದ ಶುಕ್ರವಾರ (ಫೆ. 13) ಅಪಾಯಕಾರಿಯಾದ ದಿನ ಎನ್ನುವ ಸಂದೇಶ ಸಾಮಾಜಿಕ ತಾಣಗಳಲ್ಲಿ ಹರಿದಾಡುತ್ತಿತ್ತು. ಇಂದು (ಫೆ.17) ಸಂಭವಿಸುವ ಕಂಕಣ ಸೂರ್ಯಗ್ರಹಣ ಅಪಾಯಕಾರಿ ಎಂಬ ಮಾಹಿತಿ ಈಗ ರೆಕ್ಕೆಪುಕ್ಕ ಪಡೆದುಕೊಂಡಿದೆ. ಅನೇಕ ಜನರು ನಂಬುವ ಅಥವಾ ಗಾಬರಿಗೊಳಗಾಗುವ ಇಂಥ ಸುದ್ದಿಗಳಿಗೆ ಯಾವ ವೈಜ್ಞಾನಿಕ ಪುರಾವೆಗಳೂ ಇರುವುದಿಲ್ಲ. ಆದರೆ, ಅವೈಜ್ಞಾನಿಕ ಮಾಹಿತಿಗಳನ್ನು ನಂಬುವವರಿಗೆ ಕೊರತೆಯೇನೂ ಇಲ್ಲ. ಪ್ರಶ್ನೆ ಮಾಡಿ ಸತ್ಯ ಅರಿಯಿರಿ ಎನ್ನುವ ವಿಜ್ಞಾನದ ಹೇಳಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳುವವರು ಕಡಿಮೆ.

ವಿಜ್ಞಾನ ಎನ್ನುವುದು ಪ್ರಯೋಗ, ಪುರಾವೆ ಮತ್ತು ತರ್ಕದ ಭದ್ರ ಬುನಾದಿಯ ಮೇಲೆ ನಿಂತಿರುವ ಸತ್ಯಸೌಧ. ಆದರೆ, ಇಂದು ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಪ್ರಚಲಿತದಲ್ಲಿರುವ, ವಿಶ್ವವಿದ್ಯಾಲಯಗಳಿಂದ ಹಿಡಿದು ಕೆಲವು ಸಾರ್ವಜನಿಕ ವೇದಿಕೆಗಳವರೆಗೆ ಹರಡುತ್ತಿರುವ 'ನಕಲಿ ವಿಜ್ಞಾನ'ವು ನೈಜ ವಿಜ್ಞಾನ ಸೌಧದ ಬುಡವನ್ನೇ ಅಲ್ಲಾಡಿಸುತ್ತಿದೆ. ಈ ನಕಲಿ ಹಾವಳಿ ಸಾಮಾಜಿಕ ಪಿಡುಗಾಗಿ ಪರಿಣಮಿಸಿದೆ.

ನಕಲಿ ವಿಜ್ಞಾನದ ಹೇಳಿಕೆಗಳಿಗೆ ಪುರಾವೆಗಳ ಬೆಂಬಲ ಇರುವುದಿಲ್ಲ. ಇವು ವೈಯಕ್ತಿಕ ಅನುಭವ ಅಥವಾ ಕಲ್ಪಿತ ಕಥೆಗಳ ಮೇಲೆ ನಿಂತಿರುತ್ತವೆ. ಜನರ ಭಾವನೆಗಳನ್ನು ಬಂಡವಾಳ ಮಾಡಿಕೊಂಡು ಭಯ ಅಥವಾ ಭಾವೋದ್ರೇಕದ ಮೂಲಕ ಜನರನ್ನು ಸೆಳೆಯುತ್ತವೆ. ಇಲ್ಲಿ ಪ್ರಶ್ನೆಗಳನ್ನು ಹತ್ತಿಕ್ಕಲಾಗುತ್ತದೆ. ನೈಜ ವಿಜ್ಞಾನ ಪ್ರಶ್ನೆಗಳನ್ನೆದುರಿಸುತ್ತದೆ. ಸಮರ್ಪಕ ಉತ್ತರ ನೀಡುತ್ತದೆ. ಪ್ರಕ್ರಿಯೆಯಲ್ಲಿ ತಪ್ಪುಗಳಾದರೆ, ಪ್ರಯೋಗಗಳ ಮೂಲಕ ತನ್ನನ್ನು ತಾನು ತಿದ್ದಿಕೊಳ್ಳುತ್ತದೆ. ಜನರಿಗೆ ಸತ್ಯದರ್ಶನ ಮಾಡಿಸಿ ಆತ್ಮವಿಶ್ವಾಸ ತುಂಬುತ್ತದೆ. ನಕಲಿ ವಿಜ್ಞಾನದ ಭ್ರಾಂತಿಗಳು ಹೇಗೆಲ್ಲ ಇವೆ ಎಂಬುದನ್ನು ಕೆಳಗಿನ ಉದಾಹರಣೆಗಳನ್ನು ಗಮನಿಸಿದರೆ ತಿಳಿಯುತ್ತದೆ.

ಆ್ಯಪಲ್ ಕಂಪನಿಯ ಮೂಲಕ ಮೊಬೈಲ್ ಫೋನ್ ಉದ್ಯಮದಲ್ಲಿ ಕ್ರಾಂತಿ ತಂದ ಸ್ಟೀವ್ ಜಾಬ್ಸ್ ಅವರಿಗೆ ಯಕೃತ್ತಿನ ಕ್ಯಾನ್ಸರ್ ಇದೆ ಎಂದು ಗೊತ್ತಾದಾಗ ವೈದ್ಯರ ಸಲಹೆಯಂತೆ ಚಿಕಿತ್ಸೆಗೊಳಗಾಗಲಿಲ್ಲ. ಹಣ್ಣಿನ ರಸ, ಪಥ್ಯಾಹಾರ ಮತ್ತು ಅಸಾಂಪ್ರದಾಯಿಕ ವೈದ್ಯ ಪದ್ಧತಿಯಿಂದ ಗುಣಪಡಿಸಿಕೊಳ್ಳಲು ಪ್ರಯತ್ನಿಸಿ, ಕೊನೆಗೆ ಸಾವಿಗೆ ಬಲಿಯಾದರು. ವಿಶ್ವದ ಪ್ರಭಾವಿ ಉದ್ಯಮಿ ಹಾಗೂ ತಂತ್ರಜ್ಞಾನಿಯೊಬ್ಬ ನಕಲಿ ವಿಜ್ಞಾನಕ್ಕೆ ಬಲಿಯಾದ ದೊಡ್ಡ ದುರಂತವಿದು.

ಕಾಂತೀಯ ಚಿಕಿತ್ಸೆಯ ಹೆಸರಿನಲ್ಲಿ ಆಯಸ್ಕಾಂತ ದೇಹಕ್ಕೆ ಅಂಟಿಸಿಕೊಳ್ಳುವುದರಿಂದ ರಕ್ತ ಪರಿಚಲನೆ ಸುಧಾರಿಸುತ್ತದೆ ಮತ್ತು ಕ್ಯಾನ್ಸರ್ ಗುಣವಾಗುತ್ತದೆ ಎಂಬ ಸುಳ್ಳನ್ನು ಹರಡಲಾಗುತ್ತಿದೆ. ಇದು ವಿಜ್ಞಾನ ಎಂದು ಬಿಂಬಿಸಲು ವಿದೇಶಗಳಲ್ಲೂ ಇದರ ಬಳಕೆಯಾಗುತ್ತದೆ ಎಂದು ಹೇಳುವವರಿದ್ದಾರೆ. ರಕ್ತದಲ್ಲಿರುವ ಕಬ್ಬಿಣದ ಅಂಶಕ್ಕೆ ದೇಹದ ಹೊರಗಿನ ಕಾಂತತ್ವ ಶಕ್ತಿಗೆ ಪ್ರತಿಕ್ರಿಯಿಸುವ ಗುಣವಿಲ್ಲ ಎಂಬುದನ್ನು ಜನರಿಗೆ ಹೇಳುವವರಾರು?

ನಾವು ಬಳಸುವ ನೀರಿಗೆ ನೆನಪಿಟ್ಟುಕೊಳ್ಳುವ ಶಕ್ತಿ ಇದೆ, ನೀರು ನಮ್ಮ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವ ಶಕ್ತಿ ಪಡೆದಿದೆ ಮತ್ತು ಅದು ನಾವು ಹೇಳಿದ ಮಾತುಗಳನ್ನು ನೆನಪಿಟ್ಟುಕೊಳ್ಳುತ್ತದೆ ಎನ್ನುವುದು ಯಾವುದೇ ಪ್ರಯೋಗದಿಂದ ಸಾಬೀತಾಗಿಲ್ಲ. ಆದರೂ, ಇದನ್ನು ಪ್ರಚುರಪಡಿಸುವಲ್ಲಿ ನಕಲಿ ವಿಜ್ಞಾನಿಗಳು ಮತ್ತದರ ಏಜೆಂಟರುಗಳು ಸಿಗುವ ಯಾವ ಅವಕಾಶವನ್ನೂ ಬಿಡುತ್ತಿಲ್ಲ.

ಗ್ರಹಗಳ ಚಲನೆ ಮಾನವನ ಗುಣ ಅಥವಾ ಭವಿಷ್ಯವನ್ನು ನಿರ್ಧರಿಸುತ್ತವೆ ಎಂಬುದನ್ನು ಸಾರ್ವಕಾಲಿಕ ಸತ್ಯವೆಂಬಂತೆ ಬಿಂಬಿಸಲಾಗುತ್ತಿದೆ. ಇದು ನಿಜ ಎಂಬುದಕ್ಕೆ ವೈಜ್ಞಾನಿಕ ಆಧಾರವಿಲ್ಲ. ಆದರೂ, ಇದನ್ನು 'ಖಗೋಳ ವಿಜ್ಞಾನ'ದ ಭಾಗವೆಂಬಂತೆ ಬಿಂಬಿಸಿ ಶಾಲೆ–ವಿಶ್ವವಿದ್ಯಾಲಯಗಳಲ್ಲಿ ಕಲಿಸುವ ಏರ್ಪಾಟು ನಡೆಯುತ್ತಿದೆ.

ನಕಲಿ ವಿಜ್ಞಾನದ ಸಿದ್ಧಾಂತ, ಹೇಳಿಕೆ, ನಡವಳಿಕೆಗಳು ಹಲವು ಆತಂಕಕಾರಿ ಘಟನೆಗಳಿಗೆ ಸಾಕ್ಷಿಯಾಗಿವೆ ಮತ್ತು ಪ್ರಾಣಹಾನಿಗೂ ಕಾರಣವಾಗಿವೆ. ಕೋವಿಡ್ ಸಮಯದಲ್ಲಿ, ಗೋಮೂತ್ರ ಕುಡಿದರೆ ಅಥವಾ ಸೆಗಣಿ ಬಳಿದುಕೊಂಡರೆ ಕೊರೊನಾ ವೈರಸ್ ಸಾಯುತ್ತದೆ ಎಂಬ ಪ್ರಚಾರ ನಡೆಯಿತು. ಅದನ್ನು ನಂಬಿ ಗೋಮೂತ್ರಗೋಷ್ಠಿಗಳು ನಡೆದವು. ಸೆಗಣಿ ಲೇಪನವೂ ನಡೆಯಿತು. ಕೊರೊನಾ ಬಾಧಿಸಿದಾಗ ಆಸ್ಪತ್ರೆಗೆ ದಾಖಲಾಗುವ ಬದಲು ಮನೆಯಲ್ಲೇ ಉಳಿದು ಜೀವ ಕಳೆದುಕೊಂಡವರೂ ಇದ್ದಾರೆ. ಲಸಿಕೆ ಹಾಕಿಸಿಕೊಂಡರೆ ನಪುಂಸಕತೆ ಉಂಟಾಗುತ್ತದೆ, ವಿಟಮಿನ್ 'ಡಿ' ಸೇವನೆಯಿಂದ ಕೊರೊನಾ ತಡೆಯಬಹುದು, ಜೇನುತುಪ್ಪದ ಸೇವನೆಯಿಂದ ವೈರಸ್ ಉಪಟಳ ಕಡಿಮೆಯಾಗುತ್ತದೆ, ಆಹಾರ ಪಥ್ಯದಿಂದ ವೈರಸ್‌ನ ಸೋಂಕು ತಡೆಯಬಹುದು, ಎಂಬೆಲ್ಲ ತಪ್ಪು ಹೇಳಿಕೆಗಳು ಚಾಲ್ತಿಯಲ್ಲಿದ್ದವು.

ವೈರಸ್ ಅನ್ನು ಮನೆಯ ಒಳಗೆ ಬರದಂತೆ ತಡೆಯಲು ತಟ್ಟೆ–ಜಾಗಟೆ ಬಡಿದದ್ದೂ ಆಯಿತು. ಅದನ್ನು ಕಂಡರೂ ಕಿವುಡು ಕುರುಡರಂತಿದ್ದ ದೇಶದ ವಿಜ್ಞಾನಿಗಳು 'ಇದು ಅವೈಜ್ಞಾನಿಕ' ಎಂದು ಹೇಳುವ ಹೊಣೆಗಾರಿಕೆ ಪ್ರದರ್ಶಿಸಲಿಲ್ಲ. ಇವರ ಮೌನ ನಕಲಿ ವಿಜ್ಞಾನ ಪ್ರಚಾರಕರಿಗೆ ಮತ್ತಷ್ಟು ಧೈರ್ಯ ನೀಡಿತು.

1998ರಲ್ಲಿ ಆಂಡ್ರ್ಯೂ ವೇಕ್‌ಫೀಲ್ಡ್ ಎಂಬಾತ 'ದಿ ಲ್ಯಾನ್ಸೆಟ್' ಪತ್ರಿಕೆಯಲ್ಲಿ ಎಂಎಂಆರ್ ಲಸಿಕೆಗೂ ಆಟಿಸಂ ರೋಗಕ್ಕೂ ಸಂಬಂಧವಿದೆ ಎಂದು ಲೇಖನ ಪ್ರಕಟಿಸಿದ್ದ. ಆ ಸಂಶೋಧನೆಯು ಸುಳ್ಳು ದಾಖಲೆಗಳ ಮೇಲೆ ನಿಂತಿದೆ ಎಂದು ನಂತರ ಸಾಬೀತಾಯಿತು. ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಅಂಡ್ ಪ್ರಿವೆನ್ಷನ್ ಮತ್ತು ಜಾಗತಿಕ ಆರೋಗ್ಯ ಸಂಸ್ಥೆಗಳು ಲಕ್ಷಾಂತರ ಮಕ್ಕಳನ್ನು ಒಳಗೊಂಡ ಹತ್ತಾರು ಅಧ್ಯಯನಗಳನ್ನು ನಡೆಸಿದವು. ಈ ಅಧ್ಯಯನಗಳಲ್ಲಿ ಲಸಿಕೆ ಮತ್ತು ಆಟಿಸಂ ನಡುವೆ ಯಾವುದೇ ಸಂಬಂಧ ಕಂಡುಬರಲಿಲ್ಲ. ಆಂಡ್ರ್ಯೂನ ವೈದ್ಯಕೀಯ ಪರವಾನಗಿಯನ್ನು ರದ್ದುಗೊಳಿಸಲಾಯಿತು ಮತ್ತು ಅವನ ಲೇಖನವನ್ನು ಹಿಂಪಡೆಯಲಾಯಿತು. ಸುಳ್ಳು ಎಂದು ಸಾಬೀತಾದರೂ, ಅಂದು ಆ ಮಾತನ್ನು ನಂಬಿ ಲಸಿಕೆಯಿಂದ ದೂರ ಉಳಿದ ಅನೇಕರು ಪೋಲಿಯೊದಂತಹ ರೋಗಗಳನ್ನು ಆಹ್ವಾನಿಸುವಂತಾಗಿದೆ.

ಕ್ವಾಂಟಂ ಹೀಲಿಂಗ್ ಹೆಸರಿನಲ್ಲಿಯೂ ಜನರನ್ನು ದಾರಿತಪ್ಪಿಸಲಾಗುತ್ತಿದೆ. ಇದರ ಪ್ರತಿಪಾದಕರು 'ಪ್ರತಿ ಮನುಷ್ಯನ ಮನಸ್ಸಿಗೆ ತನ್ನದೇ ಆದ ವಿಶೇಷ ಶಕ್ತಿ ಇರುತ್ತದೆ. ನಮ್ಮ ಆಲೋಚನೆಗಳನ್ನು ಬದಲಾಯಿಸುವ ಮೂಲಕ ದೇಹದ ಅಣುಗಳ ಮಟ್ಟದಲ್ಲಿ ಬದಲಾವಣೆ ತರಬಹುದು ಮತ್ತು ಕ್ಯಾನ್ಸರ್‌ನಂತಹ ರೋಗಗಳನ್ನು ಗುಣಪಡಿಸಬಹುದು' ಎನ್ನುತ್ತಾರೆ. ಭೌತವಿಜ್ಞಾನದ ಸಂಕೀರ್ಣ ವಿಷಯವಾದ 'ಕ್ವಾಂಟಂ ಫಿಸಿಕ್ಸ್'ನ ತತ್ವಗಳನ್ನಾಧರಿಸಿ, ಮನಸ್ಸಿನ ಶಕ್ತಿಯಿಂದಲೇ ಗಂಭೀರ ಕಾಯಿಲೆಗಳನ್ನು ಗುಣಪಡಿಸಬಹುದು ಎಂದು ನಂಬಿಸಿ ಜನರಿಂದ ಹಣವನ್ನು ಲೂಟಿ ಮಾಡುವ ದೊಡ್ಡ ಜಾಲವೇ ಸೃಷ್ಟಿಯಾಗಿದೆ.

ಮಾರುಕಟ್ಟೆಯಲ್ಲಿ ಸಿಗುವ 'ಡಿಟಾಕ್ಸ್ ಜ್ಯೂಸ್' ಕುಡಿಯುವುದರಿಂದ ಅಥವಾ ಪಾದಕ್ಕೆ ಹಚ್ಚುವ ಪ್ಯಾಚ್‌ಗಳಿಂದ ದೇಹದ 'ವಿಷಕಾರಿ ಟಾಕ್ಸಿನ್'ಗಳು ಹೊರಬರುತ್ತವೆ ಎಂದು ಹೇಳುವ ಅವೈಜ್ಞಾನಿಕ ಚಿಕಿತ್ಸೆ ಜೋರಾಗಿ ನಡೆಯುತ್ತಿದೆ. ಬ್ರಿಟಿಷ್ ಡಯಟಿಕ್ ಅಸೋಸಿಯೇಷನ್ ಪ್ರಕಾರ, 'ಡಿಟಾಕ್ಸ್' ಎಂಬುದು ವ್ಯಾಪಾರಿ ಪದವೇ ಹೊರತು ವೈಜ್ಞಾನಿಕವಲ್ಲ. ಮಾನವನ ದೇಹದಲ್ಲಿ ಯಕೃತ್ತು ಮತ್ತು ಮೂತ್ರಪಿಂಡಗಳು ನೈಸರ್ಗಿಕವಾಗಿಯೇ ವಿಷಕಾರಿ ಅಂಶಗಳನ್ನು ಹೊರಹಾಕುವ ಕೆಲಸವನ್ನು ದಿನದ 24 ಗಂಟೆಯೂ ಮಾಡುತ್ತವೆ. ಯಾವುದೇ ಜ್ಯೂಸ್ ಅಥವಾ ಪ್ಯಾಚ್‌ಗಳು ಈ ಪ್ರಕ್ರಿಯೆಯನ್ನು ಹೆಚ್ಚಿಸುವುದಿಲ್ಲ ಎಂದು ಸಂಶೋಧನೆಗಳು ಸ್ಪಷ್ಟಪಡಿಸಿವೆ. ಆದರೂ, ಜನ ಸುಳ್ಳಿನ ಮಾರುಕಟ್ಟೆಯ ಸರಕುಗಳಾಗುತ್ತಿದ್ದಾರೆ.

ವಿಜ್ಞಾನದ ಹೆಸರಿನಲ್ಲಿ ಹಬ್ಬುತ್ತಿರುವ ಇನ್ನೊಂದು ಪ್ರಮುಖ ಅಪಸವ್ಯ ರಕ್ತದ ಗುಂಪಿನ ಆಧಾರಿತ ಆಹಾರ ಸೇವನೆಯ ಕುರಿತಾದದ್ದು. ಇದು, ನೀವು ನಿಮ್ಮ ರಕ್ತದ ಗುಂಪಿಗೆ ತಕ್ಕಂತೆ ಆಹಾರ ಸೇವಿಸಿದರೆ ಮಾತ್ರ ಆರೋಗ್ಯವಾಗಿರಲು ಸಾಧ್ಯ ಎನ್ನುತ್ತದೆ. 'ಪಬ್ಲಿಕ್ ಲೈಬ್ರರಿ ಆಫ್ ಸೈನ್ಸ್' ಸಂಶೋಧನಾ ಪತ್ರಿಕೆಯಲ್ಲಿ ಪ್ರಕಟವಾದ 1,455 ಜನರ ಮೇಲೆ ನಡೆಸಿದ ಅಧ್ಯಯನದ ಪ್ರಕಾರ, ರಕ್ತದ ಗುಂಪಿಗೂ ಆಹಾರದ ಜೀರ್ಣಕ್ರಿಯೆಗೂ ಸಂಬಂಧವಿಲ್ಲ. ಆರೋಗ್ಯಕರ ಆಹಾರವನ್ನು ಯಾರೇ ಸೇವಿಸಿದರೂ ಅದು ಉತ್ತಮ ಪರಿಣಾಮ ಬೀರುತ್ತದೆ, ಅದಕ್ಕೂ ರಕ್ತದ ಗುಂಪಿಗೂ ಸಂಬಂಧವಿಲ್ಲ. ನಕಲಿ ವಿಜ್ಞಾನದ ಕ್ರಮ ಚಿಂತನೆಗಳು ಪ್ಲಸೀಬೊ ಪರಿಣಾಮವನ್ನು (ಮಾನಸಿಕ ತೃಪ್ತಿ) ಉಂಟು ಮಾಡುತ್ತವೆಯಷ್ಟೇ ಎಂಬುದೀಗ ಗುಟ್ಟಾಗಿ ಉಳಿದಿಲ್ಲ.

ನಕಲಿ ವಿಜ್ಞಾನದ ಪ್ರಸಾರದ ವಿರುದ್ಧ ಡಾ. ಜಯಂತ್ ನಾರಳೀಕರ್, ನರೇಂದ್ರ ದಾಭೋಲ್ಕರ್, ಬಸವ ಪ್ರೇಮಾನಂದ್, ನರೇಂದ್ರ ನಾಯಕ್, ಸಿರಿಯಾಕ್ ಅಬ್ಬಿ ಫಿಲಿಪ್ಸ್, ಬಾಬು ಕೆ.ವಿ., ಸುಮಿತ್ರೊ ಬ್ಯಾನರ್ಜಿ, ಅತಿಶ್ ದಾಭೋಲ್ಕರ್, ಮುಂತಾದವರು ದೊಡ್ಡ ಹೋರಾಟ ನಡೆಸಿದ್ದಾರೆ. ಬ್ರೇಕ್‌ಥ್ರೂ ಸೈನ್ಸ್ ಸೊಸೈಟಿ, ಮಹಾರಾಷ್ಟ್ರ ಅಂಧಶ್ರದ್ಧಾ ನಿರ್ಮೂಲನ್ ಸಮಿತಿ, ಫೆಡರೇಷನ್ ಆಫ್ ಇಂಡಿಯನ್ ರ‍್ಯಾಶನಲಿಸ್ಟ್ ಅಸೋಸಿಯೇಷನ್‌ಗಳು ನಮ್ಮಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು ಇನ್ನಿಲ್ಲದ ಪ್ರಯತ್ನ ಮಾಡುತ್ತಿವೆ.

ಯಾವುದೇ ಮಾಹಿತಿಯನ್ನು ನಂಬುವ ಮೊದಲು ಅದಕ್ಕೆ ಮಾನ್ಯತೆ ಪಡೆದ ಪ್ರಯೋಗಾಲಯದ ಪುರಾವೆ ಇದೆಯೇ? ಅದನ್ನು ಹೇಳುತ್ತಿರುವವರು ಆ ಕ್ಷೇತ್ರದ ತಜ್ಞರೇ? ಇದು ಭಾವನೆಗಳನ್ನು ಕೆರಳಿಸುವ ವಿಷಯವೇ ಅಥವಾ ತರ್ಕಬದ್ಧವಾಗಿದೆಯೇ? ಎಂಬ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕು. ಹತ್ತಿಪ್ಪತ್ತು ಜನರ ಮೇಲೆ ನಡೆದ ಅಧ್ಯಯನ ವಿಜ್ಞಾನವಾಗಲು ಸಾಧ್ಯವಿಲ್ಲ. ಸಾವಿರಾರು ಜನರ ಮೇಲೆ ನಡೆಸಿದ ಪ್ರಯೋಗಗಳೇ ಸತ್ಯಕ್ಕೆ ಹತ್ತಿರವಾಗಿರುತ್ತವೆ. ಅವುಗಳಿಗೆ ಪ್ರಾಮುಖ್ಯತೆ ದೊರಕಬೇಕು. ಸಮಾಜದ ಪ್ರಗತಿಯು ವಿಜ್ಞಾನದ ಸಾರ್ವಕಾಲಿಕ ಸತ್ಯಗಳ ಮೇಲೆ ನಿಂತಿದೆಯೇ ಹೊರತು ವಿಜ್ಞಾನದ ಹೆಸರಿನಲ್ಲಿ ಹರಡುವ ಮೂಢನಂಬಿಕೆಗಳ ಮೇಲಲ್ಲ.



ವಾಚಕರ ವಾಣಿ

ರೆವಿನ್ಯೂ ಸ್ಟಾಂಪ್ ಚಾಲ್ತಿಯಲ್ಲಿ ಇದೆಯೆ?

ರಾಜ್ಯದಲ್ಲಿ ಹಲವು ವರ್ಷಗಳಿಂದ ರೆವಿನ್ಯೂ ಸ್ಟಾಂಪ್‌ಗಳು ಚಾಲ್ತಿಯಲ್ಲಿಲ್ಲ. ಆದರೆ, ಸಾಲ ಪಡೆಯಲು ಕೆಲವು ಬ್ಯಾಂಕ್‌ಗಳು, ಖಾಸಗಿ ಹಣಕಾಸು ಸಂಸ್ಥೆಗಳು ಇದನ್ನು ಕಡ್ಡಾಯಗೊಳಿಸಿವೆ. ಈ ಸ್ಟಾಂಪ್‌ಗಳು ಅಂಚೆ ಕಚೇರಿ ಅಥವಾ ಇನ್ನಾವುದೇ ಸಂಸ್ಥೆಗಳಲ್ಲಿ ಸಿಗುತ್ತಿಲ್ಲ. ನೆರೆಯ ಕೆಲವು ರಾಜ್ಯಗಳಲ್ಲಿ ಚಾಲ್ತಿಯಲ್ಲಿರುವ ರೆವಿನ್ಯೂ ಸ್ಟಾಂಪ್‌ನ ಮೂಲಬೆಲೆ ಒಂದು ರೂಪಾಯಿ ಇದೆ. ಅವುಗಳನ್ನು ಮೂರರಿಂದ ಐದು ರೂಪಾಯಿಗೆ ಕರ್ನಾಟಕದಲ್ಲಿ ಮಾರುತ್ತಿದ್ದಾರೆ. ಇದಕ್ಕೆ ಕಡಿವಾಣ ಇಲ್ಲ. ಸರ್ಕಾರ ಈ ಬಗ್ಗೆ ಸ್ಪಷ್ಟೀಕರಣ ನೀಡಲಿ. ಸ್ಟಾಂಪ್ ಇನ್ನೂ ಚಾಲ್ತಿಯಲ್ಲಿದ್ದರೆ ಅಂಚೆ ಇಲಾಖೆಯ ಮೂಲಕ ಪೂರೈಸಲಿ; ಚಾಲ್ತಿಯಲ್ಲಿ ಇಲ್ಲವಾದರೆ ಮಾಧ್ಯಮಗಳ ಮೂಲಕ ಸ್ಪಷ್ಟೀಕರಣ ನೀಡಲಿ.

ಎಸ್.ಎಂ. ಚಂದ್ರಮೌಳಿ ಸ್ವಾಮಿ, ಸಿಂಧನೂರು

ಋತುಚಕ್ರ ರಜೆ: ಅಧಿಕಾರಿಗಳಿಂದ ಕಿರಿಕಿರಿ

ರಾಜ್ಯ ಸರ್ಕಾರವು ಮಹಿಳಾ ಸರ್ಕಾರಿ ನೌಕರರಿಗೆ ತಿಂಗಳಿಗೆ ಒಂದು ದಿನ ಮುಟ್ಟಿನ ರಜೆ ಕೊಡುವ ಕ್ರಾಂತಿಕಾರಿ ನಿರ್ಧಾರ ಮಾಡಿದ್ದು ಸರಿಯಷ್ಟೇ. ಆದರೆ, ಮೇಲಧಿಕಾರಿಗಳು ಮಹಿಳೆಯರಿಗೆ ಮುಟ್ಟಿನ ರಜೆ ನೀಡುವಲ್ಲಿ ಹಿಂದುಮುಂದು ನೋಡುತ್ತಿದ್ದಾರೆ. ಕೆಲವು ಇಲಾಖೆಗಳಲ್ಲಂತೂ ಮೌಖಿಕ ಆದೇಶದ ಹೆಸರಲ್ಲಿ ಸರ್ಕಾರಿ ಆದೇಶದ ವಿರುದ್ಧವೇ ನಡೆದುಕೊಳ್ಳುತ್ತಿದ್ದಾರೆ. ಈ ಕುರಿತು ಸರ್ಕಾರ ಗಮನ ಹರಿಸಿ ಮಹಿಳೆಯರಿಗಿರುವ ಮುಟ್ಟಿನ ರಜೆಯ ಹಕ್ಕನ್ನು ರಕ್ಷಿಸಬೇಕು, ಗೊಂದಲಗಳಿಗೆ ತೆರೆ ಎಳೆದು ಕಿರಿಕಿರಿ ಮಾಡುವ ಅಧಿಕಾರಿಗಳ ಮೇಲೆ ಕಠಿಣ ಕ್ರಮ ವಹಿಸಬೇಕು.

ಹುಲಿಕುಂಟೆ ಮೂರ್ತಿ, ಬೆಂಗಳೂರು

ಕ್ರೀಡಾಧರ್ಮಕ್ಕೆ ಎಸಗಿದ ಅಪಚಾರ

ಕೊಲಂಬೊದಲ್ಲಿ ಭಾನುವಾರ ನಡೆದ ಟಿ20 ವಿಶ್ವಕಪ್ ಕ್ರಿಕೆಟ್ ಪಂದ್ಯದ ಆರಂಭದಲ್ಲಿ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಪಾಕಿಸ್ತಾನದ ನಾಯಕ ಸಲ್ಮಾನ್ ಅಲಿ ಪರಸ್ಪರ ಕೈಕುಲುಕದೆ ಆಟ ಆರಂಭಿಸಿದರು. ನಾಯಕರು ಹೀಗೆ ಹಸ್ತಲಾಘವ ನೀಡದೆ ಆಟ ಆರಂಭಿಸುವುದು ಕ್ರೀಡಾ ಮನೋಭಾವಕ್ಕೆ ಮಾಡುವ ಅಪಚಾರ. ಕ್ರೀಡೆ ಎಂದರೆ ಪರಸ್ಪರರಲ್ಲಿ ಉಲ್ಲಾಸ, ಸ್ನೇಹ, ಪ್ರೇಮ ಸ್ಫುರಿಸುವ ಸನ್ನಿವೇಶ. ಅದಕ್ಕಾಗಿಯೇ ಮಕ್ಕಳಿಗೆ ಪಾಠದಷ್ಟೇ ಆಟವೂ ಮುಖ್ಯ. ಒಂದರಿಂದ ದೇಹ ದೃಢಕಾಯ ಆದರೆ, ಇನ್ನೊಂದರಿಂದ ಮನೋಸ್ಥೈರ್ಯ ಬೆಳೆಯುತ್ತದೆ. ಹಸ್ತಿನಾವತಿಯ ವ್ಯಾಯಾಮ ಶಾಲೆಯಲ್ಲಿ ಕುರುಪಾಂಡವರಲ್ಲಿ ಹುಟ್ಟಿದ ಮನಸ್ತಾಪವು ಮುಂದೆ ಪ್ರಳಯ ಸಿಡಿಲಾಗಿ ಬಡಿದು ಎರಡೂ ಕುಲನಾಶದಲ್ಲಿ ಪರ್ಯಾವಸಾನವಾಯಿತು. ಹಾಗಾಗಿ, ಉಭಯ ರಾಷ್ಟ್ರಗಳು ಈ ಬೆಳವಣಿಗೆಯನ್ನು ಆರಂಭದಲ್ಲಿಯೇ ಚಿವುಟಿ ಹಾಕುವುದು ಕ್ಷೇಮ.

ಪ್ರೊ. ಶಿವರಾಮಯ್ಯ, ಬೆಂಗಳೂರು

ಕರ್ತವ್ಯ ಮರೆತ ನೌಕರರಿಗೆ ಲಗಾಮು ಹಾಕಿ

ಸರ್ಕಾರಿ ಕಚೇರಿಗಳಲ್ಲಿ ಭಯದ ವಾತಾವರಣ ಸೃಷ್ಟಿಯಾದರೆ ಆಡಳಿತ ವ್ಯವಸ್ಥೆಯ ಕಾರ್ಯಕ್ಷಮತೆ ಕುಂಠಿತವಾಗುತ್ತದೆ. ನೌಕರರ ಮೇಲೆ ಹಲ್ಲೆ, ಹಿಂಸಾಚಾರ ತಡೆಗಟ್ಟಲು ಸರ್ಕಾರ ಕಾಯ್ದೆ ರೂಪಿಸಲು ಮುಂದಾಗಿರುವುದು ಸಮಯೋಚಿತ ಕ್ರಮ. ಕಚೇರಿಗಳಲ್ಲಿ ಸಾರ್ವಜನಿಕರ ಅಸಮಾಧಾನಕ್ಕೆ ಮೂಲ ಕಾರಣ ಕೆಲಸದಲ್ಲಿ ವಿಳಂಬ, ನಿರ್ಲಕ್ಷ್ಯ ಮತ್ತು ಕೆಲವು ಅಧಿಕಾರಿಗಳ ಕಟುವಾದ ವರ್ತನೆ. ಇದನ್ನು ಪ್ರಶ್ನಿಸಿದರೆ ಅಸಹನೀಯ ಉತ್ತರ. ಇದು ಜನರ ಹಕ್ಕು ಮತ್ತು ವಿಶ್ವಾಸಕ್ಕೆ ಧಕ್ಕೆ ಉಂಟುಮಾಡುತ್ತದೆಯಲ್ಲವೆ? ಕಾನೂನಿನ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಿರುವುದು ಸರಿ. ಆದರೆ, ಅದರ ಜೊತೆಗೆ ಸಹಾನುಭೂತಿ, ಸೇವಾಭಾವ ಮತ್ತು ಮನುಷ್ಯತ್ವವೂ ಆಡಳಿತದ ಅವಿಭಾಜ್ಯ ಅಂಗವಾಗಬೇಕಲ್ಲವೆ? ಕಾಯ್ದೆಯು ನೌಕರರಿಗೆ ವರವಾಗಿ, ಸಾರ್ವಜನಿಕರಿಗೆ ಶಾಪವಾಗದಿರಲಿ.

ಪ್ರವೀಣ್ ನಾಗಪ್ಪ ಯಲವಿಗಿ, ಮುಂಡಗೋಡು

ಪದೋನ್ನತಿಯ ಹಪಹಪಿ: ನಿಯಮಕ್ಕೆ ಧಕ್ಕೆ

ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿ ಪದೋನ್ನತಿ ವಿಚಾರ ಚರ್ಚೆಗೆ ಗ್ರಾಸವಾಗಿದೆ. ಕಳೆದ ದಶಕದಿಂದ ಲೆಕ್ಕ ಪರಿಶೋಧನಾಧಿಕಾರಿ ಮತ್ತು ಲೆಕ್ಕಾಧಿಕಾರಿ ಹುದ್ದೆಗಳಿಗೆ ನೇರ ನೇಮಕಾತಿ ಮತ್ತು ಪದೋನ್ನತಿಯ ಅನುಪಾತವನ್ನು ತಲಾ ಶೇ 50ರಂತೆ ಪಾಲಿಸಿಕೊಂಡು ಬರಲಾಗಿದೆ. ಈಗ ಕೆಪಿಎಸ್‌ಸಿಯಿಂದ ನೇಮಕಗೊಳ್ಳುವ ಲೆಕ್ಕಾಧಿಕಾರಿ, ಲೆಕ್ಕ ಪರಿಶೋಧನಾಧಿಕಾರಿ ಹುದ್ದೆಗಳ ಅನುಪಾತವನ್ನು ಶೇ 20ಕ್ಕೆ ಇಳಿಸಲು ಲೆಕ್ಕಪತ್ರ ಇಲಾಖೆಯ ಅಧಿಕಾರಿ ಮತ್ತು ನೌಕರರ ಸಂಘ ಹೋರಾಡುತ್ತಿದೆ. ಇದರಿಂದಾಗಿ ಬರೀ ಪಿಯುಸಿ, ಪದವಿ ಪಡೆದವರು ಪದೋನ್ನತಿ ಪಡೆದು ಉನ್ನತ ಸ್ಥಾನಗಳಿಗೆ ಏರುತ್ತಾರೆ. ಇದರಿಂದ ಎಂಬಿಎ, ಸಿಎ, ಎಂಕಾಂ ಪದವಿ ಪಡೆದವರು ನಿರುದ್ಯೋಗಿಗಳಾಗಿ ಬೀದಿಗೆ ಬೀಳಬೇಕಾಗುತ್ತದೆ. ಸರ್ಕಾರ ಶೇ 50ರ ಅನುಪಾತ ಕಾಯ್ದುಕೊಳ್ಳಲು ಕ್ರಮವಹಿಸಬೇಕಿದೆ.

ಪ್ರೊ. ಎಂ. ಬಸವರಾಜ್, ದಾವಣಗೆರೆ

ಸಮೀಕ್ಷೆಯ ಸುತ್ತ, ಅನುಮಾನಗಳ ಹುತ್ತ

ರಾಜ್ಯದಲ್ಲಿ 2007-08ರಲ್ಲಿ 46,660 ಮಾಜಿ ದೇವದಾಸಿಯರಿದ್ದರು. 2025-26ರ ಸಮೀಕ್ಷೆಯಲ್ಲಿ ಈ ಸಂಖ್ಯೆ 23,395ಕ್ಕೆ ಕುಸಿದಿದೆ. ಸರ್ಕಾರದ ಈ ಅಂಕಿಅಂಶ ಗಾಬರಿ ಹುಟ್ಟಿಸುತ್ತದೆ. ಸಮೀಕ್ಷೆ ನಡೆದ ಹದಿನೈದು ಜಿಲ್ಲೆಗಳಲ್ಲಿ ಸಮರ್ಪಕವಾಗಿ ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿಲ್ಲ. ಸಿಡಿಪಿಒ ಕಚೇರಿಯಲ್ಲಿ ಕೂತು ಮಾಹಿತಿ ಸಂಗ್ರಹಿಸಲಾಗಿದೆಯೇ ಎಂಬ ಅನುಮಾನ ಕಾಡುತ್ತಿದೆ. ಇಂದಿಗೂ ಸಾವಿರಾರು ಮಾಜಿ ದೇವದಾಸಿಯರು ಸೂರಿಲ್ಲದೆ ಪರದಾಡುತ್ತಿದ್ದಾರೆ. ಅವರ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. 2007-08ರ ಸಮೀಕ್ಷೆಯಲ್ಲಿ ಹೊರಗೆ ಉಳಿದ ದೇವದಾಸಿಯರು ಹಾಗೂ ಸಮೀಕ್ಷೆಗೆ ಒಳಪಟ್ಟ ತಾಯಂದಿರ ಮರು ಸಮೀಕ್ಷೆ ನಡೆಸಬೇಕು. ಇಲ್ಲದಿದ್ದರೆ, ಸಮಾಜದ ಮುಖ್ಯವಾಹಿನಿಯಿಂದ ದೂರ ಇರುವ ಈ ಮಹಿಳೆಯರು ಸೌಲಭ್ಯಗಳಿಂದ ವಂಚಿತರಾಗುತ್ತಾರೆ.

ಜಿ.ಎಸ್. ಶರಣು, ಬೆಂಗಳೂರು

ಚುರುಮುರಿ

ಪೊಲಿಟಿಕಲ್ ಜಿಪಿಟಿ

• ಲಿಂಗರಾಜು ಡಿ.ಎಸ್.

'ದೆಲ್ಲೀಲಿ ಎಐ ಮೀಟಿಂಗಂತೆ ಕನ್ರೋ. ಲಕ್ಷಾಂತರ ಟೆಕ್ಕಿಗಳು ಬತ್ತಾವರಂತೆ. ಜಗತ್ತು ಬೇಜಾನ್ ಎಐ, ಬಯೋವೆಪನ್ ಉಪಯೋಗಿಸಿ ಮೌಲ್ಯ ಕಳಕಂಡು ವಿನಾಶಕ್ಕೆ ಬಂದು ನಿಲ್ತಾ ಅದೇನೋ ಅಂತ ಅನುಮಾನಾಗ್ಯದೆ ಅಣ್ತಮ್ಮಾ' ತುರೇಮಣೆ ಘೋಷಿಸಿದರು.

'ಅಣ್ಣೈ ಕೇಳಿಲ್ಲಿ. ರಾಜಕಾರಣಿಗಳ ಹಳೇ ವಿಡಿಯೊನ ಪೊಲಿಟಿಕಲ್ ಜಿಪಿಟಿಗೆ ಅಪ್‌ಲೋಡ್ ಮಾಡಿದರೆ ಹಿಂದೆ ಏನೇನು ಕರ್ಮಕಾಂಡ ಮಾಡಿದ್ದರು ಅಂತ ಹೇಳ್ತದಂತೆ' ಅಂತ ಸೋಜಿಗಪಟ್ಟೆ.

'ರಾಜಕಾರಣಿಯ ಹೆಸರಿನ ಹ್ಯಾಷ್‌ಟ್ಯಾಗ್ ಹಾಕಿ ರಿವರ್ಸ್ ರೀಸರ್ಚ್ ವಿಧಾನದಲ್ಲಿ ಹುಡುಕಿದ್ರೆ ಹಳೇ ಕಥೆ ಬಿಚ್ಕತದಂತೆ ಕನೋ' ತುರೇಮಣೆ ವಿವರ ಕೊಟ್ಟು ಕೆಲವು ರಾಜಕಾರಣಿಗಳ ವಿಡಿಯೊಗಳನ್ನ ಎಐ ಟೂಲಿಗೆ ಹಾಕಿದರು.

'ನೋಡ್ರಪ್ಪ ಇವರ ಚಾಲು. ಕಳ್ಳತನದಿಂದ ರೌಡಿಶೀಟಿಗೆ ಬಂದು ಕೊಲೆ ಮಾಡ್ಸಗಂಟ ಮುಂದುವರಿದವೆ. ಜೈಲಿಂದ ಕಾರುಬಾರು ಮಾಡಿ ರಾಜಕೀಯಕ್ಕೆ ಎಂಟ್ರಿ ತಗಂದವೆ. ಇವುಕ್ಕೆ ಏನಂತ ಬೈಯದು?' ತುರೇಮಣೆಗೆ ಕ್ವಾಪದಲ್ಲಿ ಮಾತು ಹೊಂಡಲಿಲ್ಲ.

'ಹಂಗಾರೆ ಕನ್ನಡ ನಿಘಂಟಲ್ಲಿ ಇರೋ ಎಲ್ಲಾ ಬೋಗುಳ ಇವರಿಗೆ ಅನ್ವಯಿಸ್ತವೆ. ರಾಜಕಾರಣಿಗಳು ಯಂಗಿರಬೇಕು ಅಂತ ನಿನ್ನ ಎಐ ಹೇಳ್ತದೆ?' ಯಂಟಪ್ಪಣ್ಣ ಕೇಳಿತು.

'ನೋಡು ಅಣ್ತಮ್ಮ, ರಾಜಕೀಯಕ್ಕೆ ಬರೋರು ಕಾಸು–ಕರೇಮಣಿ ತಕ್ಕೋಗದೇ, ಗುಂಡು–ತುಂಡು ಬುಟ್ಟು, ಮೊಬೈಲು ಇಲ್ಲದೇ ಒಂದು ಜೊತೆ ಅಂಗಿ–ಚಡ್ಡಿ ಮಾತ್ರ ಹಿಡಕಂದು ಹಿಮಾಲಯಕ್ಕೆ ಒಬ್ಬರೇ ಹೋಗಿ ಐದು ವರ್ಷ ಇದ್ದರೆ ಶಾಸಕರಾಗಕೆ, ಏಳು ವರ್ಷ ಇದ್ದರೆ ಸಿಎಂ ಆಗಕ್ಕೆ ದಾಸತ್ತದೆ ಅಂತ ಅರ್ಥ' ಅಂದ್ರು ತುರೇಮಣೆ.

'ಯಾರೋ ಒಬ್ಬ ಬಂದು, ನಾನು ಹತ್ತೊರ್ಸದಿಂದ ಹಿಮಾಲಯದಲ್ಲಿ ಪಸಕೆ ಎತ್ತಿಕ್ಯಂದಿದ್ದೆ. ನಾನು ಪಿಎಂ ಆಗಬೈದಲ್ಲವಾ? ಅಂತ ಸುಳ್ಕಾಡಿದೆ ಹ್ಯಂಗೆ?' ಅಂತ ನನ್ನ ಅನುಮಾನ ಹೇಳಿದಾಗ ಎಲ್ಲರೂ ಕ್ವಾಪದಲ್ಲಿ ಕಾಪಿ ಲೋಟಗಳನ್ನೇ ನನ್ನ ಮೇಲೆ ಎಸೆದರು.

ಸಂಗತ

ನಮ್ಮ ಸರಳತೆಯಲ್ಲಿದೆ ಬೇರೊಬ್ಬರ ಬದುಕು

ವೈಯಕ್ತಿಕ ಬದುಕಿನ ಸರಳತೆ ಸಮುದಾಯ ಹಾಗೂ ಪರಿಸರದ ಹಿತಕ್ಕೂ ಪೂರಕ. ಬದುಕಿನ ಅಗತ್ಯಗಳು ಹೆಚ್ಚಾದಂತೆಲ್ಲ, ಅದು ಇನ್ನೊಬ್ಬರಿಗೆ ಹೊರೆಯಾಗುತ್ತದೆ.

• ರಾಜಕುಮಾರ ಕುಲಕರ್ಣಿ

ಖಾಸಗಿ ಕಂಪನಿಯಲ್ಲಿ ಉದ್ಯೋಗಿಯಾಗಿರುವ ನನ್ನ ಪರಿಚಿತರು ಕಳೆದ ನಾಲ್ಕು ವರ್ಷಗಳಿಂದ ನಗರ ಪ್ರದೇಶದಲ್ಲಿ ಸ್ವಂತ ಮನೆ ಹೊಂದುವ ಕನಸು ಕಾಣುತ್ತಿದ್ದಾರೆ. ಕನಸು ಕಾಣುವುದು ಮಾತ್ರವಲ್ಲದೆ, ತಮ್ಮ ಕನಸನ್ನು ನನಸಾಗಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ವರ್ಷದಿಂದ ವರ್ಷಕ್ಕೆ ಗಗನಕ್ಕೇರುತ್ತಿರುವ ಬೆಲೆಯಿಂದಾಗಿ ಅವರಿಗೆ ನಿವೇಶನ ಖರೀದಿಸಲು ಸಾಧ್ಯವಾಗುತ್ತಿಲ್ಲ. ಅದೆಷ್ಟೋ ಬಡಕುಟುಂಬಗಳಿಗೆ ಸ್ವಂತ ಮನೆ ಗಗನಕುಸುಮವಾಗಿದೆ. ಹಣ ಇರುವವರು ಅವಶ್ಯಕತೆ ಇಲ್ಲದಿದ್ದರೂ ಒಂದಾದ ಮೇಲೊಂದು ನಿವೇಶನಗಳನ್ನು ಖರೀದಿಸುತ್ತಿರುವುದರಿಂದ ಈಗ ಭೂಮಿಯ ಬೆಲೆ ಆಕಾಶಕ್ಕೇರಿದೆ.

ಜಾಗತೀಕರಣದ ಈ ದಿನಗಳಲ್ಲಿ ಮನುಷ್ಯ ಅಗತ್ಯಕ್ಕಿಂತ ಹೆಚ್ಚು ಆಸೆಪಡುತ್ತಿದ್ದಾನೆ. ಸರಳವಾಗಿ ಮತ್ತು ಹಿತ–ಮಿತವಾಗಿ ಬದುಕುವುದನ್ನು ಇಷ್ಟಪಡುತ್ತಿಲ್ಲ. ಬದುಕಿನ ಸುಖ, ಸಂತೋಷಗಳನ್ನು ಭೌತಿಕ ವಸ್ತುಗಳಲ್ಲಿ ಹುಡುಕುತ್ತಿದ್ದಾನೆ. ಭೌತಿಕವೇ ಪ್ರಧಾನವಾದ ಬದುಕಿನಲ್ಲಿ ಸರಳವಾಗಿ ಬದುಕುವವರು ಜನರ ದೃಷ್ಟಿಗೆ ಮೂರ್ಖರಂತೆ ಗೋಚರಿಸುತ್ತಾರೆ. ಕೊಳ್ಳುಬಾಕ ಸಂಸ್ಕೃತಿ ಸಮಾಜವನ್ನು ಆವರಿಸಿದೆ. ಕಣ್ಣಿಗೆ ಕಾಣಿಸಿದ್ದನ್ನೆಲ್ಲ ಖರೀದಿಸುವ ಧಾವಂತ ಜನರಲ್ಲಿ ಮನೆ ಮಾಡಿದೆ. ಬೇಡಿಕೆ ಹೆಚ್ಚುತ್ತಿದ್ದಂತೆ ವಸ್ತುವಿನ ಬೆಲೆ ಗಗನಕ್ಕೆ ಏರುತ್ತಿದೆ. ನಿವೇಶನ, ಚಿನ್ನ, ಬೆಳ್ಳಿ ಮತ್ತಿತರ ವಸ್ತುಗಳ ಬೆಲೆ ಅಧಿಕವಾಗುತ್ತಿರುವುದಕ್ಕೆ ಜನರು ಅವಶ್ಯಕತೆಗಿಂತ ಹೆಚ್ಚು ಖರೀದಿಸುತ್ತಿರುವುದೇ ಕಾರಣ ಆಗಿದೆ.

ಪ್ರಸ್ತುತ ಸಮಾಜದಲ್ಲಿ ಮದುವೆ ಎನ್ನುವುದು ಪ್ರತಿಷ್ಠೆಯ ಸಂಗತಿ ಆಗಿದೆ. ಐಷಾರಾಮಿ ಕಲ್ಯಾಣ ಮಂಟಪ, ವಿದ್ಯುದ್ದೀಪಗಳ ಅಲಂಕಾರ, ಆಕಾಶದಲ್ಲಿ ಬಾಣ ಬಿರುಸುಗಳ ಚಿತ್ತಾರ, ಕಿವಿಗಡಚಿಕ್ಕುವ ವಾದ್ಯಮೇಳ, ಹಲವು ಬಗೆಯ ಖಾದ್ಯಗಳ ತಯಾರಿ – ಹೀಗೆ ಲಕ್ಷಾಂತರ ರೂಪಾಯಿ ಖರ್ಚು ಮಾಡಿದಾಗಲೇ ಅದೊಂದು ಮದುವೆ ಮತ್ತು ಗಂಡು–ಹೆಣ್ಣಿನ ದಾಂಪತ್ಯಕ್ಕೆ ಸಮಾಜದ ಒಪ್ಪಿಗೆಯ ಮುದ್ರೆ ಲಭ್ಯವಾದಂತೆ ಎನ್ನುವ ಭಾವನೆ ಅನೇಕ ಪೋಷಕರಲ್ಲಿ ಮನೆ ಮಾಡಿದೆ. ಈಗೀಗ ಮದುವೆ ಮಾತ್ರ ಅಲ್ಲದೆ, ನಿಶ್ಚಿತಾರ್ಥ, ನಾಮಕರಣ, ಸೀಮಂತ, ಹುಟ್ಟುಹಬ್ಬದಂಥ ಕಾರ್ಯಕ್ರಮಗಳನ್ನೂ ಐಷಾರಾಮಿ ಕಲ್ಯಾಣ ಮಂಟಪಗಳಲ್ಲಿ ಆಚರಿಸಲಾಗುತ್ತಿದೆ. ವೈಕುಂಠ ಸಮಾರಾಧನೆಯಂಥ ಶೋಕಕ್ಕೂ ಕಲ್ಯಾಣ ಮಂಟಪಗಳು ವೇದಿಕೆಯಾಗುತ್ತಿವೆ. ಕೆಲವರ ಬದುಕಿನ ದುಬಾರಿತನ ಅದೆಷ್ಟೋ ಕುಟುಂಬಗಳ ಬದುಕನ್ನು ದಾರುಣಗೊಳಿಸಿದೆ.

ಶಿಕ್ಷಣದ ಮೂಲಕ ಮಕ್ಕಳಿಗೆ ಬದುಕಿನ ಸರಳತೆಯ ಪಾಠ ಬೋಧಿಸಲು ಸಾಧ್ಯವಾಗದಷ್ಟು ಶೈಕ್ಷಣಿಕ ವಾತಾವರಣ ದುಬಾರಿತನದಿಂದ ಕೂಡಿದೆ. ಖಾಸಗಿ ಇಂಗ್ಲಿಷ್ ಮಾಧ್ಯಮದ ಶಾಲೆಗಳಲ್ಲಿ ಮಕ್ಕಳ ಊಟ, ಉಡುಪು, ವರ್ತನೆಯಲ್ಲಿ ಶ್ರೀಮಂತಿಕೆಯ ಛಾಯೆ ಕಡ್ಡಾಯವಾಗಿ ಗೋಚರಿಸಬೇಕು. ಮಕ್ಕಳ ಊಟದ ಡಬ್ಬಿಯಲ್ಲಿನ ತಿಂಡಿ ತಿನಿಸುಗಳನ್ನು ಸಹ ಶಿಕ್ಷಕರೇ ನಿರ್ಧರಿಸುವರು. ಶ್ರೀಮಂತ ಜೀವನಶೈಲಿಗೆ ವಿರುದ್ಧವಾಗಿ ಮಕ್ಕಳು ವರ್ತಿಸಿದಲ್ಲಿ ಅದೊಂದು ಶಿಕ್ಷಾರ್ಹ ಅಪರಾಧವೆಂದು ಪರಿಗಣನೆಗೊಳಗಾಗುತ್ತದೆ. ಇಂಥ ವಾತಾವರಣದಲ್ಲಿ ಮಕ್ಕಳಿಗೆ ಬದುಕಿನ ಸರಳತೆಯ ಪಾಠ ಮಾಡುವುದು ಅಸಾಧ್ಯದ ಮಾತು. ಇಂದಿನ ಇಂಗ್ಲಿಷ್ ಮಾಧ್ಯಮದ ಖಾಸಗಿ ಶಾಲೆಗಳಲ್ಲಿ ಗಾಂಧೀಜಿ ಬದುಕಿನ ಸರಳತೆ ಪಠ್ಯಕ್ಕೆ ಸೀಮಿತ ಆಗಿದೆಯೇ ಹೊರತು, ಪ್ರಾಯೋಗಿಕ ಅನುಕರಣೆಗಲ್ಲ.

ಮದುವೆಯ ದುಂದುವೆಚ್ಚಕ್ಕೆ ಕಡಿವಾಣ ಹಾಕಲು ಕುವೆಂಪು 'ಮಂತ್ರಮಾಂಗಲ್ಯ' ಪದ್ಧತಿ ಪರಿಚಯಿಸಿದರು. ಉತ್ತರ ಕರ್ನಾಟಕದ ಹಲವು ಮಠಗಳಲ್ಲಿ ಮದುವೆಯ ಸಂದರ್ಭ ಅಕ್ಕಿಕಾಳುಗಳನ್ನು ಅಕ್ಷತೆಯ ರೂಪದಲ್ಲಿ ವಧು – ವರರ ಮೇಲೆ ಪ್ರೋಕ್ಷಿಸುವ ಬದಲು, ಹೂವಿನ ಎಸಳುಗಳನ್ನು ಪ್ರೋಕ್ಷಿಸುವ ರೂಢಿಯನ್ನು ಅನುಸರಿಸುತ್ತಿರುವರು. ಇದು ಆಹಾರ ಪದಾರ್ಥವೊಂದು ಅನವಶ್ಯಕವಾಗಿ ವ್ಯಯವಾಗುವುದನ್ನು ತಡೆಗಟ್ಟುವ ಒಂದು ಉತ್ತಮ ಬೆಳವಣಿಗೆ. ಜನ್ಮದಿನ, ವಿವಾಹ ವಾರ್ಷಿಕೋತ್ಸವವನ್ನು ಆಡಂಬರದಿಂದ ಆಚರಿಸದೆ ಆ ದಿನ ಅನಾಥಾಶ್ರಮಗಳಲ್ಲಿ ಅನ್ನಸಂತರ್ಪಣೆ ಮಾಡುವುದನ್ನು ಅನೇಕರು ವ್ರತದಂತೆ ಪಾಲಿಸುತ್ತಾರೆ.

ಸರಳತೆಗೆ ಇವತ್ತಿಗೂ ಗಾಂಧೀಜಿ ಮಾದರಿ. ಮೈಮುಚ್ಚಲು ಬಟ್ಟೆ ಇಲ್ಲದ ಬಡವರನ್ನು ನೋಡಿದ ಅವರು ಪಂಚೆಯುಟ್ಟು ಅರೆಬೆತ್ತಲೆಯಾಗಿ ಬದುಕಿದರು. ದೇಶದಲ್ಲಿನ ಆಹಾರದ ಕೊರತೆ ನೀಗಿಸಲು ವಾರಕ್ಕೊಮ್ಮೆ ಉಪವಾಸವಿರುವಂತೆ ಲಾಲ್ ಬಹದ್ದೂರ್ ಶಾಸ್ತ್ರಿ ಅವರು ಪ್ರಧಾನಮಂತ್ರಿಯಾಗಿದ್ದ ಸಂದರ್ಭದಲ್ಲಿ ನಾಗರಿಕರಿಗೆ ಕರೆ ನೀಡಿದ್ದರು. ಉಪವಾಸವನ್ನು ಅವರು 'ಧಾನ್ಯತ್ಯಾಗ' ಎಂದು ಕರೆದರು. ಈ ಧಾನ್ಯ ತ್ಯಾಗವನ್ನು ಸ್ವತಃ ಶಾಸ್ತ್ರಿ ಅವರು ಅನುಸರಿಸುವುದರ ಮೂಲಕ ಜನರಿಗೆ ಆದರ್ಶವೂ ಮಾದರಿಯೂ ಆಗುಳಿದರು.

ರಾಮಮನೋಹರ ಲೋಹಿಯಾ, ಜ್ಯೋತಿಬಸು, ಕಡಿದಾಳು ಮಂಜಪ್ಪ, ಶಾಂತವೇರಿ ಗೋಪಾಲಗೌಡ, ಎಸ್. ನಿಜಲಿಂಗಪ್ಪ ಮುಂತಾದ ರಾಜಕಾರಣಿಗಳು ತಮ್ಮ ಸರಳತೆಯಿಂದ ಆದರ್ಶ ರಾಜಕಾರಣಿಗಳೆಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ಆದರೆ, ಇಂದಿನ ರಾಜಕಾರಣದಲ್ಲಿ ಸರಳತೆ ದುರ್ಲಭವಾಗಿದೆ. ನಮ್ಮ ರಾಜಕಾರಣಿಗಳ 'ಸರಳತೆ'ಯೂ 'ದುಬಾರಿ' ಎನ್ನುವುದಕ್ಕೆ ಅನೇಕ ನಿದರ್ಶನಗಳಿವೆ.

ನಮ್ಮ ಬದುಕಿನ ರೀತಿ ಇತರರ ಬದುಕಿಗೆ ಎರವಾಗದಂತೆ ಬದುಕುವುದು ಸದ್ಯದ ತುರ್ತು ಅಗತ್ಯವಾಗಿದೆ. 'ಇನ್ನೊಬ್ಬನ ಜಾಗದಲ್ಲಿ ತನ್ನನ್ನು ಇರಿಸಿ ನೋಡುವ ಕಲ್ಪನಾಶಕ್ತಿ, ಅದರಿಂದಾಗಿ ಹುಟ್ಟುವ ಸಹಾನುಭೂತಿ ಮತ್ತು ತಿಳಿವು, ತನ್ನ ವಿಷಾದಕ್ಕೆ ಕಾರಣವಾದ ಪರಿಸ್ಥಿತಿಗೆ ಒಂದಿಲ್ಲ ಒಂದು ರೀತಿಯಿಂದ ತಾನೂ ಹೊಣೆಗಾರ ಎಂಬ ಅರಿವು– ನಾವು ಇತರರ ಬಗ್ಗೆ ಯೋಚಿಸುವ ರೀತಿಯನ್ನೇ ಬದಲಿಸಬಲ್ಲದು' ಎಂದಿರುವರು ಯಶವಂತ ಚಿತ್ತಾಲರು. ಹಾಗೆ ನೋಡುವ ಗುಣ ಬೆಳೆಸಿಕೊಂಡಾಗಲೇ ಮನುಷ್ಯನಿಗೆ ತನ್ನ ಸರಳತೆಯಲ್ಲಿ ಬೇರೊಬ್ಬರ ಬದುಕಿದೆ ಎನ್ನುವ ಸತ್ಯ ಗೋಚರಿಸಬಲ್ಲದು.

ಸರಳತೆ ಎನ್ನುವುದು ನಮ್ಮ ಆರ್ಥಿಕ ಸ್ಥಿತಿಯನ್ನು ಅವಲಂಬಿಸದೆ, ಒಂದು ಮೌಲ್ಯದ ರೂಪದಲ್ಲಿ ನಮ್ಮ ಜೀವನದ ಭಾಗವಾಗಬೇಕಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಶಿಕ್ಷಣ, ಉದ್ಯೋಗ ಮತ್ತಿತರ ಕಾರಣಗಳಿಂದ ವಿದೇಶಕ್ಕೆ ತೆರಳಿದ ಭಾರತೀಯರು ಸಾವಿಗೀಡಾಗುವ ಘಟನೆಗಳು ವರದಿಯಾಗುತ್ತಲೇ ಇವೆ. ಅಮೆರಿಕ, ಕೆನಡಾ, ಆಸ್ಟ್ರೇಲಿಯಾದಲ್ಲಿ ಜನಾಂಗೀಯ ತಾರತಮ್ಯ, ಉದ್ಯೋಗ ಕಸಿಯುತ್ತಿದ್ದಾರೆ ಎನ್ನುವ ಸಿಟ್ಟು, ಒತ್ತಡ, ಗುಂಡಿನ ದಾಳಿ ಮುಂತಾದ ಕಾರಣಗಳಿಂದ ಭಾರತೀಯರು ಸಾಯುತ್ತಿದ್ದಾರೆ. ಈ ದೇಶಗಳಲ್ಲಿ ಭಾರತೀಯರನ್ನು ನಿರ್ದಿಷ್ಟವಾಗಿ ಗುರಿ ಮಾಡಿ ಹಿಂಸಾಚಾರ ಎಸಗಿರುವ ಘಟನೆಗಳು ವರದಿಯಾಗಿವೆ

ದೂರ ತೀರ... ಭದ್ರತೆ ಭಾರ

ಅಮೆರಿಕ, ಕೆನಡಾ, ಆಸ್ಟ್ರೇಲಿಯಾದಲ್ಲಿ ಭಾರತೀಯರ ಮೇಲೆ ಹೆಚ್ಚುತ್ತಿರುವ ದಾಳಿ, ಹಿಂಸೆ

ಪ್ರಜಾವಾಣಿ ವಾರ್ತೆ

ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದ, ಪ್ರತಿಷ್ಠಿತ ಶಾಲೆ–ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡಿದ್ದ ಬೆಂಗಳೂರಿನ ಸಾಕೇತ್ ಶ್ರೀನಿವಾಸಯ್ಯ, ಸ್ನಾತಕೋತ್ತರ ಪದವಿಗಾಗಿ ಅಮೆರಿಕಕ್ಕೆ ಹೋದರು. ಕ್ಯಾಲಿಫೋರ್ನಿಯಾದಲ್ಲಿ ಅವರ ಪದವಿ ಪೂರ್ಣಗೊಳ್ಳುವ ಮುನ್ನವೇ ಅವರ ಜೀವನ ಅಂತ್ಯಗೊಂಡಿದೆ. ಆದರೆ, ಮಗನ ಭವ್ಯ ಭವಿಷ್ಯದ ಬಗ್ಗೆ ಕನಸು ಕಂಡಿದ್ದ ಅವರ ಪೋಷಕರಿಗೆ ಮಗ ದೂರದ ದೇಶದಲ್ಲಿ ಶವವಾಗಿ ಬಿದ್ದಿರುವುದನ್ನು ಅರಗಿಸಿಕೊಳ್ಳಲಾಗುತ್ತಿಲ್ಲ.

ಸಾಕೇತ್

ಚಂದನ್ ಕುಮಾರ್

ನಾಲ್ಕು ದಿನಗಳ ಹಿಂದೆ ಕೆನಡಾದಲ್ಲಿ ಕರ್ನಾಟಕದ ನೆಲಮಂಗಲದ ಟೆಕಿ ಚಂದನ್ ಕುಮಾರ್ ಅವರನ್ನು ಗುಂಡಿಟ್ಟು ಹತ್ಯೆ ಮಾಡಲಾಯಿತು. ವಿವಿಧ ದೇಶಗಳಿಗೆ ಶಿಕ್ಷಣ, ಉದ್ಯೋಗಕ್ಕಾಗಿ ಮಕ್ಕಳನ್ನು ಕಳುಹಿಸಿದ ನೂರಾರು ಪೋಷಕರು ಮಕ್ಕಳನ್ನು ಕಳೆದುಕೊಂಡು ಸಂಕಟಕ್ಕೆ ಗುರಿಯಾಗುತ್ತಿದ್ದಾರೆ. ಅದರಲ್ಲೂ ಅಮೆರಿಕ, ಕೆನಡಾ ಮತ್ತು ಆಸ್ಟ್ರೇಲಿಯಾಕ್ಕೆ ಮಕ್ಕಳನ್ನು ಕಳುಹಿಸಿದ ಪೋಷಕರು ಇಂತಹ ನೋವನ್ನು ಹೆಚ್ಚು ಅನುಭವಿಸುತ್ತಿದ್ದಾರೆ.

ಜನಾಂಗೀಯವಾದ, ರಾಜಕಾರಣ, ಬದಲಾದ ಪರಿಸ್ಥಿತಿಗಳು ಇದಕ್ಕೆ ಕಾರಣವಾಗುತ್ತಿವೆ. ಹಿಂಸಾಚಾರದ ಜತೆಗೆ ಹಲವು ರೀತಿಯ ಕಾಯಿಲೆ, ಒತ್ತಡ, ಆತ್ಮಹತ್ಯೆ, ಅಪಘಾತದಿಂದಲೂ ಭಾರತೀಯರ ಗಮನಾರ್ಹ ಪ್ರಮಾಣದಲ್ಲಿ ಸಾಯುತ್ತಿದ್ದಾರೆ ಎಂದು ಅಂಕಿಅಂಶಗಳು ಹೇಳುತ್ತಿವೆ.

ಅಮೆರಿಕ

ಭಾರತೀಯರು ಅತಿ ಹೆಚ್ಚು ಪ್ರಮಾಣದಲ್ಲಿ ಇರುವ/ಹೋಗುವ ದೇಶಗಳಲ್ಲಿ ಅಮೆರಿಕ ಮುಂಚೂಣಿಯಲ್ಲಿದೆ. ಉದ್ಯೋಗ ಮತ್ತು ಶಿಕ್ಷಣಕ್ಕೆ ಅಮೆರಿಕಕ್ಕೆ ಹೋಗುವ ಪ್ರವೃತ್ತಿ ಮಾಹಿತಿ ತಂತ್ರಜ್ಞಾನದ ಕ್ರಾಂತಿಯ ನಂತರ ಭಾರಿ ಹೆಚ್ಚಾಯಿತು. ಹಾಗೆ ಹೋದ ಅನೇಕರು ಗ್ರೀನ್ ಕಾರ್ಡ್ ಪಡೆದು ಆ ದೇಶದ ಪ್ರಜೆಗಳೂ ಆದರು. ಕ್ರಮೇಣ ಆರ್ಥಿಕ ಕುಸಿತ ಇತ್ಯಾದಿ ಕಾರಣಗಳಿಂದ ಅಲ್ಲಿ ನಿರುದ್ಯೋಗ ಪ್ರಮಾಣ ಹೆಚ್ಚಾಯಿತು. ಭಾರತದ ವಲಸಿಗರೇ ನಿರುದ್ಯೋಗಕ್ಕೆ ಕಾರಣ ಎನ್ನುವ ಸಿಟ್ಟು ಅಲ್ಲಿನ ಕೆಲವರಲ್ಲಿ ಮೂಡಿತು.

ಡೊನಾಲ್ಡ್ ಟ್ರಂಪ್ ಅವರು ಅಧ್ಯಕ್ಷರಾದ ನಂತರ ಈ ಭಾವನೆ ಮತ್ತಷ್ಟು ಹೆಚ್ಚಾಯಿತು. ಅಮೆರಿಕದಲ್ಲಿನ ಗ್ರೀನ್ ಕಾರ್ಡ್ ಪಡೆದ ಭಾರತೀಯರೂ ಸೇರಿದಂತೆ ಹಲವು ವರ್ಷಗಳಿಂದ ಅಲ್ಲಿ ನೆಲಸಿರುವವರು, ಉದ್ಯೋಗ ಮಾಡುತ್ತಿರುವವರು, ಶಿಕ್ಷಣಕ್ಕೆಂದು ಹೋದವರ ಮೇಲೆ ಹಿಂಸೆ, ದಾಳಿಗಳು ಹೆಚ್ಚಾದವು. ಜನಾಂಗೀಯವಾದವೂ ಭಾರತೀಯರ ಮೇಲಿನ ದಾಳಿಗೆ ಒಂದು ಪ್ರಮುಖ ಕಾರಣವಾಗಿದೆ. ಕಪ್ಪು ವರ್ಣದವರು ಎನ್ನುವ ಕಾರಣಕ್ಕೆ ಕಚೇರಿ, ಮಾಲ್, ರಸ್ತೆ ಮುಂತಾದೆಡೆ ಭಾರತೀಯ ಸಂಜಾತರನ್ನು ಅವಮಾನ ಮಾಡಿದ, ಗುಂಡು ಹಾರಿಸಿ ಕೊಂದ ಘಟನೆಗಳು ಹಲವಿವೆ.

ಐದು ವರ್ಷಗಳಲ್ಲಿ ಮೃತಪಟ್ಟ ಭಾರತೀಯರ ಸಂಖ್ಯೆ



ಕೆನಡಾ

ಶಿಕ್ಷಣ, ಉದ್ಯೋಗ ಹೀಗೆ ವಿವಿಧ ಕಾರಣಕ್ಕೆ ಕೆನಡಾಕ್ಕೆ ಹೋದ ಭಾರತೀಯರ ಸಾವಿನ ಪ್ರಕರಣಗಳು ಇತ್ತೀಚಿನ ವರ್ಷಗಳಲ್ಲಿ ಭಾರಿ ಹೆಚ್ಚಾಗಿವೆ. 2020 ಮತ್ತು 2025ರ ನಡುವೆ ಕೆನಡಾದಲ್ಲಿ ಭಾರತೀಯರ ಸಾವಿನ ಸಂಖ್ಯೆ ಮೂರು ಪಟ್ಟು ಹೆಚ್ಚಾಗಿದೆ ಎಂದು ರಾಜ್ಯಸಭೆಯಲ್ಲಿ ಪ್ರಶ್ನೋತ್ತರದ ವೇಳೆ ವಿದೇಶಾಂಗ ವ್ಯವಹಾರಗಳ ಸಚಿವರು ಬಿಡುಗಡೆ ಮಾಡಿರುವ ದತ್ತಾಂಶವು (2025ರ ಆ.7) ಹೇಳುತ್ತಿದೆ.

ಕೆನಡಾದಲ್ಲಿ 14 ಲಕ್ಷಕ್ಕೂ ಹೆಚ್ಚು ಮಂದಿ ಭಾರತೀಯರಿದ್ದು, ಅವರಲ್ಲಿ ಅರ್ಧದಷ್ಟು ಮಂದಿ ಸಿಖ್ಖರಾಗಿದ್ದಾರೆ. ಜನಸಂಖ್ಯೆಯ ಹೆಚ್ಚಳ, ಅದು ದೇಶದ ಮೇಲೆ ಹೇರುತ್ತಿರುವ ಒತ್ತಡದಂಥ ಕಾರಣಗಳಿಂದ ವಿದೇಶಗಳಿಂದ ಬರುವವರ ಮೇಲೆ ಇತ್ತೀಚಿನ ವರ್ಷಗಳಲ್ಲಿ ಅಲ್ಲಿ ಅಸಮಾಧಾನ ಬೆಳೆಯುತ್ತಿದೆ. ಆದರೆ, ಭಾರತೀಯರನ್ನು ಕೆನಡಾದವರು ವಿಶೇಷವಾಗಿ ಗುರಿ ಮಾಡಲು ಕಾರಣವಾಗಿದ್ದು ಎರಡೂ ದೇಶಗಳ ನಡುವಿನ ರಾಜಕಾರಣ.

ಕೆನಡಾದಲ್ಲಿ ಖಾಲಿಸ್ತಾನಿ ಪ್ರತ್ಯೇಕತಾವಾದಿಗಳು ಆಶ್ರಯ ಪಡೆದಿದ್ದು, ಸರ್ಕಾರ ಅವರಿಗೆ ಒತ್ತಾಸೆಯಾಗಿ ನಿಂತಿದೆ ಎಂದು ಭಾರತ ಹಿಂದಿನಿಂದಲೂ ಪ್ರತಿಪಾದಿಸುತ್ತಿದೆ. ಖಾಲಿಸ್ತಾನಿ ಪ್ರತ್ಯೇಕತಾವಾದಿ ಮುಖಂಡ, ಭಾರತವು ಭಯೋತ್ಪಾದಕ ಎಂದು ಘೋಷಿಸಿದ್ದ ಹರ್‌ದೀಪ್ ಸಿಂಗ್ ನಿಜ್ಜರ್ 2023ರಲ್ಲಿ ಕೆನಡಾದಲ್ಲಿ ಕೊಲೆಯಾದ. ಆತನ ಹತ್ಯೆಯಲ್ಲಿ ಭಾರತ ಸರ್ಕಾರದ ಏಜೆಂಟರ ಪಾತ್ರ ಇರುವ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಕೆನಡಾ ಹೇಳಿತ್ತು. ಅದರ ನಂತರ ಎರಡು ದೇಶಗಳ ನಡುವಿನ ಸಂಬಂಧ ಮತ್ತಷ್ಟು ಹದಗೆಟ್ಟಿತ್ತು.

ಕೆನಡಾದಲ್ಲಿ ಪ್ರಸ್ತುತ 20 ಲಕ್ಷ ಮಂದಿ ಅನಧಿಕೃತವಾಗಿ ವಾಸಿಸುತ್ತಿದ್ದು, ಅದರಲ್ಲಿ ಅರ್ಧದಷ್ಟು ಮಂದಿ ಭಾರತೀಯರು ಎನ್ನಲಾಗುತ್ತಿದೆ. ಅಲ್ಲಿ ಭಾರತೀಯರ ಮೇಲೆ ದಾಳಿ, ಹಿಂಸೆ ನಡೆಯುತ್ತಿವೆ. 2025ರ ಡಿಸೆಂಬರ್‌ನಲ್ಲಿ ಒಂದೇ ವಾರದಲ್ಲಿ ಇಬ್ಬರು ಭಾರತೀಯ ವಿದ್ಯಾರ್ಥಿಗಳನ್ನು ಹತ್ಯೆ ಮಾಡಲಾಗಿತ್ತು. ಕಳೆದ ವಾರ ಕೆನಡಾದಲ್ಲಿ ಉದ್ಯೋಗಿಯಾಗಿದ್ದ ನೆಲಮಂಗಲದ ಚಂದನ್ ಕುಮಾರ್ ಅವರನ್ನು ದುಷ್ಕರ್ಮಿಗಳು ಗುಂಡಿಟ್ಟು ಕೊಂದಿದ್ದರು. ಇಂಥ ಘಟನೆಗಳು ಹೆಚ್ಚುತ್ತಲೇ ಸಾಗುತ್ತಿದ್ದು, ಕಳವಳಕ್ಕೆ ಕಾರಣವಾಗಿವೆ.

ಆಸ್ಟ್ರೇಲಿಯಾ

ಭಾರತೀಯರ ಮೇಲಿನ ದಾಳಿಗೆ ಆಸ್ಟ್ರೇಲಿಯಾ ಕುಖ್ಯಾತಿ ಪಡೆದಿದೆ. ಭಾರತದ ವೃತ್ತಿಪರರು, ವಿದ್ಯಾರ್ಥಿಗಳು ದೊಡ್ಡ ಸಂಖ್ಯೆಯಲ್ಲಿ ಅಲ್ಲಿ ನೆಲಸಿದ್ದಾರೆ. ಅಲ್ಲಿನ ಜನರಲ್ಲಿ ಭಾರತ ವಿರೋಧಿ ಭಾವನೆ ಹೆಚ್ಚಿದ್ದು, ಆಗಾಗ ಭಾರತೀಯರನ್ನು ಗುರಿಯಾಗಿಸಿಕೊಂಡು ಜನಾಂಗೀಯ ನಿಂದನೆ ಮಾಡುವ ಪ್ರಕರಣ ವರದಿಯಾಗುತ್ತಿವೆ.

ನಾಲ್ಕು ದಿನಗಳ ಹಿಂದೆಯಷ್ಟೇ ಮೆಲ್ಬರ್ನ್‌ನಲ್ಲಿ ಭಾರತೀಯ ಕುಟುಂಬವೊಂದು ವಾಸವಿರುವ ಮನೆಯ ಹೊರಗಡೆ 'ನಾಝಿ ಡೈ' 'ಗೋ ಬ್ಯಾಕ್ ಇಂಡಿಯಾ' ಎಂದು ಬರೆದಿದ್ದ ಚೀಟಿಗಳನ್ನು ಅಂಟಿಸಿದ್ದು ವರದಿಯಾಗಿದೆ. ಭಾರತದಿಂದ ಹೋದ ವಿದ್ಯಾರ್ಥಿಗಳ ಮೇಲೆಯೂ ಅಲ್ಲಿ ದಾಳಿಗಳು ನಡೆಯುತ್ತಿರುತ್ತವೆ. 2018ರಿಂದ 2025ರ ನಡುವೆ ಹಿಂಸಾತ್ಮಕ ದಾಳಿಯಲ್ಲಿ ಮೂವರು ವಿದ್ಯಾರ್ಥಿಗಳು ಜೀವ ಕಳೆದುಕೊಂಡಿದ್ದಾರೆ.

ಕಳೆದ ವರ್ಷದ ಆಗಸ್ಟ್ 31ರಂದು ಆಸ್ಟ್ರೇಲಿಯಾದಲ್ಲಿ ವಲಸೆಯನ್ನು ವಿರೋಧಿಸಿ ಬೃಹತ್ ಪ್ರತಿಭಟನೆ (ಮಾರ್ಚ್ ಫಾರ್ ಆಸ್ಟ್ರೇಲಿಯಾ) ನಡೆದಿತ್ತು. ಆ ಬಳಿಕ ಭಾರತೀಯರನ್ನು ಗುರಿಯಾಗಿಸಿಕೊಂಡು ಮಾಡಲಾಗುತ್ತಿರುವ ಜನಾಂಗೀಯ ನಿಂದನೆ ಹೆಚ್ಚಾಗಿದೆ ಎಂದು ಅಲ್ಲಿನ ಮಾಧ್ಯಮಗಳು ವರದಿ ಮಾಡಿವೆ. ಆ ಪ್ರತಿಭಟನೆಗೆ ಪೂರಕವಾಗಿ ಸಿದ್ಧಪಡಿಸಿದ್ದ ಭಿತ್ತಿಪತ್ರಗಳಲ್ಲಿ ಭಾರತದ ವಲಸಿಗರನ್ನು ಗುರಿಯಾಗಿಸಿಕೊಂಡ ಬರಹಗಳೂ ಇದ್ದವು ಎಂದು ವರದಿಯಾಗಿದೆ.

ಭಾರತೀಯರು ತಮ್ಮ ಉದ್ಯೋಗ ಅವಕಾಶಗಳನ್ನು ಕಸಿದುಕೊಳ್ಳುತ್ತಿದ್ದಾರೆ ಎಂಬ ಭಾವನೆ ಅಲ್ಲಿಯವರಿಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಇಂತಹ ಅಭಿಪ್ರಾಯ ಪಡುವಂತಹ ಪೋಸ್ಟ್‌ಗಳು ಕಾಣಸಿಗುತ್ತವೆ. ಭಾರತೀಯರ ಸಂವಹನದ ಶೈಲಿ, ಭಾರತೀಯ ಸಂಸ್ಕೃತಿಯ ಬಗ್ಗೆ ಇರುವ ತಪ್ಪು ತಿಳಿವಳಿಕೆ ಕೂಡ ಜನಾಂಗೀಯ ನಿಂದನೆ, ದಾಳಿಗಳಿಗೆ ಕಾರಣವಾಗುತ್ತಿದೆ ಎಂದೂ ಹೇಳಲಾಗುತ್ತಿದೆ. ಮಾದಕ ದ್ರವ್ಯ ಸೇವಿಸಿದ, ಮದ್ಯ ಸೇವನೆ ಚಟ ಹೊಂದಿರುವ ಯುವಜನರು ವಿನಾ ಕಾರಣ ಭಾರತೀಯರು, ವಿದ್ಯಾರ್ಥಿಗಳ ಮೇಲೆ ದಾಳಿ ನಡೆಸಿರುವ, ದರೋಡೆ ಮಾಡಿರುವ ಉದಾಹರಣೆಗಳೂ ಇವೆ.

ಆಧಾರ: ಸಂಸತ್ತಿನಲ್ಲಿ ಸರ್ಕಾರದ ಉತ್ತರಗಳು, ರಾಯಿಟರ್ಸ್, ಬಿಬಿಸಿ, ಎಬಿಸಿ, ಮಾಧ್ಯಮ ವರದಿಗಳು

ಹಿಂಸಾತ್ಮಕ ದಾಳಿಯಲ್ಲಿ ಮೃತಪಟ್ಟ ಭಾರತೀಯ ವಿದ್ಯಾರ್ಥಿಗಳು (2018ರಿಂದ 2025)

ವಿದ್ಯಾರ್ಥಿಗಳ ಮೇಲೆ ದಾಳಿ

ಉನ್ನತ ಶಿಕ್ಷಣ ಹಾಗೂ ಉತ್ತಮ ಉದ್ಯೋಗ ಪಡೆಯುವ ಕನಸನ್ನು ಇಟ್ಟುಕೊಂಡು ಅಮೆರಿಕ, ಕೆನಡಾ, ಆಸ್ಟ್ರೇಲಿಯಾಕ್ಕೆ ತೆರಳುವ ಭಾರತೀಯ ವಿದ್ಯಾರ್ಥಿಗಳು ದುಷ್ಕರ್ಮಿಗಳ ಹಿಂಸಾತ್ಮಕ ದಾಳಿಗೆ ಗುರಿಯಾಗಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ.

ಈ ತಿಂಗಳ ಆರಂಭದಲ್ಲಿ ವಿದೇಶಾಂಗ ಸಚಿವಾಲಯ ಲೋಕಸಭೆಗೆ ನೀಡಿರುವ ಮಾಹಿತಿ ಪ್ರಕಾರ, 2018ರಿಂದ 2025ರವರೆಗೆ ಒಂಬತ್ತು ರಾಷ್ಟ್ರಗಳಲ್ಲಿ 36 ಭಾರತೀಯ ವಿದ್ಯಾರ್ಥಿಗಳು ಪ್ರಾಣ ಕಳೆದುಕೊಂಡಿದ್ದಾರೆ. ಈ ಪೈಕಿ ಕೆನಡಾದಲ್ಲೇ 17 ವಿದ್ಯಾರ್ಥಿಗಳು ದುಷ್ಕರ್ಮಿಗಳ ಕೃತ್ಯಕ್ಕೆ ಬಲಿಯಾಗಿದ್ದಾರೆ. ಅಮೆರಿಕದಲ್ಲಿ ಒಂಬತ್ತು ಮಂದಿ ದಾಳಿಯಲ್ಲಿ ದಾರುಣ ಸಾವು ಕಂಡಿದ್ದಾರೆ. ಆಸ್ಟ್ರೇಲಿಯಾದಲ್ಲಿ ಮೂವರು ಬಲಿಯಾಗಿದ್ದಾರೆ.

ರಾಷ್ಟ್ರೀಯ

ಜೆಇಇ: ವಿಷ್ಣು ಸಾಯಿ ತೇಜಾ ರಾಜ್ಯಕ್ಕೆ ಪ್ರಥಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಂಟಿ ಪ್ರವೇಶ ಪರೀಕ್ಷೆ (ಜೆಇಇ ಮೇನ್) ಫಲಿತಾಂಶದಲ್ಲಿ ಬೆಂಗಳೂರಿನ ನಾರಾಯಣ ಕೋ–ಕಾವೇರಿ ಭವನ ವಿದ್ಯಾರ್ಥಿ ಎ.ವಿಷ್ಣು ಸಾಯಿ ತೇಜಾ ಅವರು 99.99 ಪರ್ಸೆಂಟೈಲ್ ಪಡೆದಿದ್ದು ರಾಜ್ಯಕ್ಕೆ ಮೊದಲಿಗರಾಗಿ ಹೊರಹೊಮ್ಮಿದ್ದಾರೆ.

ವಿಷ್ಣು ಸಾಯಿ ತೇಜಾ

ಭೌತವಿಜ್ಞಾನದಲ್ಲಿ 100, ರಸಾಯನ ವಿಜ್ಞಾನದಲ್ಲಿ 99.99, ಗಣಿತದಲ್ಲಿ 99.97 ಪರ್ಸೆಂಟೈಲ್ ಪಡೆದಿದ್ದಾರೆ. ಅಖಿಲಭಾರತ ಮಟ್ಟದಲ್ಲಿ ಅವರು 14ನೇ ರ‍್ಯಾಂಕ್ ಗಳಿಸಿದ್ದಾರೆ.

ವಿಷ್ಣು ಅವರ ತಂದೆ ರವಿಕುಮಾರ್ ಶೆಟ್ಟಿ ಬೆಂಗಳೂರಿನ ವಿಸ್ಟಿಯಾನ್ ಸಂಸ್ಥೆಯಲ್ಲಿ ಗ್ಲೋಬಲ್ ಎಂಜಿನಿಯರಿಂಗ್ ಲೀಡರ್ ಆಗಿದ್ದು, ತಾಯಿ ಪಲ್ಲವಿ ಎಂಬಿಎ ಪದವೀಧರೆ. ವಿಷ್ಣು ದೇಶದ ಪ್ರಮುಖ ಐಐಟಿಗಳಲ್ಲಿ ಕಂಪ್ಯೂಟರ್ ಸೈನ್ಸ್‌ಗೆ ಪ್ರವೇಶ ಪಡೆಯುವ ಗುರಿ ಹೊಂದಿದ್ದಾರೆ.

'ಆರಂಭದಲ್ಲಿ ಬೆಳಗ್ಗೆ 8ರಿಂದ ರಾತ್ರಿ 8ರವರೆಗೆ ಕಾಲೇಜಿನಲ್ಲೇ ಇರುತ್ತಿದ್ದೆ. ನಂತರ ಸಂಜೆ 5.30ಕ್ಕೆ ಮನೆಗೆ ಬಂದು ರಾತ್ರಿ 11ರವರೆಗೆ ಓದುತ್ತಿದ್ದೆ. ಕ್ರಿಕೆಟ್ ನೋಡುವುದು ಮತ್ತು ಯೂಟ್ಯೂಬ್ ವೀಕ್ಷಿಸುವುದು ಒತ್ತಡ ನಿವಾರಣೆಗೆ ಸಹಾಯ ಮಾಡಿತು. ಭೌತವಿಜ್ಞಾನ ಮತ್ತು ಗಣಿತ ನನ್ನ ಮೆಚ್ಚಿನ ವಿಷಯಗಳು. ಹಾಗಾಗಿ, ಎಂಜಿನಿಯರಿಂಗ್ ಆಯ್ಕೆ ಮಾಡಿಕೊಂಡೆ' ಎಂದು ಹೇಳಿದ್ದಾರೆ.

12 ಮಂದಿಗೆ ಅಗ್ರ ಶ್ರೇಯಾಂಕ

ನವದೆಹಲಿ (ಪಿಟಿಐ): 2026ನೇ ಸಾಲಿನ ಜೆಇಇ ಮೇನ್ ಫಲಿತಾಂಶ ಪ್ರಕಟವಾಗಿದ್ದು, 12 ಅಭ್ಯರ್ಥಿಗಳು ಶೇ 100 ಪರ್ಸೆಂಟೈಲ್ ಗಳಿಸಿದ್ದಾರೆ. ಇವರಲ್ಲಿ ಬಹುತೇಕರು ರಾಜಸ್ಥಾನದವರು.

ರಾಜಸ್ಥಾನದ ಮೂವರು, ಆಂಧ್ರಪ್ರದೇಶದ ಇಬ್ಬರು ಹಾಗೂ ದೆಹಲಿ, ಬಿಹಾರ, ಒಡಿಶಾ, ಹರಿಯಾಣ, ಮಹಾರಾಷ್ಟ್ರ, ಗುಜರಾತ್ ಮತ್ತು ತೆಲಂಗಾಣದ ತಲಾ ಒಬ್ಬರು ಶೇ 100 ಪರ್ಸೆಂಟೈಲ್ ಗಳಿಸಿದ್ದಾರೆ. ಅವರಲ್ಲಿ ಎಲ್ಲರೂ ಪುರುಷ ಅಭ್ಯರ್ಥಿಗಳು ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ) ತಿಳಿಸಿದೆ.

ಈ ವರ್ಷದ ಮೊದಲ ಆವೃತ್ತಿಯ ಪರೀಕ್ಷೆಗೆ 13.04 ಲಕ್ಷ ಆಭ್ಯರ್ಥಿಗಳು ಹಾಜರಾಗಿದ್ದರು.

ನ್ಯೂಸ್‌ಕ್ಲಿಕ್, ಪುರಕಾಯಸ್ಥಗೆ ₹184 ಕೋಟಿ ದಂಡ: ಇ.ಡಿ

ನವದೆಹಲಿ (ಪಿಟಿಐ): 'ನ್ಯೂಸ್‌ಕ್ಲಿಕ್' ಸುದ್ದಿ ಪೋರ್ಟಲ್ ಹಾಗೂ ಅದರ ಪ್ರಧಾನ ಸಂಪಾದಕ ಪ್ರಬೀರ್ ಪುರಕಾಯಸ್ಥ ಅವರಿಗೆ ಜಾರಿ ನಿರ್ದೇಶನಾಲಯವು (ಇ.ಡಿ) 'ವಿದೇಶಿ ವಿನಿಮಯ ನಿರ್ವಹಣೆ ಕಾಯ್ದೆ'ಯಡಿ (ಎಫ್‌ಇಎಂಎ) ₹184 ಕೋಟಿ ದಂಡ ವಿಧಿಸಿದೆ.



ಪ್ರಬೀರ್

ಪೋರ್ಟಲ್‌ನ ಮಾಲೀಕತ್ವ ಹೊಂದಿರುವ 'ಪಿಪಿಕೆ ನ್ಯೂಸ್‌ಕ್ಲಿಕ್ ಸ್ಟುಡಿಯೊ ಪ್ರೈವೆಟ್ ಲಿಮಿಟೆಡ್' ಕಂಪನಿಗೆ ₹120 ಕೋಟಿ ದಂಡ ವಿಧಿಸಲಾಗಿದೆ. ಜತೆಗೆ, ನಿಯಮ ಉಲ್ಲಂಘನೆ ಆರೋಪದಡಿ ಸಂಸ್ಥೆಯ ಸಂಸ್ಥಾಪಕ ಪ್ರಬೀರ್ ಪುರಕಾಯಸ್ಥ ಅವರಿಗೂ ₹64 ಕೋಟಿ ದಂಡ ವಿಧಿಸಲಾಗಿದೆ ಎಂದು ಇ.ಡಿ ಮೂಲಗಳು ಸೋಮವಾರ ತಿಳಿಸಿವೆ.

ಈ ಸಂಸ್ಥೆಗಳು ಎಫ್‌ಇಎಂಎನ ನಿಬಂಧನೆಗಳನ್ನು ಉಲ್ಲಂಘಿಸಿವೆ. ವಿದೇಶಿ ನೇರ ಹೂಡಿಕೆಯ (ಎಫ್‌ಡಿಐ) ಮೂಲಕ ಬಂದ ಹಣದ ದುರ್ಬಳಕೆ ಹಾಗೂ ತಮ್ಮ ಸೇವೆಗಳ ಬಗ್ಗೆ ಸುಳ್ಳು ಮಾಹಿತಿ ನೀಡಿವೆ ಎಂದು ಆರೋಪಿಸಿದೆ. ಈ ಕುರಿತು 'ನ್ಯೂಸ್‌ಕ್ಲಿಕ್' ಪ್ರತಿಕ್ರಿಯಿಸಿಲ್ಲ.

2021ರ ಸೆಪ್ಟೆಂಬರ್‌ನಲ್ಲಿ ನವದೆಹಲಿಯ ಸೈದುಲಾಜಾಬ್‌ನಲ್ಲಿರುವ 'ನ್ಯೂಸ್‌ಕ್ಲಿಕ್' ಸಂಸ್ಥೆಯಲ್ಲಿ ಹಣ ಅಕ್ರಮ ವರ್ಗಾವಣೆ ಆರೋಪದಡಿ ಇ.ಡಿ ಮೊದಲ ಬಾರಿಗೆ ಶೋಧ ಮಾಡಿತ್ತು. ಈ ಪ್ರಕರಣದಲ್ಲಿ ಪುರಕಾಯಸ್ಥ ಸೇರಿದಂತೆ 25ಕ್ಕೂ ಹೆಚ್ಚು ಜನರ ಹೇಳಿಕೆಗಳನ್ನು ಇ.ಡಿ ದಾಖಲಿಸಿತ್ತು.

'ನ್ಯೂಸ್‌ಕ್ಲಿಕ್ ಪೋರ್ಟಲ್ ಮತ್ತು ಅದರ ಮಾಲೀಕರು ಅಕ್ರಮ ಎಸಗಿದ್ದಾರೆ' ಎಂದು ಬಿಜೆಪಿಯು 'ನ್ಯೂಯಾರ್ಕ್ ಟೈಮ್ಸ್' ಪತ್ರಿಕೆಯ ವರದಿಯನ್ನು ಉಲ್ಲೇಖಿಸಿ 2023ರಲ್ಲಿ ಆರೋಪಿಸಿತ್ತು. ಆ ಪತ್ರಿಕಾ ವರದಿ ಪ್ರಕಾರ, ಈ ಪೋರ್ಟಲ್ ಅಮೆರಿಕದ ಉದ್ಯಮಿ ನೆವಿಲ್ಲೆ ರಾಯ್ ಸಿಂಘಮ್ ಅವರಿಂದ ಹಣಕಾಸಿನ ನೆರವು ಪಡೆದಿದೆ. ಸಿಂಘಮ್ ಅವರು ಚೀನಾ ಸರ್ಕಾರದ ಮಾಧ್ಯಮ ಪ್ರಚಾರದ ನಿಯೋಗದೊಂದಿಗೆ ನಿಕಟವಾಗಿ ಕೆಲಸ ಮಾಡುತ್ತಿದ್ದಾರೆ ಎಂಬ ಆರೋಪವಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ತಿರುವನಂತಪುರದ ಕಾಂಗ್ರೆಸ್ ಸಂಸದ ಶಶಿ ತರೂರು ಅವರು ಟ್ವೆಂಟಿ20 ಕ್ರಿಕೆಟ್ ವಿಶ್ವಕಪ್‌ನಲ್ಲಿ ಭಾಗವಹಿಸದೇ ಇರುವ ಪಾಕಿಸ್ತಾನದ ನಿರ್ಧಾರವನ್ನು (ಆ ನಂತರ ಅದು ಭಾಗವಹಿಸುವುದಾಗಿ ಹೇಳಿತ್ತು) ಸ್ವಾಗತಿಸಿ, ಪಾಕಿಸ್ತಾನದ ರಾಜತಾಂತ್ರಿಕ ನಿಲುವನ್ನು ಶ್ಲಾಘಿಸಿ ಮಾಧ್ಯಮಗಳಿಗೆ ನೀಡಿದ್ದಾರೆ ಎನ್ನಲಾದ ಹೇಳಿಕೆ ವಿಡಿಯೊವನ್ನು 'ವೊಕ್ ಸ್ಪೋರ್ಟ್ಸ್' ಫೇಸ್‌ಬುಕ್ ಪುಟದಲ್ಲಿ ಕೆಲ ದಿನಗಳ ಹಿಂದೆ ಹಂಚಿಕೊಳ್ಳಲಾಗಿತ್ತು. ಆದರೆ, ಇದು ಸುಳ್ಳು.

ವಿಡಿಯೊದ ಕೀಫ್ರೇಮ್ ಒಂದನ್ನು ರಿವರ್ಸ್ ಇಮೇಜ್ ಸರ್ಚ್ ವಿಧಾನದಲ್ಲಿ ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಾಟ ನಡೆಸಿದಾಗ, ಇದೇ ಪ್ರತಿಪಾದನೆಯೊಂದಿಗೆ ಹಲವರು ಇದೇ ವಿಡಿಯೊವನ್ನು ಪೋಸ್ಟ್ ಮಾಡಿರುವುದು ಕಂಡು ಬಂತು. ಇನ್ನಷ್ಟು ಹುಡುಕಿದಾಗ ಇಂಡಿಯಾ ಟುಡೆಯ ಅಧಿಕೃತ ಯೂಟ್ಯೂಬ್ ಚಾನೆಲ್‌ನಲ್ಲಿ ಅಪ್‌ಲೋಡ್ ಮಾಡಲಾದ ವಿಡಿಯೊ ಒಂದು ಸಿಕ್ಕಿತು. ಫೇಸ್‌ಬುಕ್ ಪೋಸ್ಟ್‌ನಲ್ಲಿ ಇರುವ ವಿಡಿಯೊವನ್ನೇ ಅದು ಹೋಲುತ್ತಿತ್ತು. ಕ್ರಿಕೆಟ್ ವಿಶ್ವಕಪ್ ವಿವಾದದ ಬಗ್ಗೆ ತರೂರು ಅವರು ಅದರಲ್ಲಿ ಹಿಂದಿಯಲ್ಲಿ ಮಾತನಾಡಿದ್ದರು. ಕ್ರೀಡೆಯಲ್ಲಿ ರಾಜಕೀಯವನ್ನು ಬೆರೆಸಬಾರದು ಎಂದು ಹೇಳಿದ್ದರು. ಆದರೆ, ಎಲ್ಲೂ ಅವರು ಪಾಕಿಸ್ತಾನವನ್ನು ಹೊಗಳಿರಲಿಲ್ಲ. ಅನುಮಾನ ಬಂದು ವಿಡಿಯೊದಲ್ಲಿರುವ ಧ್ವನಿಯನ್ನು ರಿಸೆಂಬಲ್ ಎಐ ಎಂಬ ಎಐ ಪತ್ತೆ ಟೂಲ್ ಬಳಸಿ ಪರಿಶೀಲಿಸಿದಾಗ ಅದು, ನಕಲಿ ಆಡಿಯೊ ಎಂಬುದು ದೃಢಪಟ್ಟಿತು. ತರೂರು ಅವರ ಮೂಲ ಧ್ವನಿಯನ್ನು ಎಐ ಮೂಲಕ ತಿರುಚಿ ವಿಡಿಯೊವನ್ನು ಪೋಸ್ಟ್ ಮಾಡಲಾಗಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನಿಜವಾದ ಸ್ನೇಹವೆಂದರೆ

ನುಡಿ ಬೆಳಗು — ದೀಪಾ ಹಿರೇಗುತ್ತಿ

ಒಮ್ಮೆ ಒಬ್ಬ ತಂದೆ ಮತ್ತು ಪುಟ್ಟ ಮಗಳು ಸೇತುವೆಯೊಂದನ್ನು ದಾಟುತ್ತಿರುತ್ತಾರೆ. ಆಗ ಅಪ್ಪ ಮಗಳ ಹತ್ತಿರ ತನ್ನ ಕೈ ಹಿಡಿದುಕೊಳ್ಳಲು ಹೇಳುತ್ತಾನೆ. ಆ ಪುಟ್ಟ ಮಗಳು 'ಅಪ್ಪಾ, ನೀನೇ ನನ್ನ ಕೈ ಹಿಡಿದುಕೋ' ಎನ್ನುತ್ತಾಳೆ. ಗೊಂದಲಗೊಂಡ ಅಪ್ಪ, 'ಎಲ್ಲ ಒಂದೇ ಅಲ್ಲವೇ' ಎನ್ನುತ್ತಾನೆ. ಆಗ ಅವಳು 'ನಾನು ನಿನ್ನ ಕೈ ಹಿಡಿದರೆ ಅಕಸ್ಮಾತ್ ಆಗಿ ಬಿಟ್ಟುಬಿಡಬಹುದು. ಆದರೆ ನೀನು ಯಾವ ಕಾರಣಕ್ಕೂ ಕೈ ಬಿಡುವುದಿಲ್ಲವಲ್ಲ' ಎನ್ನುತ್ತಾಳೆ. ಆ ಪುಟ್ಟ ಬಾಲೆಗೆ ಅಪ್ಪನ ಮೇಲಿರುವ ಭರವಸೆಯ ಮತ್ತೊಂದು ಹೆಸರೇ ಸ್ನೇಹ.

ಸ್ನೇಹಿತನೆಂದರೆ ಒರಗಿಕೊಳ್ಳಲು ಸದಾ ಇರುವ ಭರವಸೆಯ ಹೆಗಲು. ನಮ್ಮೆಲ್ಲ ನೋವುಗಳನ್ನು ಅಹವಾಲುಗಳನ್ನು ಆಲಿಸಲು ಯಾವತ್ತೂ ತೆರೆದಿರುವ ಕಿವಿ. ಸಾಂತ್ವನ ನೀಡುವ ಮಡಿಲು. ಮಹಾಭಾರತ ಯುದ್ಧದ ಸಂದರ್ಭದಲ್ಲಿ ಕೃಷ್ಣ ಬಂದು ಕರ್ಣನ ಹತ್ತಿರ 'ಮಾರಾಯ, ನೀನೇ ಹಿರಿಯ ಪಾಂಡವ, ಬಂದು ಸಿಂಹಾಸನದ ಮೇಲೆ ಕುಳಿತುಕೋ. ಪಾಂಡವರು ಮತ್ತು ಕೌರವರು ಇಬ್ಬರೂ ಆಗ ಸುಮ್ಮನಿರುತ್ತಾರೆ, ಯುದ್ಧವೂ ಆಗುವುದಿಲ್ಲ' ಎನ್ನುತ್ತಾನಷ್ಟೇ. ಆಗ ನ್ಯಾಯವಾಗಿಯೇ ಕೌರವನ ಹತ್ತಿರ ಹೋಗಿ, 'ಗಾಂಧಾರೀ ಪುತ್ರಾ, ಯುದ್ಧದ ತಲೆಬಿಸಿಯೇ ಬೇಡ ಬಿಡು. ನಾನೇ ಕುಂತಿಯ ಹಿರಿಯ ಮಗನಂತೆ. ರಾಜನಾಗು ಅಂತ ಕರೆಯುತ್ತಿದ್ದಾರೆ. ರಾಜ ನಾನಾದರೇನು ನೀನಾದರೇನು, ನೀನೂ ನನ್ನ ತಮ್ಮನೇ. ಆರಾಮಾಗಿ ರಾಜ್ಯವಾಳಿಕೊಂಡು ಇದ್ದುಬಿಡೋಣ ಎಂದು ಎರಡು ಕಡೆಯೂ ಒಳ್ಳೆಯವನಾಗಿದ್ದು ರಾಜನೂ ಆಗಿಬಿಡಬಹುದಾಗಿದ್ದ ಸುವರ್ಣಾವಕಾಶ ಕರ್ಣನಿಗಿತ್ತು. ಆದರೆ ಕರ್ಣ ಕೃಷ್ಣನಿಗೆ ಕೊಟ್ಟ ಉತ್ತರ ನಾವೆಲ್ಲ ನೆನಪಿಟ್ಟುಕೊಳ್ಳಬೇಕಾದದ್ದು. 'ಯುದ್ಧದಲ್ಲಿ ಸತ್ತರೂ ಪರವಾಗಿಲ್ಲ, ಸುಯೋಧನನ ಸ್ನೇಹಕ್ಕೆ ಎರಡು ಬಗೆಯುವುದಿಲ್ಲ' ಎಂದೇ ಹೇಳುತ್ತಾನೆ ಕರ್ಣ. ರಾಜ್ಯಲಕ್ಷ್ಮಿಯನ್ನು ಕಡೆಗಣ್ಣಿನಿಂದಲೂ ನೋಡದೇ ಮೃತ್ಯುವನ್ನು ಅಪ್ಪಿಕೊಂಡ ಕರ್ಣನದು ನಿಜವಾದ ಸ್ನೇಹ. ತನ್ನ ಹೆಂಡತಿಯ ಕುತ್ತಿಗೆಯ ಸರವನ್ನು ಎಳೆದು ಹರಿದುಹಾಕಿದ ಕರ್ಣನಿಗೆ 'ಕೆಳಗೆ ಬಿದ್ದ ಮುತ್ತುಗಳನ್ನು ಆಯ್ದುಕೊಡಲೇ ಗೆಳೆಯಾ?' ಎಂದ ಪ್ರಾಣಸ್ನೇಹಿತ ಕೌರವನೆಡೆ ಆತನ ನಿಷ್ಠೆ ಯೋಗ್ಯವೇ ಬಿಡಿ.

ಇದು ನಿಜವಾದ ಸ್ನೇಹ. ಅತ್ಯಂತ ದೊಡ್ಡ ನಟ ಯಾರು, ಜನಪ್ರಿಯ ಕ್ರಿಕೆಟಿಗ ಯಾರು ಎನ್ನುವ ಸಮೀಕ್ಷೆಗಳಂತೆ ಜಗತ್ತಿನಲ್ಲಿ ಅತ್ಯುತ್ತಮ ಸ್ನೇಹಿತರು ಯಾರು ಎಂಬ ಸಮೀಕ್ಷೆ ನಡೆದರೆ ಮೊದಲ ಸ್ಥಾನದಲ್ಲಿ ನಿಲ್ಲುವವರು ಕರ್ಣ ಮತ್ತು ದುರ್ಯೋಧನರೇ ಅನ್ನುವುದು ನನ್ನ ಅಭಿಪ್ರಾಯ. ಕಾರಣ ಜಗತ್ತಿನ ಎಲ್ಲ ಶಕ್ತಿಗಳು ಎದುರಾಗಿ ನಿಂತರೂ ನಿಮ್ಮ ಅತ್ಯುತ್ತಮ ಸ್ನೇಹಿತ ಎಂದಿಗೂ ನಿಮ್ಮ ಕೈಬಿಡುವುದಿಲ್ಲ.

ಇತ್ತೀಚಿನ ದಿನಗಳಲ್ಲಿ ವ್ಯವಹಾರದಲ್ಲಿ ಮೋಸ ಹೋಗಿ ನ್ಯಾಯಾಲಯದ, ಪೊಲೀಸ್ ಠಾಣೆಯ ಮೆಟ್ಟಿಲು ಹತ್ತುವವರು ಹೆಚ್ಚಾಗಿದ್ದಾರೆ. ದುರ್ದೈವವಶಾತ್ ಯಾರನ್ನು ಸ್ನೇಹಿತರೆಂದು ನಂಬಿರುತ್ತಾರೋ ಅಂಥವರಿಂದಲೇ ವಂಚನೆಗೊಳಗಾಗುವ ಪ್ರಸಂಗಗಳನ್ನು ಹೆಚ್ಚು ಹೆಚ್ಚು ನೋಡುತ್ತಿದ್ದೇವೆ. ಐಹಿಕ ಸುಖಗಳ ಬೆನ್ನು ಹತ್ತಿದ, ತತ್‌ಕ್ಷಣದ ಶ್ರೀಮಂತಿಕೆಯ ಕನಸು ಕಾಣುವ ಮೂರ್ಖ ಜನರು ತಮ್ಮನ್ನು ನಂಬಿದವರಿಗೆ ಮೋಸ ಮಾಡುತ್ತಿರುವುದನ್ನು ಕಾಣುತ್ತಿದ್ದೇವೆ. ವ್ಯಾವಹಾರಿಕ ದೃಷ್ಟಿಯಿಂದ ಬೆಳೆಸುವ ಸ್ನೇಹ ತನ್ನ ಉದ್ದೇಶ ಮುಗಿದ ಕೂಡಲೇ ಬಿಸಿಲು ಸೋಕಿದ ಮಂಜಿನ ಹನಿಯಂತೆ ಮಾಯವಾಗುವುದನ್ನು ಅನುಭವಿಸುತ್ತಿದ್ದೇವೆ. ಆದರೂ ತಮಾಷೆಯೆಂದರೆ ಸ್ನೇಹದ ಹೆಸರಿನ ಈ ಸ್ವಾರ್ಥ ಸಂಬಂಧವೇ ರಾರಾಜಿಸುತ್ತಿರುವುದಕ್ಕೆ ಸಾಕ್ಷಿಯೂ ಆಗಿದ್ದೇವೆ. ❖

ಗುಂಡಣ್ಣ



ಪದಬಂಧ 6318

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

5.ಕೊನೆಗೆ ಅಂತರ ಕಾಯ್ದುಕೊಂಡೇ ಮಾಡಿದ ತರ್ಜುಮೆ (4)
6.ಮಲಯದಲ್ಲಿರುವ ಶ್ರೀಗಂಧ (4)
7.ಯಮನಿದ್ದಾಗಿನ ಸೂತ್ರ (3)
10.ಜನರೊಳಗೆ ಕಾಣಿಸಿದ ಆಳು (3)
11.ಅಶ್ವದ ಮುಖವಿದು (5)
12.ಕಡ ಪಡೆದು ನೋಡುತ್ತಿರುವ ಸಮುದ್ರ (3)
13.ಕರದಿಂದ ಪ್ರಾರಂಭಿಸಿದ ಉತ್ಸವ (3)
15.ಕನ್ನ ಹಾಕಿ ಕದ್ದೊಯ್ದ ಚಾಳೀಸು (4)
17.ರಕ್ತ ವರ್ಣದ ಗುಲಾಬಿ (4)

ಮೇಲಿಂದ ಕೆಳಕ್ಕೆ

1.ಈಕೆ ನಿರ್ಭಾಗ್ಯ ಹೆಂಗಸು (4)
2.ದುಸ್ತರದಲ್ಲೇ ಮಡಿಕೆ ಇದೆ! (2)
3.ಸುಗಮವಾಗಿ ಕಿತ್ತಿರುವ ಹೂವು (2)
4.ಜಯವನ್ನು ಗಳಿಸಿರುವ ಒಡೆಯ (4)
8.ಭವ್ಯವಾದ ಸೌಧವಿದು (3)
9.ಕಳವಳಪಟ್ಟು ತಿಂದಿರುವ ತುತ್ತು (3)
10.ಸೀತೆಯ ತಂದೆ (3)
12.ಕರುವಿಗೆ ತೋರಿದ ದಯೆ (4)
14.ಎಲ್ಲೆಯ ಬಳಿ ತೋರಿದ ಅವಸರ (4)
16.ನೋಡುವ ಅಂಗ (2)
17.ಉರಿಯುತ್ತಿರುವ ಇದ್ದಿಲು (2)

6317ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಪರಿವಾರ 3.ಉಪವಾಸ
5.ಕರಡು 6.ಅನುಮತಿ
8.ತಾತಾ 9.ಉಪಾಯ
10.ವಧು 11.ವನವಾಸ
12.ಪತಂಗ 15.ನದೀತೀರ
16.ಪರದಾಟ

ಮೇಲಿಂದ ಕೆಳಕ್ಕೆ:

1.ಪತ್ನಿ 2.ವಾನರ
4.ಸದ್ಗತಿ 5.ಕರತಾಡನ
6.ಅಪಾಯ 7.ಮದುವಣಿಗ
9.ಉಬ್ಬಸ 11.ವದನ
13.ತಂಬೂರ 14.ಆಟ

ಸುಡೊಕು 6702

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	9			5			2	1
3		5			1		9	
	1			9				5
5		7			9	1		
	6			2			8	9
9		8	6			5		2
1		2		8			6	
			5		6	2		3
6		3		4			5	

6701 ಸುಡೊಕು

6	3	4	2	9	7	1	5	8
9	1	2	5	3	8	4	6	7
8	5	7	4	6	1	3	2	9
2	9	3	7	8	4	6	1	5
1	4	8	9	5	6	7	3	2
5	7	6	1	2	3	8	9	4
3	6	9	8	4	5	2	7	1
7	8	5	6	1	2	9	4	3
4	2	1	3	7	9	5	8	6

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

17 ಫೆಬ್ರುವರಿ 2026 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ಅಮಾವಾಸ್ಯೆ ಗಂ 17-31 ನಕ್ಷತ್ರ: ಧನಿಷ್ಠ ಗಂ. 21-16 ಯೋಗ: ಪರಿಘ ಗಂ. 24-29 ಕರಣ: ನಾಗ ಗಂ 17-31 ಕುಂಭ ಮಾಸದ 05 ನೇ ದಿನ. ಮಳೆ ನಕ್ಷತ್ರ : ಧನಿಷ್ಠ 4 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30, ಸೂರ್ಯೋದಯ : 06-56 ಸೂರ್ಯಾಸ್ತ : 06-33, ಮುಸ್ಲಿಂ ದಿನಾಂಕ : 28 ಶಬನ್, ಅದೃಷ್ಟ ಸಂಖ್ಯೆ : 6, 1

ಮೇಷ: ಉದ್ವೇಗ ಹಾಗೂ ಕೆಲ ವೈಮನಸ್ಸುಗಳು ತಂದೆಯ ತಿಳಿವಳಿಕೆ ನುಡಿಯಿಂದ ದೂರಾಗುವುದು. ಆರಿಸಿಕೊಂಡ ಮಾರ್ಗದಲ್ಲಿ ಸರಿ ಬಗ್ಗೆ ಯೋಚಿಸಿ ಏಕಾಗ್ರತೆಯಿಂದ ಮುನ್ನಡೆಯಿರಿ.

ವೃಷಭ: ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾದರೂ ಆತಂಕಕ್ಕೆ ಕಾರಣವಾಗಬೇಕಿಲ್ಲ. ಆಫೀಸಿನ ಕೆಲಸಗಳು ಬೇಗನೇ ಮುಗಿಸಿ. ಪರೀಕ್ಷಾ ಅಧಿಕಾರಿಗಳು ಕಚೇರಿಗೆ ಭೇಟಿ ನೀಡಿ ಕೆಲಸವನ್ನು ಪರೀಕ್ಷಿಸಬಹುದು.

ಮಿಥುನ: ಆಟಿಕೆಗಳ ಮಾರಾಟದವರಿಗೆ ಮತ್ತು ಉಡುಗೊರೆ ವಸ್ತುಗಳ ಮಾರಾಟಗಾರರಿಗೆ ಉತ್ತಮ ಮಾರಾಟ ಹಾಗೂ ಲಾಭವಿರುವುದು. ಉನ್ನತ ಶಿಕ್ಷಣದವರಿಗೆ ಕೀರ್ತಿ ಮತ್ತು ಸಾಮಾಜಿಕ ಗೌರವ ಪ್ರಾಪ್ತಿ.

ಕರ್ಕಾಟಕ: ನಿಯೋಜಿತ ಕೆಲಸಗಳನ್ನು ಉತ್ಸಾಹದಿಂದ ಮಾಡಿ ಮುಗಿಸುವಿರಿ. ಇನ್ನೊಂದು ಹೊಸ ಕೆಲಸ ನಿಮಗಾಗಿ ಕಾದಿರಲಿದೆ. ಮೇಧಾಕರ ದಕ್ಷಿಣಾ ಮೂರ್ತಿಯ ಆರಾಧನೆ ಸುಲಭವಾಗಿ ಯಶಸ್ಸಿನ ದಾರಿ ತೋರಿಸಲಿದೆ.

ಸಿಂಹ: ಭೂ ಖರೀದಿಯಂಥ ಅಥವಾ ಗೃಹ ನಿರ್ಮಾಣ ಕಾರ್ಯದಂಥ ಕನಸಿನ ಯೋಚನೆಗಳು ಕಾರ್ಯರೂಪಕ್ಕೆ ಬರಲಿವೆ. ಸಹಚರರಿಂದ ಅಥವಾ ಅಧಿಕಾರಿಗಳಿಂದ ಅಸಹಕಾರದ ಪರಿಸ್ಥಿತಿ ಎದುರಾಗಬಹುದು.

ಕನ್ಯಾ: ವಿಚಾರದ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳದೇ ಯಾವುದೇ ರೀತಿಯ ತೀರ್ಮಾನ ತೆಗೆದುಕೊಳ್ಳಬೇಡಿ. ಯಂತ್ರೋಪಕರಣಗಳ ಸಹಾಯದಿಂದ ಕೆಲಸ ಮಾಡುವ ವೇಳೆಯಲ್ಲಿ ಅಪಾಯ ಸಂಭವಿಸಬಹುದು.

ತುಲಾ: ಆತ್ಮೀಯರು ಹೇಳಿದ ಸಲಹೆ ಸೂಚನೆಗಳನ್ನು ಪಾಲಿಸಲಾಗದೇ ಬಿಡಲೂ ಆಗದೇ ಚಡಪಡಿಸುವ ಪರಿಸ್ಥಿತಿ ನಿಮ್ಮದಾಗುತ್ತದೆ. ನಿಮ್ಮ ಮೇಲುಸ್ತುವಾರಿಯಲ್ಲಿ ಕೆಲಸ ಕಾರ್ಯಗಳು ಸುಗಮವಾಗಿ ಸಾಗಲಿವೆ.

ವೃಶ್ಚಿಕ: ಸಾಹಸಪ್ರಿಯತೆ ಮನೋಭಾವವು ಆವರಿಸಲಿದ್ದು ಚಾರಣ ಅಥವಾ ಸವಾಲಿನ ಕೆಲಸಗಳನ್ನು ಮಾಡುವಿರಿ. ಕುಟುಂಬದಲ್ಲಿ ಉತ್ತಮ ವಾತಾವರಣ ವಿದ್ದು ಸಂತಸ ಹಾಗೂ ಸಮಾಧಾನ ತರಲಿದೆ.

ಧನು: ವಿಲಾಸೀ ವಸ್ತುಗಳ ಖರೀದಿ ಮಾಡುವ ಖರ್ಚು ವೆಚ್ಚಗಳಿಗೆ ಕಡಿವಾಣ ಹಾಕಲೇಬೇಕಾದ ಪರಿಸ್ಥಿತಿ ತೋರಲಿದೆ. ನಿಮ್ಮ ಸೇವಾ ಮನೋಭಾವಕ್ಕೆ ಕುಟುಂಬ ವರ್ಗದವರು ಉತ್ತಮ ರೀತಿಯಲ್ಲಿ ಸ್ಪಂದಿಸುತ್ತಾರೆ.

ಮಕರ: ಜೀವನದಲ್ಲಿ ಹಳೆಯ ಘಟನೆಗಳಿಂದ ಕಲಿತ ಪಾಠ ಉತ್ತಮ ತಿಳಿವಳಿಕೆಗೆ ಕಾರಣವಾಗುವುದು. ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯಲ್ಲಿ ಅನೇಕ ತರಹದ ಅವಕಾಶಗಳು ಒದಗಿ ಬರುತ್ತವೆ.

ಕುಂಭ: ಅಭಿಪ್ರಾಯಗಳು ಬೇರೆಯವರ ಆಲೋಚನೆಗೆ ಹೊಂದಿಕೊಳ್ಳುವುದು ಬಹಳ ಕಷ್ಟಕರ ಎನಿಸಲಿದೆ. ನಿಯೋಜಿತ ಕಾರ್ಯ ಕಲಾಪಕ್ಕೆ ಪುಟ್ಟ ಆತಂಕಗಳು ಎದುರಾಗಲಿವೆ.

ಮೀನ: ಮಕ್ಕಳ ವಿಷಯದಲ್ಲಿ ಸಂಯಮದೊಂದಿಗೆ ವರ್ತಿಸುವುದು ಉತ್ತಮ. ಸಂತೋಷವಾಗಿ ದಿನ ಕಳೆಯುವ ಹಾಗೆ ಆಗುವುದು. ವ್ಯವಹಾರಗಳಲ್ಲಿ ಉತ್ತಮ ಆದಾಯ ಇರುವುದು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,471
ಇಂದಿನ ಅಂತ್ಯ:	25,682
ದಿನದ ಗರಿಷ್ಠ:	25,697
	211

ಮೊಟ್ಟೆ ಧಾರಣೆ (ಎನ್‌ಇಸಿಸಿ)	
ಬೆಂಗಳೂರು	
100 ಕ್ಕೆ	₹590
12 ಕ್ಕೆ	₹85
ಮೈಸೂರು: 100 ಕ್ಕೆ	₹592

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹209
ಆರ್‌ಎಸ್‌ಎಸ್-5	₹203.50
ಗುಡ್ ಲಾಟ್	₹191.50

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹500-807
ದ್ವಿತಳಿ (ಬಿ.ವಿ)	₹465-1000

ಮುದ್ರೆಮನೆ ಕಾಫಿ	
ಎಪಿ	₹23650
ಎಸಿ	₹13000
ಆರ್‌ಪಿ	₹18400
ಆರ್‌ಸಿ	₹10175

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1760 (1780)
ಸೋಯಾ (ರಿಫೈನ್ಡ್)	₹1370 (1375)
ಸೂರ್ಯಕಾಂತಿ (ರಿಫೈನ್ಡ್)	₹1600 (1605)
ಪಾಮೋಲಿನ್	₹1300 (1295)

‘ಎ.ಐ ಬಳಕೆ–ಮುಂಚೂಣಿಯಲ್ಲಿ ಭಾರತ’

ಭಾರತ ಮಂಟಪದಲ್ಲಿ ಆರಂಭವಾದ ಶೃಂಗ • ಆರೋಗ್ಯ, ಶಿಕ್ಷಣ, ಕೃಷಿ, ಆಡಳಿತ, ಉದ್ಯಮ ಕ್ಷೇತ್ರಕ್ಕೆ ಒತ್ತು

ನರೇಂದ್ರ ಮೋದಿ

ನವದೆಹಲಿ (ಪಿಟಿಐ): ಕೃತಕ ಬುದ್ಧಿಮತ್ತೆ (ಎ.ಐ)ತಂತ್ರಜ್ಞಾನದ ಬಳಕೆಯಲ್ಲಿ ಭಾರತವು ಮುಂಚೂಣಿಯಲ್ಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹೇಳಿದ್ದಾರೆ.

ಎ.ಐ ಕ್ಷೇತ್ರದಲ್ಲಿ ಭಾರತವು ದಾಪುಗಾಲಿಡುತ್ತಿರುವುದು ದೇಶದ ಮಹತ್ವಾಕಾಂಕ್ಷೆ ಮತ್ತು ಹೊಣೆಗಾರಿಕೆಯನ್ನು ಪ್ರತಿಬಿಂಬಿಸುತ್ತದೆ ಎಂದಿದ್ದಾರೆ.

‘ಎ.ಐ ಕುರಿತ ಚರ್ಚೆಗಾಗಿ ಜಗತ್ತನ್ನು ಒಟ್ಟುಗೂಡಿಸಲಾಗಿದೆ. ಭಾರತವು ಶೃಂಗದ ಆತಿಥ್ಯ ವಹಿಸಿದೆ. ಜಾಗತಿಕ ನಾಯಕರು, ಕೈಗಾರಿಕೋದ್ಯಮಿಗಳು, ನೀತಿ ನಿರೂಪಕರು, ಸಂಶೋಧಕರು ಮತ್ತು ತಂತ್ರಜ್ಞಾನ ಆಸಕ್ತರಿಗೆ ಸ್ವಾಗತ’ ಎಂದು ‘ಎಕ್ಸ್’ನಲ್ಲಿ ಮೋದಿ ಹೇಳಿದ್ದಾರೆ.

‘ಸರ್ವಜನ ಹಿತಾಯ, ಸರ್ವಜನ ಸುಖಾಯ’ ಎಂಬ ಧ್ಯೇಯವಾಕ್ಯದಡಿಯಲ್ಲಿ ಶೃಂಗವನ್ನು ಆಯೋಜಿಸಲಾಗಿದೆ. ಇದು ಮಾನವ ಕೇಂದ್ರಿತ ಪ್ರಗತಿಗಾಗಿ ಎ.ಐ ಬಳಕೆ ಮಾಡುವ ನಮ್ಮೆಲ್ಲರ ಬದ್ಧತೆಯ ಸಂಕೇತ’ ಎಂದಿದ್ದಾರೆ.

‘ಆರೋಗ್ಯ, ಶಿಕ್ಷಣ, ಕೃಷಿ ಮತ್ತು ಆಡಳಿತ ಮತ್ತು ಉದ್ಯಮ ಕ್ಷೇತ್ರಗಳು ಎ.ಐನಿಂದಾಗಿ ಸ್ಥಿತ್ಯಂತರಗೊಳ್ಳುತ್ತಿವೆ. ಎ.ಐ ಶೃಂಗದ ನಿರ್ಣಯಗಳು ಭವಿಷ್ಯವನ್ನು ರೂಪಿಸಲಿದೆ ಎಂಬ ವಿಶ್ವಾಸವಿದೆ’ ಎಂದು ಹೇಳಿದ್ದಾರೆ.

ಸೆಮಿಕಂಡಕ್ಟರ್: ಶೀಘ್ರ ತಯಾರಿಕೆ

‘ಭಾರತದ ಸೆಮಿಕಂಡಕ್ಟರ್ ಅಭಿಯಾನದ (ಐಎಸ್‌ಎಂ 1.0) ಅಡಿಯಲ್ಲಿ ಅನುಮೋದನೆಗೊಂಡಿರುವ 10 ಯೋಜನೆಗಳ ಪೈಕಿ ಮೊದಲ ಯೋಜನೆಯ ವಾಣಿಜ್ಯ ತಯಾರಿಕೆಯು ಫೆಬ್ರುವರಿ ಅಂತ್ಯದ ವೇಳೆ ಆರಂಭಗೊಳ್ಳಲಿದೆ’ ಎಂದು ಕೇಂದ್ರ ಮಾಹಿತಿ ಮತ್ತು ತಂತ್ರಜ್ಞಾನ ಸಚಿವಾಲಯದ ಕಾರ್ಯದರ್ಶಿ ಎಸ್.ಕೃಷ್ಣನ್ ಸೋಮವಾರ ಹೇಳಿದ್ದಾರೆ.

ಇಲ್ಲಿ ನಡೆಯುತ್ತಿರುವ ಕೃತಕ ಬುದ್ಧಿಮತ್ತೆ ಶೃಂಗದಲ್ಲಿ ಮಾತನಾಡಿರುವ ಕೃಷ್ಣನ್, ಸೆಮಿಕಂಡಕ್ಟರ್ ಉತ್ಪಾದನಾ ಸಂಸ್ಥೆ ಮೈಕ್ರಾನ್, ಚಿಪ್‌ಗಳ ಉತ್ಪಾದನೆ ಆರಂಭಿಸಲಿದೆ. ಮೊದಲ ಹಂತದಲ್ಲಿ ಎಐ ಪ್ರಕ್ರಿಯೆ ಕ್ಷಿಪ್ರಗೊಳಿಸುವಲ್ಲಿ ನಿರ್ಣಾಯಕ ಪಾತ್ರವಹಿಸುವ ಹೈ-ಬ್ಯಾಂಡ್‌ವಿಡ್ತ್ ಮೆಮೊರಿ (ಎಚ್‌ಬಿಎಂ) ಚಿಪ್‌ಗಳ ಉತ್ಪಾದನೆಯತ್ತ ಗಮನಹರಿಸಲಿದೆ ಎಂದಿದ್ದಾರೆ.

> **ಭಾರತದಲ್ಲಿ ಉತ್ತಮ ಡಿಜಿಟಲ್ ಮೂಲಸೌಕರ್ಯವಿದೆ, ಪ್ರತಿಭಾನ್ವಿತರಿದ್ದಾರೆ. ಹೀಗಾಗಿ ಎಐ ಕ್ಷೇತ್ರದಲ್ಲಿ ಸಾಧಿಸಲು ಇಲ್ಲಿ ವಿಪುಲವಾದ ಅವಕಾಶಗಳಿವೆ**
> **ಇವಾನಾ ಬಾರ್ಟೋಲೆಟ್ಟಿ,** ಎಐ ಗವರ್ನೆನ್ಸ್ ಆಫೀಸರ್, ವಿಪ್ರೊ

> **ಎಐ ಕ್ಷೇತ್ರದಲ್ಲಿನ ಭಾರತ– ಅಮೆರಿಕ ಪಾಲುದಾರಿಕೆಯು ಆರೋಗ್ಯ, ಶಿಕ್ಷಣ, ಉದ್ಯೋಗ ತರಬೇತಿ, ಡಿಜಿಟಲ್ ಸಾಕ್ಷರತೆ ವಲಯಗಳಲ್ಲಿ ಅಸಾಧಾರಣ ಅವಕಾಶಗಳನ್ನು ಸೃಷ್ಟಿಸಲಿದೆ**
> **ಬಿಪುಲ್ ಸಿನ್ಹಾ,** ರುಬ್ರಿಕ್ ಸಿಇಒ

‘ಮಕ್ಕಳ ಮಾಹಿತಿ, ಗೋಪ್ಯತೆ ರಕ್ಷಿಸಿ’

ನವದೆಹಲಿ: ‘ಕೃತಕ ಬುದ್ಧಿಮತ್ತೆಗೆ ಸಂಬಂಧಿಸಿದ ಸರ್ಕಾರಿ ನಿಯಮ, ಕಾನೂನು ಮತ್ತು ನೀತಿಗಳನ್ನು ರೂಪಿಸುವಾಗ ಮಕ್ಕಳ ಹಕ್ಕುಗಳ ಮೇಲೆ ಅವು ಬೀರುವ ಪರಿಣಾಮಗಳನ್ನು ಕಡ್ಡಾಯವಾಗಿ ಪರಿಶೀಲಿಸಬೇಕು. ಮಕ್ಕಳ ಮಾಹಿತಿ ಮತ್ತು ಅವರ ಗೋಪ್ಯತೆಯನ್ನು ರಕ್ಷಿಸುವುದು ಅತ್ಯಗತ್ಯ’ ಎಂದು ಯುನಿಸೆಫ್‌ನ ‘ಎಐ ಮತ್ತು ಮಕ್ಕಳ 3.0’ ಮಾರ್ಗಸೂಚಿ ಹೇಳಿದೆ. ಎಐ ಶೃಂಗಸಭೆಯಲ್ಲಿ ಆಯೋಜಿಸಿದ್ದ ಗೋಷ್ಠಿಯಲ್ಲಿ ಈ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಲಾಯಿತು.

ಎ.ಐ ನೆರವಿನೊಂದಿಗೆ ಕೃಷಿ: ಕರ್ನಾಟಕದಲ್ಲಿ ₹214 ಕೋಟಿ ಹೂಡಿಕೆ

ರಾಜ್ಯದಲ್ಲಿ ಬೆಳೆಬಾಳುವ ಮಸಾಲೆಗಳು ಮತ್ತು ಔಷಧೀಯ ಸಸ್ಯಗಳನ್ನು ಬೆಳೆಯಲು ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನಗಳನ್ನು ಒಳಗೊಂಡ ಹೈಡ್ರೋಪೋನಿಕ್ ಕೃಷಿಯಲ್ಲಿ ₹214 ಕೋಟಿಗಳನ್ನು ಹೂಡಿಕೆ ಮಾಡಲು ಉದ್ಯಮಿಯೊಬ್ಬರು ಮುಂದೆ ಬಂದಿದ್ದಾರೆ.

ಮಂಗಳೂರಿನ ಪನಾಮ ಹೈಡ್ರೋ-ಎಕ್ಸ್‌ನ ಸ್ಥಾಪಕ ಮತ್ತು ಸಿಇಒ ವಿವೇಕ್ ರಾಜ್ ಈ ಸಾಹಸವನ್ನು ಮಾಡುತ್ತಿರುವ ಉದ್ಯಮಿ. ಅವರ ಕಂಪನಿಯು ಹಲವಾರು ವರ್ಷಗಳಿಂದ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ₹146 ಕೋಟಿಗಳನ್ನು ಖರ್ಚು ಮಾಡಿದ್ದು, ಅದರೊಂದಿಗೆ ನಾಲ್ಕು ಪೇಟೆಂಟ್ ಪಡೆದ ಕೃತಕ ಬುದ್ಧಿಮತ್ತೆ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿದೆ.

ಈ ತಂತ್ರಜ್ಞಾನದಲ್ಲಿ ಭೌತಿಕವಾಗಿ ಲಕ್ಷಣಗಳು ಕಾಣಿಸಿಕೊಳ್ಳುವ ಮೊದಲೇ ಬೆಳೆಗಳ ರೋಗಗಳನ್ನು ಪತ್ತೆಹಚ್ಚುವ ಮತ್ತು ದ್ಯುತಿ ಸಂಶ್ಲೇಷಣೆಗಾಗಿ ಅತ್ಯುತ್ತಮವಾದ ಕೃತಕ ಬೆಳಕನ್ನು ಒದಗಿಸುವ ವ್ಯವಸ್ಥೆ ಇರಲಿವೆ ಎಂದು ಎಐ ಇಂಪ್ಯಾಕ್ಟ್ ಶೃಂಗಸಭೆ 2026ಕ್ಕೆ ಬಂದಿದ್ದ ವಿವೇಕ್ ಹೇಳಿದ್ದಾರೆ.

ದಶಕದ ಹಿಂದೆ ಬರಗಾಲದಿಂದ ತಮ್ಮ ಬೆಳೆಯನ್ನು ಸಂಪೂರ್ಣವಾಗಿ ವಿವೇಕ್ ಕಳೆದುಕೊಂಡಿದ್ದರು.

ಕಂಪನಿಯು ರಾಜ್ಯದ ಮೂಡಬಿದಿರೆಯಲ್ಲಿ 16 ಎಕರೆ ಕೃಷಿ ಭೂಮಿಯನ್ನು ಹೊಂದಿದ್ದು, 2026ರ ಅಂತ್ಯದ ವೇಳೆಗೆ ಅಲ್ಲಿ ಹೈಡ್ರೋಪೋನಿಕ್ ಕೃಷಿಗೆ ಬೇಕಾದ ಮೂಲಸೌಕರ್ಯ ನಿರ್ಮಾಣವಾಗಲಿದೆ. 2027ರ ಜೂನ್ ವೇಳೆ ವಾಣಿಜ್ಯ ಕೊಯ್ಲನ್ನು ನಿರೀಕ್ಷಿಸಲಾಗಿದೆ.

> **ನಮ್ಮ ಎಐ ತಂತ್ರಜ್ಞಾನಗಳಿಗೆ ಯುನೈಟೆಡ್ ಕಿಂಗ್‌ಡಮ್ ಮತ್ತು ಆಸ್ಟ್ರೇಲಿಯಾದಿಂದ ಪೇಟೆಂಟ್‌ಗಳನ್ನು ಪಡೆದುಕೊಂಡಿದ್ದೇವೆ. ನಾವು ಇದನ್ನು ದೊಡ್ಡ ಪ್ರಮಾಣದಲ್ಲಿ ಅನುಷ್ಠಾನ ಮಾಡುತ್ತಿದ್ದೇವೆ**
> **ವಿವೇಕ್ ರಾಜ್,** ಪನಾಮ ಹೈಡ್ರೋ–ಎಕ್ಸ್‌ನ ಸ್ಥಾಪಕ ಮತ್ತು ಸಿಇಒ

ಎ.ಐ ಶೃಂಗವು ಮಹತ್ವದ್ದಾಗಿದೆ: ಬ್ರಿಟನ್ ಉಪಪ್ರಧಾನಿ

ಲಂಡನ್ (ಪಿಟಿಐ): ಕೃತಕಬುದ್ಧಿಮತ್ತೆ (ಎ.ಐ) ತಂತ್ರಜ್ಞಾನವು ಬೆಳವಣಿಗೆ ಮೇಲೆ ಹೇಗೆ ಪರಿಣಾಮ ಬೀರಲಿದೆ, ಉದ್ಯೋಗಾವಕಾಶಗಳನ್ನು ಹೇಗೆ ಸೃಷ್ಟಿಸಲಿದೆ, ಸಾರ್ವಜನಿಕ ಸೇವೆಗಳನ್ನು ಹೇಗೆ ಸುಧಾರಿಸಲಿದೆ ಮತ್ತು ಜಗತ್ತಿನಾದ್ಯಂತ ಜನರಿಗೆ ಯಾವ ರೀತಿ ಅನುಕೂಲ ಕಲ್ಪಿಸಲಿದೆ ಎಂಬುದರತ್ತ ಎಐ ಶೃಂಗದಲ್ಲಿ ಬ್ರಿಟನ್ ಗಮನಹರಿಸಲಿದೆ ಎಂದು ಬ್ರಿಟನ್ ಸರ್ಕಾರ ಹೇಳಿದೆ.

ದೆಹಲಿಯಲ್ಲಿ ಸೋಮವಾರದಿಂದ ಎಐ ಶೃಂಗಸಭೆ ಆರಂಭಗೊಂಡಿದ್ದು, ಉಪ ಪ್ರಧಾನಿ ಡೇವಿಡ್ ಲ್ಯಾಮಿ ಮತ್ತು ಎ.ಐ ಸಚಿವ ಕನಿಷ್ಕಾ ನಾರಾಯಣ್ ನೇತೃತ್ವದ ಬ್ರಿಟನ್ ನಿಯೋಗವು ಭಾಗಿಯಾಗಿದೆ. ಜಗತ್ತಿನ ಮೂಲೆಮೂಲೆಯ ಜನರ ಜೀವನವನ್ನು ಎಐ ಹೇಗೆ ಸುಧಾರಿಸಬಹುದು ಎಂಬ ಬಗ್ಗೆ ಚರ್ಚೆಗೆ ಚಿಂತನೆ ನಡೆಸಿದೆ.

ಶೃಂಗಕ್ಕೂ ಮುನ್ನ ಮಾತನಾಡಿದ ಲ್ಯಾಮಿ ಅವರು, ‘ಈ ಶೃಂಗಸಭೆಯು ಮಹತ್ವದ್ದಾಗಿದ್ದು, ಎ.ಐ ತಂತ್ರಜ್ಞಾನವನ್ನು ಸದುಪಯೋಗಿಸಿಕೊಂಡು, ಅಂತರರಾಷ್ಟ್ರೀಯ ಪಾಲುದಾರರೊಂದಿಗೆ ಹೇಗೆ ಕೆಲಸ ಮಾಡಬಹುದು ಎಂದು ತೀರ್ಮಾನಿಸಬಹುದಾಗಿದೆ’ ಎಂದರು.

ವಿಜ್ಞಾನ, ನಾವೀನ್ಯ ಮತ್ತು ತಂತ್ರಜ್ಞಾನ ಇಲಾಖೆಯು, ‘ಭಾರತ–ಬ್ರಿಟನ್ ಸ್ವಾಭಾವಿಕ ತಂತ್ರಜ್ಞಾನ ಪಾಲುದಾರ ರಾಷ್ಟ್ರಗಳು. ಇನ್ಫೊಸಿಸ್, ಟಾಟಾ ಕನ್ಸಲ್‌ಟೆನ್ಸಿ ಸರ್ವಿಸಸ್ ಮತ್ತು ವಿಪ್ರೊದಂತ ದೈತ್ಯ ಸಂಸ್ಥೆಗಳು ಬ್ರಿಟನ್‌ನಲ್ಲೂ ತಮ್ಮ ಕಬಂಧಬಾಹುವನ್ನು ಚಾಚಿವೆ’ ಎಂದು ಹೇಳಿದೆ.

ಸುದ್ದಿ 2 ನಿಮಿಷ

ಸೆನ್ಸೆಕ್ಸ್ 650 ಅಂಶ ಏರಿಕೆ

ಮುಂಬೈ (ಪಿಟಿಐ): ಇಂಧನ, ಬ್ಯಾಂಕಿಂಗ್ ಮತ್ತು ಹಣಕಾಸು ಕಂಪನಿಗಳ ಷೇರುಗಳ ಖರೀದಿ ಹೆಚ್ಚಳದಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಏರಿಕೆ ಕಂಡಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 650 ಅಂಶ ಹೆಚ್ಚಳವಾಗಿ, 83,277ಕ್ಕೆ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 211 ಅಂಶ ಏರಿಕೆಯಾಗಿ, 25,682ಕ್ಕೆ ಕೊನೆಗೊಂಡಿದೆ.

‘ಬ್ಯಾಂಕ್‌ಗಳ ಸಾಲ ನೀಡಿಕೆ ಪ್ರಮಾಣದಲ್ಲಿ ಸುಧಾರಣೆ ಆಗಿದೆ ಮತ್ತು ಬ್ಯಾಂಕ್‌ಗಳ ಆಸ್ತಿ ಗುಣಮಟ್ಟವು ಉತ್ತಮವಾಗಿದೆ. ಇದು ಷೇರುಪೇಟೆ ಸೂಚ್ಯಂಕಗಳ ಏರಿಕೆಗೆ ನೆರವಾದವು’ ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.



ರೂಪಾಯಿ ಮೌಲ್ಯ ಮತ್ತು ಕಚ್ಚಾ ತೈಲದ ದರ ಸ್ಥಿರವಾಗಿರುವುದು ಸಹ ಸೂಚ್ಯಂಕಗಳ ಏರಿಕೆಗೆ ಕಾರಣವಾದವು ಎಂದು ತಿಳಿಸಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.24ರಷ್ಟು ಇಳಿಕೆ ಆಗಿದೆ. ಪ್ರತೀ ಬ್ಯಾರೆಲ್ ದರವು 67.59 ಡಾಲರ್ ಆಗಿದೆ.

ಸಗಟು ಹಣದುಬ್ಬರ ಹೆಚ್ಚಳ

ನವದೆಹಲಿ (ಪಿಟಿಐ): ಜನವರಿಯಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೇ 1.81ರಷ್ಟು ಆಗಿದೆ. ಇದರಿಂದಾಗಿ ಸಗಟು ಹಣದುಬ್ಬರ ಪ್ರಮಾಣವು ಸತತ ಮೂರು ತಿಂಗಳಿನಿಂದ ಏರುಗತಿಯಲ್ಲಿ ಇದ್ದಂತಾಗಿದೆ.

ಆಹಾರ ಹಾಗೂ ಆಹಾರೇತರ ಉತ್ಪನ್ನಗಳು, ತಯಾರಿಸಿದ ಉತ್ಪನ್ನಗಳ ಬೆಲೆ ಏರಿಕೆಯು ಈ ಹೆಚ್ಚಳಕ್ಕೆ ಕಾರಣವಾಗಿದೆ.

ಹಿಂದಿನ ವರ್ಷದ ಜನವರಿಯಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೇ 2.51ರಷ್ಟು ಇತ್ತು. ಡಿಸೆಂಬರ್‌ನಲ್ಲಿ ಇದು ಶೇ 0.83ರಷ್ಟು ಆಗಿತ್ತು.

ಜನವರಿಯಲ್ಲಿ ತರಕಾರಿಗಳ ಸಗಟು ಬೆಲೆಯು ಶೇ 6.78ರಷ್ಟು ಹೆಚ್ಚಾಗಿದೆ. ಡಿಸೆಂಬರ್‌ನಲ್ಲಿ ಇದರ ಬೆಲೆಯು ಶೇ 3.50ರಷ್ಟು ಕಡಿಮೆ ಆಗಿತ್ತು.

ಆರ್‌ಬಿಐ ತನ್ನ ರೆಪೊ ದರದ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಾಗ ಚಿಲ್ಲರೆ ಹಣದುಬ್ಬರ ದರವನ್ನು ಪರಿಗಣನೆಗೆ ತೆಗೆದುಕೊಳ್ಳುತ್ತದೆ.

ಅಡಿಕೆ ಧಾರಣೆ

ಕುಮಟಾ		ಶಿವಮೊಗ್ಗ		ಶಿರಸಿ	
ಚಾಲಿ	44298-49540	ಬೆಟ್ಟೆ	50300-66200	ಬೆಟ್ಟೆ	42250-54299
ಪುತ್ತೂರು		ಗೊರಬಲು	19050-43869	ಬಿಳಿಗೋಟು	23700-43509
ಕೋಕ	28000-37000	ರಾಶಿ	46689-57989	ಚಾಲಿ	44350-49119
ಹೊಸತು	26000-48000	ಸರಕು	65420-95550	ಕೆಂಪುಗೋಟು	25900-38199
ಹಳತು	50000-55000	**ಸಿದ್ದಾಪುರ**		ರಾಶಿ	48809-57699
ಸಾಗರ		ಬಿಳಿಗೋಟು	27689-40709	**ಯಲ್ಲಾಪುರ**	
ಬಿಳಿಗೋಟು	20427-36214	ಚಾಲಿ	43899-49619	ಆಪಿ	64699-64699
ಚಾಲಿ	31009-45299	ಕೋಕ	22049-36109	ಬಿಳಿಗೋಟು	24899-41101
ಕೋಕ	12799-35099	ಹೊಸಚಾಲಿ	42599-47889	ಚಾಲಿ	42500-50278
ಕೆಂಪುಗೋಟು	32999-42989	ಕೆಂಪುಗೋಟು	32689-35609	ಕೋಕ	16109-32899
ರಾಶಿ	46199-56199	ರಾಶಿ	48099-55399	ಕೆಂಪುಗೋಟು	21651-39806
ಸಿಪ್ಪೆಗೋಟು	15099-24599	ತಟ್ಟಿಬೆಟ್ಟೆ	38049-51099	ರಾಶಿ	50599-63975
				ತಟ್ಟಿಬೆಟ್ಟೆ	40506-52859

ಮುಂಬೈ ಧಾರಣೆ (ಶೇಂಗಾ)

16-02-2026	
ಜಾವಾ 70/80(ಹೊಸ)	11500-11600
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ (ಹೊಸ)	8500-8600
ದಪ್ಪ ಗುಜರಾತ್ (ಹೊಸ)	9800-9900
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1770 (1780)
ಒಂದು ವಾರದ ಡೆಲಿವರಿ	1765 (1775)
ಪಾಮ್ ವಾರದ ಡೆಲಿವರಿ	1298 (1293)
ಸೂರ್ಯಕಾಂತಿ ಎಣ್ಣೆ ಕಚ್ಚಾ	1500 (1510)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,53,300 (1,54,800)
ಬೆಳ್ಳಿ ಕೆ.ಜಿಗೆ	2,40,600 (2,42,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹20000-20000
ದಾವಣಗೆರೆ	₹12000-12000
ಶಿರಸಿ	₹8057-8355
ತಿಪಟೂರು	₹29000-30285
ತುರುವೇಕೆರೆ	₹29000-29500

ಈರುಳ್ಳಿ ಧಾರಣೆ

ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1400-2100
ಮಧ್ಯಮ	₹800-1400
ಸಣ್ಣ	₹400-800

ನಿರುದ್ಯೋಗ ತುಸು ಏರಿಕೆ

ನವದೆಹಲಿ (ಪಿಟಿಐ): ಜನವರಿ ತಿಂಗಳಿನಲ್ಲಿ ದೇಶದಲ್ಲಿ ನಿರುದ್ಯೋಗ ದರವು ಅಲ್ಪ ಏರಿಕೆ ಕಂಡಿದೆ ಎಂದು ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯದ ಮಾಸಿಕ ಸಮೀಕ್ಷೆ ಸೋಮವಾರ ತಿಳಿಸಿದೆ.

15 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನವರ ನಿರುದ್ಯೋಗ ಪ್ರಮಾಣವು 2025ರ ಡಿಸೆಂಬರ್‌ನಲ್ಲಿ ಶೇ 4.8ರಷ್ಟಿತ್ತು. ಇದು ಪ್ರಸಕ್ತ ವರ್ಷದ ಜನವರಿಯಲ್ಲಿ ಶೇ 5ಕ್ಕೆ ಹೆಚ್ಚಳವಾಗಿದೆ.

ಜನವರಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗ ಪ್ರಮಾಣವು ಶೇ 3.9ರಿಂದ ಶೇ 4.2ಕ್ಕೆ ಏರಿಕೆಯಾಗಿದೆ. ನಗರ ಪ್ರದೇಶಗಳಲ್ಲಿ ಇದು ಶೇ 6.7ರಿಂದ ಶೇ 7ಕ್ಕೆ ಹೆಚ್ಚಳ ಕಂಡಿದೆ ಎಂದು ಸಚಿವಾಲಯ ಹೇಳಿದೆ.

ನಿರ್ಮಾಣ, ಕೃಷಿ ಸಂಬಂಧಿತ ಕೆಲಸಗಳು, ಸಾರಿಗೆ, ಸಣ್ಣ ವ್ಯಾಪಾರ ಸೇರಿದಂತೆ ಹಲವು ಚಟುವಟಿಕೆಗಳು ಚಳಿಗಾಲದಲ್ಲಿ ನಿಧಾನಗೊಂಡವು. ಇದು ನಿರುದ್ಯೋಗ ಪ್ರಮಾಣ ಹೆಚ್ಚಳಕ್ಕೆ ಕಾರಣ ಎಂದು ತಿಳಿಸಿದೆ.

ಇಂದಿನಿಂದ ಮ್ಯಾಕ್ರನ್ ಭಾರತ ಪ್ರವಾಸ

ನವದೆಹಲಿ (ಪಿಟಿಐ): ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುವೆಲ್ ಮ್ಯಾಕ್ರನ್ ಅವರ ಮೂರು ದಿನಗಳ ಭಾರತ ಪ್ರವಾಸ ಮಂಗಳವಾರದಿಂದ ಆರಂಭವಾಗಲಿದೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಮ್ಯಾಕ್ರನ್ ಅವರ ನಡುವೆ ಮುಂಬೈನಲ್ಲಿ ದ್ವಿಪಕ್ಷೀಯ ಮಾತುಕತೆ ಮಂಗಳವಾರ ನಡೆಯಲಿದೆ. ಈ ವೇಳೆ ಇಬ್ಬರೂ ನಾಯಕರು, ಭಾರತ– ಫ್ರಾನ್ಸ್ ನಡುವಿನ ಕಾರ್ಯತಂತ್ರ ಪಾಲುಗಾರಿಕೆಯ ಪ್ರಗತಿ ಕುರಿತು ಚರ್ಚಿಸಲಿದ್ದಾರೆ.

ಮೋದಿ ಅವರ ಆಹ್ವಾನದ ಮೇರೆಗೆ ಮ್ಯಾಕ್ರನ್ ಅವರು ಎಐ ಶೃಂಗದಲ್ಲೂ ಭಾಗವಹಿಸಲಿದ್ದಾರೆ. ಮುಂಬೈ ನಲ್ಲಿ ಎರಡು ದೇಶಗಳ ನಡುವೆ ದ್ವಿಪಕ್ಷೀಯ ಶೃಂಗವೂ ನಡೆಯಲಿದೆ. ಈ ವೇಳೆ ಕೆಲ ಮಹತ್ವದ ಒಡಂಬಡಿಕೆಗಳಿಗೆ ಸಹಿ ಬೀಳಲಿದೆ ಎಂದು ಮೂಲಗಳು ತಿಳಿಸಿವೆ.

ಬಾಸ್ಟನ್ ಕನ್ಸಲ್ಟಿಂಗ್ ಗ್ರೂಪ್– ಭಾರತೀಯ ರಿಟೇಲ್ ವ್ಯಾಪಾರಿಗಳ ಸಂಘದ ವರದಿ

ರಿಟೇಲ್ ಮಾರುಕಟ್ಟೆ ಮೌಲ್ಯ ₹215 ಲಕ್ಷ ಕೋಟಿ

ಮುಂಬೈ (ಪಿಟಿಐ): ‘2035ರ ವೇಳೆಗೆ ದೇಶದ ರಿಟೇಲ್ ಮಾರುಕಟ್ಟೆಯ ಗಾತ್ರವು ಗರಿಷ್ಠ ₹215 ಲಕ್ಷ ಕೋಟಿಯಷ್ಟಾಗುವ ನಿರೀಕ್ಷೆ ಇದೆ’ ಎಂದು ಬಾಸ್ಟನ್ ಕನ್ಸಲ್ಟಿಂಗ್ ಗ್ರೂಪ್ (ಬಿಸಿಜಿ) ಮತ್ತು ಭಾರತೀಯ ರಿಟೇಲ್ ವ್ಯಾಪಾರಿಗಳ ಸಂಘ (ಆರ್‌ಎಐ) ಸಿದ್ಧಪಡಿಸಿದ ಜಂಟಿ ವರದಿ ತಿಳಿಸಿದೆ.

ಈಗ ದೇಶದ ರಿಟೇಲ್ ಮಾರುಕಟ್ಟೆಯ ಗಾತ್ರ ₹90 ಲಕ್ಷ ಕೋಟಿಯಿಂದ ₹95 ಲಕ್ಷ ಕೋಟಿಯಷ್ಟು ಇದೆ ಎಂದು ರಿಟೇಲ್ ನಾಯಕತ್ವ ಶೃಂಗದಲ್ಲಿ ಬಿಡುಗಡೆ ಆಗಿರುವ ವರದಿಯು ಹೇಳಿದೆ.

> **ಗ್ರಾಹಕರ ಬೇಡಿಕೆಯಲ್ಲಿ ಬದಲಾವಣೆ ಆಗಿದೆ. ಗ್ರಾಹಕರು ಹೆಚ್ಚು ಜಾಗೃತರಾಗುತ್ತಿದ್ದಾರೆ ಮತ್ತು ರಿಟೇಲ್ ವ್ಯಾಪಾರಿಗಳು ಹೊಸತನವನ್ನು ಕಂಡುಕೊಳ್ಳುತ್ತಿದ್ದಾರೆ**
> **ಕುಮಾರ್ ರಾಜಗೋಪಾಲನ್,** ಆರ್‌ಎಐ ಸಿಇಒ

ದೇಶವು ಜಗತ್ತಿನ ಪ್ರಮುಖ ಆರ್ಥಿಕತೆಗಳನ್ನು ಮೀರಿಸುತ್ತಿದ್ದು, ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗುವ ಹಾದಿಯಲ್ಲಿದೆ. ಶಿಸ್ತುಬದ್ಧ ಕಾರ್ಯಾಚರಣೆ ಮತ್ತು ಎ.ಐ ಆಧರಿತ ಪರಿವರ್ತನೆಯನ್ನು ಅಳವಡಿಸಿಕೊಳ್ಳುವವರಿಗೆ ಯಶಸ್ಸು ದಕ್ಕುತ್ತದೆ ಎಂದು ತಿಳಿಸಿದೆ.

ಗ್ರಾಹಕರ ಜೊತೆಗಿನ ಸಂಬಂಧದಲ್ಲಿ, ಕಾರ್ಯಾಚರಣೆ ಮಾದರಿಗಳಲ್ಲಿ, ಪ್ರತಿಭೆಯನ್ನು ಬಳಸಿಕೊಳ್ಳುವಲ್ಲಿ ಆಗುವ ಬದಲಾವಣೆಗಳನ್ನು ಒಪ್ಪಿಕೊಳ್ಳುವ ರಿಟೇಲ್ ವ್ಯಾಪಾರಿಗಳು ಅಪಾರ ಪ್ರಮಾಣದ ಪ್ರಯೋಜನ ತಮ್ಮದಾಗಿಸಿಕೊಳ್ಳುತ್ತಾರೆ ಎಂದು ವರದಿ ವಿವರಿಸಿದೆ.

‘ಭಾರತದ ರಿಟೇಲ್ ಮಾರುಕಟ್ಟೆಯು ಬಹಳ ಸ್ಫೂರ್ತಿದಾಯಕವಾಗಿದೆ. ಮುಂದಿನ ದಶಕದ ಅವಧಿಯಲ್ಲಿ ದೇಶದ ರಿಟೇಲ್ ಮಾರುಕಟ್ಟೆ ವಲಯದ ಗಾತ್ರವು ₹200 ಲಕ್ಷ ಕೋಟಿಯಷ್ಟು ಆಗಲಿದೆ’ ಎಂದು ಬಿಸಿಜಿ ವ್ಯವಸ್ಥಾಪಕ ನಿರ್ದೇಶಕ ಮತ್ತು ಹಿರಿಯ ಪಾಲುದಾರ ಅಭೀಕ್ ಸಿಂಘಿ ಹೇಳಿದ್ದಾರೆ.

‘ಎ.ಐ ಆಧಾರಿತ ಆನ್‌ಲೈನ್ ಖರೀದಿಯು ಜಾತಿಕ ಮಟ್ಟದಲ್ಲಿ ಗ್ರಾಹಕರ ತೀರ್ಮಾನಗಳ ಮೇಲೆ ಈಗಾಗಲೇ ಪರಿಣಾಮ ಬೀರುತ್ತಿದೆ. ಭಾರತದಲ್ಲಿ ಡಿಜಿಟಲ್ ವೇದಿಕೆಗಳನ್ನು ಅಳವಡಿಸಿಕೊಳ್ಳುವುದು ವೇಗವಾಗಿರುವ ಹಿನ್ನೆಲೆಯಲ್ಲಿ, ಎಐ ಆಧಾರಿತ ಖರೀದಿಯು ಭಾರತದ ನಗರ ಪ್ರದೇಶಗಳಲ್ಲಿ, ಅದರಲ್ಲೂ ಮುಖ್ಯವಾಗಿ ಜೆನ್ ಝೀ ಗ್ರಾಹಕರಲ್ಲಿ ಹೆಚ್ಚಳವಾಗುವ ನಿರೀಕ್ಷೆ ಇದೆ’ ಎಂದು ಬಿಸಿಜಿ ವ್ಯವಸ್ಥಾಪಕ ನಿರ್ದೇಶಕ ಹಾಗೂ ಪಾಲುದಾರ ಭರತ್ ಮಿಮಾನಿ ಹೇಳಿದ್ದಾರೆ.

ಪ್ರತ್ಯೇಕ ಎಂಎಸ್‌ಎಂಇ ನೀತಿ: ಎಫ್‌ಕೆಸಿಸಿಐ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಕ್ಕೆ ಪ್ರತ್ಯೇಕ ಎಂಎಸ್‌ಎಂಇ ನೀತಿ ಮತ್ತು ವಿಶೇಷ ಉತ್ತೇಜಕ ಕ್ರಮಗಳ ಮೂಲಕ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಅಭಿವೃದ್ಧಿಗೆ ಆದ್ಯತೆ ನೀಡಬೇಕು ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದೆ.

ಸೋಮವಾರ ನಡೆದ ಬಜೆಟ್ ಪೂರ್ವ ಸಭೆಯಲ್ಲಿ ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾರೆಡ್ಡಿ ಅವರು ಮುಖ್ಯಮಂತ್ರಿಯವರಿಗೆ ಮನವಿ ಪತ್ರವನ್ನು ಸಲ್ಲಿಸಿದರು.

ಸಂಸ್ಥೆಯ ಬೇಡಿಕೆಗಳು

- ಆರ್ಥಿಕ ಚೇತರಿಕೆ, ಹೂಡಿಕೆ ಪುನಶ್ಚೇತನ, ಕೈಗಾರಿಕಾ ಬೆಳವಣಿಗೆ ಮತ್ತು ಬೆಂಗಳೂರಿನ ಆಚೆಗೂ ಅಭಿವೃದ್ಧಿಗೆ ಆದ್ಯತೆ ನೀಡಬೇಕು
- ಮೂಲಸೌಕರ್ಯ ಅಭಿವೃದ್ಧಿ, ಕೈಗಾರಿಕಾ ಎಸ್ಟೇಟ್‌ಗಳನ್ನು ಮೇಲ್ದರ್ಜೆಗೆ ಏರಿಸುವುದು ಮತ್ತು ಕೈಗಾರಿಕಾ ಟೌನ್‌ಶಿಪ್‌ಗಳ ಸ್ಥಾಪನೆಗೆ ಒತ್ತು ನೀಡಬೇಕು
- ಎಲ್ಲಾ ಕೈಗಾರಿಕಾ ಎಸ್ಟೇಟ್‌ಗಳು, ಕೈಗಾರಿಕಾ ಪಾರ್ಕ್‌ಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡುವುದು
- ಕೈಗಾರಿಕೆ ಮತ್ತು ಸೇವಾ ವಲಯದ ಉದ್ಯಮಗಳ ಆಸ್ತಿ ತೆರಿಗೆಯನ್ನು ತರ್ಕಬದ್ಧಗೊಳಿಸಬೇಕು, ಕೌಶಲಾಭಿವೃದ್ಧಿಗೆ ಚಟುವಟಿಕೆಗಳಿಗೆ ಉತ್ತೇಜನ
- ರಾಜ್ಯದಲ್ಲಿ ಪ್ರವಾಸೋದ್ಯಮ ವಲಯದ ಬೆಳವಣಿಗೆಗೆ ಉತ್ತೇಜನ ಮತ್ತು ಇಂಧನ ವಲಯ ಮತ್ತು ಹಸಿರು ಇಂಧನಕ್ಕೆ ನೆರವು
- ಉದ್ಯಮಿಗಳು ವ್ಯವಹಾರ ನಡೆಸುವ ಪ್ರಕ್ರಿಯೆ ಸರಳೀಕರಣ, ಕೃಷಿ ಕ್ಷೇತ್ರದ ಅಭಿವೃದ್ಧಿಗೆ ವೇಗ ನೀಡುವುದು
- ತಯಾರಿಕಾ ವಲಯದಲ್ಲಿ ಉತ್ತಮ ಬೆಳವಣಿಗೆಗೆ ಸಾಧಿಸಲು ಪ್ರೋತ್ಸಾಹ, ಕೈಗಾರಿಕಾ ವಲಯಕ್ಕೆ ಸಾಲದ ಹರಿವನ್ನು ಹೆಚ್ಚಿಸುವುದು
- ಹಳೆಯದಾಗಿರುವ ಅಪ್ರಸ್ತುತ ಕಾನೂನುಗಳ ರದ್ದತಿ, ಸಂಪನ್ಮೂಲಗಳ ಸಮರ್ಪಕ ಹಂಚಿಕೆ
- ಇದೇ ಮೇ ತಿಂಗಳಿನಲ್ಲಿ ನಡೆಯುವ ಗ್ಲೋಬಲ್ ಎಂಎಸ್‌ಎಂಇ ಶೃಂಗಸಭೆ-2026ರ ಆಯೋಜನೆಗೆ ₹2.24 ಕೋಟಿ ಅನುದಾನ ಮಂಜೂರು ಮಾಡಬೇಕು

ಕಾಸಿಯಾ ಮನವಿ

ಸಭೆಯಲ್ಲಿ ಭಾಗವಹಿಸಿದ್ದ ಕಾಸಿಯಾ ಉಪಾಧ್ಯಕ್ಷ ನಿಂಗಣ್ಣ ಎಸ್. ಬಿರಾದರ ಅವರು, ‘ಕೆಐಎಡಿಬಿ, ಕೆಎಸ್‌ಎಸ್‌ಐಡಿಸಿ ಮತ್ತು ಖಾಸಗಿ ಕೈಗಾರಿಕಾ ಪ್ರದೇಶಗಳಲ್ಲಿನ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ₹500 ಕೋಟಿ ಮೀಸಲಿಡಬೇಕು’ ಎಂದು ಮನವಿ ಮಾಡಿದರು.

ಕೈಗಾರಿಕೆಗಳಿಂದ ಸಂಗ್ರಹವಾಗುವ ಆಸ್ತಿ ತೆರಿಗೆಯನ್ನು ಪ್ರತ್ಯೇಕವಾಗಿ ವಿಂಗಡಿಸಿ, ವಸೂಲಾದ ಆಸ್ತಿ ತೆರಿಗೆಯ ಕನಿಷ್ಠ ಶೇ 50ರಷ್ಟು ಹಣವನ್ನು ಅದೇ ಕೈಗಾರಿಕಾ ಪ್ರದೇಶದ ಮೂಲಸೌಕರ್ಯ ಅಭಿವೃದ್ಧಿಗೆ ಬಳಸಬೇಕು ಎಂದರು ಎಂದು ಪ್ರಕಟಣೆಯಲ್ಲಿ ವಿವರಿಸಲಾಗಿದೆ.

ಅತಿಸಣ್ಣ ಮತ್ತು ಸಣ್ಣ ಗಾತ್ರದ ಕೈಗಾರಿಕೆಗಳು ಒ.ಸಿ ಮತ್ತು ಸಿ.ಸಿ ಸಲ್ಲಿಸದೆ ಹೊಸ ವಿದ್ಯುತ್ ಸಂಪರ್ಕ ಪಡೆಯಲು ಒಂದು ಬಾರಿ ವಿನಾಯಿತಿ ನೀಡಬೇಕು ಎಂದು ಒತ್ತಾಯಿಸಿದರು.

ಜನವರಿಯಲ್ಲಿ ರಫ್ತು ಅಲ್ಪ ಏರಿಕೆ

ನವದೆಹಲಿ (ಪಿಟಿಐ): ಜನವರಿಯಲ್ಲಿ ದೇಶದ ರಫ್ತು ಮೊತ್ತವು ₹3.32 ಲಕ್ಷ ಕೋಟಿಗೆ (36.56 ಬಿಲಿಯನ್ ಡಾಲರ್) ತಲುಪಿದೆ. ವ್ಯಾಪಾರ ಕೊರತೆಯು ಮೂರು ತಿಂಗಳ ಗರಿಷ್ಠ ಮಟ್ಟವಾದ ₹3.15 ಲಕ್ಷ ಕೋಟಿಗೆ (34.68 ಬಿಲಿಯನ್ ಡಾಲರ್) ತಲುಪಿದೆ.

ಜನವರಿಯಲ್ಲಿ ಆಮದು ಪ್ರಮಾಣವು ಶೇ 19.2ರಷ್ಟು ಹೆಚ್ಚಾಗಿದ್ದು ₹6.47 ಲಕ್ಷ ಕೋಟಿಗೆ (71.24 ಬಿಲಿಯನ್ ಡಾಲರ್) ತಲುಪಿದೆ. ಇದು ಈ ಹಣಕಾಸು ವರ್ಷದಲ್ಲಿ ತಿಂಗಳೊಂದರ ಅತಿಹೆಚ್ಚಿನ ಆಮದು. ಚಿನ್ನ ಹಾಗೂ ಬೆಳ್ಳಿಯ ಆಮದು ಹೆಚ್ಚಾಗಿದ್ದುದು ಇದಕ್ಕೆ ಮುಖ್ಯ ಕಾರಣವಾಗಿದೆ.

ಚಿನ್ನ ಆಮದು ಶೇ 349.22ರಷ್ಟು ಜಾಸ್ತಿ ಆಗಿದೆ. ಬೆಳ್ಳಿಯ ಆಮದು ಶೇ 127ರಷ್ಟು ಹೆಚ್ಚಾಗಿದೆ.

ದೇಶದ ಸರಕು ಮತ್ತು ಸೇವಾ ರಫ್ತು ವಹಿವಾಟು ಕೂಡ ಹೆಚ್ಚಳ ಆಗುತ್ತಿದೆ ಎಂದು ಕೇಂದ್ರ ವಾಣಿಜ್ಯ ಕಾರ್ಯದರ್ಶಿ ರಾಜೇಶ್ ಅಗರ್ವಾಲ್ ಹೇಳಿದ್ದಾರೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಸೇವೆಗಳು ಹಾಗೂ ಸರಕುಗಳ ರಫ್ತು ಮೌಲ್ಯವು ₹78 ಲಕ್ಷ ಕೋಟಿ ದಾಟುವ ಅಂದಾಜು ಇದೆ ಎಂದು ಅವರು ತಿಳಿಸಿದ್ದಾರೆ.

ಪೆಟ್ರೋಲಿಯಂ, ಎಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್, ಕಬ್ಬಿಣದ ಅದಿರು, ಕಾಫಿ ರಫ್ತು ಜನವರಿಯಲ್ಲಿ ಹೆಚ್ಚಾಗಿದೆ. ಆದರೆ ಚಹಾ, ಅಕ್ಕಿ, ಸಂಬಾರ ಪದಾರ್ಥಗಳು, ಚರ್ಮದ ಉತ್ಪನ್ನಗಳು, ಹರಳು ಮತ್ತು ಆಭರಣಗಳು, ರಾಸಾಯನಿಕಗಳು, ಸಿದ್ಧ ಉಡುಪುಗಳು, ಪ್ಲಾಸ್ಟಿಕ್ ರಫ್ತು ಕಡಿಮೆ ಆಗಿದೆ.

ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್‌. ಚಂದ್ರಬಾಬು ನಾಯ್ಡು ಹೇಳಿಕೆ

‘ಗೇಟ್ಸ್ ಸಹಭಾಗಿತ್ವದಿಂದ ಆಂಧ್ರ ಅಭಿವೃದ್ಧಿ’

ಅಮರಾವತಿ (ಪಿಟಿಐ): ‘ಗೇಟ್ಸ್ ಪ್ರತಿಷ್ಠಾನದ ಸಹಯೋಗದಿಂದ ರಾಜ್ಯದ ಅಭಿವೃದ್ಧಿ ಗತಿಯೇ ಬದಲಾಗಲಿದೆ’ ಎಂದು ಆಂಧ್ರ ಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ತಿಳಿಸಿದ್ದಾರೆ.

ಇಲ್ಲಿನ ಸಚಿವಾಲಯದಲ್ಲಿ ಮೈಕ್ರೋಸಾಫ್ಟ್ ಸಂಸ್ಥೆ ಅಧ್ಯಕ್ಷ ಬಿಲ್ ಗೇಟ್ಸ್ ಹಾಗೂ ಸಂಪುಟ ಸಚಿವರು ಹಾಗೂ ಹಿರಿಯ ಅಧಿಕಾರಿಗಳ ಜೊತೆಗೆ ಸಭೆ ನಡೆಸಿದ ಅವರು, ‘ರಾಜ್ಯದ ಹಲವು ಅಭಿವೃದ್ಧಿ ಯೋಜನೆಗಳೊಂದಿಗೆ ಗೇಟ್ಸ್ ಪ್ರತಿಷ್ಠಾನವು ಸಹಕಾರ ನೀಡಲು ಮುಂದೆ ಬಂದಿದೆ’ ಎಂದು ಸಂತಸ ವ್ಯಕ್ತಪಡಿಸಿದರು.

ಸರ್ಕಾರದ ನೀತಿಗಳು ಹಾಗೂ ಯೋಜನೆಗಳ ಕುರಿತಂತೆ ‘ಸ್ವರ್ಣ ಆಂಧ್ರ–2047’ ದೃಷ್ಟಿಕೋನವನ್ನು ಇದೇ ವೇಳೆ ಮುಂದಿಟ್ಟರು.

‘ಅಮರಾವತಿಯ ಸಚಿವಾಲಯದಲ್ಲಿ ನಾನು ‘ಸ್ವರ್ಣ ಆಂಧ್ರ–2047’ ರ ಕುರಿತಂತೆ ದೃಷ್ಟಿಕೋನವನ್ನು ಮುಂದಿಟ್ಟು, ಸಚಿವರು, ಅಧಿಕಾರಿಗಳ ಹಾಗೂ ಬಿಲ್‌ಗೇಟ್ಸ್ ಜೊತೆಗೆ ಸಂವಾದ ನಡೆಸಿದೆ. ಜನರ ಆರ್ಥಿಕ ಸಬಲೀಕರಣ ಹಾಗೂ ಜೀವನ ಸುಧಾರಣೆ ನಿಟ್ಟನಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗೇಟ್ಸ್ ಪ್ರತಿಷ್ಠಾನದ ಜೊತೆಗೆ ಸಹಭಾಗಿತ್ವದ ಕುರಿತು ವಿಸ್ತೃತ ಸಮಾಲೋಚನೆ ನಡೆಸಿದೆವು’ ಎಂದು ನಾಯ್ಡು ತಿಳಿಸಿದ್ದಾರೆ.

ಆಂಧ್ರಪ್ರದೇಶದ ಉಂಡವಲ್ಲಿ ಗ್ರಾಮದಲ್ಲಿ ಡ್ರೋನ್ ಬಳಸಿ ಕೃಷಿ ಚಟುವಟಿಕೆ ನಡೆಸುತ್ತಿರುವ ಬಾಳೆತೋಟವನ್ನು ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್‌. ಚಂದ್ರಬಾಬು ನಾಯ್ಡು ಹಾಗೂ ಮೈಕ್ರೋಸಾಫ್ಟ್ ಸಂಸ್ಥಾಪಕ ಬಿಲ್‌ಗೇಟ್ಸ್ ಜೊತೆಗೂಡಿ ವೀಕ್ಷಿಸಿದರು– ಪಿಟಿಐ ಚಿತ್ರ

‘ರಾಜಧಾನಿ ಅಮರಾವತಿಗೆ ಬಿಲ್‌ಗೇಟ್ಸ್ ಭೇಟಿಯು ಐತಿಹಾಸಿಕವಾಗಿದ್ದು, ದಕ್ಷಿಣ ರಾಜ್ಯದ ಅಭಿವೃದ್ಧಿಗೆ ಹೊಸ ಅವಕಾಶವನ್ನು ಕಲ್ಪಿಸಿದೆ’ ಎಂದು ಬಣ್ಣಿಸಿದ್ದಾರೆ.

‘ಆಂಧ್ರ ಪ್ರದೇಶವು ಎಲ್ಲ ಸಂಪನ್ಮೂಲ ಹೊಂದಿದ್ದು, ಆದಾಯ ಬೇಕಿದೆ. ಗೇಟ್ಸ್ ಸಹಕಾರದೊಂದಿಗೆ ರಾಜ್ಯವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲಾಗುತ್ತದೆ’ ಎಂದು ತಿಳಿಸಿದ್ದಾರೆ.

ನಂತರ ಬಿಲ್ ಗೇಟ್ಸ್ ಹಾಗೂ ಚಂದ್ರಬಾಬು ನಾಯ್ಡು ಅವರು ಉಂಡವಲ್ಲಿ ಗ್ರಾಮದಲ್ಲಿರುವ ಬಾಳೆಹಣ್ಣು ತೋಟವೊಂದಕ್ಕೆ ಭೇಟಿ ನೀಡಿ ನೈಸರ್ಗಿಕ ಕೃಷಿಯಲ್ಲಿ ಅಳವಡಿಸಿಕೊಂಡ ಎಐ, ಡ್ರೋನ್ ತಂತ್ರಜ್ಞಾನದ ಬಳಕೆಯನ್ನು ವೀಕ್ಷಿಸಿದರು.

ನಾಯ್ಡು ಹೇಳಿದ್ದೇನು..?

- ಕ್ವಾಂಟಮ್ ವ್ಯಾಲಿಯಾಗಿ ಹೊರಹೊಮ್ಮಲಿರುವ ಅಮರಾವತಿ
- ವಿಶಾಖಪಟ್ಟಣದಲ್ಲಿ ಎಐ–ಡೇಟಾ ಸಿಟಿ ಸ್ಥಾಪನೆಗೆ ಒತ್ತು
- ಕಾಕಿನಾಡದಲ್ಲಿ ಗ್ರೀನ್ ಹೈಡ್ರೋಜನ್ ವ್ಯಾಲಿ ಸ್ಥಾಪನೆ
- ಓರ್ವಾಕಲ್‌ನಲ್ಲಿ ಡ್ರೋನ್ ಸಿಟಿ ನಿರ್ಮಾಣ
- ರಾಯಲಸೀಮೆಯ ಲೇಪಾಕ್ಷಿ ಗ್ರಾಮದಲ್ಲಿ ಎಲೆಕ್ಟ್ರಾನಿಕ್, ಏರೋ ಸಿಟಿ
- ಎಲೆಕ್ಟ್ರಾನಿಕ್ಸ್, ಸ್ಪೇಸ್ ಸಿಟಿಯಾಗಿ ತಿರುಪತಿ ಪರಿವರ್ತನೆ

‘ಡಿಜಿಟಲ್ ಕ್ರಾಂತಿ– ಭಾರತ ಮುಂಚೂಣಿ’

ಡಿಜಿಟಲ್ ಕ್ರಾಂತಿಯಲ್ಲಿ ಭಾರತವು ಮುಂಚೂಣಿಯಲ್ಲಿದ್ದು, ಪ್ರಧಾನಿ ನರೇಂದ್ರ ಮೋದಿ, ಆಂಧ್ರ ಪ್ರದೇಶ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರಿಗೆ ಇದರ ಶ್ರೇಯಸ್ಸು ಸಲ್ಲುತ್ತದೆ’ ಎಂದು ಮೈಕ್ರೋಸಾಫ್ಟ್ ಸಂಸ್ಥೆ ಬಿಲ್ ಗೇಟ್ಸ್ ತಿಳಿಸಿದ್ದಾರೆ.

ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಹಾಗೂ ಸಚಿವರ ಜೊತೆಗೆ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, ‘ಅಭಿವೃದ್ಧಿ ಹೊಂದಿದ ರಾಜ್ಯಗಳು ಕೂಡ ಕೃಷಿ ಕ್ಷೇತ್ರಕ್ಕೆ ತಂತ್ರಜ್ಞಾನ ಬಳಸಿಕೊಳ್ಳುತ್ತಿಲ್ಲ. ಆಧುನಿಕ ತಂತ್ರಜ್ಞಾನದ ಬಳಕೆಯಲ್ಲಿ ಆಂಧ್ರ ಪ್ರದೇಶವು ಮುಂಚೂಣಿಯಲ್ಲಿದೆ’ ಎಂದು ಹೇಳಿದ್ದಾರೆ.

‘ಗೇಟ್ಸ್ ಪ್ರತಿಷ್ಠಾನವು ಆರೋಗ್ಯಕ್ಷೇತ್ರಕ್ಕೆ ಆದ್ಯತೆ ನೀಡಲಿದೆ. ಹೆಚ್ಚಿನ ಆರೋಗ್ಯ ಯೋಜನೆಗಳನ್ನು ವಹಿಸಿಕೊಳ್ಳಲಿದ್ದು, ಎಲ್ಲರಿಗೂ ಆರೋಗ್ಯ ಸೇವೆ ತಲುಪಿಸುವ ನಿಟ್ಟನಲ್ಲಿ ಕ್ರಮ ಕೈಗೊಳ್ಳಲಾಗುವುದು’ ಎಂದಿದ್ದಾರೆ.

ಆಂಧ್ರದ ಕುಪ್ಪಂನಲ್ಲಿ ಪ್ರತಿಷ್ಠಾನದ ಸಹಯೋಗದೊಂದಿಗೆ ಜಾರಿಗೆ ತಂದಿರುವ ‘ಸಂಜೀವಿನಿ ಆರೋಗ್ಯ ಯೋಜನೆ’ಯನ್ನು ಇದೇ ವೇಳೆ ಮೆಚ್ಚುಗೆ ವ್ಯಕ್ತಪಡಿಸಿದರು.

‘ತಂತ್ರಜ್ಞಾನ ಬಳಕೆಯ ಮೂಲಕ ವಿಪತ್ತು ನಿರ್ವಹಣಾ ಸೇವೆಯ ಪರಿಣಾಮಕಾರಿ ಜಾರಿಯಿಂದ ಸಾವಿರಾರು ಜನರ ಪ್ರಾಣ ಉಳಿಸಲು ನೆರವಾಗಿದೆ’ ಎಂದು ಬಿಲ್ ಗೇಟ್ಸ್ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಬಾಂಗ್ಲಾ: ಪ್ರಧಾನಿ ಪ್ರಮಾಣವಚನ ಇಂದು

ಢಾಕಾ (ಪಿಟಿಐ): ಮಹತ್ವದ ಸಾರ್ವತ್ರಿಕ ಚುನಾವಣೆಯಲ್ಲಿ ಬಹುಮತ ಗಳಿಸಿರುವ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿಯ ತಾರಿಕ್ ರೆಹಮಾನ್ ಅವರು ನೂತನ ಪ್ರಧಾನಿಯಾಗಿ ಮಂಗಳವಾರ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಪ್ರಧಾನಿಯ ಪ್ರಮಾಣವಚನ ಸ್ವೀಕಾರ ಸಮಾರಂಭವು ಈ ಬಾರಿ ದೀರ್ಘಕಾಲದ ಸಂಪ್ರದಾಯವನ್ನು ಮುರಿಯಲಿದೆ. ಅಧ್ಯಕ್ಷರ ಭವನ ಬಂಗಾಬಾನ್ ಬದಲಿಗೆ ಸಂಸತ್ ಭವನದ ದಕ್ಷಿಣ ಪ್ಲಾಜಾದಲ್ಲಿ ನಡೆಯಲಿದೆ.

ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಅವರು ಮಂಗಳವಾರ ಸಂಜೆ ನೂತನ ಸಚಿವ ಸಂಪುಟದ ಸದಸ್ಯರಿಗೆ ಪ್ರಮಾಣವಚನ ಬೋಧಿಸಲಿದ್ದಾರೆ ಎಂದು ಸರ್ಕಾರಿ ಸ್ವಾಮ್ಯದ ಬಿಎಸ್‌ಎಸ್ ಸುದ್ದಿ ಸಂಸ್ಥೆ ಸೋಮವಾರ ವರದಿ ಮಾಡಿದೆ.

ಸಚಿವರ ಪ್ರಮಾಣವಚನ ಸ್ವೀಕಾರ ಸಮಾರಂಭ ಮಂಗಳವಾರ ಸಂಜೆ 4 ಗಂಟೆಗೆ ನಡೆಯಲಿದೆ. ಇದಕ್ಕೂ ಮುನ್ನ ಸಂಸದರು ಬೆಳಿಗ್ಗೆ 10 ಗಂಟೆಗೆ ಜಾತೀಯ ಸಂಸದ್ ಸಂಕೀರ್ಣದ ದಕ್ಷಿಣ ಪ್ಲಾಜಾದಲ್ಲಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ ಎಂದು ಜಾತೀಯ ಸಂಸದ್ ಸಚಿವಾಲಯದ ಕಾರ್ಯದರ್ಶಿ ಕನಿಜ್ ಮೌಲಾ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಬಿಎನ್‌ಪಿ ಸಂಸದೀಯ ಪಕ್ಷದ ಸಭೆ ಬೆಳಿಗ್ಗೆ 11.30ಕ್ಕೆ ಸಂಸತ್ ಭವನದಲ್ಲಿ ನಡೆಯಲಿದೆ. ಈ ಸಭೆಯಲ್ಲಿ ಪಕ್ಷದ ಅಧ್ಯಕ್ಷ ತಾರಿಕ್ ರೆಹಮಾನ್ ಅವರು ಪ್ರಧಾನಿಯಾಗಿ ಆಯ್ಕೆ ಆಗಲಿದ್ದಾರೆ ಎಂದು ಪಕ್ಷದ ಸ್ಥಾಯಿ ಸಮಿತಿ ಸದಸ್ಯ ಸಲಾಹುದ್ದೀನ್ ಅಹ್ಮದ್ ಹೇಳಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಆದ್ಯತೆ. 19,000-25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9964322833, 9742133993

ವೈಯಕ್ತಿಕ

Change of Name

I AM changing my name from ATHRVA RAHUL JOSHI to ATHARVA RAHUL JOSHI for passport issuance as per documents.

ವ್ಯಾಪಾರ

Business Offers

General

LOOKING FOR plug and play training centre in Davanagere with hostel facilities for 70 students, Immediate occupancy. For 3months. Attractive terms. Interested colleges/ educational institute contact 8131880348/ 8977918777.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

General

ಸೈಟ್ ತೆಗೆದುಕೊಳ್ಳುವಂತವರು ಸೈಟ್ ಮಾರಾಟಗಾರರು ಮನೆ ತೆಗೆದುಕೊಳ್ಳುವಂತವರು ಮನೆ ಮಾರಾಟಗಾರರು ಒಡವರಿಗೆ ಮನೆ ಕಟ್ಟಿ ಕೊಡಲು ಸಹಾಯ ಮಾಡಲಾಗುವುದು. ಬೆಂಗಳೂರು 9036957018.

ಪ್ರವಾಸ

Travel

7 ದಿನಗಳ ಸಿಂಗಾಪುರ್ ಮಲೇಶಿಯಾ. 13 ದಿನಗಳ ಚಾರ್ ಧಾಮ್‌ಯಾತ್ರೆ. 10 ದಿನಗಳ ನೇಪಾಳ,ಮುಕ್ತಿನಾಥ. 7 ದಿನಗಳ ಕಾಶಿಯಾತ್ರೆ. 8 ದಿನಗಳ ಗ್ಯಾಂಗ್ ಟಾಕ್ ಡಾರ್ಜಿಲಿಂಗ್. 8 ದಿನಗಳ ಅಸ್ಸಾಂ,ಮೇಘಾಲಯ. 6 ದಿನಗಳ ಕಾಶ್ಮೀರ್ ಪ್ರವಾಸ. ಸಂಪರ್ಕಿಸಿ. ನಂದಿ ಹಾಲಿಡೇಸ್ ಬಸವನಗುಡಿ ಬೆಂಗಳೂರು.04. 9980270467 9740228186

Holiday Package Tours

ಭಾರತೀಯ ರೈಲ್ವೆಯ ಪ್ರವಾಸಿ ರೈಲು ವೈಷ್ಣೋದೇವಿ, ಅಮೃತಸರ, ಹರಿದ್ವಾರ, ಮಥುರಾ ಪ್ರವಾಸಕ್ಕೆ 13 ದಿನಗಳ ಪ್ರವಾಸವನ್ನು ಏರ್ಪಡಿಸಿದೆ. ಇದು ಏಪ್ರಿಲ್ 11 ರಂದು ಬೆಂಗಳೂರಿನಿಂದ ಪ್ರಾರಂಭವಾಗುತ್ತದೆ, 3AC ಊಟ ಮತ್ತು ವಸತಿಯೊಂದಿಗೆ 48,700 ರೂ . ಬುಕಿಂಗ್‌ಗಾಗಿ 7305858585 / (www.tourtimes.in) ಸಂಪರ್ಕಿಸಿ .

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಮಂಗಳವಾರ ● ಫೆಬ್ರುವರಿ 17, 2026
ಪ್ರಜಾವಾಣಿ
ಪ್ರಜಾಪ್ಲಸ್
| ಮನರಂಜನೆ | ಜಾಹೀರಾತು | ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

ಶಂಕರಾಭರಣ ಏರಿದ ಶೈನ್

> ಇತ್ತೀಚೆಗಷ್ಟೇ ಚಿತ್ರದ ಶೂಟಿಂಗ್ ಸಂಪೂರ್ಣವಾಗಿದೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಬಿಡುಗಡೆ ದಿನಾಂಕವನ್ನು ಚರ್ಚಿಸಿ ನಿರ್ಧರಿಸುತ್ತೇವೆ.
> **ಶೈನ್ ಶೆಟ್ಟಿ,** ನಟ

● ಅಭಿಲಾಷ್ ಪಿ.ಎಸ್.

‘ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ’, ‘ಮರ್ಯಾದೆ ಪ್ರಶ್ನೆ’, ‘ನಿದ್ರಾದೇವಿ ನೆಕ್ಸ್ಟ್ ಡೋರ್’ ಸಿನಿಮಾಗಳಲ್ಲಿ ನಟಿಸಿದ್ದ ‘ಬಿಗ್‌ಬಾಸ್’ ಖ್ಯಾತಿಯ ನಟ ಶೈನ್ ಶರಶ್ ಶೆಟ್ಟಿ, ‘ಜಸ್ಟ್ ಮ್ಯಾರೀಡ್’ ಸಿನಿಮಾ ಮೂಲಕ ನಾಯಕನಾಗಿ ಬೆಳ್ಳಿತೆರೆಯಲ್ಲಿ ಮೊದಲ ಹೆಜ್ಜೆ ಇಟ್ಟಿದ್ದರು. ಇದೀಗ ಅವರು ಸಿನಿಮಾ ನಿರ್ಮಾಣ ಮಾಡಿದ್ದಾರೆ.

ಅವರೇ ಬರೆದಿರುವ ಕಥೆಯನ್ನು ‘ಮಿಥ್ಯ’ ಸಿನಿಮಾ ನಿರ್ದೇಶಕ ಸುಮಂತ್ ಭಟ್ ನಿರ್ದೇಶಿಸಿದ್ದು, ‘ಶಂಕರಾಭರಣ’ ಎಂಬ ಶೀರ್ಷಿಕೆಯಡಿ ಸಿನಿಮಾ ತೆರೆಗೆ ಬರಲಿದೆ. ‘ಶಂಕರಾಭರಣ’ ಎಂಬ ಬಸ್ಸಿನ ಸುತ್ತಮುತ್ತ ಸಾಗುವ ಕಥೆ ಇರುವ ಸಿನಿಮಾದ ಮುಖ್ಯಭೂಮಿಕೆಯಲ್ಲಿ ಶೈನ್ ಶೆಟ್ಟಿಯೇ ನಟಿಸಿದ್ದು, ಚಿತ್ರೀಕರಣ ಪೂರ್ಣಗೊಂಡಿದೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿರುವ ಈ ಸಿನಿಮಾ ಬಗ್ಗೆ ಶೈನ್ ಮಾತಿಗಿಳಿದರು.

‘ಹಲವು ವರ್ಷಗಳ ಹಿಂದಿನಿಂದಲೇ ಸಿನಿಮಾ ನಿರ್ಮಾಣ ಮಾಡಬೇಕು ಎನ್ನುವ ಆಸೆ ಇತ್ತು. ಆದರೆ ನಿರ್ಮಾಣಕ್ಕೆ ಇಳಿಯುವ ಮುನ್ನ ಈ ಕ್ಷೇತ್ರದ ಬಗ್ಗೆ ತಿಳಿದುಕೊಳ್ಳುವುದು ಅವಶ್ಯವಿತ್ತು. ಹೀಗಾಗಿ ನಟನಾಗಿ ಕೆಲಸ ಮಾಡುವಾಗ ನಿರ್ಮಾಣದ ಬಗ್ಗೆ ತಿಳಿದುಕೊಂಡೆ. 2017ರಿಂದಲೂ ಸಿನಿಮಾ ನಿರ್ಮಾಣ ಮಾಡಬೇಕು ಎನ್ನುವ ಹೋರಾಟದಲ್ಲಿ ಇದ್ದೆ. ಒಂದು ನಿರ್ಮಾಣ ಸಂಸ್ಥೆ ಆರಂಭಿಸಿದ ಮೇಲೆ ಸರಣಿಯಾಗಿ ಸಿನಿಮಾಗಳು ಬರುತ್ತಿರಬೇಕು. ಹೀಗಾಗಿ ಮೂರು ಕಥೆಗಳನ್ನು ಬರೆದುಕೊಂಡು ಹಲವರನ್ನು ಸಂಪರ್ಕಿಸಿದ್ದೆ. ಈ ಸಂದರ್ಭದಲ್ಲಿ ನನಗೆ ನಮ್ಮೂರಿನವರೇ ಆದ ದಿವಾಕರ್ ಶೆಟ್ಟಿ ಜೊತೆಯಾದರು. ಈ ಮೂಲಕ 2024ರಲ್ಲಿ ‘ರಂಗಸ್ಥಳ ಸ್ಟುಡಿಯೊಸ್’ ಹುಟ್ಟುಹಾಕಿದೆವು. ಮೂರು ಕಥೆಗಳ ಪೈಕಿ ಇದೀಗ ‘ಶಂಕರಾಭರಣ’ ಕೈಗೆತ್ತಿಕೊಂಡಿದ್ದೇನೆ’ ಎನ್ನುತ್ತಾ ನಿರ್ಮಾಣ ಕ್ಷೇತ್ರಕ್ಕಿಳಿದ ಕಥೆ ಬಿಚ್ಚಿಟ್ಟರು.

‘ಸುಮಂತ್ ಭಟ್ ಅವರ ಜೊತೆ ‘ಏಕಂ’ ಎನ್ನುವ ವೆಬ್‌ಸರಣಿ ಮಾಡಿದ್ದೆ. ಈ ಸಂದರ್ಭದಲ್ಲೇ ನನಗೆ ‘ಶಂಕರಾಭರಣ’ದ ಕಲ್ಪನೆ ಹೊಳೆದಿತ್ತು. ಇದಾದ ಬಳಿಕ ಕಥೆ ಸಿದ್ಧಪಡಿಸಿಕೊಂಡು ಸುಮಂತ್ ಭಟ್ ಅವರಿಗೆ ನಿರ್ದೇಶಿಸಲು ಕೇಳಿದ್ದೆ. ಆರಂಭದಲ್ಲಿ ಅವರು ‘ಮಿಥ್ಯ’ ಜಾನರ್‌ನ ಸಿನಿಮಾಗಳನ್ನೇ ಮಾಡುವ ಮನಃಸ್ಥಿತಿಯಲ್ಲಿದ್ದರು. ಬಳಿಕ ಹೊಸ ಪ್ರಯೋಗಕ್ಕೆ ತೆರೆದುಕೊಳ್ಳಲು ಅವರು ಮುಂದಾಗಿ ಒಪ್ಪಿಕೊಂಡರು. ಸಿನಿಮಾಗೆ ಸುಮಂತ್ ಹಾಗೂ ತ್ರಿಲೋಕ್ ತ್ರಿವಿಕ್ರಮ್ ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದಾರೆ. ಚರಣ್ ರಾಜ್ ಸಂಗೀತ ನಿರ್ದೇಶನವಿದೆ’ ಎಂದರು ಶೈನ್.

‘ಸಿನಿಮಾದ ಜಾನರ್ ಬಗ್ಗೆ ಸದ್ಯಕ್ಕೆ ಗುಟ್ಟು ಬಿಟ್ಟುಕೊಡುವುದಿಲ್ಲ. ಇದು ಕರಾವಳಿ ಭಾಗದ ಉಡುಪಿ–ಕುಂದಾಪುರದಲ್ಲಿ ನಡೆಯುವ ಕಥೆ. ‘ಶಂಕರಾಭರಣ’ ಎನ್ನುವುದು ನಮ್ಮ ತಂದೆ ಕಾಲದಲ್ಲಿ ಬಹಳ ಹಿಟ್ ಆದ ಸಿನಿಮಾ. ಇದಕ್ಕೆ ಸಂಬಂಧಪಟ್ಟ ಹೆಸರುಗಳು ಸಿನಿಮಾದಲ್ಲಿದೆ. ಜೊತೆಗೆ ಒಂದು ಬಸ್ಸಿನ ಹಾಗೂ ಅದಕ್ಕೆ ಸಂಬಂಧಪಟ್ಟ ಚಾಲಕ–ನಿರ್ವಾಹಕರು, ಅವರ ಕುಟುಂಬದ ಸುತ್ತ ಸುತ್ತುವ ಕಥೆಯಾಗಿದೆ. ಶಂಕರನ ಆಭರಣ ಎಂದೂ ಹೇಳಬಹುದು’ ಎನ್ನುತ್ತಾ ಕಥೆಯ ಸಣ್ಣ ಸುಳಿವು ನೀಡಿ ಮಾತಿಗೆ ವಿರಾಮವಿತ್ತರು ಶೈನ್.

ಆ.21ಕ್ಕೆ ‘ದಿ ಪ್ಯಾರಡೈಸ್’ ಬಿಡುಗಡೆ

ನಾನಿ

ತೆಲುಗು ನಟ ನಾನಿ ನಟನೆಯ ಪ್ಯಾನ್ ಇಂಡಿಯಾ ಸಿನಿಮಾ ‘ದಿ ಪ್ಯಾರಡೈಸ್’ನ ಬಿಡುಗಡೆ ದಿನಾಂಕ ಘೋಷಣೆಯಾಗಿದೆ.

ಸಿನಿಮಾ ಆ.21ರಂದು ವಿಶ್ವದಾದ್ಯಂತ ತೆರೆಕಾಣಲಿದೆ. ಸದ್ಯ ಸಿನಿಮಾದ ಶೂಟಿಂಗ್ ಭರದಿಂದ ಸಾಗಿದ್ದು, ನಾನಿಯ ಇಂಟ್ರೊಡಕ್ಷನ್ ಹಾಡಿನ ಚಿತ್ರೀಕರಣ ನಡೆಯುತ್ತಿದೆ. ತಮಿಳಿನ ಖ್ಯಾತ ಸಂಗೀತ ನಿರ್ದೇಶಕ ಅನಿರುದ್ಧ್ ರವಿಚಂದರ್ ಸಂಗೀತ ನಿರ್ದೇಶನದಲ್ಲಿ ಮೂಡಿಬಂದಿರುವ ಹಾಡಿಗೆ ನಾನಿ ನೂರಾರು ಡಾನ್ಸರ್ಸ್ ಜೊತೆ ಬೃಹತ್ ಸೆಟ್‌ನಲ್ಲಿ ಹೆಜ್ಜೆ ಹಾಕಿದ್ದಾರೆ. ಸುಧನ್ ಮಾಸ್ಟರ್ ನೃತ್ಯ ನಿರ್ದೇಶನದಲ್ಲಿ ಹಾಡು ಚಿತ್ರೀಕರಣಗೊಳ್ಳುತ್ತಿದೆ.

ಈ ಹಿಂದೆ ನಾನಿ ನಟಿಸಿದ್ದ ‘ದಸರಾ’ ಸಿನಿಮಾ ನಿರ್ದೇಶಿಸಿದ್ದ ಶ್ರೀಕಾಂತ್ ಒಡೆಲಾ ‘ದಿ ಪ್ಯಾರಡೈಸ್’ಗೂ ಆ್ಯಕ್ಷನ್ ಕಟ್ ಹೇಳಿದ್ದಾರೆ. ಸಿನಿಮಾದಲ್ಲಿ ಮೋಹನ್ ಬಾಬು, ರಾಘವ್ ಜುಯಾಲ್ ಮತ್ತು ಸಂಪೂರ್ಣೇಶ್ ಬಾಬು ಸೇರಿದಂತೆ ದೊಡ್ಡ ತಾರಾಬಳಗವಿದೆ. ‘ದಸರಾ’ ಸಿನಿಮಾ ನಿರ್ಮಿಸಿದ್ದ ಸುಧಾಕರ್ ಚೆರುಕುರಿ ಅವರೇ ಈ ಸಿನಿಮಾಗೂ ಬಂಡವಾಳ ಹೂಡಿದ್ದಾರೆ. ‘ಶ್ರೀಲಕ್ಷ್ಮೀ ವೆಂಕಟೇಶ್ವರ ಸಿನಿಮಾಸ್’ ಬ್ಯಾನರ್‌ನಡಿ ಸಿನಿಮಾ ಅದ್ದೂರಿಯಾಗಿ ನಿರ್ಮಾಣವಾಗುತ್ತಿದೆ.

ಜಿ.ಕೆ.ವಿಷ್ಣು ಛಾಯಾಚಿತ್ರಗ್ರಹಣ, ನವೀನ್ ನೂಲಿ ಸಂಕಲನ ‘ದಿ ಪ್ಯಾರಡೈಸ್’ ಸಿನಿಮಾಗಿದೆ.

ಶಂಕರ್ ಆದ ‘ಡಾಲಿ’



ಧನಂಜಯ

ನಿರ್ದೇಶಕ ಹೇಮಂತ್ ಎಂ.ರಾವ್ ನಿರ್ದೇಶನದ ‘666 ಆಪರೇಷನ್ ಡ್ರೀಮ್ ಥಿಯೇಟರ್’ ಚಿತ್ರದಲ್ಲಿ ನಟ ಧನಂಜಯ ಅವರ ಪಾತ್ರವನ್ನು ಚಿತ್ರತಂಡ ಪರಿಚಯಿಸಿದೆ.

‘ಶಂಕರ್’ ಎನ್ನುವ ಪಾತ್ರಕ್ಕೆ ಧನಂಜಯ ಬಣ್ಣಹಚ್ಚಿದ್ದು, ಇದೇ ವರ್ಷ ಸಿನಿಮಾ ಬಿಡುಗಡೆಯಾಗುವ ಮುನ್ಸೂಚನೆಯನ್ನೂ ಚಿತ್ರತಂಡ ನೀಡಿದೆ.

ಸಿನಿಮಾದಲ್ಲಿ ಧನಂಜಯಗೆ ಜೋಡಿಯಾಗಿ ನಟಿ ಪ್ರಿಯಾಂಕಾ ಮೋಹನ್ ನಟಿಸಿದ್ದಾರೆ. ಈಗಾಗಲೇ ಚಿತ್ರದ ಚಿತ್ರೀಕರಣ ಅಂತಿಮ ಹಂತದಲ್ಲಿದ್ದು, ಬೆಂಗಳೂರಿನ ಕಂಠೀರವ ಸ್ಟುಡಿಯೊದಲ್ಲಿ ಹಾಕಲಾಗಿರುವ ಸೆಟ್‌ನಲ್ಲಿ ಚಿತ್ರೀಕರಣ ನಡೆದಿದೆ. ಫೆಬ್ರುವರಿ–ಮಾರ್ಚ್‌ನಲ್ಲಿ ಶೂಟಿಂಗ್ ಪೂರ್ಣಗೊಳಿಸಲು ಹೇಮಂತ್ ಯೋಜನೆ ಹಾಕಿಕೊಂಡಿದ್ದಾರೆ. ನಟ ಶಿವರಾಜ್‌ಕುಮಾರ್, ಧನಂಜಯ ಮುಖ್ಯಭೂಮಿಕೆಯಲ್ಲಿರುವ ಈ ಸಿನಿಮಾ 70ರ ದಶಕದ ಶೈಲಿಯಲ್ಲಿರಲಿದೆ. ಸಿನಿಮಾವನ್ನು ಡಾ.ವೈಶಾಖ್ ಜೆ ಗೌಡ ಅವರು ತಮ್ಮ ವೈಶಾಖ್ ಜೆ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣ ಮಾಡಿದ್ದಾರೆ. ಕನ್ನಡ ಮತ್ತು ತೆಲುಗಿನಲ್ಲಿ ಈ ಸಿನಿಮಾ ತೆರೆಕಾಣಲಿದೆ.

ಬೃಹತ್ ಮೊತ್ತ ಪೇರಿಸಿದ ಕರ್ನಾಟಕ

ರಣಜಿ ಟ್ರೋಫಿ ಸೆಮಿಫೈನಲ್: ಸ್ಮರಣ್ ಶತಕ ● ಕರುಣ್, ಕೃತಿಕ್ ಅರ್ಧಶತಕ

232
ದೇವದತ್ತ ಪಡಿಕ್ಕಲ್ ಅವರು ಈ ಪಂದ್ಯದಲ್ಲಿ 235 ರನ್ ಗಳಿಸಿದರು. ಇದು, ಕರ್ನಾಟಕ ತಂಡದ ನಾಯಕರೊಬ್ಬರು ಇನಿಂಗ್ಸ್‌ವೊಂದರಲ್ಲಿ ಗಳಿಸಿದ ಎರಡನೇ ಗರಿಷ್ಠ ವೈಯಕ್ತಿಕ ಮೊತ್ತವೆನಿಸಿತು. 2022–23ನೇ ಋತುವಿನಲ್ಲಿ ಮಯಂಕ್ ಅಗರವಾಲ್ 249 ರನ್ ಗಳಿಸಿದ್ದರು

ಲಖನೌ (ಪಿಟಿಐ): ನಾಯಕ ದೇವದತ್ತ ಪಡಿಕ್ಕಲ್ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ತಮ್ಮ ಚೊಚ್ಚಲ ದ್ವಿಶತಕ ದಾಖಲಿಸಿದರು. ಸ್ಮರಣ್ ರವಿಚಂದ್ರನ್ ಅಜೇಯ ಶತಕ ಗಳಿಸಿದರು. ಇದರೊಂದಿಗೆ ಇಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಸೆಮಿಫೈನಲ್‌ನಲ್ಲಿ ಉತ್ತರಾಖಂಡ ಎದುರು ಸತತ ಎರಡನೇ ದಿನವೂ ಕರ್ನಾಟಕ ಪಾರಮ್ಯ ಮೆರೆದು ರನ್‌ಗಳ ಬೆಟ್ಟವನ್ನೇ ನಿರ್ಮಿಸಿದೆ.

ಪಂದ್ಯದ ಮೊದಲ ದಿನವಾದ ಭಾನುವಾರ ಶತಕ ಗಳಿಸಿ ಕ್ರೀಸ್‌ನಲ್ಲಿದ್ದ ದೇವದತ್ತ ಎರಡನೇ ದಿನದಾಟದಲ್ಲಿ ದ್ವಿಶತಕದ ಗಡಿ ದಾಟಿದರು. ದೇವದತ್ತ (232; 330ಎ, 4X29, 6X3) ಮತ್ತು ಸ್ಮರಣ್ (ಬ್ಯಾಟಿಂಗ್ 121, 191ಎ, 4X11) ಅವರ ಚೆಂದದ ಬ್ಯಾಟಿಂಗ್‌ನಿಂದ ಕರ್ನಾಟಕವು ಸೋಮವಾರ ದಿನದಾಟದ ಅಂತ್ಯಕ್ಕೆ 180 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 689 ರನ್ ಗಳಿಸಿದೆ. ಸ್ಮರಣ್ ಮತ್ತು ವಿದ್ಯಾಧರ್ ಪಾಟೀಲ (ಬ್ಯಾಟಿಂಗ್ 35; 107ಎ) ಕ್ರೀಸ್‌ನಲ್ಲಿದ್ದಾರೆ. ಮೊದಲ ದಿನದಾಟದ ಅಂತ್ಯಕ್ಕೆ ಕ್ರೀಸ್‌ನಲ್ಲಿದ್ದ ಕರ್ನಾಟಕವು 2 ವಿಕೆಟ್‌ಗಳಿಗೆ 355 ರನ್ ಗಳಿಸಿತ್ತು.

ಪಡಿಕ್ಕಲ್ (ಔಟಾಗದೇ 148) ಮತ್ತು ಕರುಣ್ (60; 105ಎ) ಮೂರನೇ ವಿಕೆಟ್ ಜೊತೆಯಾಟದಲ್ಲಿ 129 ರನ್ ಸೇರಿಸಿದರು. ಉತ್ತರಾಖಂಡದ ಮಧ್ಯಮ ವೇಗಿ ಅಭಯ್ ನೇಗಿ ಲೆಂಗ್ತ್ ಎಸೆತದಲ್ಲಿ ಕರುಣ್ ಅವರು ವಿಕೆಟ್‌ಕೀಪರ್ ಸೌರಭ್ ರಾವತ್‌ಗೆ ಕ್ಯಾಚ್ ಆದರು. ಇದರೊಂದಿಗೆ ಜೊತೆಯಾಟ ಮುರಿಯಿತು.

ದೇವದತ್ತ ಅವರ ಏಕಾಗ್ರಚಿತ್ತ ಆಟ ಮುಂದುವರಿಯಿತು. ತಮ್ಮ ಮೊದಲ ದ್ವಿಶತಕ ಮುಟ್ಟಲು 288 ಎಸೆತ ಎದುರಿಸಿದರು. ಅವರಿಗೆ ಸ್ಮರಣ್ ಕೂಡ ಉತ್ತಮ ಜೊತೆ ನೀಡಿದರು. ಇಬ್ಬರ ಜೊತಯಾಟದಲ್ಲಿ 59 ರನ್ ಸೇರಿದವು.

ಲಕ್ಷ್ಯ ರಾಯಚಂದಾನಿ ಅವರ ಎಸೆತವನ್ನು ಫೈನ್ ಲೆಗ್ ಬೌಂಡರಿಯತ್ತ ಹೊಡೆಯಲು ಯತ್ನಿಸಿದ ದೇವದತ್ತ ವಿಕೆಟ್‌ಕೀಪರ್ ಸೌರಭ್‌ಗೆ ಕ್ಯಾಚ್ ಕೊಟ್ಟರು. ಅಮೋಘ ಇನಿಂಗ್ಸ್‌ಗೆ ತೆರೆ ಬಿತ್ತು. ಕ್ರೀಸ್‌ಗೆ ಬಂದ ಶ್ರೇಯಸ್ ಗೋಪಾಲ್ ಅವರು 6 ಎಸೆತ ಆಡಿ ಖಾತೆ ತೆರೆಯದೇ ಔಟಾದರು. ಆದಿತ್ಯ ರಾವತ್ ಬೌಲಿಂಗ್‌ನಲ್ಲಿ ಕ್ಲೀನ್‌ಬೌಲ್ಡ್ ಆದರು. ಆಗ ತಂಡದ ಮೊತ್ತವು (5ಕ್ಕೆ485) ಐದನೂರರ ಗಡಿ ದಾಟಿರಲಿಲ್ಲ.

ಈ ಹಂತದಲ್ಲಿ ಸ್ಮರಣ್ ಅವರ ಆಟದ ಸೊಬಗೂ ಮತ್ತಷ್ಟು ವಿಸ್ತರಿಸಿತು. 150 ಎಸೆತಗಳಲ್ಲಿ ಶತಕ ಹೊಡೆದರು. ಈ ಇನಿಂಗ್ಸ್‌ನಲ್ಲಿ ದಾಖಲಾದ ಮೂರನೇ ಶತಕ ಇದಾಯಿತು. ಭಾನುವಾರ ಕೆ.ಎಲ್. ರಾಹುಲ್ 141 ರನ್ ಹೊಡೆದಿದ್ದರು.

ಸ್ಮರಣ್ ಅವರಿಗೆ ಕೃತಿಕ್ ಕೃಷ್ಣ (60; 103ಎ) ಉತ್ತಮ ಜೊತೆ ನೀಡಿದರು. ಆರನೇ ವಿಕೆಟ್ ಜೊತೆಯಾಟದಲ್ಲಿ 123 ರನ್ ಸೇರಿಸಿದರು. ಕೃತಿಕ್ ಆರು ಬೌಂಡರಿ ಮತ್ತು ಒಂದು ಸಿಕ್ಸರ್ ಹೊಡೆದರು. ಆಫ್‌ಸ್ಪಿನ್ನರ್ ಅವನೀಶ್ ಸುಧಾ ಎಸೆತದಲ್ಲಿ ಕೃತಿಕ್ ಕ್ಲೀನ್‌ಬೌಲ್ಡ್ ಆದರು. ಆದರೂ ಉತ್ತರಾಖಂಡದ ಸಂಕಷ್ಟ ಮುಂದುವರಿಯಿತು. ಸ್ಮರಣ್ ಜೊತೆಗೂಡಿದ ವಿದ್ಯಾಧರ್ ಒಟ್ಟು 81 ರನ್ ಕಲೆಹಾಕಿದರು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 180 ಓವರ್‌ಗಳಲ್ಲಿ 6ಕ್ಕೆ689 (ದೇವದತ್ತ ಪಡಿಕ್ಕಲ್ 232, ಕರುಣ್ ನಾಯರ್ 60, ಆರ್. ಸ್ಮರಣ್ ಬ್ಯಾಟಿಂಗ್ 121, ಕೃತಿಕ್ ಕೃಷ್ಣ 60, ವಿದ್ಯಾಧರ್ ಪಾಟೀಲ ಬ್ಯಾಟಿಂಗ್ 35, ಆದಿತ್ಯ ರಾವತ್ 132ಕ್ಕೆ3, ಅವನೀಶ್ ಸುಧಾ 107ಕ್ಕೆ1, ಲಕ್ಷ್ಯ ರಾಯಚಂದಾನಿ 25ಕ್ಕೆ1, ಅಭಯ್ ನೇಗಿ 99ಕ್ಕೆ1) ವಿರುದ್ಧ ಉತ್ತರಾಖಂಡ.

ದ್ವಿಶತಕ ಗಳಿಸಿ ಸಂಭ್ರಮಿಸಿದ ಕರ್ನಾಟಕ ತಂಡದ ನಾಯಕ ದೇವದತ್ತ ಪಡಿಕ್ಕಲ್ (ಎಡ). ಶತಕ ಗಳಿಸಿದ ಆರ್. ಸ್ಮರಣ್

ಶಮಿ, ಮುಕೇಶ್ ಮಿಂಚು; ಇನಿಂಗ್ಸ್ ಮುನ್ನಡೆಯತ್ತ ಬಂಗಾಳ

ಕಲ್ಯಾಣಿ (ಬಂಗಾಳ): ಅನುಭವಿ ವೇಗಿ ಮೊಹಮ್ಮದ್ ಶಮಿ ಮತ್ತು ಮುಕೇಶ್ ಕುಮಾರ್ ಅವರ ಉತ್ತಮ ಬೌಲಿಂಗ್‌ನಿಂದಾಗಿ ಇಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಸೆಮಿಫೈನಲ್‌ನಲ್ಲಿ ಜಮ್ಮು–ಕಾಶ್ಮೀರ ತಂಡವು ಮೊದಲ ಇನಿಂಗ್ಸ್ ಹಿನ್ನಡೆಯ ಆತಂಕ ಎದುರಿಸುತ್ತಿದೆ.

ಸುದೀಪ್ ಕುಮಾರ್ ಘರಾಮಿ (146; 246ಎ, 21ಎ, 4X1) ಅವರ ಶತಕದ ಬಲದಿಂದ ಆತಿಥೇಯ ಬಂಗಾಳ 97.1 ಓವರ್‌ಗಳಲ್ಲಿ 328 ರನ್ ಗಳಿಸಿತು. ಕಾಶ್ಮೀರದ ಅಕೀಬ್ ನಬಿ (87ಕ್ಕೆ5) ಮತ್ತೊಮ್ಮೆ ಐದು ವಿಕೆಟ್ ಗುಚ್ಛ ಗಳಿಸಿದರು.

ಇನಿಂಗ್ಸ್ ಆರಂಭಿಸಿದ ಕಾಶ್ಮೀರ ತಂಡದ ಆರಂಭ ಉತ್ತಮವಾಗಿರಲಿಲ್ಲ. ಶಮಿ (60ಕ್ಕೆ3) ಮತ್ತು ಮುಕೇಶ್ (40ಕ್ಕೆ2) ಅವರ ಉತ್ತಮ ಬೌಲಿಂಗ್ ಮುಂದೆ ಕೇವಲ 13 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ನಾಯಕ ಪಾರಸ್ ಡೋಗ್ರಾ (58; 112ಎ) ಮತ್ತು ಅಬ್ದುಲ್ ಸಮದ್ (82; 85ಎ) ಅವರು ತಂಡಕ್ಕೆ ಆಸರೆಯಾದರು. ಆದರೆ ಮುಕೇಶ್ ಮತ್ತು ಶಮಿ ಕ್ರಮವಾಗಿ ಡೋಗ್ರಾ ಮತ್ತು ಸಮದ್ ವಿಕೆಟ್ ಕಬಳಿಸಿದರು. ದಿನದಾಟದ ಅಂತ್ಯಕ್ಕೆ ಕಾಶ್ಮೀರ ತಂಡವು 51 ಓವರ್‌ಗಳಲ್ಲಿ 5 ವಿಕೆಟ್ ಗಳಿಗೆ 198 ರನ್ ಗಳಿಸಿತು. ಅಬಿದ್ ಮುಷ್ತಾಕ್ (ಬ್ಯಾಟಿಂಗ್ 26) ಮತ್ತು ಕನಯ್ಯಾ ವಾಧ್ವಾನ್ (ಬ್ಯಾಟಿಂಗ್ 10) ಕ್ರೀಸ್‌ನಲ್ಲಿದ್ದಾರೆ.

ಪಾರಸ್ ಡೋಗ್ರಾ ಅವರು ರಣಜಿ ಟ್ರೋಫಿ ಕ್ರಿಕೆಟ್ ಇತಿಹಾಸದಲ್ಲಿ 10 ಸಾವಿರ ರನ್ ಪೂರೈಸಿದ ಎರಡನೇ ಬ್ಯಾಟರ್ ಎಂಬ ಗೌರವಕ್ಕೂ ಪಾತ್ರರಾದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಂಗಾಳ: 328 (ಸುದೀಪ್ ಕುಮಾರ್ ಘರಾಮಿ 146, ಸುಮಂತ್ ಗುಪ್ತಾ 39, ಅಕೀಬ್ ನಬಿ 87ಕ್ಕೆ5, ಸುನಿಲ್ ಕುಮಾರ್ 41ಕ್ಕೆ3) ಜಮ್ಮು–ಕಾಶ್ಮೀರ: 51 ಓವರ್‌ಗಳಲ್ಲಿ 5ಕ್ಕೆ198 (ಪಾರಸ್ ಡೋಗ್ರಾ 58, ಅಬ್ದುಲ್ ಸಮದ್ 82, ಮೊಹಮ್ಮದ್ ಶಮಿ 60ಕ್ಕೆ3, ಮುಕೇಶ್ ಕುಮಾರ್ 40ಕ್ಕೆ2)

ಐಟಿಎಫ್ ಮಹಿಳಾ ಓಪನ್ ಮುಖ್ಯಸುತ್ತು ಇಂದಿನಿಂದ

ಸಹಜಾ, ಶ್ರೀವಲ್ಲಿ ಮೇಲೆ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಸಿಂಗಲ್ಸ್ ತಾರೆಯರಾದ ಸಹಜಾ ಯಮಲಪಲ್ಲಿ ಮತ್ತು ಶ್ರೀವಲ್ಲಿ ಭಮಿಡಿಪಾಟಿ ಅವರು ಇಲ್ಲಿ ಮಂಗಳವಾರ ಆರಂಭವಾಗಲಿರುವ ಕೆಪಿಇ ಟ್ರಸ್ಟ್ ಐಟಿಎಫ್ ಮಹಿಳಾ ಓಪನ್ ಟೂರ್ನಿಯಲ್ಲಿ ಭಾರತದ ಸವಾಲನ್ನು ಮುನ್ನಡೆಸಲಿದ್ದಾರೆ.

ಮುಖ್ಯಸುತ್ತಿನ ಹಣಾಹಣಿಗೆ ಕಬ್ಬನ್ ಪಾರ್ಕ್‌ನ ಎಸ್.ಎಂ. ಕೃಷ್ಣ ಟೆನಿಸ್ ಕ್ರೀಡಾಂಗಣ ಸಜ್ಜಾಗಿದೆ. ಈ ಟೂರ್ನಿಯನ್ನು ಕಳೆದ ವರ್ಷ ಐಟಿಎಫ್ ಡಬ್ಲ್ಯು50ಯಿಂದ ಡಬ್ಲ್ಯು100ಕ್ಕೆ ಮೇಲ್ದರ್ಜೆಗೆ ಏರಿಸಲಾಗಿದ್ದು, ತುರುಸಿನ ಪೈಪೋಟಿಯನ್ನು ನಿರೀಕ್ಷಿಸಲಾಗಿದೆ. ಟೂರ್ನಿಯ ಪ್ರಧಾನ ಸುತ್ತಿನಲ್ಲಿ ಭಾರತದ ಆರು ಆಟಗಾರ್ತಿಯರು ಸ್ಪರ್ಧಿಸಲಿದ್ದಾರೆ.

ಹೈದರಾಬಾದ್‌ನ ಸಹಜಾ ಅವರು ದಕ್ಷಿಣ ಕೊರಿಯಾದ ದಯೋನ್ ಬ್ಯಾಕ್ ವಿರುದ್ಧ; ತೆಲಂಗಾಣದ ಶ್ರೀವಲ್ಲಿ ಅವರು ಮಾಲ್ಟಾದ ಫ್ರಾನ್ಸೆಸ್ಕಾ ಕುರ್ಮಿ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ. ವೈಲ್ಡ್ ಕಾರ್ಡ್ ಪ್ರವೇಶ ಪಡೆದಿರುವ ತಮಿಳುನಾಡಿನ 16 ವರ್ಷದ ಮಾಯಾ ರಾಜೇಶ್ವರನ್ ರೇವತಿ ಅವರು ಐದನೇ ಶ್ರೇಯಾಂಕದ ಪೋಲಿನಾ ಇಟ್ಸೆಂಕೊ (ರಷ್ಯಾ) ವಿರುದ್ಧ ಕಠಿಣ ಸವಾಲಿಗೆ ಸಜ್ಜಾಗಿದ್ದಾರೆ. ಶ್ರುತಿ ಅಹ್ಲಾವತ್ ಮತ್ತು ವೈಷ್ಣವಿ ಅಡ್ಕರ್ ಅವರೂ ವೈಲ್ಡ್‌ಕಾರ್ಡ್ ಪಡೆದಿದ್ದಾರೆ.

ಗಿಬ್ಸನ್‌ಗೆ ಅಗ್ರಸ್ಥಾನ: ಆಸ್ಟ್ರೇಲಿಯಾದ ತಾಲಿಯಾ ಗಿಬ್ಸನ್ ಮತ್ತು ಥಾಯ್ಲೆಂಡ್‌ನ ಲನ್ಲಾನಾ ತಾರಾರುಡಿ ಅವರು ಕ್ರಮವಾಗಿ ಮೊದಲೆರಡು ಶ್ರೇಯಾಂಕ ಪಡೆದಿದ್ದಾರೆ. ವಿಶ್ವ ರ‍್ಯಾಂಕಿಂಗ್‌ನಲ್ಲಿ ಅವರು ಕ್ರಮವಾಗಿ 112ನೇ ಮತ್ತು 126ನೇ ಸ್ಥಾನದಲ್ಲಿದ್ದಾರೆ.

ಭಾರತದ ವೈದೇಹಿ ಚೌಧರಿ

ಗಿಬ್ಸನ್ ಅವರು ಮೊದಲ ಸುತ್ತಿನಲ್ಲಿ ಕ್ವಾಲಿಫೈಯರ್ ಆಟಗಾರ್ತಿ ವೈದೇಹಿ ಚೌಧರಿ ಅವರನ್ನು ಎದುರಿಸುವರು. ಗುಜರಾತ್‌ನ 26 ವರ್ಷದ ವೈದೇಹಿ ಸೋಮವಾರ ನಡೆದ ಅರ್ಹತಾ ಸುತ್ತಿನ ಕೊನೆಯ ಪಂದ್ಯದಲ್ಲಿ 6–2, 7–5ರಿಂದ ರಷ್ಯಾದ ಎವ್ಗೆನಿಯಾ ಬುರ್ಡಿನಾ ಅವರನ್ನು ಹಿಮ್ಮೆಟ್ಟಿಸಿದರು.

ಅರ್ಹತಾ ಸುತ್ತಿನ ಮೊದಲ ಪಂದ್ಯ ಗೆದ್ದಿದ್ದ ಭಾರತದ ಅಂಕಿತಾ ರೈನಾ ಎರಡನೇ ಪಂದ್ಯದಲ್ಲಿ ನಿರಾಸೆ ಮೂಡಿಸಿದರು. ಅವರು 6–2, 2–6, 1–6ರಿಂದ ಕ್ರಿಸ್ಟಿಯಾನಾ ಸಿಡೋರೊವಾ (ರಷ್ಯಾ) ಅವರಿಗೆ ಸೋತರು.

ಸೋಲು ಕಲಿಸುವ ಪಾಠ ದೊಡ್ಡದು

ಆರ್‌ಸಿಬಿ ಮಹಿಳಾ ತಂಡದ ಬ್ಯಾಟಿಂಗ್ ಕೋಚ್ ಮುರಳಿ ಅಭಿಮತ

● ಗಿರೀಶ ದೊಡ್ಡಮನಿ

ಬೆಂಗಳೂರು: ‘ಲೀಗ್ ಹಂತದ ಆರಂಭದಲ್ಲಿ ಸತತ ಐದು ಪಂದ್ಯ ಗೆದ್ದ ಮೇಲೆ ಎರಡು ಪಂದ್ಯಗಳಲ್ಲಿ ಸೋತಿದ್ದು ಒಳ್ಳೆಯದೇ ಆಯಿತು. ಸೋಲು ಬಹಳಷ್ಟು ವಿಷಯಗಳನ್ನು ಕಲಿಸುತ್ತದೆ. ಆದ್ದರಿಂದಲೇ ಫೈನಲ್ ವರೆಗೂ ಗೆಲುವಿನ ಯಾತ್ರೆ ಮುಂದುವರಿಯಿತು’–

ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಟೂರ್ನಿಯ ಪ್ರಶಸ್ತಿ ವಿಜೇತ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬ್ಯಾಟಿಂಗ್ ಕೋಚ್ ಆರ್.ಎಕ್ಸ್. ಮುರಳಿ ಅವರ ಮಾತುಗಳಿವು. ‘ಸೋಲೇ ಗೆಲುವಿನ ಮೆಟ್ಟಿಲು..’ ಎಂಬ ನಾಣ್ಣುಡಿಯನ್ನು ಪರಿಣಾಮಕಾರಿಯಾಗಿಸಿದ ಆ ಕ್ಷಣಗಳನ್ನು ಅವರು ‘ಪ್ರಜಾವಾಣಿ’ಯೊಂದಿಗೆ ಹಂಚಿಕೊಂಡರು.

● **ಸತತ ಗೆಲುವುಗಳ ನಂತರ ಎರಡು ಸೋಲುಗಳು ತಂಡದ ಮೇಲೆ ಯಾವ ರೀತಿ ಪರಿಣಾಮ ಬೀರಿದ್ದವು. ಅದರಿಂದ ಹೊರಬಂದಿದ್ದು ಹೇಗೆ?**

ನಮ್ಮ ತಂಡದಲ್ಲಿ ಒಂದಿಬ್ಬರನ್ನು ಬಿಟ್ಟರೆ ಉಳಿದವರೆಲ್ಲರೂ ಅನುಭವಿ ಆಟಗಾರ್ತಿಯರು. ಕಳೆದ ಕೆಲವು ವರ್ಷಗಳಿಂದ ನಿರಂತರವಾಗಿ ಕ್ರಿಕೆಟ್ ಆಡಿದ್ದಾರೆ. ಆದ್ದರಿಂದ ತಮ್ಮ ಹೊಣೆಯನ್ನು ಚೆನ್ನಾಗಿ ಅರಿತವರು. ಬಹಳಷ್ಟು ಪೈಪೋಟಿ ಇರುವ ಕ್ರಿಕೆಟ್‌ನಲ್ಲಿ ಸೋಲು, ಗೆಲುವುಗಳು ಸಹಜ. ಆದರೆ ಸೋತಾಗ ಕಲಿಯುವ ಪಾಠಗಳು ಅತ್ಯಮೂಲ್ಯ. ಈ ಟೂರ್ನಿಯಲ್ಲಿ ಮೊದಲನೇಯದಾಗಿ ನಾವು ನವೀ ಮುಂಬೈನ ಡಿವೈ ಪಾಟೀಲ ಕ್ರೀಡಾಂಗಣದಲ್ಲಿ ಕೆಲವು ಪಂದ್ಯಗಳನ್ನು ಆಡಿದೆವು. ನಂತರ ವಡೋದರಾದಲ್ಲಿ ಉಳಿದೆಲ್ಲ ಪಂದ್ಯಗಳನ್ನು ಆಡಿದೆವು. ಎರಡೂ ಕಡೆಯ ಹವಾಗುಣ, ಪರಿಸ್ಥಿತಿಗಳು ವಿಭಿನ್ನ. ಅದಕ್ಕೆಲ್ಲ ಹೊಂದಿಕೊಂಡು ಆಡುವುದರಲ್ಲಿ ಯಶಸ್ವಿಯಾಗಿದ್ದು ಗೆಲುವಿನ ಗುಟ್ಟು.

● **ಮಯಂಕ್ ಅಗರವಾಲ್ ಸೇರಿದಂತೆ ಹಲವು ಪುರುಷ ಕ್ರಿಕೆಟಿಗರಿಗೆ ತರಬೇತಿ ನೀಡಿದ್ದೀರಿ. ಆದರೆ ಮಹಿಳೆಯರಿಗೆ ತರಬೇತಿ ನೀಡುವಾಗ ಎದುರಿಸಿದ ಸವಾಲುಗಳು ಯಾವುವು?**

ಪುರುಷರು ಮತ್ತು ಮಹಿಳೆಯರ ತಂಡಗಳಿಗೆ ತರಬೇತಿ ನೀಡುವುದು ವಿಭಿನ್ನ ಅನುಭವ. ನಾನು ಎನ್‌ಸಿಎ (ಪ್ರಸ್ತುತ ಬಿಸಿಸಿಐ ಶ್ರೇಷ್ಠತಾ ಕೇಂದ್ರ)ನಲ್ಲಿ ಶೈಕ್ಷಣಿಕ ವಿಭಾಗದ ಕೋಚ್ ಆಗಿದ್ದೇನೆ. ಅಲ್ಲಿ ಒಂದು ಪಾಠವಿದೆ. ಅದರಲ್ಲಿ ಮಹಿಳೆಯರು ಯಾವಾಗಲೂ ಪುರುಷರಿಗಿಂತ ಭಿನ್ನವಾಗಿ ಯೋಚಿಸುತ್ತಾರಂತೆ. ಅದು ನಿಜವೂ ಹೌದು. 2005ರಲ್ಲಿ ಹೆಣ್ಣುಮಕ್ಕಳ ತಂಡಕ್ಕೆ ಕೆಲಕಾಲ ತರಬೇತಿ ನೀಡಿದ್ದೆ. ಆದರೆ ಇಷ್ಟು ವರ್ಷಗಳಲ್ಲಿ ಮಹಿಳಾ ಕ್ರಿಕೆಟ್ ಸಂಪೂರ್ಣ ಬದಲಾಗಿದೆ. ಆಟಗಾರ್ತಿಯರ ಆತ್ಮವಿಶ್ವಾಸವೂ ಚೆನ್ನಾಗಿ ಬೆಳೆದಿದೆ.

● **ಹೋದ ವರ್ಷ ವಿಶ್ವಕಪ್ ಜಯಿಸಿದ ಭಾರತ ತಂಡದಲ್ಲಿದ್ದ ಕೆಲವು ಆಟಗಾರ್ತಿಯರು ಆರ್‌ಸಿಬಿಯಲ್ಲಿದ್ದರು. ದೊಡ್ಡ ಸಾಧನೆಯನ್ನೇ ಮಾಡಿದ್ದೇವೆ. ಡಬ್ಲ್ಯುಪಿಎಲ್ ದೊಡ್ಡದಲ್ಲ ಎಂಬ ಭಾವನೆ ಅವರಲ್ಲಿತ್ತಾ?**

ಖಂಡಿತ ಇಲ್ಲ. ಪ್ರತಿಯೊಬ್ಬ ಆಟಗಾರ್ತಿಯೂ ವೃತ್ತಿಪರ ಮನೋಭಾವ ಹೊಂದಿದ್ದರು. ವಿಶ್ವಕಪ್ ಜಯಿಸಿದ್ದೇವೆ ಇದೇನೂ ದೊಡ್ಡದಲ್ಲ ಎಂಬ ಮನೋಭಾವ ಅವರಲ್ಲಿ ಇರಲಿಲ್ಲ. ಬದಲಿಗೆ ವಿಶ್ವಕಪ್ ಜಯವು ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿಸಿತ್ತು. ಗೆಲುವಿನ ಓಟವನ್ನು ಮುಂದುವರಿಸುವ ಮನೋಬಲ ಅವರದ್ದಾಗಿತ್ತು.

● **ಪ್ರಶಸ್ತಿ ಜಯದಲ್ಲಿ ಸ್ಮೃತಿ ನಾಯಕತ್ವದ ಪಾತ್ರವೇನು?**

ಚಲನಶೀಲತೆ ಮೈಗೂಡಿಸಿಕೊಂಡಿರುವ ನಾಯಕಿ. ಸ್ವಭಾವತಃ ಸ್ನೇಹಜೀವಿಯಾಗಿರುವ ಸ್ಮೃತಿ ತಮ್ಮ ತಂಡದಲ್ಲಿ ಪ್ರತಿಯೊಬ್ಬರೊಂದಿಗೆ ಉತ್ತಮ ಬಾಂಧವ್ಯ ಇಟ್ಟುಕೊಂಡಿದ್ದಾರೆ. ಪಂದ್ಯಕ್ಕೆ ಮುನ್ನ ರೂಪುಗೊಳ್ಳುವ ತಂಡದ ಯೋಜನೆಯನ್ನು ಅಚ್ಚುಕಟ್ಟಾಗಿ ಅನುಷ್ಠಾನಗೊಳಿಸುತ್ತಾರೆ. ಅಲ್ಲದೇ ಪಂದ್ಯ ನಡೆಯುವ ಹಂತದಲ್ಲಿ ಆಯಾ ಸಂದರ್ಭಕ್ಕೆ ತಕ್ಕಂತೆ ತಂತ್ರಗಾರಿಕೆಯನ್ನೂ ರೂಪಿಸುವ ಚಾಣಾಕ್ಷತೆ ಅವರಲ್ಲಿದೆ. ನೆಟ್ಸ್ ಅಭ್ಯಾಸದ ಸಂದರ್ಭದಲ್ಲಿಯೇ ಎಲ್ಲರ ಜೊತೆ ಚರ್ಚಿಸಿ ಅನುಮಾನಗಳನ್ನು ಬಗೆಹರಿಸಿಕೊಳ್ಳುತ್ತಾರೆ. ಅದರಿಂದಾಗಿ ಅವರಲ್ಲಿ ಹೆಚ್ಚು ಸ್ಪಷ್ಟತೆ ಇರುತ್ತದೆ.

● **ಕರ್ನಾಟಕದವರೇ ಆದ ಶ್ರೇಯಾಂಕಾ ಪಾಟೀಲರು ದೀರ್ಘ ಸಮಯದ ವಿಶ್ರಾಂತಿಯ ನಂತರ ತಂಡಕ್ಕೆ ಮರಳಿದ್ದರು. ಕಣಕ್ಕಿಳಿದಾಗ ಅವರು ಒತ್ತಡದಲ್ಲಿ ಇದ್ದರೆ?**

ಹೆಚ್ಚು ಒತ್ತಡವೇನೂ ಇರಲಿಲ್ಲ. ಏಕೆಂದರೆ ಅವರು ಗಾಯದಿಂದಾಗಿ ಸುಮಾರು ಒಂದು ವರ್ಷ ಆಟದಿಂದ ದೂರವಿದ್ದಾಗಲೂ ಆರ್‌ಸಿಬಿಯ ಕುಟುಂಬದೊಂದಿಗೆ ನಂಟು ಕಡಿದಿರಲಿಲ್ಲ. ಅವರಿಗೆ ಆರ್‌ಸಿಬಿಯು ತನ್ನ ಎಲ್ಲ ಚಟುವಟಿಕೆಗಳಲ್ಲಿಯೂ ಒಳಗೊಳ್ಳುತ್ತಿತ್ತು. ಅಲ್ಲದೇ ಕಳೆದ ಹರಾಜು ಪ್ರಕ್ರಿಯೆಯಲ್ಲಿ ಅವರನ್ನು ತಂಡದಲ್ಲಿ ಉಳಿಸಿಕೊಳ್ಳಲಾಯಿತು. ಇದರಿಂದಾಗಿ ಅವರಿಗೆ ಅಭದ್ರತೆ ಕಾಡಲಿಲ್ಲ. ತಂಡಕ್ಕೆ ಹೆಚ್ಚಿನ ಯಶಸ್ಸು ತಂದುಕೊಡಲುತಮ್ಮ ಪೂರ್ಣ ಸಾಮರ್ಥ್ಯವನ್ನು ಒಡ್ಡಿದರು. ಇನ್ನೂ ಮಾನಸಿಕ ಸದೃಢತೆ ಬರಲು ಅವರ ಕುಟುಂಬ, ವೈಯಕ್ತಿಕ ಕೋಚ್, ಪುನಶ್ಚೇತನ ಪ್ರಕ್ರಿಯೆ ಮತ್ತು ತಂಡದಲ್ಲಿ ನಮ್ಮ ನೆರವು ಸಿಬ್ಬಂದಿಯ ಮಾರ್ಗದರ್ಶನಗಳೆಲ್ಲವೂ ಸಹಾಯಕವಾದವು.

ಟ್ರೋಫಿಯೊಂದಿಗೆ ಆರ್.ಎಕ್ಸ್. ಮುರಳೀಧರ್

ಎಕ್ಸ್ ಚಿತ್ರ

ಬೆಂಗಾಲ್ ಜಯ

ಕೋಲ್ಕತ್ತದ ವಿವೇಕಾನಂದ ಯುವ ಭಾರತಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಇಂಡಿಯನ್ ಸೂಪರ್ ಲೀಗ್‌ನ ಪಂದ್ಯದಲ್ಲಿ ಆತಿಥೇಯ ಈಸ್ಟ್ ಬೆಂಗಾಲ್ (ಹಳದಿ) ಮತ್ತು ನಾರ್ತ್ ಈಸ್ಟ್ ಯುನೈಟೆಡ್ ತಂಡದ ಆಟಗಾರರು ಚೆಂಡಿಗಾಗಿ ಸೆಣಸಾಡಿದರು. ಬೆಂಗಾಲ್ 3–0ಯಿಂದ ಜಯ ಸಾಧಿಸಿತು

ಸಂಕ್ಷಿಪ್ತ ಸುದ್ದಿ

ಕ್ರಿಕೆಟ್: ರಾಜ್ಯ ವನಿತೆಯರಿಗೆ ಸೋಲು

ಬೆಂಗಳೂರು: ಬೌಲರ್‌ಗಳ ಸಂಘಟಿತ ದಾಳಿಯ ನೆರವಿನಿಂದ ಮಹಾರಾಷ್ಟ್ರ ತಂಡವು ಬಿಸಿಸಿಐ ಸೀನಿಯರ್ ಮಹಿಳಾ ಏಕದಿನ ಕ್ರಿಕೆಟ್ ಟ್ರೋಫಿಯ ಪಂದ್ಯದಲ್ಲಿ ಕರ್ನಾಟಕ ತಂಡದ ವಿರುದ್ಧ 4 ರನ್‌ಗಳ ರೋಚಕ ಜಯ ಸಾಧಿಸಿತು.

ರಾಜ್‌ಕೋಟ್‌ನಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಕರ್ನಾಟಕ ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ರಾಜೇಶ್ವರಿ ಗಾಯಕವಾಡ್ (20ಕ್ಕೆ4) ಹಾಗೂ ಬಿ.ಜಿ. ತೇಜಸ್ವಿನಿ (23ಕ್ಕೆ2) ಅವರ ಸ್ಪಿನ್ ಕೈಚಳಕದ ಎದುರು ಮಹಾರಾಷ್ಟ್ರ ತಂಡವು 48.2 ಓವರ್‌ಗಳಲ್ಲಿ 175 ರನ್‌ಗಳಿಗೆ ಕುಸಿಯಿತು.

ರಾಜೇಶ್ವರಿ ಗಾಯಕವಾಡ್

ಗುರಿ ಬೆನ್ನಟ್ಟಿದ ರಾಜ್ಯ ತಂಡದ ಆರಂಭ ಉತ್ತಮವಾಗಿರಲಿಲ್ಲ. ನಾಯಕಿ ಶುಭಾ ಸತೀಶ್ 9 ರನ್ ಗಳಿಸಿ ಔಟಾದರು. ರಾಜ್ಯ ತಂಡವು ನಿಯಮಿತವಾಗಿ ವಿಕೆಟ್ ಕಳೆದುಕೊಳ್ಳುತ್ತ ಸಾಗಿತು. ಈ ಹಂತದಲ್ಲಿ, ಶಿಶಿರಾ ಕೆ. ಗೌಡ (25; 73ಎ) ಅವರು ವಿಕೆಟ್ ಕೀಪರ್ ಸೌಮ್ಯ ವರ್ಮಾ (39; 54ಎ) ಅವರೊಂದಿಗೆ 61 ರನ್ ಜೊತೆಯಾಟವಾಡಿ ಚೇತರಿಕೆ ನೀಡಿದರು.

ತೇಜಸ್ವಿನಿ (ಔಟಾಗದೇ 32; 51ಎ) ಹಾಗೂ ಮೋನಿಕಾ ಪಟೇಲ್ (ಔಟಾಗದೇ 27; 27ಎ) ಅವರು ಮುರಿಯದ ಒಂಬತ್ತನೇ ವಿಕೆಟ್ ಜೊತೆಯಾಟದಲ್ಲಿ 41 ರನ್ ಸೇರಿಸಿದರು. ಆದರೂ, ಅವರ ಹೋರಾಟಕ್ಕೆ ಗೆಲುವು ದಕ್ಕಲಿಲ್ಲ. ಶುಭ ಪಡೆಯು 8 ವಿಕೆಟ್‌ಗಳಿಗೆ 171 ರನ್ ಗಳಿಸಿ ಓವರ್ ಪೂರೈಸಿತು.

ಇದಕ್ಕೆ ಮೊದಲು, ರಾಜೇಶ್ವರಿ ಹಾಗೂ ತೇಜಸ್ವಿನಿ ಜೋಡಿಯ ಸ್ಪಿನ್ ದಾಳಿ ಎದುರು ಅಲ್ಪ ಮೊತ್ತಕ್ಕೆ ಕುಸಿಯುವ ಅಪಾಯದಲ್ಲಿದ್ದ ಮಹಾರಾಷ್ಟ್ರ ತಂಡಕ್ಕೆ ನಾಯಕಿ ಅನುಜಾ ಪಾಟೀಲ್ (40; 70ಎ) ಆಸರೆಯಾದರು. ಆರಂಭ ಆಟಗಾರ್ತಿ ಮುಕ್ತ ಆರ್. ಮಾಗ್ರೆ (24; 35ಎ) ಹಾಗೂ ವೈಷ್ಣವಿ ಶಿಂದೆ (21; 46ಎ) ಅವರೂ ಉಪಯುಕ್ತ ಕಾಣಿಕೆ ನೀಡಿದರು.

ಸಂಕ್ಷಿಪ್ತ ಸ್ಕೋರು: ಮಹಾರಾಷ್ಟ್ರ: 48.2 ಓವರ್‌ಗಳಲ್ಲಿ 175 (ಅನುಜಾ ಪಾಟೀಲ 40 , ಮುಕ್ತ ಆರ್. ಮಾಗ್ರೆ 24; ರಾಜೇಶ್ವರಿ ಗಾಯಕವಾಡ 20ಕ್ಕೆ4, ಬಿ.ಜಿ. ತೇಜಸ್ವಿನಿ 23ಕ್ಕೆ2). ಕರ್ನಾಟಕ: 50 ಓವರ್‌ಗಳಲ್ಲಿ 8 ವಿಕೆಟ್‌ಗೆ 171 (ಸೌಮ್ಯಾ ವರ್ಮಾ 39, ಬಿ.ಜಿ. ತೇಜಸ್ವಿನಿ ಔಟಾಗದೇ 32, ಮೋನಿಕಾ ಸಿ. ಪಟೇಲ್ ಔಟಾಗದೇ 27; ಶ್ರದ್ಧಾ ಬಿ.ಪಿ. 29ಕ್ಕೆ3, ಅನುಜಾ ಪಾಟೀಲ 27ಕ್ಕೆ2, ಭಕ್ತಿ ಎಂ. ಮಿರಜಕರ್ 27ಕ್ಕೆ2)

ಬಿಬಿಸಿ ವರ್ಷದ ಮಹಿಳಾ ಕ್ರೀಡಾಪಟು ಪ್ರಶಸ್ತಿಗೆ ಸ್ಮೃತಿ ಮಂದಾನ ಆಯ್ಕೆ

ನವದೆಹಲಿ (ಪಿಟಿಐ): ಐಸಿಸಿ ಮಹಿಳಾ ವಿಶ್ವಕಪ್ ವಿಜೇತ ಭಾರತ ತಂಡದ ಆಟಗಾರ್ತಿ ಸ್ಮೃತಿ ಮಂದಾನ ಅವರು ಬಿಬಿಸಿ ನೀಡುವ 2025ನೇ ಸಾಲಿನ ‘ಭಾರತೀಯ ಮಹಿಳಾ ಕ್ರೀಡಾಪಟು’ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಫಿಡೆ ಮಹಿಳಾ ಚೆಸ್ ವಿಶ್ವಕಪ್ ವಿಜೇತ ದಿವ್ಯಾ ದೇಶಮುಖ್ ಅವರು ವರ್ಷದ ಉದಯೋನ್ಮುಖ ಆಟಗಾರ್ತಿ ಗೌರವಕ್ಕೆ ಭಾಜನರಾಗಿದ್ದಾರೆ.

2024ರ ಪ್ಯಾರಿಸ್ ಪ್ಯಾರಾಲಿಂಪಿಕ್ಸ್ ನಲ್ಲಿ ಎರಡು ಕಂಚಿನ ಪದಕ ಜಯಿಸಿದ್ದ ಪ್ರೀತಿ ಪಾಲ್ ಅವರು ಪ್ಯಾರಾ ಮಹಿಳಾ ಅಥ್ಲೀಟ್ ಪ್ರಶಸ್ತಿ ಪಡೆದಿದ್ದಾರೆ. ಒಲಿಂಪಿಕ್ಸ್ ಶೂಟಿಂಗ್‌ನಲ್ಲಿ ಫೈನಲ್ ತಲುಪಿದ್ದ ಭಾರತದ ಮೊದಲ ಮಹಿಳಾ ಶೂಟರ್ ಅಂಜಲಿ ಭಾಗವತ್ ಅವರು ಜೀವಮಾನ ಸಾಧನೆ ಗೌರವಕ್ಕೆ ಪಾತ್ರರಾಗಿದ್ದಾರೆ.

ದಿಗ್ಗಜ ಟೆನಿಸ್ ಆಟಗಾರ ಲಿಯಾಂಡರ್ ಪೇಸ್, ಪ್ಯಾರಾಲಿಂಪಿಕ್ ಪದಕ ವಿಜೇತೆ ದೀಪಾ ಮಲಿಕ್ ಹಾಗೂ ಭಾರತ ಅಥ್ಲೆಟಿಕ್ ಫೆಡರೇಶನ್‌ನ ಹಿರಿಯ ಉಪಾಧ್ಯಕ್ಷೆ ಅಂಜು ಬಾಬಿ ಜಾರ್ಜ್ ಅವರನ್ನೊಳಗೊಂಡ ತೀರ್ಪುಗಾರರ ಸಮಿತಿಯು ವಿಜೇತರನ್ನು ಆಯ್ಕೆ ಮಾಡಿದೆ.

ನಿಸಾಂಕ ಶತಕ; ಲಂಕಾಕ್ಕೆ ಜಯ

ಪಲೆಕೆಲೆ (ಶ್ರೀಲಂಕಾ) (ಪಿಟಿಐ): ಪಥುಮ್ ನಿಸಾಂಕ ಗಳಿಸಿದ ಶತಕದ ಬಲದಿಂದ ಶ್ರೀಲಂಕಾ ತಂಡವು ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಸ್ಟ್ರೇಲಿಯಾ ವಿರುದ್ಧ ಜಯಭೇರಿ ಬಾರಿಸಿತು. ಇದರೊಂದಿಗೆ ಸೂಪರ್ ಎಂಟರ ಹಂತಕ್ಕೆ ರಹದಾರಿ ಪಡೆಯಿತು. ಮಾಜಿ ಚಾಂಪಿಯನ್ ಆಸ್ಟ್ರೇಲಿಯಾ ತಂಡಕ್ಕೆ ಹಾದಿ ಕಠಿಣವಾಯಿತು.

ಸೋಮವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಶ್ರೀಲಂಕಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. 182 ರನ್‌ಗಳ ಗುರಿ ಬೆನ್ನಟ್ಟಿದ ಆತಿಥೇಯ ತಂಡವು ಇನಿಂಗ್ಸ್‌ನಲ್ಲಿ ಇನ್ನೂ 2 ಓವರ್‌ಗಳು ಉಳಿದಂತೆಯೇ 8 ವಿಕೆಟ್‌ಗಳಿಂದ ಗೆದ್ದಿತು. ನಿಸಾಂಕ (ಅಜೇಯ 100; 52ಎಸೆತ) ಪ್ರಸಕ್ತ ಟೂರ್ನಿಯ ಮೊದಲ ಶತಕ ಬಾರಿಸಿದರು. ಕುಸಾಲ ಮೆಂಡಿಸ್ (51; 38ಎ) ಅವರು ಅರ್ಧಶತಕದ ಕಾಣಿಕೆ ನೀಡಿದರು.

ಡಿ ಗುಂಪಿನಲ್ಲಿ ಸತತ ಮೂರು ಜಯ ಸಾಧಿಸಿದ ಶ್ರೀಲಂಕಾ 6 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಎರಡು ಪಂದ್ಯ ಗೆದ್ದಿರುವ ಜಿಂಬಾಬ್ವೆ (4) ಎರಡನೇ ಸ್ಥಾನದಲ್ಲಿದೆ. ತನ್ನ ಪಾಲಿನಲ್ಲಿ ಇನ್ನೂ ಉಳಿದಿರುವ ಎರಡು ಪಂದ್ಯಗಳಲ್ಲಿ ಒಂದರಲ್ಲಿ ಗೆದ್ದರೂ ಸೂಪರ್ 8 ಪ್ರವೇಶಿಸಲಿದೆ. ಆಸ್ಟ್ರೇಲಿಯಾ 3ರಲ್ಲಿ ಎರಡು ಸೋತು, ಒಂದರಲ್ಲಿ ಜಯಿಸಿದೆ. 2 ಅಂಕಗಳೊಂದಿಗೆ ಮೂರನೇ ಸ್ಥಾನದಲ್ಲಿದೆ. ಕೊನೆಯ ಪಂದ್ಯದಲ್ಲಿ ಒಮಾನ್ ವಿರುದ್ಧ ಆಡಬೇಕಿದೆ. ಅದರಲ್ಲಿ ಉತ್ತಮ ರನ್‌ರೇಟ್‌ನಿಂದ ಗೆಲ್ಲಬೇಕು. ಜಿಂಬಾಬ್ವೆ ತನ್ನ ಎರಡೂ ಪಂದ್ಯಗಳಲ್ಲಿ ಸೋಲಬೇಕು. ಆಗ ಆಸ್ಟ್ರೇಲಿಯಾಕ್ಕೆ ಒಂದು ಅವಕಾಶ ಸಿಗಬಹುದು.

ಮಾರ್ಷ್–ಹೆಡ್ ಜತೆಯಾಟ: ಮಾರ್ಷ್ (54; 27ಎ, 4x8, 6x2) ಮತ್ತು ಹೆಡ್ (56; 29ಎ, 4x7, 6x3) ಅವರು ಮೊದಲ ವಿಕೆಟ್ ಜತೆಯಾಟದಲ್ಲಿ 104 ರನ್ ಸೇರಿಸಿದರು. ಈ ಅಡಿಪಾಯದ ಮೇಲೆ ಆಸ್ಟ್ರೇಲಿಯಾ 20 ಓವರ್‌ಗಳಲ್ಲಿ 181 ರನ್ ಗಳಿಸಿತು.

ಆದರೆ ಇವರಿಬ್ಬರ ನಂತರ ಉಳಿದ ಬ್ಯಾಟರ್‌ಗಳು ದೊಡ್ಡ ಇನಿಂಗ್ಸ್ ಆಡಲಿಲ್ಲ. ದುಶಾನ್ ಹೇಮಂತ (37ಕ್ಕೆ3) ಮತ್ತು ದುಷ್ಮಂತ ಚಮೀರಾ (36ಕ್ಕೆ2) ಅವರ ಪರಿಣಾಮಕಾರಿ ಬೌಲಿಂಗ್ ಮುಂದೆ ಮಧ್ಯಮ ಕ್ರಮಾಂಕವು ಕುಸಿಯಿತು. ಆರು ಬ್ಯಾಟರ್‌ಗಳು ಒಂದಂಕಿ ಗಳಿಸಿ ನಿರ್ಗಮಿಸಿದರು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 20 ಓವರ್‌ಗಳಲ್ಲಿ 181 (ಮಿಚೆಲ್ ಮಾರ್ಷ್ 54, ಟ್ರಾವಿಸ್ ಹೆಡ್ 56, ಜೋಶ್ ಇಂಗ್ಲಿಸ್ 27, ಗ್ಲೆನ್ ಮ್ಯಾಕ್ಸ್‌ವೆಲ್ 22, ದುಷ್ಮಂತ್ ಚಮೀರಾ 36ಕ್ಕೆ2, ದುಶಾನ್ ಹೇಮಂತ 37ಕ್ಕೆ3) ಶ್ರೀಲಂಕಾ: 18 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 184 (ಪಥುಮ್ ನಿಸಾಂಕ ಔಟಾಗದೇ 100, ಕುಸಾಲ ಮೆಂಡಿಸ್ 51, ಪವನ್ ರತ್ನಾಯಕೆ ಔಟಾಗದೇ 28, ಮಾರ್ಕಸ್ ಸ್ಟೊಯಿನಿಸ್ 46ಕ್ಕೆ2) ಫಲಿತಾಂಶ: ಶ್ರೀಲಂಕಾ ತಂಡಕ್ಕೆ 8 ವಿಕೆಟ್‌ಗಳ ಜಯ

ಪಂದ್ಯದ ಆಟಗಾರ: ಪಥುಮ್ ನಿಸಾಂಕ

ಪಥುಮ್ ನಿಸಾಂಕ ಎಎಫ್‌ಪಿ ಚಿತ್ರ

ಟಿ20 ವಿಶ್ವಕಪ್: ಅಂಕಪಟ್ಟಿ

ಬಿ ಗುಂಪು

	ತಂಡಗಳು	ಪಂದ್ಯಗಳು	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
1	ಶ್ರೀಲಂಕಾ	3	3	0	6	2.462
2	ಜಿಂಬಾಬ್ವೆ	2	2	0	4	1.984
3	ಆಸ್ಟ್ರೇಲಿಯಾ	3	1	2	2	0.414
4	ಐರ್ಲೆಂಡ್	3	1	2	2	0.150
5	ಒಮಾನ್	3	0	3	0	-4.546

ಸೂಪರ್ 8ರ ಘಟ್ಟಕ್ಕೆ ಇಂಗ್ಲೆಂಡ್: ಗಮನ ಸೆಳೆದ ಇಟಲಿ ಹೋರಾಟ

ವಿಲ್ ಜ್ಯಾಕ್ಸ್ ಆಲ್‌ರೌಂಡ್ ಆಟ

ಕೋಲ್ಕತ್ತ (ಪಿಟಿಐ): ವಿಲ್ ಜ್ಯಾಕ್ಸ್ ಅವರ ಆಲ್‌ರೌಂಡ್ ಆಟದ ನೆರವಿನಿಂದ ಇಂಗ್ಲೆಂಡ್ ತಂಡವು ಟಿ20 ವಿಶ್ವಕಪ್‌ನ ಹಾಲಿ ಆವೃತ್ತಿಯಲ್ಲಿ ಮೂರನೇ ಜಯ ದಾಖಲಿಸಿ ಸೂಪರ್ 8ರ ಘಟ್ಟಕ್ಕೆ ಲಗ್ಗೆಯಿಟ್ಟಿತು.

ಈಡನ್ ಗಾರ್ಡನ್‌ನಲ್ಲಿ ನಡೆದ ಸಿ ಗುಂಪಿನ ತನ್ನ ಕೊನೆಯ ಪಂದ್ಯದಲ್ಲಿ ಎರಡು ಬಾರಿಯ ಚಾಂಪಿಯನ್ ಇಂಗ್ಲೆಂಡ್ ತಂಡವು 24 ರನ್‌ಗಳಿಂದ ಇಟಲಿ ತಂಡವನ್ನು ಮಣಿಸಿತು. ಇದಕ್ಕೂ ಮುನ್ನ ನೇಪಾಳ ತಂಡಕ್ಕೆ ಆಘಾತ ನೀಡಿದ್ದ ಅನನುಭವಿ ಇಟಲಿ ತಂಡದ ಸಾಂಘಿಕ ಹೋರಾಟ ಗಮನ ಸೆಳೆಯಿತು.

ಇದೇ ಗುಂಪಿನಲ್ಲಿರುವ ವೆಸ್ಟ್ ಇಂಡೀಸ್ ತಂಡವು ಹ್ಯಾಟ್ರಿಕ್ ಗೆಲುವಿನೊಂದಿಗೆ ಈ ಮೊದಲೇ ಸೂಪರ್ 8ರ ಘಟ್ಟಕ್ಕೆ ಮುನ್ನಡೆದಿದೆ. ಪ್ರತಿ ಗುಂಪಿನಿಂದ ಎರಡು ತಂಡಗಳಿಗೆ ಮಾತ್ರ ಸೂಪರ್ 8ರ ಟಿಕೆಟ್ ಲಭಿಸುವುದರಿಂದ ಸ್ಕಾಟ್ಲೆಂಡ್ (2), ಇಟಲಿ (2) ಮತ್ತು ನೇಪಾಳ (0) ತಂಡಗಳು ಈ ಹಂತದಲ್ಲೇ ಹೊರಬಿದ್ದವು.

ಕೆಳಕ್ರಮಾಂಕದ ಬ್ಯಾಟರ್ ಜ್ಯಾಕ್ಸ್ (ಔಟಾಗದೇ 53;22ಎ, 4x3, 6x4) ಅವರ ಮಿಂಚಿನ ಅರ್ಧಶತಕದ ಬಲದಿಂದ ಇಂಗ್ಲೆಂಡ್ ತಂಡವು 7 ವಿಕೆಟ್‌ಗೆ 202 ರನ್‌ಗಳ ಬೃಹತ್ ಮೊತ್ತ ಗಳಿಸಿತು. ಆರಂಭಿಕ ಆಟಗಾರ ಫಿಲ್ ಸಾಲ್ಟ್ (28), ಟಾಮ್ ಬ್ಯಾಂಟನ್ (30), ಸ್ಯಾಮ್ ಕರನ್ (25) ಉಪಯುಕ್ತ ಕೊಡುಗೆ ನೀಡಿದರು.

ಕಠಿಣ ಗುರಿ ಬೆನ್ನಟ್ಟಿದ ಇಟಲಿ ತಂಡವು ಮೊದಲ ಓವರ್‌ನಲ್ಲೇ ಎರಡು ವಿಕೆಟ್ ಕಳೆದುಕೊಂಡಿತು. ನಂತರದಲ್ಲಿ ಜಸ್ಟಿನ್ ಮೊಸ್ಕಾ (43;34ಎ) ಮತ್ತು ಬೆನ್ ಮಾನೆಂಟಿ (60;25ಎ, 4x4, 6x6) ಅವರು ಬಲ ತುಂಬುವ ಪ್ರಯತ್ನ ಮಾಡಿದರು.

ಈ ಜೋಡಿ ನಾಲ್ಕನೇ ವಿಕೆಟ್‌ಗೆ ಮಿಂಚಿನ 92 (48ಎ) ರನ್ ಪೇರಿಸಿತು. ಮಾನೆಂಟಿ ಅವರ ವಿಕೆಟ್ ಪಡೆದ ಜ್ಯಾಕ್ಸ್ ಜೊತೆಯಾಟವನ್ನು ಮುರಿದರು. ನಂತರ ಬಂದ ಗ್ರ್ಯಾಂಟ್ ಸ್ಟಿವರ್ಟ್ (45;23ಎ, 4x2, 6x5) ಅವರು ಅಬ್ಬರಿಸಿದರೂ ಗೆಲುವಿಗೆ ಸಾಕಾಗಲಿಲ್ಲ. 20 ಓವರ್‌ಗಳಲ್ಲಿ 178 ರನ್ ಗಳಿಸಿ ಹೋರಾಟ ಮುಗಿಸಿತು. ಜೆಮಿ ಓವರ್ಟನ್ ಮತ್ತು ಸ್ಯಾಮ್ ಕರನ್ ತಲಾ ಮೂರು ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: ಇಂಗ್ಲೆಂಡ್: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 202 (ಫಿಲ್ ಸಾಲ್ಟ್ 28, ಟಾಮ್ ಬ್ಯಾಂಟನ್ 30, ಸ್ಯಾಮ್ ಕರಣ್ 25, ವಿಲ್ ಜ್ಯಾಕ್ಸ್ ಔಟಾಗದೇ 53; ಗ್ರ್ಯಾಂಟ್ ಸ್ಟಿವರ್ಟ್ 51ಕ್ಕೆ 2, ಕ್ರಿಶನ್ ಕಲುಗಮಗೆ 41ಕ್ಕೆ 2). ಇಟಲಿ: 20 ಓವರ್‌ಗಳಲ್ಲಿ 178 (ಜಸ್ಟಿನ್ ಮೊಸ್ಕಾ 43, ಬೆನ್ ಮಾನೆಂಟಿ 60, ಗ್ರ್ಯಾಂಟ್ ಸ್ಟಿವರ್ಟ್ 45; ಜೋಫ್ರಾ ಅರ್ಚರ್ 35ಕ್ಕೆ 2, ಜೆಮಿ ಓವರ್ಟನ್ 18ಕ್ಕೆ 3, ಸ್ಯಾಮ್ ಕರಣ್ 22ಕ್ಕೆ 3).

ಪಂದ್ಯದ ಆಟಗಾರ: ವಿಲ್ ಜ್ಯಾಕ್ಸ್

ಇಂಗ್ಲೆಂಡ್ ತಂಡದ ವಿಲ್ ಜ್ಯಾಕ್ಸ್ ಪಿಟಿಐ ಚಿತ್ರ

ಇಂದಿನ ಪಂದ್ಯ

ಕೆನಡಾ	V/s	ನ್ಯೂಜಿಲೆಂಡ್
ತಾಣ: ಚೆನ್ನೈ, ಆರಂಭ: ಬೆಳಿಗ್ಗೆ 11		
ಐರ್ಲೆಂಡ್	V/s	ಜಿಂಬಾಬ್ವೆ
ತಾಣ: ಪಲೆಕೆಲೆ, ಆರಂಭ: ಮಧ್ಯಾಹ್ನ 3		
ನೇಪಾಳ	V/s	ಸ್ಕಾಟ್ಲೆಂಡ್
ತಾಣ: ವಾಂಖೆಡೆ, ಆರಂಭ: ರಾತ್ರಿ 7		

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ಭಾರತ ತಂಡಕ್ಕೆ ಸಾಟಿಯಾಗದ ಪಾಕ್ ಪಡೆ

ಉಭಯ ತಂಡಗಳ 'ಜಿದ್ದಾಜಿದ್ದಿ' ಅಂತ್ಯ?

ಪ್ರಜಾವಾಣಿ ವಾರ್ತೆ

ಕೊಲಂಬೊ: ಸ್ಪಿನ್ ಬೌಲರ್‌ಗಳು ಹೆಚ್ಚಿನ ಸಂಖ್ಯೆಯಲ್ಲಿದ್ದ ಪಾಕಿಸ್ತಾನ ತಂಡದ ಎದುರಿನ ಪಂದ್ಯವು ಭಾರತ ತಂಡಕ್ಕೆ ಈ ಟೂರ್ನಿಯ ಗುಂಪು ಹಂತದ ದೊಡ್ಡ ಪರೀಕ್ಷೆ ಎಂದು ಹೇಳಲಾಗಿತ್ತು. ಆದರೆ ಸೂರ್ಯಕುಮಾರ್ ಯಾದವ್ ಬಳಗವು ಸಾಧಿಸಿದ ಗೆಲುವನ್ನು ನೋಡಿದರೆ ಉಭಯ ತಂಡಗಳ ನಡುವೆ ಇನ್ನೂ 'ಉತ್ಕಟ ಜಿದ್ದಾಜಿದ್ದಿ' ಉಳಿದಿದೆಯೇ ಎಂಬ ಪ್ರಶ್ನೆ ಮೂಡುತ್ತದೆ. ಅಷ್ಟರ ಮಟ್ಟಿಗೆ ಭಾರತವು ಏಕಪಕ್ಷೀಯ ಜಯದಾಖಲಿಸಿತು.

ಪ್ರೇಮದಾಸ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಟಿ20 ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಭಾರತ ತಂಡವು 61 ರನ್‌ಗಳಿಂದ ಗೆದ್ದಿತು. ಆರಂಭಿಕ ಬ್ಯಾಟರ್ ಇಶಾನ್ ಕಿಶನ್ 44 ಎಸೆತಗಳಲ್ಲಿ 77 ರನ್ ಗಳಿಸಿ ತಂಡದ ಗೆಲುವಿಗೆ ಬಲ ತುಂಬಿದರು. ಚೆಂಡು ನಿಧಾನ ಮತ್ತು ಕೆಳಮಟ್ಟದ ಪುಟಿತವಾಗುವ ಪಿಚ್ ಅನ್ನೇ ಅಣಕ ಮಾಡುವಂತೆ ಬೌಲಿಂಗ್ ಮಾಡಿದ ಭಾರತದ ವೇಗಿಗಳು ಸಾಮರ್ಥ್ಯ ಮೆರೆದರು. ಸ್ಪಿನ್ನರ್‌ಗಳೂ ಮೋಡಿ ಮಾಡಿದರು. ಸಾಂದರ್ಭಿಕ ಬೌಲರ್‌ಗಳಾದ ತಿಲಕ್ ವರ್ಮಾ ಮತ್ತು ರಿಂಕು ಸಿಂಗ್ ಕೂಡ ತಮ್ಮ ಬೌಲಿಂಗ್ ಕೌಶಲ ಪರೀಕ್ಷಿಸಿಕೊಂಡರು.

ಕಳೆದ ಒಂದು ದಶಕದಲ್ಲಿ ಭಾರತ ತಂಡವು ಪಾಕ್ ವಿರುದ್ಧ ತನ್ನ ಬಿಗಿಹಿಡಿತ ಸಾಧಿಸುತ್ತ ಬಂದಿದೆ. ಒಂದೆರಡು ಬಾರಿ ವ್ಯತಿರಿಕ್ತ ಫಲಿತಾಂಶಗಳು ಬಂದಿರಬಹುದು. ಹೋದ ಏಷ್ಯಾ ಕಪ್ ಟೂರ್ನಿಯ ಫೈನಲ್‌ನಲ್ಲಿ ಉಭಯ ತಂಡಗಳ ನಡುವೆ ನಿಕಟ ಸ್ಪರ್ಧೆ ಏರ್ಪಟ್ಟಿತ್ತು. ಆದರೆ ಒತ್ತಡವನ್ನು ನಿಭಾಯಿಸುವ ಅನುಭವ ಹೆಚ್ಚು ಇರುವ ಭಾರತ ತಂಡವು ಆ ಪಂದ್ಯದಲ್ಲಿ ಜಯಿಸಿತ್ತು.

ಯಾವಾಗಲೂ ಭಾರತ ಮತ್ತು ಪಾಕ್ ನಡುವಣ ಪಂದ್ಯವೆಂದರೆ ಆಟಗಾರರ ಕೌಶಲಗಳ ಪೈಪೋಟಿ ಮಾತ್ರವಲ್ಲ. ಅದು ಭಾವನಾತ್ಮಕ ಸ್ಪರ್ಧೆಯೂ ಆಗಿರುತ್ತದೆ. ಆದ್ದರಿಂದ ಮಾನಸಿಕವಾಗಿ ಗಟ್ಟಿತನ ತೋರುವ ತಂಡವು ಮೇಲುಗೈ ಸಾಧಿಸುತ್ತದೆ.

'ಭಾರತ ಮತ್ತು ಪಾಕ್ ನಡುವಣ ಪಂದ್ಯ ಒಂದು ದೊಡ್ಡದಾದ ಸಂಗತಿ ಎನ್ನುವುದು ನಮಗೆ ಅರಿವಿದೆ. ಇತ್ತೀಚಿನ ದಿನಗಳಲ್ಲಿ ನಮ್ಮ ತಂಡವು ಉತ್ತಮವಾಗಿ ಆಡಿದೆ. ಭಾರತ ವಿರುದ್ಧ ಕಣಕ್ಕಿಳಿಯುವ ಮುನ್ನ ಆಡಿದ ಐದು ಪಂದ್ಯಗಳಲ್ಲಿ ಗೆದ್ದಿತ್ತು. ಆದರೆ ಇಲ್ಲಿ ಮಾತ್ರ ಭಾರತ ತಂಡವು ನಮಗಿಂತ ಉತ್ಕೃಷ್ಟ ಮಟ್ಟದ ಕ್ರಿಕೆಟ್ ಆಡಿತು' ಎಂದು ಪಂದ್ಯದ ನಂತರ ನಡೆದ ಸುದ್ದಿಗೋಷ್ಠಿಯಲ್ಲಿ ಪಾಕ್ ಮುಖ್ಯಕೋಚ್ ಮೈಕ್ ಹೆಸನ್ ಹೇಳಿದರು.

ಸೂರ್ಯಕುಮಾರ್ ಯಾದವ್, ಸಲ್ಮಾನ್ ಆಲಿ ಆಘಾ

'ನಮ್ಮ ಸಾಮರ್ಥ್ಯ ಮತ್ತು ಕೌಶಲಗಳ ಮೇಲೆ ನಂಬಿಕೆಯಿದೆ' ಎಂದು ಪಂದ್ಯಪೂರ್ವ ಪತ್ರಿಕಾಗೋಷ್ಠಿಯಲ್ಲಿ ಭಾರತ ತಂಡದ ನಾಯಕ ಸೂರ್ಯಕುಮಾರ್ ಹೇಳಿದ್ದರು.

ಮೊದಲಿನಿಂದಲೂ ಶ್ರೇಷ್ಠ ವೇಗಿಗಳನ್ನು ನೀಡಿದ್ದ ಪಾಕಿಸ್ತಾನ ಇಲ್ಲಿ ಸ್ಪಿನ್ನರ್‌ಗಳ ಮೇಲೆ ಅವಲಂಬಿತವಾಯಿತು. ಅದರಲ್ಲೂ ಉಸ್ಮಾನ್ ತಾರೀಖ್ ಅವರ ವಿಚಿತ್ರ ಶೈಲಿಯ ಬಗ್ಗೆ ಹೆಚ್ಚು ಮಾತುಗಳು ಕೇಳಿಬಂದವು. ಸ್ವತಃ ಸೂರ್ಯ ಅವರೇ ಶನಿವಾರದ ನೆಟ್ಸ್‌ನಲ್ಲಿ ಉಸ್ಮಾನ್ ಅವರ 'ಪಾಜ್ ಬೌಲಿಂಗ್' ಮಾದರಿಯಲ್ಲಿ ಎಸೆತಗಳನ್ನು ಹಾಕಿ ಬ್ಯಾಟರ್‌ಗಳಿಗೆ ಅಭ್ಯಾಸ ಮಾಡಿಸಿದ್ದರು. ಆದರೆ ಪಾಕ್ ತಂಡದ ತಾಲೀಮಿನಲ್ಲಿ ಈ ರೀತಿಯ ಉತ್ಕಟತೆಯಾಗಲಿ, ಗಂಭೀರತೆಯಾಗಲೀ ಕಾಣಲಿಲ್ಲ. 'ಹಾಲಿ ಚಾಂಪಿಯನ್' ಮತ್ತು ಅಮೋಘ ಲಯದಲ್ಲಿರುವ ಆಟಗಾರರು ಇರುವ ತಂಡವನ್ನು ಎದುರಿಸುವ ಪೂರ್ಣ ಸಿದ್ಧತೆಗಳನ್ನು ಮಾಡುವಲ್ಲಿ ಪಾಕ್ ಎಡವಿದಂತೆ ಕಂಡಿತು. ಒಟ್ಟಾರೆಯಾಗಿ ದಶಕಗಳ ಹಿಂದೆ ಉಭಯ ತಂಡಗಳ ನಡುವೆ ಇದ್ದ 'ಜಿದ್ದಾಜಿದ್ದಿ' ಈಗ ಉಳಿದಿಲ್ಲವೆನಿಸುತ್ತಿದೆ ಅಲ್ಲವೇ?

ಒಮರ್‌ಝೈ ಆಟಕ್ಕೆ ಒಲಿದ ಜಯ

ನವದೆಹಲಿ (ಪಿಟಿಐ): ಅನುಭವಿ ಆಲ್‌ರೌಂಡರ್ ಅಜ್ಮತ್‌ವುಲ್ಲಾ ಒಮರ್‌ಝೈ (15ಕ್ಕೆ4 ಮತ್ತು ಔಟಾಗದೇ 40;21ಎ) ಅವರ ಅಮೋಘ ಆಟದ ನೆರವಿನಿಂದ ಅಫ್ಗಾನಿಸ್ತಾನ ತಂಡವು ಟಿ20 ವಿಶ್ವಕಪ್‌ನಲ್ಲಿ ಮೊದಲ ಜಯ ದಾಖಲಿಸಿತು. ಇದರಿಂದಾಗಿ ಸೂಪರ್ 8ರ ಹಂತಕ್ಕೆ ಪ್ರವೇಶಿಸಲು ಅಫ್ಗಾನಿಸ್ತಾನಕ್ಕೆ ಇನ್ನೂ ಒಂದು ಸಣ್ಣ ಅವಕಾಶ ಇದೆ.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಡಿ ಗುಂಪಿನ ಪಂದ್ಯದಲ್ಲಿ ಅಫ್ಗಾನಿಸ್ತಾನ ತಂಡವು ಐದು ವಿಕೆಟ್‌ಗಳಿಂದ ಯುಎಇ ತಂಡವನ್ನು ಮಣಿಸಿತು. ಡಿ ಗುಂಪಿನಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿದ ದಕ್ಷಿಣ ಆಫ್ರಿಕಾ (6 ಅಂಕ) ತಂಡವು ಈಗಾಗಲೇ ಸೂಪರ್ 8ರ ಸುತ್ತಿಗೆ ಮುನ್ನಡೆದಿದೆ. ಉಳಿದ ಒಂದು ಸ್ಥಾನಕ್ಕಾಗಿ ನ್ಯೂಜಿಲೆಂಡ್ (4), ಅಫ್ಗನ್ (2) ಮತ್ತು ಯುಎಇ (2) ತಂಡಗಳ ನಡುವೆ ಪೈಪೋಟಿಯಿದೆ. ಒಂದೊಮ್ಮೆ ನ್ಯೂಜಿಲೆಂಡ್ ತಂಡವು ಗುಂಪು ಹಂತದ ತನ್ನ ಕೊನೆಯ ಪಂದ್ಯದಲ್ಲಿ ಕೆನಡಾ ಎದುರು ಸೋತು, ಅಫ್ಗನ್ ತಂಡವು ತನ್ನ ಅಂತಿಮ ಪಂದ್ಯದಲ್ಲಿ (ಕೆನಡಾ ಎದುರು) ಗೆದ್ದರೆ ರನ್‌ರೇಟ್ ಲೆಕ್ಕಾಚಾರದಲ್ಲಿ ಸೂಪರ್ 8 ಪ್ರವೇಶಿಸುವ ಅವಕಾಶ ಇದೆ.

ಗೆಲುವಿನ ಸಂಭ್ರಮದಲ್ಲಿ ಅಜ್ಮತ್‌ವುಲ್ಲಾ ಒಮರ್‌ಝೈ ಪಿಟಿಐ ಚಿತ್ರ

ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಯುಎಇ ತಂಡವನ್ನು ಒಮರ್‌ಝೈ ಸಾಧಾರಣ ಮೊತ್ತಕ್ಕೆ ನಿಯಂತ್ರಿಸಲು ನೆರವಾದರು. ಸೊಹೇಬ್ ಖಾನ್ (68; 48ಎ, 4x6, 6x4) ಅವರ ಅರ್ಧಶತಕದ ಬಲದಿಂದ 20 ಓವರ್‌ಗಳಲ್ಲಿ 9 ವಿಕೆಟ್‌ಗೆ 160 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಅಫ್ಗನ್ ತಂಡವು ನಾಲ್ಕು ಎಸೆತ ಬಾಕಿ ಇರುವಂತೆ 5 ವಿಕೆಟ್‌ಗೆ 162 ರನ್ ಗಳಿಸಿ ಸಂಭ್ರಮಿಸಿತು. ಆರಂಭಿಕ ಆಟಗಾರ ಇಬ್ರಾಹಿಂ ಜದ್ರಾನ್ (53;41ಎ, 4x6, 6x1) ಮತ್ತು ಒಮರ್‌ಝೈ ಗೆಲುವಿಗೆ ಉಪಯುಕ್ತ ಕಾಣಿಕೆ ನೀಡಿದರು.

ಅಫ್ಗನ್ ತಂಡವು ಅನುಭವಿ ಬ್ಯಾಟರ್ ರಹಮಾನುಲ್ಲಾ ಗುರ್ಬಾಜ್ ಅವರನ್ನು ಮೊದಲ ಓವರ್‌ನಲ್ಲೇ ಕಳೆದುಕೊಂಡಿತು. ಆದರೆ, 97 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡು ತಂಡವು ಸಂಕಷ್ಟದಲ್ಲಿದ್ದಾಗ ದರ್ವೀಶ್ ರಸೂಲಿ (33;23ಎ) ಮತ್ತು ಒಮರ್‌ಝೈ ಅವರು ಐದನೇ ವಿಕೆಟ್ ಜೊತೆಯಾಟದಲ್ಲಿ ಅಮೂಲ್ಯ 43 (26ಎ) ರನ್ ಸೇರಿಸಿ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು.

ಸಂಕ್ಷಿಪ್ತ ಸ್ಕೋರು: ಯುಎಇ: 20 ಓವರ್‌ಗಳಲ್ಲಿ 9 ವಿಕೆಟ್‌ಗೆ 160 (ಅಲಿಶಾನ್ ಶರಾಫು 40, ಸೊಹೇಬ್ ಖಾನ್ 68; ಅಜ್ಮತ್‌ವುಲ್ಲಾ ಒಮರ್‌ಝೈ 15ಕ್ಕೆ4). ಅಫ್ಗಾನಿಸ್ತಾನ: 20 ಓವರ್‌ಗಳಲ್ಲಿ 5 ವಿಕೆಟ್‌ಗೆ 162 (ಇಬ್ರಾಹಿಂ ಜದ್ರಾನ್ 53, ಒಮರ್‌ಝೈ ಔಟಾಗದೇ 40; ಜುನೈದ್ ಸಿದ್ದೀಕ್ 23ಕ್ಕೆ2). **ಪಂದ್ಯದ ಆಟಗಾರ:** ಅಜ್ಮತ್‌ವುಲ್ಲಾ ಒಮರ್‌ಝೈ